MSIL

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)



# 52 ನೇ ವಾರ್ಷಿಕ ವರದಿ

## 2017-2018

MSIL



ಚಿಟ್ ಫಂಡ್ಸ್
MSIL ಚಿಟ್ಸ್
ಸುರಕ್ಷಿತ ಹೂಡಿಕೆ
ತಕ್ಷಣ ನೆರವಿಗೆ
ಟೂರ್ಸ್ ಅಂಡ್ ಟ್ರಾವೆಲ್ಸ್
ಗ್ರಾಹಕರ ಉತ್ಪನ್ನಗಳು
Total
ಕಾಗದ ಮತ್ತು ಸ್ಟೇಷನರಿ
ಔಷಧಿ
ಕೈಗಾರಿಕಾ ಉತ್ಪನ್ನಗಳು
ಎಂಎಸ್ಐಎಲ್
ಮದ್ಯ ಮಾರಾಟ ಮಳಿಗೆ
ಪಾನೀಯ
ಮರಳು

# MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಬೆಂಗಳೂರು

## ಪರಿವಿಡಿ


| | ಪುಟ ಸಂಖ್ಯೆ |
|---|---|
| ಸೂಚನೆ | 03 |
| ನಿರ್ದೇಶಕರ ವರದಿ | 04 |
| ನಿರ್ದೇಶಕರುಗಳ ವರದಿಗೆ ಅನುಬಂಧ | 18 |
| ಸಹಾಯಕ ಕಂಪನಿಗಳ ಹಣಕಾಸಿನ ಹೇಳಿಕೆ (ಫಾರಂ ಎಓಸಿ-1) | 30 |
| ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಟೀಕೆಗಳು | 31 |
| ಹತ್ತು ವರ್ಷಗಳ ಸಾಧನೆ | 32 |
| 31ನೇ ಮಾರ್ಚ್ 2018ಕ್ಕೆ ಮುಕ್ತಾಯಗೊಂಡ ವರ್ಷದ ಕ್ರೋಡೀಕೃತ ಲೆಕ್ಕಪತ್ರಗಳು | 35 |
| ಸದಸ್ಯರಿಗೆ ಪರಿಷ್ಕೃತ ಸ್ವತಂತ್ರ ಲೆಕ್ಕಪರಿಶೋಧಕರ ವರದಿ | 36 |
| 31ನೇ ಮಾರ್ಚ್ 2018ಕ್ಕೆ ಮುಕ್ತಾಯಗೊಂಡ ವರ್ಷದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಲೆಕ್ಕ ಪತ್ರಗಳು | 100 |

FMSIL

## ನಿರ್ದೇಶಕರ ಮಂಡಳಿ

| | | | |
|---|---|---|---|
| **ಶ್ರೀ ಹಂಪನಗೌಡ ಬಾದರ್ಲಿ** | ಅಧ್ಯಕ್ಷರು | **ಶ್ರೀ ಎನ್. ಬಾಲರಾಜ್** | ನಿರ್ದೇಶಕರು |
| **ಡಾ. ಜಿ.ಸಿ. ಪ್ರಕಾಶ್,** ಭಾ.ಆ.ಸೇ. | ವ್ಯವಸ್ಥಾಪಕ ನಿರ್ದೇಶಕರು | **ಶ್ರೀ ಆರ್.ತಮ್ಮಣ್ಣ** | ನಿರ್ದೇಶಕರು |
| **ಶ್ರೀಮತಿ ರೇಣುಕ ಚಿದಂಬರಂ,** ಭಾ.ಆ.ಸೇ. | ನಿರ್ದೇಶಕರು | **ಶ್ರೀ ಎಂ.ಎಸ್. ಶ್ರೀಧರ** | ನಿರ್ದೇಶಕರು |
| **ಡಾ. ಏಕ್‌ರೂಪ್ ಕೌರ್,** ಭಾ.ಆ.ಸೇ. | ಸ್ವತಂತ್ರ ನಿರ್ದೇಶಕರು | **ಶ್ರೀ ಗುಣಶೇಖರ** | ನಿರ್ದೇಶಕರು |
| **ಶ್ರೀ ದರ್ಪಣ್ ಜೈನ್,** ಭಾ.ಆ.ಸೇ. | ಸ್ವತಂತ್ರ ನಿರ್ದೇಶಕರು | **ಶ್ರೀ ಚೆಲುವರಾಜು** | ನಿರ್ದೇಶಕರು |
| **ಶ್ರೀ ಎನ್. ಜಯರಾಮ್,** ಭಾ.ಆ.ಸೇ. | ನಿರ್ದೇಶಕರು | **ಶ್ರೀ ಕೆ.ವೆಂಕಟಸ್ವಾಮಪ್ಪ** | ನಿರ್ದೇಶಕರು |
| **ಶ್ರೀಮತಿ ಅನುರಾಧ ಬಸವರಾಜ್ ತಪ್ಲಿ** | ನಿರ್ದೇಶಕರು | **ಶ್ರೀ ರಫೀಕ್ ಅಹಮದ್ ಬಿ.ಪಾಕಲಿ** | ನಿರ್ದೇಶಕರು |
| **ಶ್ರೀ ಸನತ್‌ಕುಮಾರ್ ಎಸ್.ಆರ್.** | ನಿರ್ದೇಶಕರು | | |

| | |
|---|---|
| **ಶ್ರೀ ಸುಬ್ರಮಣ್ಯ** | ಮುಖ್ಯ ಹಣಕಾಸು ಅಧಿಕಾರಿ |
| **ಶ್ರೀಮತಿ ಶ್ರೀದೇವಿ ಬಿ.ಎನ್.** | ಕಂಪನಿ ಕಾರ್ಯದರ್ಶಿ |

**ನೋಂದಾಯಿತ ಕಛೇರಿ :** ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ , ಬೆಂಗಳೂರು – 560 052.

**ಶಾಖಾ ಕಛೇರಿಗಳು :** ಬೆಂಗಳೂರು, ಮೈಸೂರು, ದಾವಣಗೆರೆ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಬೆಳಗಾವಿ ಮುಂಬಯಿ, ನವದೆಹಲಿ

**ಮಾರಾಟ ಕಛೇರಿಗಳು / ಘಟಕಗಳು :**
● ವಿಜಯಪುರ ● ದಾವಣಗೆರೆ ● ಕಲಬುರಗಿ ● ಹಾಸನ ● ಹುಬ್ಬಳ್ಳಿ ● ಮಂಗಳೂರು ● ಮೈಸೂರು
● ಭಿವಂಡಿ ● ಕಾನ್ಪುರ ● ಘಜಿಯಾಬಾದ್ ● ಜೈಪುರ್

**ಬ್ಯಾಂಕರ್‌ಗಳು :** ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಚ್‌ಡಿಎಫ್‌ಸಿ ಬ್ಯಾಂಕ್

**ಲೆಕ್ಕಪರಿಶೋಧಕರು : ಮೆ|| ಪಿ. ಚಂದ್ರಶೇಖರ್,** ಎಲ್‌ಎಲ್‌ಪಿ, ಚಾರ್ಟರ್ಡ್ ಅಕೌಂಟೆಂಟ್ಸ್

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

**ಎಂಎಸ್ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ,**

**ಬೆಂಗಳೂರು – 560 052.**

## ಸೂಚನೆ

ಈ ಮೂಲಕ ಸೂಚಿಸುವುದೇನೆಂದರೆ ಅಲ್ಪಕಾಲಿಕ ಸೂಚನೆ ಮೇರೆಗೆ ಈ ಕೆಳಕಂಡ ಕಲಾಪಗಳನ್ನು ನಡೆಸಲು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳ ಐವತ್ತ ಎರಡನೇ ವಾರ್ಷಿಕ ಮಹಾಸಭೆಯು ದಿನಾಂಕ: 14ನೇ ಡಿಸೆಂಬರ್ 2018ರ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ಕೆಎಸ್ಐಐಡಿಸಿಯ ಸಭಾ ಕೊಠಡಿ, ಖನಿಜ ಭವನ, 4ನೇ ಮಹಡಿ, ಈಸ್ಟ್ ವಿಂಗ್, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001 ಇಲ್ಲಿ ಜರುಗಲಿರುವುದು.

**ಸಾಮಾನ್ಯ ಕಲಾಪ:**

**ಐಟಂ ನಂ.1 – ಹಣಕಾಸಿನ ವಿವರಗಳ ಅಳವಡಿಕೆ:**

ದಿನಾಂಕ:31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಹಣಕಾಸಿನ ವಿವರಗಳನ್ನು (ಕ್ರೋಡೀಕೃತ ಹಣಕಾಸಿನ ವಿವರಗಳು ಸೇರಿದಂತೆ) ಮತ್ತು ನಿರ್ದೇಶಕರುಗಳ ಮಂಡಳಿಯ (ಮಂಡಳಿ) ವರದಿಗಳು ಮತ್ತು ಕಂಪನಿಗಳ ಕಾಯ್ದೆ 2013ರ ಪ್ರಕರಣ 146 (6)ರ ಅನ್ವಯ ಈ ಬಗ್ಗೆಗಿನ ಲೆಕ್ಕಪರಿಶೋಧಕರ ವರದಿ ಜೊತೆಗೆ ಭಾರತದ ಮಹಾ ಲೆಕ್ಕಪರಿಶೋಧಕರಿಂದ ಬಂದಿರುವ ಟೀಕೆ ಟಿಪ್ಪಣಿಗಳನ್ನು ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.

**ಐಟಂ ನಂ.2:** ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು (ಸಿ ಅಂಡ್ ಎಜಿ) ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರಿಗೆ 31ನೇ ಮಾರ್ಚ್ 2018ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಸಂಭಾವನೆ ನಿಗದಿಪಡಿಸುವುದನ್ನು ಪರಿಗಣಿಸುವುದು ಮತ್ತು ಸೂಕ್ತವೆಂದು ಭಾವಿಸಿದ್ದೇ ಆದಲ್ಲಿ ಕೆಳಕಂಡ ನಿರ್ಣಯಗಳನ್ನು ಸಾಮಾನ್ಯ ನಿರ್ಣಯವನ್ನಾಗಿ ಮಾರ್ಪಾಡುಗಳೊಡನೆ ಅಥವಾ ಮಾರ್ಪಾಡು (ಗಳು) ಇಲ್ಲದೆ ಅಂಗೀಕರಿಸುವುದು:–

"ನಿರ್ಣಯಿಸುವುದೇನೆಂದರೆ, ಕಂಪನಿಗಳ ಕಾಯ್ದೆ 2013ರ ಪ್ರಕರಣ 139(5)ರ ಉಪಬಂಧಗಳ ಅನುಸಾರ, ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಮೆ|| ಆಭರ್ಣ ಅಂಡ್ ಅನಂತನ್ (ಬಿಎ 0245), ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ಹಣಕಾಸಿನ ವರ್ಷ 2018–19ಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿದ್ದು, ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ವಾರ್ಷಿಕ ಮಹಾಸಭೆ (ಎಜಿಎಂ) ಮುಕ್ತಾಯದ ಸಮಯದಿಂದ ಮುಂದಿನ ಎಜಿಎಂ ಮುಕ್ತಾಯವಾಗುವವರೆಗೆ ಸದರಿ ಹುದ್ದೆಯನ್ನು ಹೊಂದಿರುವಂತೆ ನೇಮಕ ಮಾಡಿರುವುದನ್ನು ಈ ಮೂಲಕ ಗಮನಿಸಲಾಗಿದೆ ಮತ್ತು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಸಂಭಾವನೆ ನಿಗದಿಪಡಿಸಲು ಕಂಪನಿಯ ನಿರ್ದೇಶಕರ ಮಂಡಳಿಗೆ ಅಧಿಕಾರ ನೀಡಲಾಗಿದೆ".

**ಮಂಡಳಿಯ ಆದೇಶಾನುಸಾರ**

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

**ಸಹಿ/–**

ಸ್ಥಳ : ಬೆಂಗಳೂರು **ಶ್ರೀದೇವಿ. ಬಿ.ಎನ್.**

ದಿನಾಂಕ :11ನೇ ಡಿಸೆಂಬರ್ 2018 **ಕಂಪನಿ ಕಾರ್ಯದರ್ಶಿ**

**ಸೂಚನೆಗಳು:**

1. ವಾರ್ಷಿಕ ಮಹಾಸಭೆಗೆ ಹಾಜರಾಗಲು ಮತ್ತು ಮತ ಹಾಕಲು ಅರ್ಹರಾದ ಸದಸ್ಯನು, ತನ್ನ ಬದಲಾಗಿ ಸಭೆಗೆ ಹಾಜರಾಗಲು ಮತ್ತು ಮತ ಹಾಕಲು ಪ್ರಾಕ್ಸಿ ಒಬ್ಬರನ್ನು ನೇಮಕ ಮಾಡಲು ಅರ್ಹರಾಗಿರುವರು. ಪ್ರಾಕ್ಸಿಯು ಕಂಪನಿಯ ಸದಸ್ಯರಾಗಿರಬೇಕಿಲ್ಲ. ಇದರೊಡನೆ ಲಗತ್ತಿಸಿರುವ ಪ್ರಾಕ್ಸಿ ಫಾರಂ ಅನ್ನು ಎಜಿಎಂ ಪ್ರಾರಂಭವಾಗುವುದಕ್ಕೆ 48 ಗಂಟೆಗಳ ಮುಂಚೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸಬೇಕು.

2. ಕಂಪನಿಯು ಸರ್ಕಾರದ ಕಂಪನಿಯಾಗಿರುವುದರಿಂದ, ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 2018–19ರ ಸಾಲಿಗೆ, ಕಂಪನಿಗಳ ಕಾಯ್ದೆ 2013ರ ಪ್ರಕರಣ 139(5) ರ ಅನ್ವಯ ಕಂಪನಿಯ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿದ್ದಾರೆ.

3. ಅಲ್ಪಕಾಲಿಕ ಸೂಚನೆಗೆ ಎಲ್ಲಾ ಷೇರುದಾರರುಗಳ ಒಪ್ಪಿಗೆ ಪಡೆಯಲಾಗಿದೆ.

**ಮಂಡಳಿಯ ಆದೇಶಾನುಸಾರ**

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

**ಸಹಿ/–**

ಸ್ಥಳ : ಬೆಂಗಳೂರು **ಶ್ರೀದೇವಿ. ಬಿ.ಎನ್.**

ದಿನಾಂಕ :12ನೇ ಡಿಸೆಂಬರ್ 2018 **ಕಂಪನಿ ಕಾರ್ಯದರ್ಶಿ**

MSIL

# ನಿರ್ದೇಶಕರ ವರದಿ

ಸದಸ್ಯರಿಗೆ,

31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ನಮ್ಮ ವ್ಯವಹಾರ ಮತ್ತು ಕಾರ್ಯಾಚರಣೆಗಳ ಬಗ್ಗೆ ವರದಿ ಮಂಡಿಸಲು ನಾವು ಹರ್ಷಪಡುತ್ತೇವೆ.

## 1. ಹಣಕಾಸಿನ ಮುಖ್ಯಾಂಶಗಳು:

ಪರಾಮರ್ಶೆಯಲ್ಲಿರುವ ವರ್ಷದ ಅವಧಿಯಲ್ಲಿನ ನಿಮ್ಮ ಕಂಪನಿಯ ಕಾರ್ಯ ಸಾಧನೆ ಕೆಳಕಂಡಂತಿರುವುದು:

(ರೂ. ಲಕ್ಷಗಳಲ್ಲಿ)

| ವಿವರಗಳು | 2017-18 | 2016-17 |
|---|---|---|
| ವಹಿವಾಟು | 178875.91 | 161407.70 |
| ಬಡ್ಡಿ, ಸವಕಳಿ ಹಾಗೂ ತೆರಿಗೆಗಳು ಮತ್ತು ಹಿಂದಿನ ವರ್ಷದ ಹೊಂದಾಣಿಕೆಗಳಿಗೆ ಮುಂಚಿನ ಲಾಭ/ನಷ್ಟ | 2704.24 | 5987.52 |
| ಬಡ್ಡಿ | 0.90 | 2.44 |
| ಸವಕಳಿ | 341.85 | 285.21 |
| ತೆರಿಗೆಗೆ ಮುಂಚಿನ ಲಾಭ/(ನಷ್ಟ) | 2361.49 | 5699.87 |
| ತೆರಿಗೆಗೆ ಏರ್ಪಾಡು | | |
| -ಚಾಲ್ತಿ | 939.77 | 1978.80 |
| -ಮುಂದೂಡಲಾದುದು | 5.22 | 37.48 |
| ಹಿಂದಿನ ವರ್ಷದ ಹೊಂದಾಣಿಕೆಗಳು | - | 17.89 |
| ತೆರಿಗೆ ನಂತರದ ಲಾಭ/(ನಷ್ಟ) | 1416.50 | 3665.70 |
| ಲಾಭಾಂಶ ಮತ್ತು ಲಾಭಾಂಶದ ಮೇಲಿನ ತೆರಿಗೆ | - | 237.39 |
| ಲಾಭ ಮತ್ತು ನಷ್ಟದ ಖಾತೆಯಲ್ಲಿನ ಹಿಂದಿನ ವರ್ಷದ ಶಿಲ್ಕು | 13880.72 | 10452.41 |
| ಸ್ಥಿತಿ ವಿವರಣಾ ಪಟ್ಟಿಗೆ ಮುಂದುವರಿಸಿದ ಶಿಲ್ಕು | 15297.22 | 13880.72 |

ಕಂಪನಿಯ ವಿವಿಧ ವಿಭಾಗಗಳ ಮಾರಾಟ ಸಾಧನೆಯನ್ನು ಈ ಕೆಳಗೆ ನಿರೂಪಿಸಿದೆ:

(ರೂ. ಲಕ್ಷಗಳಲ್ಲಿ)

| ವಿಭಾಗ | 2017-18 | 2016-17 |
|---|---|---|
| 1. ಪಾನೀಯಗಳ ವಿಭಾಗ | 140914.32 | 133043.02 |
| 2. ಚಿಟ್ ಫಂಡ್‌ಗಳು | 23001.15 | 23311.33 |
| 3. ಕಾಗದ | 12671.82 | 4074.76 |
| 4. ಗ್ರಾಹಕರ ಉತ್ಪನ್ನಗಳು | 458.05 | 217.42 |
| 5. ಕೈಗಾರಿಕಾ ಉತ್ಪನ್ನಗಳು | 1090.03 | 162.62 |
| 6. ಪ್ರವಾಸ ಮತ್ತು ಪ್ರಯಾಣ | 547.47 | 586.46 |
| 7. ಫಾರ್ಮಸಿ | 157.44 | 12.09 |
| 8. ಆಮದಾದ ಮರಳು | 35.62 | - |
| **ಒಟ್ಟು** | **178875.91** | **161407.70** |

ಕಂಪನಿಯು ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು, ಇದರ 53% ಈಕ್ವಿಟಿ ಷೇರುಗಳನ್ನು ಕರ್ನಾಟಕದ ರಾಜ್ಯಪಾಲರು ಹೊಂದಿರುವರು ಮತ್ತು 47% ಈಕ್ವಿಟಿ ಷೇರುಗಳನ್ನು ಕೆಎಸ್‌ಐಐಡಿಸಿ ಮತ್ತು ಇದರ ನಾಮ ನಿರ್ದೇಶಕರು ಹೊಂದಿರುವರು. ನಿಮ್ಮ ಕಂಪನಿಯ ಕ್ರೋಡೀಕೃತ ಕಾರ್ಯ ಸಾಧನೆಯು ಈ ಕೆಳಕಂಡಂತಿರುವುದು:

(ರೂ. ಲಕ್ಷಗಳಲ್ಲಿ)

| ವಿವರಗಳು | 2017-18 | 2016-17 |
|---|---|---|
| ವಹಿವಾಟು | 178875.91 | 161407.70 |
| ಬಡ್ಡಿ, ಸವಕಳಿ ಹಾಗೂ ತೆರಿಗೆಗಳು ಮತ್ತು ಹಿಂದಿನ ವರ್ಷದ ಹೊಂದಾಣಿಕೆಗಳಿಗೆ ಮುಂಚಿನ ಲಾಭ/ನಷ್ಟ | 2704.24 | 5987.52 |
| ಬಡ್ಡಿ | 0.90 | 2.44 |
| ಸವಕಳಿ | 341.85 | 285.21 |
| ತೆರಿಗೆಗೆ ಮುಂಚಿನ ಲಾಭ/(ನಷ್ಟ) | 2361.49 | 5699.87 |
| ತೆರಿಗೆಗೆ ಏರ್ಪಾಡು | | |
| -ಚಾಲ್ತಿ | 939.77 | 1978.80 |
| -ಮುಂದೂಡಲಾದುದು | 5.22 | 37.48 |
| ಹಿಂದಿನ ವರ್ಷದ ಹೊಂದಾಣಿಕೆಗಳು | - | 17.89 |
| ತೆರಿಗೆ ನಂತರದ ಲಾಭ/(ನಷ್ಟ) | 1416.50 | 3665.70 |
| ಲಾಭಾಂಶ ಮತ್ತು ಲಾಭಾಂಶದ ಮೇಲಿನ ತೆರಿಗೆ | - | 237.39 |
| ಲಾಭ ಮತ್ತು ನಷ್ಟದ ಖಾತೆಯಲ್ಲಿನ ಹಿಂದಿನ ವರ್ಷದ ಶಿಲ್ಕು | 13880.72 | 10452.41 |
| ಸ್ಥಿತಿ ವಿವರಣಾ ಪಟ್ಟಿಗೆ ಮುಂದುವರಿಸಿದ ಶಿಲ್ಕು | 15297.22 | 13880.72 |

## 2. ಕಂಪನಿಯ ವ್ಯವಹಾರಗಳು ಮತ್ತು ಭವಿಷ್ಯದ ಹೊರನೋಟದ ವಿವರ:

**(i) ಪಾನೀಯ ವಿಭಾಗ :** ಕರ್ನಾಟಕ ಸರ್ಕಾರ ಇತ್ತೀಚೆಗೆ ಕರ್ನಾಟಕದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಮದ್ಯದ ಚಿಲ್ಲರೆ ಮಾರಾಟ ಮಳಿಗೆಗಳನ್ನು ತೆರೆಯಲು, **ಸಿಎಲ್ 11ಸಿ** ಪರವಾನಗಿ ಅಡಿಯಲ್ಲಿ ಎಂಎಸ್‌ಐಎಲ್‌ಗೆ 463 ಮದ್ಯದ ಮಾರಾಟ ಮಳಿಗೆಗಳನ್ನು ಮಂಜೂರು ಮಾಡಿರುವುದರ ಜೊತೆಗೆ ಇನ್ನೂ ಹೆಚ್ಚುವರಿಯಾಗಿ 900 ಮದ್ಯದ ಚಿಲ್ಲರೆ ಮಾರಾಟ ಮಳಿಗೆಗಳನ್ನು ಮಂಜೂರು ಮಾಡಿದೆ. ಈ ದಿಸೆಯಲ್ಲಿ ವಿಭಾಗವು ತ್ವರಿತಗತಿಯಲ್ಲಿ ಸದರಿ ಮದ್ಯದ ಚಿಲ್ಲರೆ ಮಾರಟ ಮಳಿಗೆಗಳನ್ನು ತೆರೆಯಲು ಅಬಕಾರಿ ಇಲಾಖೆ ಜೊತೆ ಮತ್ತು ಸ್ಥಳೀಯ ಚುನಾಯಿತ ಪ್ರತಿನಿಧಿಗಳ ಜೊತೆ ಉತ್ತಮ ಸಮನ್ವಯ ಸಾಧಿಸುವ ಮೂಲಕ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಸದರಿ ವಿಭಾಗವು ದಿನಾಂಕ 31ನೇ ಮಾರ್ಚ್ 2018ರಂದು ಇದ್ದಂತೆ 900 ಕೋಟಾದ ಅಡಿಯಲ್ಲಿ 227 ಪರವಾನಗಿಗಳನ್ನು ಪಡೆಯಬೇಕಿದೆ. ಕರ್ನಾಟಕದಾದ್ಯಂತ ಒಟ್ಟಾರೆ 628 ಮಾರಾಟ ಮಳಿಗೆಗಳು ಕಾರ್ಯಾಚರಣೆಯಾಗುತ್ತಿವೆ. ಎಂಎಸ್‌ಐಎಲ್ ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳಿಗೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ದೊರಕಿದೆ. ಮದ್ಯದ ಎಂಆರ್‌ಪಿ ಅನುಷ್ಠಾನಕ್ಕೆ ಅಪಾರ ಕೊಡುಗೆ ನೀಡಿದೆ.

## ನಿರ್ದೇಶಕರ ವರದಿ (ಮುಂದುವರೆದುದು)

ಪಾನೀಯ ವಿಭಾಗವು ಹಿಂದಿನ ವರ್ಷ ರೂ.133043.02 ಲಕ್ಷಗಳ ವಹಿವಾಟು ನಡೆಸಿರುವುದಕ್ಕೆ ಬದಲಾಗಿ ಈ ವರ್ಷ ರೂ.140914.32 ಲಕ್ಷಗಳ ವಹಿವಾಟನ್ನು ಸಾಧಿಸಿದೆ. ವಿಭಾಗವು ಮುಂದಿನ ದಿನಗಳಲ್ಲಿ 463 ಮತ್ತು 900 ಹಂಚಿಕೆಯಾಗಿರುವ ಕೋಟಾದ ಅಡಿಯಲ್ಲಿ ಉಳಿಕೆ ಮಾರಾಟ ಮಳಿಗೆಗಳನ್ನು ತೆರೆಯಲು ಸತತ ಪರಿಶ್ರಮ ಮತ್ತು ಪ್ರಯತ್ನ ನಡೆಸುತ್ತಿದೆ.

**(ii) ಚಿಟ್ ಫಂಡ್ಸ್ ವಿಭಾಗ :** ಈ ವಿಭಾಗವು ಹಿಂದಿನ ವರ್ಷ ರೂ.23311.33 ಲಕ್ಷಗಳ ವಹಿವಾಟು ನಡೆಸಿದ್ದರೆ, ಪ್ರಸಕ್ತ ವರ್ಷದಲ್ಲಿ ರೂ.23001.15 ಲಕ್ಷಗಳ ವಹಿವಾಟನ್ನು ನಡೆಸಿದೆ. ಸುಸ್ತಿದಾರರುಗಳ ಸಂಖ್ಯೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಚಂದಾದಾರರುಗಳನ್ನು ಸೇರ್ಪಡೆ ಮಾಡಿಕೊಳ್ಳುವ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತಂದಿರುವ ಪ್ರಯುಕ್ತ ವಹಿವಾಟು ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ. ಚಂದಾದಾರರ ಹಣಕಾಸಿನ ಸಾಮರ್ಥ್ಯವನ್ನು ನಿರ್ಧರಣೆ ಮಾಡಲು ಆದಾಯ ಪುರಾವೆ ಮತ್ತು ಕೆವೈಸಿ ಅನ್ನು ಸಲ್ಲಿಸುವಿಕೆಯನ್ನು ಕಡ್ಡಾಯಗೊಳಿಸಲಾಗಿದೆ.

ವ್ಯವಹಾರವನ್ನು ವಿಸ್ತರಣೆ ಮಾಡಲು ಶಿವಮೊಗ್ಗದಲ್ಲಿ ಹೊಸ ಚಿಟ್‌ಫಂಡ್ ಶಾಖೆ ಒಂದನ್ನು ಪ್ರಾರಂಭಿಸಲಾಗಿದೆ. ಹಾಸನ ಮತ್ತು ಮಂಡ್ಯದಲ್ಲೂ ಶಾಖೆಯನ್ನು ಪ್ರಾರಂಭಿಸಲು ಯೋಜಿಸಲಾಗಿದೆ.

ವಿಭಾಗದ ಸಾಮರ್ಥ್ಯವನ್ನು ಸುಧಾರಿಸಲು ಮತ್ತು ಚಂದಾದಾರರುಗಳ ನಿರೀಕ್ಷೆಗಳನ್ನು ಈಡೇರಿಸಲು ಹೊಸ ಚಿಟ್‌ಫಂಡ್ ನಿರ್ವಹಣೆ ವ್ಯವಸ್ಥೆಯನ್ನು (ಸಿಎಫ್‌ಎಂಎಸ್) ಪರಿಚಯಿಸಲಾಗುತ್ತಿದೆ. ಇದಲ್ಲದೆ ಸುಗಮ ಮತ್ತು ಅಡಚಣೆ ರಹಿತ ಕಾರ್ಯಾಚರಣೆಗಾಗಿ ಕ್ಲೌಡ್‌ನಲ್ಲಿ ಸಿಎಫ್‌ಎಂಎಸ್ ಪ್ರಾರಂಭಿಸಲಾಗುತ್ತಿದೆ. ವ್ಯವಹಾರವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವಿಸ್ತರಣೆ ಮಾಡಲು, ಮಾರುಕಟ್ಟೆಯನ್ನು ಕೇಂದ್ರೀಕರಿಸಲು ಬೆಂಗಳೂರಿನಲ್ಲಿ ಇನ್ನೂ ಹೆಚ್ಚಿನ ಚಿಟ್‌ಫಂಡ್ ಶಾಖೆಗಳನ್ನು ಪ್ರರಂಭಿಸಲಾಗುತ್ತಿದೆ.

ವಿಭಾಗದಲ್ಲಿ ಗ್ರಾಹಕ ಸ್ನೇಹಿ ಸಿಎಫ್‌ಎಂಎಸ್ ಪರಿಚಯಿಸುವುದರ ಜೊತೆಗೆ, ಪರಿಣಾಮಕಾರಿ ಜಾಹೀರಾತು ಪ್ರಚಾರದ ಮುಖೇನ ಮುಂಬರುವ ವರ್ಷಗಳಲ್ಲಿ ಚಿಟ್‌ಫಂಡ್ ವ್ಯವಹಾರವು ಶ್ಲಾಘನಾರ್ಹವಾಗಿ ವೃದ್ಧಿಯಾಗುವ ನಿರೀಕ್ಷೆ ಹೊಂದಲಾಗಿದೆ.

**(iii) ಕಾಗದ ವಿಭಾಗ :** ಪರಾಮರ್ಶನೆಯಲ್ಲಿರುವ ವರ್ಷದಲ್ಲಿ ಈ ವಿಭಾಗವು ಕಾಗದ ಮತ್ತು ಲೇಖನ ಸಾಮಗ್ರಿ ವ್ಯವಹಾರದಲ್ಲಿ ರೂ.12671.82 ಲಕ್ಷಗಳ ಸರ್ವಕಾಲಿಕ ಅತ್ಯಧಿಕ ವಹಿವಾಟನ್ನು ಮಾಡಿದೆ. ಹಿಂದಿನ ವರ್ಷದಲ್ಲಿ ಮಾಡಿರುವ ವಹಿವಾಟು ರೂ.4074.76 ಲಕ್ಷಗಳಾಗಿದ್ದು, ಪ್ರಸಕ್ತ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ 211.00% ಹೆಚ್ಚಿನ ವಹಿವಾಟನ್ನು ಸಾಧಿಸಲಾಗಿದೆ. ನೋಟ್ ಪುಸ್ತಕಗಳ (ವಿದ್ಯಾ ಮತ್ತು ಲೇಖಕ್) ವಹಿವಾಟು ಹಿಂದಿನ ವರ್ಷದಲ್ಲಿ ರೂ.2495.45 ಲಕ್ಷಗಳು (2234.093 ಎಂಟಿ) ಆಗಿದ್ದರೆ, ಪ್ರಸಕ್ತ ಆರ್ಥಿಕ ವರ್ಷ 2017–18ರ ಅವಧಿಯಲ್ಲಿ ರೂ.2966.13 ಲಕ್ಷ (2318.455 ಎಂಟಿ) ಆಗಿದ್ದು, ಹಿಂದಿನ ವರ್ಷಕ್ಕಿಂತ 18.86% ಹೆಚ್ಚಿನ ಸಾಧನೆ ಮಾಡಲಾಗಿದೆ. ಹಲವಾರು ಖಾಸಗಿ ಸಣ್ಣ ವ್ಯಾಪಾರಿಗಳು ನೋಟ್ ಪುಸ್ತಕಗಳ ವ್ಯವಹಾರಕ್ಕೆ ಪ್ರವೇಶಿಸಿರುವುದರಿಂದ ನೋಟ್ ಪುಸ್ತಕಗಳ ಮಾರುಕಟ್ಟೆಯು ಅತ್ಯಧಿಕವಾಗಿ ಹಂಚಿಹೋಗಿದೆ. ಸದರಿ ವ್ಯಾಪಾರಿಗಳು ಮಾರುಕಟ್ಟೆಯನ್ನು ಹಿಡಿಯಲು ಕಳಪೆ ಗುಣಮಟ್ಟದ ಉತ್ಪನ್ನಗಳನ್ನು ಅತಿಕಡಿಮೆ ಬೆಲೆಗೆ ನೀಡುವ ಮೂಲಕ ಆರೋಗ್ಯಕರ/ಅನಾರೋಗ್ಯಕರ ಮಾರುಕಟ್ಟೆ ಪರಿಪಾಠವನ್ನು ಅನುಸರಿಸುತ್ತಿದ್ದಾರೆ.

ಮಾನವಶಕ್ತಿಯ ತೀವ್ರತರನಾದ ಕೊರತೆಯ ಪ್ರಯುಕ್ತ ಮಾರುಕಟ್ಟೆಯಲ್ಲಿ ಉತ್ಪನ್ನವನ್ನು ಪ್ರತಿನಿಧಿಸಲಾಗುತ್ತಿಲ್ಲದ ಕಾರಣ ನಾವು ಕಠಿಣವಾದ ಪರಿಸ್ಥಿತಿ ಎದುರಿಸಬೇಕಾಗಿದೆ. ಅನೇಕ ಶಿಕ್ಷಣ ಸಂಸ್ಥೆಗಳು ನೋಟ್ ಪುಸ್ತಕಗಳನ್ನು ತಯಾರಕರುಗಳಿಂದಲೇ ನೇರವಾಗಿ ಖರೀದಿಸಲು ಆದ್ಯತೆ ನೀಡುತ್ತಿರುವುದರಿಂದ, ಪ್ರಸ್ತುತದಲ್ಲಿ ಗ್ರಾಹಕರ ಅಪೇಕ್ಷೆಯ ನೋಟ್ ಪುಸ್ತಕಗಳ ಉತ್ಪಾದನೆಯು ಒಂದು ಪ್ರವೃತ್ತಿಯಾಗಿ ರೂಪುಗೊಂಡಿದೆ.

ಈ ವಿಭಾಗವು ನೋಟ್ ಪುಸ್ತಕಗಳು ಮತ್ತು ಲೇಖನ ಸಾಮಗ್ರಿ ಬಗ್ಗೆ ಗಮನ ಕೇಂದ್ರೀಕರಿಸುವುದರ ಜೊತೆಗೆ, ಲೇಖಕ್ ಬ್ರಾಂಡ್ ಹೆಸರಿನಲ್ಲಿ ಟೂಲ್‌ಕಿಟ್‌ಗಳು, ಗ್ಯಾಸ್ ಸ್ಟೌ ಹಾಗೂ ಭದ್ರತಾ ವೈಶಿಷ್ಟ್ಯತೆಗಳನ್ನು ಒಳಗೊಂಡ ಕಂಪ್ಯೂಟರ್ ಲೇಖನ ಸಾಮಗ್ರಿಗಳನ್ನು 2017–18ರ ಆರ್ಥಿಕ ವರ್ಷದಲ್ಲಿ ಪರಿಚಯಿಸಿದೆ. ಹೊಸ ಗ್ರಾಹಕರನ್ನು ಸೆಳೆಯಲು ಈ ಕ್ರಮ ನಡೆಸಲಾಗಿದೆ. ಇವು ವಿಭಾಗದ ವಹಿವಾಟಿಗೆ ಪ್ರಮುಖ ಪಾಲಿನ ಕೊಡುಗೆ ನೀಡುವಲ್ಲಿ ಯಶಸ್ವಿಯಾಗಿವೆ.

ಗುರಿಯನ್ನು ಸಾಧಿಸಲು ಸದರಿ ವಿಭಾಗಕ್ಕೆ 'ವಿದ್ಯಾ ಮತ್ತು ಲೇಖಕ್' ಮಾರುಕಟ್ಟೆಯನ್ನು ಮರಳಿ ಪಡೆಯಲು ಮತ್ತು ಬಲವರ್ಧನೆಗೊಳಿಸಲು ಯುವ ಮತ್ತು ಕ್ರಿಯಾಶೀಲ ಕ್ಷೇತ್ರಪಡೆ ಅವಶ್ಯವಾಗಿ ಬೇಕಾಗಿದೆ. ವಿಭಾಗವು ವಹಿವಾಟಿನ ಪ್ರಮುಖ ಪಾಲಿಗೆ ಸರ್ಕಾರದ ಕಾರ್ಯಾದೇಶಗಳ ಮೇಲೆ ಅವಲಂಬಿನೆಯಾಗುವ ಪರಿಸ್ಥಿತಿ ಮುಂದುವರೆದಿದೆ. ಮುಂಬರುವ ವರ್ಷಗಳಲ್ಲಿ ಮಾರಾಟದ ಮಾರ್ಗೋಪಾಯಗಳನ್ನು ಪುನರ್‌ರೂಪಿಸುವ ಮೂಲಕ ಈ ಅವಲಂಬನೆಯನ್ನು ನಿವಾರಿಸುವ ಅವಶ್ಯಕತೆಯಿದೆ.

**(iv) ಗ್ರಾಹಕ ಉತ್ಪನ್ನಗಳ ವಿಭಾಗ :** ಈ ವಿಭಾಗವು ಹಿಂದಿನ ವರ್ಷ ರೂ.217.42 ಲಕ್ಷಗಳ ವಹಿವಾಟನ್ನು ನಡೆಸಿದ್ದರೆ, ಪರಾಮರ್ಶನೆಯಲ್ಲಿರುವ ಈ ವರ್ಷದಲ್ಲಿ ರೂ.458.05 ಲಕ್ಷದ (28.64 ದೆಹಲಿ+429.41 ಮುಂಬಯಿ) ವಹಿವಾಟನ್ನು ಸಾಧಿಸಿದೆ. ಪ್ರಸಿದ್ಧ ಎಣ್ಣೆ ತಯಾರಕರುಗಳ ಜೊತೆ ಸಹಭಾಗಿತ್ವ ಮಾಡಿಕೊಳ್ಳಲು ತನ್ನ ಉತ್ಪನ್ನ ಶ್ರೇಣಿಯನ್ನು ಬಲವರ್ಧನೆ ಮಾಡುವ ಮತ್ತು ಹಾಲಿಯಿರುವ ಉತ್ಪನ್ನಗಳನ್ನು ಬೇರೆ ಲಾಭದಾಯಕ ಪ್ರದೇಶಗಳಲ್ಲಿ ಮಾರಾಟ ಮಾಡುವ ಬಗ್ಗೆ ಅನ್ವೇಷಣೆ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿವೆ.

ಪ್ರಸಕ್ತ ವರ್ಷದಲ್ಲಿ ಈ ವಿಭಾಗವು ದೆಹಲಿ ಶಾಖೆಯಲ್ಲಿ ಗೋಲ್ಡ್ ಕ್ರಂಚ್ ಕಾರ್ನ್ ಫ್ಲೇಕ್‌ಗಳನ್ನು ಬಿಡುಗಡೆ ಮಾಡಿದೆ. ಉತ್ಪನ್ನದ ಬಗ್ಗೆ ಅಭಿಪ್ರಾಯ ಪಡೆಯಲು ಸೌಂದರ್ಯ ಶ್ರೇಣಿಯ ಉತ್ಪನ್ನಗಳನ್ನು (ಪಡೆದಿದ್ದ ಮಾದರಿಗಳು) ವಿತರಣೆ ಮಾಡಲಾಗಿತ್ತು. ಕೆಲವು ಉತ್ಪನ್ನಗಳ ಬಗ್ಗೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ.

## ನಿರ್ದೇಶಕರ ವರದಿ (ಮುಂದುವರೆದುದು)

ಸೌಂದರ್ಯ ಶ್ರೇಣಿಯ ಉತ್ಪನ್ನಗಳ ಮಾರಾಟವನ್ನು ಪ್ರಾರಂಭಿಸಲು ತಯಾರಕರಿಗೆ ಪ್ರಥಮ ಕೋರಿಕೆ ಪತ್ರ ಸಲ್ಲಿಸಲಾಗಿದೆ.

ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ವಹಿವಾಟನ್ನು ಸಾಧಿಸಲು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಉತ್ಪನ್ನಗಳನ್ನು ಸೇರ್ಪಡೆ ಮಾಡಲು ವಿಭಾಗವು ಶ್ರಮ ವಹಿಸುವುದು.'

**(v) ಕೈಗಾರಿಕಾ ಉತ್ಪನ್ನಗಳ ವಿಭಾಗ :** ಈ ವಿಭಾಗವು ಆರ್ಥಿಕ ವರ್ಷ 2017-18ರ ಅವಧಿಯಲ್ಲಿ ರೂ.1090.03 ಲಕ್ಷಗಳ ವಹಿವಾಟನ್ನು ಸಾಧಿಸಿದೆ. ವಿಭಾಗವು ವಿವಿಧ ಮಾದರಿಯ ಪೀಠೋಪಕರಣ ಉತ್ಪನ್ನಗಳನ್ನು ಸೇರ್ಪಡೆ ಮಾಡುವ ಮೂಲಕ ವಹಿವಾಟನ್ನು ಹೆಚ್ಚು ಮಾಡುವ ಉದ್ದೇಶದಿಂದ ಸರ್ಕಾರದ ವಿವಿಧ ಇಲಾಖೆಗಳಿಂದ ಸರ್ಕಾರದ ಕಾರ್ಯಾದೇಶಗಳನ್ನು ಪಡೆಯುವ ಪ್ರಕ್ರಿಯೆಯಲ್ಲಿ ತೊಡಗಿದೆ.

**(vi) ಟೂರ್ಸ್ ಮತ್ತು ಟ್ರಾವೆಲ್ಸ್ ವಿಭಾಗ :** ಇದು ಐಎಟಿಎ ಮಾನ್ಯತೆ ಪಡೆದ ಟ್ರಾವೆಲ್ ಏಜೆನ್ಸಿಯಾಗಿರುವುದು. (ಐಎಟಿಎ ನಂ.1435229). 2017-18ರ ಸಾಲಿನಲ್ಲಿ ಸರ್ಕಾರದ ನೌಕರರಿಗೆ ವಿಮಾನ ಪ್ರಯಾಣದ ಟಿಕೆಟ್ ಬುಕ್ ಮಾಡುವುದು ಮತ್ತು ಪ್ಯಾಕೇಜ್ ಪ್ರವಾಸಗಳನ್ನು ಏರ್ಪಡಿಸುವುದು ವಿಭಾಗದ ಮುಖ್ಯ ಚಟುವಟಿಕೆಯಾಗಿತ್ತು. ಈ ವಿಭಾಗವು ಹಿಂದಿನ ವರ್ಷ ರೂ.586.46 ಲಕ್ಷಗಳ ವಹಿವಾಟು ಸಾಧಿಸಿದ್ದರೆ, ದಿನಾಂಕ 31ನೇ ಮಾರ್ಚ್ 2017ರವರೆಗೆ ರೂ.547.47ಲಕ್ಷಗಳ ವಹಿವಾಟು ಸಾಧಿಸಿದೆ.

ವಿಭಾಗವು ಉತ್ತರ ಭಾರತದ ಧಾರ್ಮಿಕ ಪುಣ್ಯಸ್ಥಳಗಳಿಗೆ ಪ್ಯಾಕೇಜ್ ಪ್ರವಾಸಗಳನ್ನು ಯಶಸ್ವಿಯಾಗಿ ಏರ್ಪಡಿಸಿದೆ. ಯಾತ್ರಾ ಸ್ಥಳಗಳಿಗೂ ಪ್ಯಾಕೇಜ್ ಪ್ರವಾಸಗಳನ್ನು ಆಯೋಜಿಸಿದೆ. ಸರ್ಕಾರದ ಸಂಸ್ಥೆಗಳಾದ:

- ಪೌರಾಡಳಿತ ನಿರ್ದೇಶನಾಲಯ, ಸಿಂಗಪುರ ಪ್ಯಾಕೇಜ್-15 ತಂಡಗಳು-ಪ್ರತಿ ಗುಂಪಿನಲ್ಲಿ 45 ಭಕ್ತರು;
- ರಕ್ಷಣಾ ಸಚಿವಾಲಯ ಮತ್ತು ಐಎಸ್‌ಟಿಎಂ ಅಧ್ಯಯನ ಪ್ರವಾಸ ಪ್ಯಾಕೇಜ್‌ಗಳು ನವದೆಹಲಿಯಿಂದ;
- ಕರ್ನಾಟಕ-ಬೆಂಗಳೂರಿನಲ್ಲಿನ ಪುರಸಭೆಗಳಿಗೆ ವಿವಿಧ ಅಧ್ಯಯನ ಪ್ರವಾಸಗಳು;
- ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ-ಬೆಂಗಳೂರು;
- ತೋಟಗಾರಿಕೆ ಇಲಾಖೆ-ಬೆಂಗಳೂರು;
- ಕರ್ನಾಟಕದ ನಗರ ವ್ಯವಸ್ಥಾಪಕರ ಸಂಘ, ಬೆಂಗಳೂರು;
- ಆಡಳಿತ ತರಬೇತಿ ಸಂಸ್ಥೆ, ಮೈಸೂರು;

ಇವರಿಗೆ ಭಾರತದಾದ್ಯಂತ ಮತ್ತು ಏಷ್ಯನ್ ದೇಶಗಳ ವಿವಿಧ ಪ್ರವಾಸಿ ಸ್ಥಳಗಳಿಗೆ ಸೇವಾ ಪೂರೈಕೆದಾರರ ಮೂಲಕ ಪ್ಯಾಕೇಜ್ ಪ್ರವಾಸಗಳನ್ನು ಏರ್ಪಡಿಸಿದೆ.

**(vii) ಹೈರ್‌ಪರ್ಚೇಸ್ ವಿಭಾಗ :** ಈ ವಿಭಾಗವನ್ನು ಜುಲೈ 2008 ರಲ್ಲಿ ಸಮಾಪ್ತಿಗೊಳಿಸಲಾಗಿದ್ದು, ಬಾಡಿಗೆದಾರರಿಂದ ಬರಬೇಕಾಗಿರುವ ಬಾಕಿಗಳ ವಸೂಲಿಗೆ ಈ ವಿಭಾಗ ಗಮನ ಕೇಂದ್ರೀಕರಿಸಿದೆ. ಪ್ರಸಕ್ತ ಹಣಕಾಸಿನ ವರ್ಷದಲ್ಲಿ ರೂ.28.88 ಲಕ್ಷವನ್ನು ವಸೂಲಿ ಮಾಡಿದೆ. ಹಿಂದಿನ ವರ್ಷದಲ್ಲಿ ರೂ.379.31 ಲಕ್ಷ ಮೊತ್ತದ ಬಾಕಿ ವಸೂಲಿ ಮಾಡಿದ್ದರೆ, 31ನೇ ಮಾರ್ಚ್ 2018ರಂದು ಇದ್ದಂತೆ ರೂ.350.43 ಲಕ್ಷಗಳ ಮೊತ್ತದ ಬಾಕಿ ಉಳಿದಿದೆ.

**(viii) ಫಾರ್ಮ ವಿಭಾಗ :** ಫಾರ್ಮ ವಿಭಾಗವು ಹಣಕಾಸಿನ ವರ್ಷ 2017-18ರ ಅವಧಿಯಲ್ಲಿ ರೂ.157.44 ಲಕ್ಷಗಳ ವಹಿವಾಟು ಸಾಧಿಸಿದೆ. ಮುಂಬರುವ ವರ್ಷಗಳಲ್ಲಿ ಹೆಚ್ಚಿನ ವಹಿವಾಟು ನಡೆಸುವ ನಿರೀಕ್ಷೆಯಿದೆ. ಫಾರ್ಮ ವಿಭಾಗವು ದಿನಾಂಕ 31ನೇ ಮಾರ್ಚ್ 2018 ರಂದು ಇದ್ದಂತೆ ಕರ್ನಾಟಕದಾದ್ಯಂತ ಇರುವ ಸರ್ಕಾರದ ತಾಲ್ಲೂಕು/ಜಿಲ್ಲಾ ಆಸ್ಪತ್ರೆಗಳಲ್ಲಿ ಒಟ್ಟು 69 ಪ್ರಧಾನ್ ಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳನ್ನು (ಪಿಎಂಬಿಜೆಕೆ) ತೆರೆದಿದೆ. ಶೀಘ್ರದಲ್ಲೇ ದಾವಣಗೆರೆಯಲ್ಲಿನ ಸರ್ಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಒಂದು ಮತ್ತು ಗದಗದ ಜಿಲ್ಲಾ ಆಸ್ಪತ್ರೆಯಲ್ಲಿ ಮತ್ತೊಂದು ಹೀಗೆ ಎರಡು ಜನೌಷಧಿ ಕೇಂದ್ರಗಳನ್ನು ತೆರೆಯಲಾಗುವುದು. ಕಂಪನಿಯು ಮುಂದಿನ ದಿನಗಳಲ್ಲಿ ಹುಬ್ಬಳ್ಳಿಯಲ್ಲಿ ಒಂದು ಪಿಎಂಬಿಜೆಕೆ ಸಗಟು ಮಾರಾಟ ಡಿಪೋ ತೆರೆಯಲಿರುವುದು.

(ix) **ಆಮದಾದ ಮರಳು:** ಆಮದು ವಿಭಾಗವು 2017-18ರ ಹಣಕಾಸಿನ ಅವಧಿ ಯಲ್ಲಿ ರೂ.35.62 ಲಕ್ಷಗಳ ವಹಿವಾಟನ್ನು ಸಾಧಿಸಿದೆ.

### 3. ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆ:

ಕಂಪನಿಯ ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ. ಸ್ಥಳೀಯ ಮಾರುಕಟ್ಟೆ ಅಗತ್ಯತೆ ಈಡೇರಿಸಲು ಕಂಪನಿಯು 2017-18ರ ಅವಧಿ ಯಲ್ಲಿ ಮಲೇಷ್ಯದಿಂದ ನೈಸರ್ಗಿಕ ನದಿ ಮರಳನ್ನು ಆಮದು ಮಾಡಿಕೊಳ್ಳುವ ವ್ಯವಹಾರಕ್ಕೆ ಪದಾರ್ಪಣೆ ಮಾಡಿದೆ. ಈ ವ್ಯವಹಾರವು ಕಂಪನಿಗೆ ಹೊಸದಾಗಿದ್ದರೂ, ವ್ಯವಹಾರದ ಸ್ವರೂಪವು ಅದೇ ವರ್ಗ ಮತ್ತು ಪ್ರವರ್ಗದಲ್ಲಿ ಮುಂದುವರಿಯುವುದು.

### 4. ಲಾಭಾಂಶ

ಹಣವನ್ನು ಉಳಿತಾಯ ಮಾಡಲು ಮತ್ತು ದುಡಿಮೆ ಬಂಡವಾಳ ಪೂರೈಸುವ ಸಲುವಾಗಿ ಹಾಗೂ 900 ಕೋಟಾದ ಅಡಿಯಲ್ಲಿ ತೆರೆಯಬೇಕಾಗಿರುವ ಹೊಸ ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಲು ಅಗತ್ಯವಾದ ಸ್ಥಿರಾಸ್ತಿಗಳಿಗೆ ಹಣ ಹೂಡಿಕೆ ಹಿನ್ನೆಲೆಯಲ್ಲಿ ಮಂಡಳಿಯು 2017-18ರ ಹಣಕಾಸಿನ ವರ್ಷದಲ್ಲಿ ಯಾವುದೇ ಲಾಭಾಂಶ ಪಾವತಿಗೆ ಶಿಫಾರಸ್ಸು ಮಾಡಿರುವುದಿಲ್ಲ.

### 5. ಮೀಸಲು ನಿಧಿ

ಹಣಕಾಸಿನ ವರ್ಷ 2017-18ಕ್ಕೆ ಮತ್ತು ಹಿಂದಿನ ವರ್ಷದಲ್ಲಿ ಕಂಪನಿಯು ಇರಿಸಿರುವ ಮೀಸಲು ನಿಧಿಯು ಕೆಳಕಂಡಂತಿರುವುದು:

## ನಿರ್ದೇಶಕರ ವರದಿ (ಮುಂದುವರೆದುದು)

(ರೂ. ಲಕ್ಷಗಳಲ್ಲಿ)

| ವಿವರಗಳು | ಹಣಕಾಸಿನ ವರ್ಷ 2017-18 | ಹಣಕಾಸಿನ ವರ್ಷ 2016-17 |
|---|---|---|
| ಸಾಮಾನ್ಯ ಮೀಸಲು ನಿಧಿ | 1416.50 | 3428.31 |
| ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿನ ಹೆಚ್ಚುವರಿ ನಿಧಿ | 1416.50 | 3665.70 |

### 6. ಷೇರು ಬಂಡವಾಳ

ಕಂಪನಿಯು ತಲಾ ರೂ.100/-ರ 22,55,817 ಈಕ್ವಿಟಿ ಷೇರುಗಳನ್ನು ಕರ್ನಾಟಕದ ರಾಜ್ಯಪಾಲರಿಗೆ 28ನೇ ಫೆಬ್ರುವರಿ 2018ರಂದು ನೀಡಿದೆ. ದಿನಾಂಕ:31ನೇ ಮಾರ್ಚ್ 2018ರಂದು ಇದ್ದಂತೆ ಕಂಪನಿಯ ನೀಡಿಕೆ ಮಾಡಿದ ಚಂದಾದಾರಿಕೆಯಾದ ಮತ್ತು ಪಾವತಿಯಾದ ಒಟ್ಟು ಷೇರು ಬಂಡವಾಳವು ತಲಾ ರೂ.100/-ರ ಈಕ್ವಿಟಿ ಷೇರುಗಳನ್ನು ಒಳಗೊಂಡ ರೂ.42,73,47,700/- ಆಗಿರುವುದು.

### 7. ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿ:

ಕರ್ನಾಟಕ ಸರ್ಕಾರ ಮತ್ತು ಧಾರಕ ಕಂಪನಿ, ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ (ಕೆಎಸ್‌ಐಐಡಿಸಿ) ನಿರ್ದೇಶನಗಳ ಅನ್ವಯ 2017-18ರ ಹಣಕಾಸಿನ ವರ್ಷದ ಅವಧಿಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯ ಸಂಯೋಜನೆಯಲ್ಲಿ ಕೆಳಕಂಡ ಬದಲಾವಣೆಗಳನ್ನು ಮಾಡಲಾಗಿದೆ.

| ಕ್ರ. ಸಂ. | ನಿರ್ದೇಶಕರ ಹೆಸರು | ನೇಮಕಾತಿ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|
| 1. | ಶ್ರೀ ಹಂಪನಗೌಡ ಬಾದರ್ಲಿ | 02.11.2016 | 05.04.2018 |
| 2. | ಡಾ.ಜಿ.ಸಿ.ಪ್ರಕಾಶ್, ಭಾ.ಆ.ಸೇ. | 07.10.2016 | - |
| 3. | ಶ್ರೀ ರಿತೇಶ್‌ಕುಮಾರ್, ಭಾ.ಆ.ಸೇ. | 21.07.2015 | 13.07.2017 |
| 4. | ಶ್ರೀ ದರ್ಪಣ್ ಜೈನ್, ಭಾ.ಆ.ಸೇ. | 07.03.2017 | 06.03.2018 |
| 5. | ಶ್ರೀ ಶ್ರೀವಾಸ್ತ ಕೃಷ್ಣ ಭಾ.ಆ.ಸೇ. | 07.03.2017 | 10.05.2017 |
| 6. | ಶ್ರೀ ನವೀನ್‌ರಾಜ್ ಸಿಂಗ್, ಭಾ.ಆ.ಸೇ. | 06.03.2015 | 10.05.2017 |
| 7. | ಶ್ರೀಮತಿ ಪಿ. ಹೇಮಲತ, ಭಾ.ಆ.ಸೇ. | 10.05.2017 | 27.09.2017 |
| 8. | ಶ್ರೀ ರಾಜೇಂದ್ರ ಕುಮಾರ್ ಕಟಾರಿಯಾ, ಭಾ.ಆ.ಸೇ. | 10.05.2017 | 26.07.2017 |
| 9. | ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ. | 26.07.2017 | - |
| 10. | ಡಾ. ಏಕ್‌ರೂಪ್ ಕೌರ್, ಭಾ.ಆ.ಸೇ. | 13.07.2017 | - |
| 11. | ಶ್ರೀ ಎನ್.ಜಯರಾಂ, ಭಾ.ಆ.ಸೇ. | 27.09.2017 | - |
| 12. | ಶ್ರೀ ಆರ್.ರಮೇಶ್ | 06.03.2018 | - |
| 13. | ಶ್ರೀ ಎಸ್.ಆರ್. ಸನತ್‌ಕುಮಾರ್ | 06.07.2016 | 31.05.2018 |
| 14. | ಶ್ರೀ ರಫೀಕ್ ಅಹಮದ್ ಬಿ.ಪಕಾಲಿ | 06.07.2016 | 31.05.2018 |
| 15. | ಶ್ರೀ ಗುಣಶೇಖರ | 06.07.2016 | 31.05.2018 |
| 16. | ಶ್ರೀ ಚಲುವರಾಜು | 06.07.2016 | 31.05.2018 |
| 17. | ಶ್ರೀ ಎಂ.ಎಸ್.ಶ್ರೀಧರ | 06.07.2016 | 31.05.2018 |
| 18. | ಶ್ರೀ ಕೆ.ವೆಂಕಟಸ್ವಾಮಪ್ಪ | 06.07.2016 | 31.05.2018 |
| 19. | ಶ್ರೀ ಅನುರಾಧ ಬಿ. ತಾಪ್ಲಿ | 06.07.2016 | 31.05.2018 |
| 20. | ಶ್ರೀ ಆರ್.ತಮ್ಮಣ್ಣ | 06.07.2016 | 31.05.2018 |
| 21. | ಶ್ರೀ ಎನ್.ಬಾಲ್‌ರಾಜು | 06.07.2016 | 31.05.2018 |

ಶ್ರೀ ಹಂಪನಗೌಡ ಬಾದರ್ಲಿ, ಶ್ರೀ ರಿತೇಶ್‌ಕುಮಾರ್, ಭಾ.ಆ.ಸೇ. ಶ್ರೀ ದರ್ಪಣ್‌ಜೈನ್, ಭಾ.ಆ.ಸೇ. ಶ್ರೀ ಶ್ರೀವಾಸ್ತ ಕೃಷ್ಣ ಭಾ.ಆ.ಸೇ. ಶ್ರೀ ನವೀನ್‌ರಾಜ್ ಸಿಂಗ್, ಭಾ.ಆ.ಸೇ., ಶ್ರೀಮತಿ ಪಿ.ಹೇಮಲತ, ಭಾ.ಆ.ಸೇ. ಶ್ರೀ ರಾಜೇಂದ್ರ ಕುಮಾರ್ ಕಟಾರಿಯಾ, ಭಾ.ಆ.ಸೇ. ಶ್ರೀ ಎಸ್.ಆರ್.ಸನತ್ ಕುಮಾರ್, ಶ್ರೀ ರಫೀಕ್‌ಅಹಮದ್ ಬಿ.ಪಕಾಲಿ, ಶ್ರೀ ಗುಣಶೇಖರ, ಶ್ರೀ ಚಲುವರಾಜು, ಶ್ರೀ ಎಂ.ಎಸ್.ಶ್ರೀಧರ, ಶ್ರೀ ಕೆ.ವೆಂಕಟಸ್ವಾಮಪ್ಪ, ಶ್ರೀ ಅನುರಾಧ ಬಿ.ತಾಪ್ಲಿ, ಶ್ರೀ ಆರ್.ತಮ್ಮಣ್ಣ ಮತ್ತು ಶ್ರೀ ಎನ್.ಬಾಲ್‌ರಾಜು, ನಿರ್ದೇಶಕರು ಇವರುಗಳು ಕಂಪನಿಯ ನಿರ್ದೇಶಕರ ಮಂಡಳಿಯಲ್ಲಿ ನಿರ್ದೇಶಕರುಗಳಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಸಲ್ಲಿಸಿದ ಸೇವೆ ಮತ್ತು ನೀಡಿದ ಅನುಪಮ ಕೊಡುಗೆಯನ್ನು ಮಂಡಳಿಯು ಸ್ಮರಿಸಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುವುದು.

**ವರದಿಯ ದಿನಾಂಕದಂದು ಇರುವ ನಿರ್ದೇಶಕರುಗಳ ವಿವರ ಕೆಳಕಂಡಂತಿರುವುದು:**

**ನಿರ್ದೇಶಕರ ಹೆಸರು**

| | |
|---|---|
| 1.ಶ್ರೀ ಕೆ.ಜೆ.ಜಾರ್ಜ್ | -ಅಧ್ಯಕ್ಷರು |
| 2.ಡಾ.ಜಿ.ಸಿ.ಪ್ರಕಾಶ್, ಭಾ.ಆ.ಸೇ | -ವ್ಯವಸ್ಥಾಪಕ ನಿರ್ದೇಶಕರು |
| 3.ಶ್ರೀ ಕಪಿಲ್ ಮೋಹನ್, ಭಾ.ಆ.ಸೇ. | -ನಿರ್ದೇಶಕರು |
| 4. ಡಾ.ಏಕ್‌ರೂಪ್ ಕೌರ್, ಭಾ.ಆ.ಸೇ. | -ನಿರ್ದೇಶಕರು |
| 5. ಶ್ರೀಮತಿ ಗುಂಜನ್ ಕೃಷ್ಣ ಭಾ.ಆ.ಸೇ. | -ನಿರ್ದೇಶಕರು |
| 6. ಶ್ರೀ ಆರ್.ರಮೇಶ್ | -ನಿರ್ದೇಶಕರು |

2017-18ನೇ ಆರ್ಥಿಕ ವರ್ಷದಲ್ಲಿ ಕಂಪನಿಗಳ ಕಾಯ್ದೆ 2013ರ ಉಪಬಂಧಗಳ ಅನುಸಾರ ಕೆಳಕಂಡವರು ಕಂಪನಿಯ ಪ್ರಮುಖ ಆಡಳಿತ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿರುವರು:

| ಕ್ರ. ಸಂ. | ಪ್ರಮುಖ ಆಡಳಿತ ಅಧಿಕಾರಿಗಳ ಹೆಸರು | ನೇಮಕವಾದ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|
| 1. | ಡಾ.ಜಿ.ಸಿ.ಪ್ರಕಾಶ್, ಭಾ.ಆ.ಸೇ. -ವ್ಯವಸ್ಥಾಪಕ ನಿರ್ದೇಶಕರು | 11.08.2014 | - |
| 2. | ಶ್ರೀ ಎ.ಎಂ. ಚಂದ್ರಪ್ಪ -ಮುಖ್ಯ ಹಣಕಾಸು ಅಧಿಕಾರಿ | 15.05.2017 | 20.08.2018 |
| 3. | ಶ್ರೀ ಸುಬ್ರಮಣ್ಯ -ಮುಖ್ಯ ಹಣಕಾಸು ಅಧಿಕಾರಿ | 20.08.2018 | - |
| 4. | ಶ್ರೀಮತಿ ಶ್ರೀದೇವಿ ಬಿ.ಎನ್ -ಕಂಪನಿ ಕಾರ್ಯದರ್ಶಿ | 18.09.2013 | - |

## ನಿರ್ದೇಶಕರ ವರದಿ (ಮುಂದುವರೆದುದು)

**8. ಸಭೆಗಳು :**

ವಿಭಾಗದ ಮುಖ್ಯಸ್ಥರುಗಳಿಂದ ಬಂದ ಮನವಿಯ ಆಧಾರದ ಮೇಲೆ, ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಗೆ ಒಳಪಟ್ಟು ಮತ್ತು ಶಾಸನಬದ್ಧವಾಗಿ ಅಗತ್ಯವಾಗಿರುವಂತೆ ಕಾರ್ಯಸೂಚಿ ವಿಷಯಗಳ ಆಧಾರದ ಮೇಲೆ ಕಂಪನಿ ಕಾರ್ಯದರ್ಶಿಯು ವ್ಯವಸ್ಥಾಪಕ ನಿರ್ದೇಶಕರೊಡನೆ ಸಮಾಲೋಚಿಸಿ/ ಅವರ ಒಪ್ಪಿಗೆ ಪಡೆದು ವಿವರಣಾತ್ಮಕ ಟಿಪ್ಪಣಿಗಳ ಜೊತೆಗೆ ಪ್ರತಿ ಸಭೆಯ ಕಾರ್ಯಸೂಚಿಯನ್ನು ತಯಾರಿಸುವರು, ಮತ್ತು ಅದನ್ನು ಮಂಡಳಿಯ ನಿರ್ದೇಶಕರುಗಳಿಗೆ ಮುಂಚಿತವಾಗಿ ವಿತರಿಸುವರು. 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಈ ಕೆಳಕಂಡ ದಿನಾಂಕಗಳಂದು ನಾಲ್ಕು ಮಂಡಳಿ ಸಭೆಗಳು, ಮೂರು ಲೆಕ್ಕ ಪರಿಶೋಧನಾ ಉಪ-ಸಮಿತಿ ಸಭೆಗಳು ಮತ್ತು ಒಂದು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ ಸಭೆಯನ್ನು ನಡೆಸಲಾಗಿದೆ.

| ಕ್ರ. ಸಂ. | ಮಂಡಳಿ ಸಭೆ ನಡೆದ ದಿನಾಂಕಗಳು |
|---|---|
| 1. | 15ನೇ ಮೇ, 2017 |
| 2. | 07ನೇ ಆಗಸ್ಟ್, 2017 |
| 3. | 28ನೇ ನವೆಂಬರ್, 2017 |
| 4. | 09ನೇ ಫೆಬ್ರುವರಿ, 2018 |

| ಕ್ರ. ಸಂ. | ಲೆಕ್ಕ ಪರಿಶೋಧನಾ ಉಪಸಮಿತಿ ಸಭೆ ನಡೆದ ದಿನಾಂಕ |
|---|---|
| 1. | 07ನೇ ಆಗಸ್ಟ್ 2017 |
| 2. | 27ನೇ ನವೆಂಬರ್, 2017 |
| | |

| ಕ್ರ.ಸಂ. | ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ ಸಭೆ ದಿನಾಂಕ |
|---|---|
| 1 | 04ನೇ ನವೆಂಬರ್, 2017 |

ಮಂಡಳಿಯ ಸಭೆಗಳ ನಡುವಿನ ಅಂತರವು ಕಂಪನಿಗಳ ಕಾಯ್ದೆ, 2013ರ ಅನ್ವಯ ನಿಗದಿಪಡಿಸಿರುವ ಅವಧಿಯ ಒಳಗಿರುವುದು.

**2017-2018ನೇ ಆರ್ಥಿಕ ವರ್ಷದಲ್ಲಿ ನಡೆದ ಮಂಡಳಿಯ ಸಭೆಗಳಿಗೆ ನಿರ್ದೇಶಕರುಗಳ ಹಾಜರಾತಿ ವಿವರ**

| ನಿರ್ದೇಶಕರ ಹೆಸರು | ನಡೆದ ಮಂಡಳಿ ಸಭೆಗಳ ಸಂಖ್ಯೆ | |
|---|---|---|
| | ನಡೆದದ್ದು | ಹಾಜರಾತಿ |
| 1. ಶ್ರೀ ಹಂಪನಗೌಡ ಬಾದರ್ಲಿ | 4 | 3 |
| 2. ಡಾ.ಜಿ.ಸಿ. ಪ್ರಕಾಶ್, ಭಾ.ಆ.ಸೇ. | 4 | 4 |
| 3. ಶ್ರೀ ರಿತೇಶ್‌ಕುಮಾರ್, ಭಾ.ಆ.ಸೇ. | 4 | 0 |
| 4. ಶ್ರೀ ದರ್ಪಣ್ ಜೈನ್, ಭಾ.ಆ.ಸೇ. | 4 | 0 |
| 5. ಶ್ರೀ ಶ್ರೀವಾಸ್ತ ಕೃಷ್ಣ, ಭಾ.ಆ.ಸೇ. | 4 | 0 |
| 6. ಶ್ರೀ ನವೀನ್‌ರಾಜ್ ಸಿಂಗ್, ಭಾ.ಆ.ಸೇ. | 4 | 0 |
| 7. ಶ್ರೀಮತಿ ಪಿ. ಹೇಮಲತ, ಭಾ.ಆ.ಸೇ. | 4 | 0 |
| 8. ಶ್ರೀ ರಾಜೇಂದ್ರಕುಮಾರ್ ಕಟಾರಿಯ, ಭಾ.ಆ.ಸೇ. | 4 | 0 |
| 9. ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ. | 4 | 2 |
| 10. ಡಾ.ಏಕ್‌ರೂಪ್ ಕೌರ್, ಭಾ.ಆ.ಸೇ. | 4 | 2 |
| 11. ಶ್ರೀ ಎನ್.ಜಯರಾಂ, ಭಾ.ಆ.ಸೇ. | 4 | 0 |
| 12. ಶ್ರೀ ಆರ್.ರಮೇಶ್ | 4 | 0 |
| 13. ಶ್ರೀ ಎಸ್.ಆರ್.ಸನತ್‌ಕುಮಾರ್ | 4 | 4 |
| 14. ಶ್ರೀ ರಫೀಕ್‌ಅಹಮದ್ ಬಿ.ಪಕಾಲಿ | 4 | 4 |
| 15. ಶ್ರೀ ಗುಣಶೇಖರ | 4 | 4 |
| 16. ಶ್ರೀ ಚಲುವರಾಜು | 4 | 4 |
| 17. ಶ್ರೀ ಎಂ.ಎಸ್.ಶ್ರೀಧರ | 4 | 4 |
| 18. ಶ್ರೀ ಕೆ.ವೆಂಕಟಸ್ವಾಮಪ್ಪ | 4 | 4 |
| 19. ಶ್ರೀ ಅನುರಾಧ ಬಿ.ತಾಪ್ಲಿ | 4 | 4 |
| 20. ಶ್ರೀ ಆರ್.ತಮ್ಮಣ್ಣ | 4 | 4 |
| 21. ಶ್ರೀ ಎನ್.ಬಾಲ್‌ರಾಜು | 4 | 4 |

1. ಶ್ರೀ ಹಂಪನಗೌಡ ಬಾದರ್ಲಿ ಇವರು 5ನೇ ಏಪ್ರಿಲ್ 2018 ರಿಂದ ಅನ್ವಯವಾಗುವಂತೆ ಅಧ್ಯಕ್ಷರ ಸ್ಥಾನ ತೆರವುಗೊಳಿಸಿದ್ದಾರೆ.

3. ಶ್ರೀ ರಿತೇಶ್‌ಕುಮಾರ್ ಸಿಂಗ್, ಭಾ.ಆ.ಸೇ.ಇವರು 13ನೇ ಜುಲೈ 2017 ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನ ತೆರವುಗೊಳಿಸಿದ್ದಾರೆ.

4. ಶ್ರೀ ದರ್ಪಣ್ ಜೈನ್, ಭಾ.ಆ.ಸೇ. ಇವರು 7ನೇ ಮಾರ್ಚ್ 2017 ರಂದು ನಿರ್ದೇಶಕರಾಗಿ ನೇಮಕವಾಗಿದ್ದು, 6ನೇ ಮಾರ್ಚ್ 2018 ರಿಂದ ಜಾರಿಗೆ ಬರುವಂತೆ ನಿರ್ದೇಶಕರ ಸ್ಥಾನ ತೆರವುಗೊಳಿಸಿದ್ದಾರೆ.

5. ಶ್ರೀ ಶ್ರೀವಸ್ತ ಕೃಷ್ಣ ಭಾ.ಆ.ಸೇ. ಇವರು 7ನೇ ಮಾರ್ಚ್ 2017ರಂದು ನಿರ್ದೇಶಕರಾಗಿ ನೇಮಕವಾಗಿದ್ದು, 10ನೇ ಮೇ 2018 ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನ ತೆರವುಗೊಳಿಸಿದ್ದಾರೆ.

6. ಶ್ರೀ ನವೀನ್ ರಾಜ್ ಸಿಂಗ್, ಭಾ.ಆ.ಸೇ. ಇವರು 10ನೇ ಮೇ 2018 ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನ ಸಮಾಪ್ತಿಗೊಳಿಸಿದ್ದಾರೆ.

7. ಶ್ರೀಮತಿ ಪಿ. ಹೇಮಲತ, ಭಾ.ಆ.ಸೇ. ಇವರು 10ನೇ ಮೇ 2017 ರಿಂದ ಅನ್ವಯವಾಗುವಂತೆ ನಿರ್ದೇಶಕರಾಗಿ ನೇಮಕವಾಗಿದ್ದು, 27ನೇ ಸೆಪ್ಟೆಂಬರ್, 2017 ರಿಂದ ಜಾರಿಗೆ ಬರುವಂತೆ ನಿರ್ದೇಶಕರ ಸ್ಥಾನ ಸಮಾಪ್ತಿಗೊಳಿಸಿದ್ದಾರೆ.

8. ಶ್ರೀ ರಾಜೇಂದ್ರಕುಮಾರ್ ಕಟಾರಿಯ, ಭಾ.ಆ.ಸೇ. ಇವರು 10ನೇ ಮೇ 2017ರಿಂದ ಅನ್ವಯವಾಗುವಂತೆ ನಿರ್ದೇಶಕರಾಗಿ ನೇಮಕವಾಗಿದ್ದು, 26ನೇ ಜುಲೈ 2017 ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನದಿಂದ ತೆರವಾಗಿದ್ದಾರೆ.

13ರಿಂದ 21. ಶ್ರೀ ಎಸ್.ಆರ್.ಸನತ್‌ಕುಮಾರ್, ಶ್ರೀ ರಫೀಕ್‌ಅಹಮದ್.ಬಿ ಪಕಾಲಿ, ಶ್ರೀ ಗುಣಶೇಖರ, ಶ್ರೀ ಚಲುವರಾಜು, ಶ್ರೀ ಎಂ.ಎಸ್.ಶ್ರೀಧರ, ಶ್ರೀ ಕೆ.ವೆಂಕಟಸ್ವಾಮಪ್ಪ ಶ್ರೀ ಅನುರಾಧ ಬಿ.ತಾಪ್ಲಿ, ಶ್ರೀ ಆರ್.ತಮ್ಮಣ್ಣ ಮತ್ತು

## ನಿರ್ದೇಶಕರ ವರದಿ (ಮುಂದುವರೆದುದು)

ಶ್ರೀ ಎನ್.ಬಾಲ್‌ರಾಜ್ ಇವರುಗಳು 31ನೇ ಮೇ 2018 ರಿಂದ ಅನ್ವಯವಾಗುವಂತೆ ನಿರ್ದೇಶಕರ ಸ್ಥಾನ ತೆರವುಗೊಳಿಸಿದ್ದಾರೆ.

### 9. ಸಹಾಯಕ ಕಂಪನಿಗಳ ವಿವರ

ದಿನಾಂಕ 31ನೇ ಮಾರ್ಚ್ 2018ರಂದು ಇದ್ದಂತೆ ಕಂಪನಿಯು ಎರಡು ಸಹಾಯಕ ಕಂಪನಿಗಳನ್ನು ಹೊಂದಿರುವುದು.

ಪ್ರಕರಣ 129(3)ರ ಉಪಬಂಧಗಳ ಅನುಸಾರ ಒಂದು ಅಥವಾ ಹೆಚ್ಚು ಸಹಾಯಕ ಕಂಪನಿಗಳನ್ನು ಹೊಂದಿರುವ ಕಂಪನಿಯು ಸ್ವತಂತ್ರ ಹಣಕಾಸಿನ ವಿವರಗಳನ್ನು ಹೊಂದಿರುವುದರ ಜೊತೆಗೆ ಕಂಪನಿಯ ಕ್ರೋಡೀಕೃತ ಹಣಕಾಸಿನ ವಿವರಗಳನ್ನು ಸಿದ್ಧಪಡಿಸಬೇಕು ಮತ್ತು ಎಲ್ಲಾ ಸಹಾಯಕ, ಸಹವರ್ತಿ ಕಂಪನಿಗಳು, ಜಂಟಿ ಉದ್ಯಮಗಳೂ ಸೇರಿದಂತೆ ಇದೇ ರೂಪದಲ್ಲಿ ಮತ್ತು ನಮೂನೆಯಲ್ಲಿ ತನ್ನದೇ ಸ್ವಂತ ಎಂಬುದಾಗಿರುವಂತೆ ಹಣಕಾಸಿನ ವಿವರಗಳನ್ನು ಹೊಂದಿರಬೇಕು ಮತ್ತು ಅದನ್ನು ಸ್ವತಂತ್ರ ಹಣಕಾಸು ಹೇಳಿಕೆಗಳ ಜೊತೆಗೆ ಕಂಪನಿಯ ವಾರ್ಷಿಕ ಮಹಾಸಭೆಯ ಮುಂದಿಡಬೇಕು. ಕಂಪನಿಯು 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಕ್ರೋಡೀಕೃತ ಹಣಕಾಸಿನ ವಿವರಗಳನ್ನು ಸಿದ್ಧಪಡಿಸಿದೆ.

ಕಾಯ್ದೆಯ ಪ್ರಕರಣ 129ರ ಉಪ-ಪ್ರಕರಣ (3)ರ ಅನುಸಾರ ಕಂಪನಿಯ ಸಹಾಯಕ ಸಂಸ್ಥೆಗಳ ಹಣಕಾಸಿನ ವಿವರಗಳ ವೈಶಿಷ್ಟ್ಯತೆಗಳನ್ನು ಒಳಗೊಂಡ ವಿವರವನ್ನು ಅನುಬಂಧ-IIರಲ್ಲಿ ನಮೂನೆ ಎಒಸಿ-1ರಲ್ಲಿ ತಿಳಿಸಿದೆ.

### 10. ಲೆಕ್ಕ ಪರಿಶೋಧಕರು:

ಕಂಪನಿಯು, ಕಂಪನಿಗಳ ಕಾಯ್ದೆ, 2013ರ ಪ್ರಕರಣ 2(45) ರ ಅನ್ವಯ ಸರ್ಕಾರದ ಕಂಪನಿಯಾಗಿದ್ದು, ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರೀಶೋಧಕರು ಕಂಪನಿಗಳ ಕಾಯ್ದೆ 2013ರ ಪ್ರಕರಣ 139(5) ರ ಅನ್ವಯ ಕಂಪನಿಯ ವಾರ್ಷಿಕ ಲೆಕ್ಕ ಪತ್ರಗಳ ಪರಿಶೋಧನೆ ಮಾಡಲು ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವರು. ಸಿ ಅಂಡ್ ಎಜಿಐ ಇವರು ಪಿ.ಚಂದ್ರಶೇಖರ್ ಎಲ್‌ಎಲ್‌ಪಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು 2017-18ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿದ್ದಾರೆ. ಸಿ ಅಂಡ್ ಎಜಿಐ ಇವರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕ ಪರಿಶೋಧಕರು, ಮುಂಬರುವ ವಾರ್ಷಿಕ ಮಹಾಸಭೆಯವರೆಗೆ ಲೆಕ್ಕಪರೀಶೋಧಕರಾಗಿರುವರು.

ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಚೇರಿ, ನವದೆಹಲಿ ಇವರು ಮೆ|| ಆಭರ್ಣ ಅಂಡ್ ಅನಂತನ್ (ಬಿಎ0245), ಚಾರ್ಟರ್ಡ್ ಅಕೌಂಟೆಂಟ್ಸ್, ಇವರನ್ನು 2018-19ರ ಸಾಲಿಗೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವುದಾಗಿ ತಿಳಿಸಿದ್ದಾರೆ.

### 11. ಲೆಕ್ಕಪರಿಶೋಧಕರ ವರದಿ:

ಲೆಕ್ಕಪರಿಶೋಧಕರ ವರದಿಯು ಆಕ್ಷೇಪಣೆಗಳನ್ನು ಒಳಗೊಂಡಿರುವುದೇ ಎಂಬುದನ್ನು ಪರಿಶೀಲಿಸಬೇಕಾಗಿರುತ್ತದೆ. ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳ ಸಂಬಂಧದ ಉತ್ತರಗಳನ್ನು ಲಗತ್ತಿಸಲಾಗಿದೆ.

### 12. ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿ:

ಕಾಯ್ದೆಯ ಪ್ರಕರಣ 204 ಮತ್ತು ಇದರಡಿಯಲ್ಲಿ ರೂಪಿಸಿರುವ ನಿಯಮಗಳ ಅನ್ವಯ ಶ್ರೀ ಎಸ್.ಕೇದಾರ್‌ನಾಥ್, ಕಾರ್ಯನಿರತ ಕಂಪನಿ ಕಾರ್ಯದರ್ಶಿ ಇವರು ಸೆಕ್ರೆಟೇರಿಯಲ್ ಲೆಕ್ಕ ಪರಿಶೋಧಕರಾಗಿ 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಬಗ್ಗೆ ತಮ್ಮ ವರದಿಯನ್ನು ಸಲ್ಲಿಸಿದ್ದಾರೆ. ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರ ವರದಿಯನ್ನು ಸದರಿ ವರದಿಗೆ ಅನುಬಂಧ-III ಆಗಿ ಲಗತ್ತಿಸಲಾಗಿದೆ. ವರದಿಯು ಸ್ವಯಂ ವಿವರಣಾತ್ಮಕವಾಗಿದ್ದು, ಮುಂದಿನ ಯಾವುದೇ ಟೀಕೆಗಳಿಗೆ ಅವಕಾಶವಿರುವುದಿಲ್ಲ.

### 13. ಆಂತರಿಕ ಲೆಕ್ಕಪರಿಶೋಧನೆ ಮತ್ತು ನಿಯಂತ್ರಣಗಳು:

ಕಂಪನಿಯು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಪ್ರಕ್ರಿಯೆಯನ್ನು ಮುಂದುವರಿಸುವುದು. ಆಂತರಿಕ ಲೆಕ್ಕಪರಿಶೋಧಕರ ಕಾರ್ಯವ್ಯಾಪ್ತಿ ಮತ್ತು ಉದ್ದೇಶವು ವ್ಯವಹಾರಗಳ ಲೆಕ್ಕಪರಿಶೋಧನೆ ಮತ್ತು ಪುನರ್ ಅವಲೋಕನವನ್ನು ಒಳಗೊಂಡಿರುವುದು. ಆಂತರಿಕ ಲೆಕ್ಕಪರಿಶೋಧಕರು ತಮ್ಮ ವರದಿಯನ್ನು ಕಂಪನಿಯ ಟಿಪ್ಪಣಿಗಳ ಜೊತೆಗೆ ಕಂಪನಿಗೆ ಸಲ್ಲಿಸುವರು. ಸದರಿ ವರದಿಯನ್ನು ಕಾರ್ಯಾಚರಣೆಗಳ ಸಾಮರ್ಥ್ಯಗಳನ್ನು ಸುಧಾರಿಸಲು ಚಲನಾತ್ಮಕ ಆಧಾರದ ಮೇಲೆ ಲೆಕ್ಕಪರಿಶೋಧನಾ ಸಮಿತಿ ಮುಂದೆ ಇರಿಸಲಾಗುವುದು.

### 14. ಅಪಾಯ ನಿರ್ವಹಣಾ ನೀತಿ

ಕಂಪನಿಯು ಎಲ್ಲಾ ಕಾರ್ಯಾಚರಣೆ ವಿಭಾಗಗಳ ಅಪಾಯದ ಅಂಶಗಳನ್ನು ಗುರುತಿಸಿದೆ ಮತ್ತು ಪ್ರತಿಯೊಂದು ಅಪಾಯದ ಉಪಶಮನ ಉಪಾಯವನ್ನು ಕಂಡುಕೊಂಡಿದೆ.

### 15. ವಾರ್ಷಿಕ ರಿಟರ್ನ್‌ನ ಸಾರಾಂಶ:

ಕಂಪನಿಗಳ ಕಾಯ್ದೆ, 2013ರ ಪ್ರಕರಣ 92(3) ಮತ್ತು ಕಂಪನಿಗಳ (ಆಡಳಿತ ವರ್ಗ ಮತ್ತು ಆಡಳಿತ) ನಿಯಮಗಳು 2014ರ ನಿಯಮ 12(1)ರ ಅನುಸಾರ ಅಗತ್ಯವಾದಂತೆ, ಸದರಿ ವಾರ್ಷಿಕ ವರದಿಯ ಒಂದು ಭಾಗವಾಗಿ ಎಂಜಿಟಿ 9 ರಲ್ಲಿ ವಾರ್ಷಿಕ ರಿಟರ್ನ್‌ನ ಸಾರಾಂಶವನ್ನು ಅನುಬಂಧ-1 ಆಗಿ ಲಗತ್ತಿಸಿದೆ.

## ನಿರ್ದೇಶಕರ ವರದಿ (ಮುಂದುವರೆದುದು)

**16. ಹಣಕಾಸಿನ ವಿವರಗಳು ಸಂಬಂಧಪಟ್ಟಿರುವ ಕಂಪನಿಯ ಹಣಕಾಸಿನ ವರ್ಷದ ಕೊನೆ ಮತ್ತು ವರದಿಯ ದಿನಾಂಕದ ನಡುವೆ ಉಂಟಾಗಿರುವ, ಕಂಪನಿಯ ಹಣಕಾಸಿನ ಪರಿಸ್ಥಿತಿಯ ಮೇಲೆ ಪರಿಣಾಮ ಉಂಟು ಮಾಡಬಹುದಾದ ವಾಸ್ತವಿಕ ಬದಲಾವಣೆಗಳು ಮತ್ತು ಬದ್ಧತೆಗಳು**

ಸ್ಥಿತಿ ವಿವರಣಾ ಪಟ್ಟಿಗಳು ಸಂಬಂಧಪಟ್ಟಿರುವ ಕಂಪನಿಯ ಹಣಕಾಸಿನ ವರ್ಷ ಮುಕ್ತಾಯದ ತರುವಾಯ ಮತ್ತು ತೆರಿಗೆ ಹೊಣೆಗಾರಿಕೆ ಇತ್ಯರ್ಥ, ಪೇಟೆಂಟ್ ಹಕ್ಕುಗಳ ಕಾರ್ಯಾಚರಣೆ, ಹೂಡಿಕೆಗಳ ಮಾರುಕಟ್ಟೆ ಮೌಲ್ಯದಲ್ಲಿ ಕುಸಿತ, ಕಂಪನಿಯಿಂದ ಅಥವಾ ಕಂಪನಿಯ ಮೇಲೆ ಹೂಡಿರುವ ದಾವೆಗಳು, ಬಂಡವಾಳ ಸ್ವತ್ತುಗಳ ಮಾರಾಟ ಅಥವಾ ಖರೀದಿ ಅಥವಾ ಯಾವುದೇ ಆಸ್ತಿಗಳ ನಾಶ ಇತ್ಯಾದಿ ವರದಿಯ ದಿನಾಂಕದಲ್ಲಿ ಯಾವುದೇ ಅಂತಹ ವಾಸ್ತವಿಕ ಬದಲಾವಣೆಗಳಿರುವುದಿಲ್ಲ.

**17. ಕಂಪನಿಯ ಹಾಲಿ ಪ್ರಗತಿಯ ಸ್ಥಿತಿಗತಿ ಮೇಲೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳ ಮೇಲೆ ಪರಿಣಾಮವನ್ನುಂಟು ಮಾಡುವ ದಿಸೆಯಲ್ಲಿ ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧೀಕರಣಗಳಿಂದ ಹೊರಡಿಸಿರುವ ಮಹತ್ವಪೂರ್ಣವಾದ ಮತ್ತು ವಾಸ್ತವಿಕ ಆದೇಶಗಳ ವಿವರಗಳು:**

ಚಾಲ್ತಿ ಸಂಸ್ಥೆಯ ಸ್ಥಿತಿಗತಿಗಳ ಮೇಲೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ಅಂತಹ ಆದೇಶಗಳನ್ನು ಹೊರಡಿಸಿರುವುದಿಲ್ಲ.

**18. ಠೇವಣಿಗಳು**

ಪರಾಮರ್ಶನೆಯಲ್ಲಿರುವ ವರ್ಷದಲ್ಲಿ ಕಂಪನಿಯು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-v ರ ಅನ್ವಯ ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ.

**19. ಸಂಬಂಧಪಟ್ಟ ವ್ಯಕ್ತಿ ವ್ಯವಹಾರಗಳು:**

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ 2013ರ ಪ್ರಕರಣ 188ರ ಉಪಬಂಧಗಳ ಅನುಸಾರ ಕಂಪನಿಯು ಯಾವುದೇ ಗುತ್ತಿಗೆ ಅಥವಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಿಲ್ಲ.

**20. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ನಿಯಂತ್ರಣ, ನಿಷೇಧ ಮತ್ತು ಪರಿಹಾರ) ಕಾಯ್ದೆ-2013ರ ಅನ್ವಯ ಕಂಪನಿಯ ಬಾಧ್ಯತೆಗಳು**

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ನಿಯಂತ್ರಿಸಲು, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ನಿಯಂತ್ರಣ, ನಿಷೇಧ ಮತ್ತು ಪರಿಹಾರ) 2013ರ ಹೊಸ ಕಾಯ್ದೆಯನ್ನು 09.12.2013 ರಂದು ಅಧಿಸೂಚಿಸಲಾಗಿದೆ. ಈ ಕಾಯ್ದೆಯ ಪ್ರಕಾರ ಯಾವುದೇ ಮಹಿಳಾ ಉದ್ಯೋಗಿಗಳು ಕೆಲಸದ ಸಂದರ್ಭದಲ್ಲಿ ತಮ್ಮ ಮೇಲೆ ಆದ ದೌರ್ಜನ್ಯಗಳ ಕುರಿತಂತೆ ಸಲ್ಲಿಸಿದ ದೂರುಗಳನ್ನು ವಿಚಾರಿಸಲು ಪ್ರತಿಯೊಂದು ಕಂಪನಿಯು ಆಂತರಿಕ ದೂರುಗಳ ವಿಚಾರಣೆ ಸಮಿತಿಯನ್ನು ಸ್ಥಾಪಿಸಬೇಕಾಗುವುದು.

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ತಡೆಯುವ ನೀತಿಯನ್ನು ಕಂಪನಿ ಅಳವಡಿಸಿಕೊಂಡಿದೆ. ಸದರಿ ವರ್ಷದಲ್ಲಿ ಕಂಪನಿಗೆ ಲೈಂಗಿಕ ದೌರ್ಜನ್ಯದ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

**21. ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿವು:**

ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿವಿನ ವಿವರಗಳು ಕೆಳಕಂಡಂತಿರುವುದು:

**(ಎ) ಇಂಧನ ಸಂರಕ್ಷಣೆ**

ಕಂಪನಿಯು ಪ್ರಮುಖವಾಗಿ ವ್ಯಾಪಾರ ಸಂಸ್ಥೆಯಾಗಿರುವುದು. ಇದು ಕಚೇರಿ ಉಪಯೋಗಕ್ಕೆ ಮಾತ್ರ ವಿದ್ಯುತ್ ಬಳಕೆ ಮಾಡುವುದು. ವಿದ್ಯುತ್ ಸಂರಕ್ಷಿಸಲು ಮತ್ತು ವಿದ್ಯುತ್ ಬಳಕೆಯನ್ನು ಕನಿಷ್ಠಗೊಳಿಸಲು ಕಂಪನಿಯ ನೋಂದಾಯಿತ ಕಚೇರಿಯಲ್ಲಿ 15 ಕೆಡಬ್ಲ್ಯೂಪಿ ಆನ್ ಗ್ರಿಡ್ ರೂಫ್ ಟಾಪ್ ಸೋಲಾರ್ ಪವರ್ ಪ್ಲಾಂಟ್ ಅಳವಡಿಸಲಾಗಿದೆ.

**(ಬಿ) ತಂತ್ರಜ್ಞಾನ ಅಳವಡಿಕೆ:**

ಕಂಪನಿಯು ವ್ಯಾಪಾರ ನಡೆಸುವ ಕಂಪನಿಯಾಗಿರುವುದರಿಂದ ಯಾವುದೇ ಸಮಯದಲ್ಲೂ ಯಾರಿಂದಲೂ ಯಾವುದೇ ತಂತ್ರಜ್ಞಾನ ಪಡೆದುಕೊಂಡಿರುವುದಿಲ್ಲ.

**(ಸಿ) ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿವು:**

ವಿದೇಶಿ ವಿನಿಮಯ ಗಳಿಕೆ: ರೂ.3,15,631/-(ಹಿಂದಿನ ವರ್ಷ-ಇಲ್ಲ)

ವಿದೇಶಿ ವಿನಿಮಯ ಹೊರ ಹರಿವು: ಇಲ್ಲ (ಹಿಂದಿನ ವರ್ಷ-ಇಲ್ಲ)

**22. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್)**

ಕಂಪನಿಗಳ ಕಾಯ್ದೆ 2013ರ ಪ್ರಕರಣ 135ರ ಅನ್ವಯ ಅನ್ವಯವಾಗುವ ಮಾನದಂಡಗಳನ್ನು ಪರಿಪಾಲಿಸುವ ಒಂದು ಕಂಪನಿಯು, ತಕ್ಷಣದ ಹಿಂದಿನ ಮೂರು ಹಣಕಾಸಿನ ವರ್ಷಗಳ ಸರಾಸರಿ ನಿವ್ವಳ ಲಾಭದ ಕನಿಷ್ಠ 2% ಹಣವನ್ನು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ಚಟುವಟಿಕೆಗಳಿಗೆ ಖರ್ಚು

ಮಾಡಬೇಕಾಗುತ್ತದೆ. ಸಿಎಸ್‌ಆರ್ ಚಟುವಟಿಕೆಗಳ ಕ್ಷೇತ್ರಗಳು–ಶಿಕ್ಷಣ ಪ್ರವರ್ಧನೆ ಮತ್ತು ಆರೋಗ್ಯ ರಕ್ಷಣೆ. ಕಂಪನಿಯು ಕಾಯ್ದೆಯ ಪ್ರಕಾರ ಸಿಎಸ್‌ಟಿ ಸಮಿತಿಯನ್ನು ರಚಿಸಿದೆ. ಇದಕ್ಕೆ ಮೀಸಲಿರಿಸಿರುವ ಹಣವನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ–VIIರಲ್ಲಿ ವಿವರಿಸಿರುವ ಚಟುವಟಿಕೆಗಳಿಗೆ ಬಳಸಲಾಗಿದೆ.

- ಸದರಿ ವರ್ಷಾವಧಿಯಲ್ಲಿ ಕಂಪನಿಯು ಈ ಚಟುವಟಿಕೆಗಳಿಗೆ ಖರ್ಚು ಮಾಡಬೇಕಿದ್ದ ಒಟ್ಟು ಮೊತ್ತ ರೂ.70.85 ಲಕ್ಷಗಳು.
- ಸದರಿ ವರ್ಷಾವಧಿಯಲ್ಲಿ ಖರ್ಚು ಮಾಡಿದ ಮೊತ್ತ ರೂ.540.80 ಲಕ್ಷ. ಇದರಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಿದ ರೂ.2 ಕೋಟಿಯೂ ಸೇರಿದೆ.

## 23. ಮಾನವ ಸಂಪನ್ಮೂಲಗಳು:

ನಿಮ್ಮ ಕಂಪನಿಯು ತನ್ನ ''ಮಾನವ ಸಂಪನ್ಮೂಲಗಳನ್ನು'' ಅತ್ಯಮೂಲ್ಯವಾದ ಆಸ್ತಿಗಳಲ್ಲಿ ಒಂದು ಎಂಬುದಾಗಿ ಪರಿಗಣಿಸಿದೆ.

ನಿಮ್ಮ ಕಂಪನಿಯು ನೌಕರರುಗಳಿಗೆ ತರಬೇತಿ ನೀಡುವ ಮತ್ತು ಅವರನ್ನು ವಿಕಾಸಗೊಳಿಸುವುದಕ್ಕೆ ಒತ್ತು ನೀಡುವ ಕ್ರಮವನ್ನು ಮುಂದುವರಿಸುತ್ತಿದೆ. 2017–18ರ ಸಾಲಿನಲ್ಲಿ ನೌಕರರ ಕಾರ್ಯದಕ್ಷತೆಯನ್ನು ಹೆಚ್ಚಿಸಲು 24 ನೌಕರರಿಗೆ (ಎಕ್ಸಿಕ್ಯುಟಿವ್‌ಗಳು/ಅಧಿಕಾರಿಗಳು ಮತ್ತು ಸಿಬ್ಬಂದಿ) ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತರಬೇತಿ ಕಾರ್ಯಕ್ರಮ ನಡೆಸಲು ಕಂಪನಿ ಯೋಜಿಸಿದೆ.

2017–18ರ ಅವಧಿಯಲ್ಲಿ (31ನೇ ಮಾರ್ಚ್ 2018ರವರೆಗೆ) ನಿಮ್ಮ ಕಂಪನಿಯಲ್ಲಿ 205 ನೌಕರರಿದ್ದರು. (ಎಕ್ಸಿಕ್ಯುಟಿವ್‌ಗಳು/ಅಧಿಕಾರಿಗಳು 30 ಮತ್ತು ಸಿಬ್ಬಂದಿಗಳು 165). ಇವರಲ್ಲಿ 09 ನೌಕರರುಗಳನ್ನು (02 ಅಧಿಕಾರಿಗಳು ಮತ್ತು 07 ನೌಕರರು) ಕರ್ನಾಟಕ ಪಾನೀಯ ನಿಗಮ ನಿಯಮಿತಕ್ಕೆ ನಿಯೋಜನೆ ಮಾಡಿರುವುದನ್ನು ಮುಂದುವರಿಸಲಾಗಿದೆ ಮತ್ತು ಒಬ್ಬ ಅಧಿಕಾರಿಯನ್ನು ಪಿಡಬ್ಲ್ಯೂಡಿಗೆ ನಿಯೋಜಿಸಲಾಗಿದೆ.

## 24. ಯೋಜನೆ/ಎಸ್ಟೇಟ್ ಇಲಾಖೆ:

ಕಂಪನಿಯು ಈಗಾಗಲೇ ಕಚೇರಿ ಹಾಗೂ ಉಗ್ರಾಣ ಮೂಲ ಸೌಲಭ್ಯ ವಲಯಕ್ಕೆ ಅಡಿಯಿಟ್ಟಿದೆ. ಮೈಸೂರಿನಲ್ಲಿನ ಉಗ್ರಾಣ ಸಂಕೀರ್ಣ ಮತ್ತು ಕಚೇರಿ ಸ್ಥಳಾವಕಾಶದಿಂದ ಆದಾಯ ಗಳಿಕೆಯಾಗುತ್ತಿದೆ. ಮಂಗಳೂರಿನ ಬೈಕಂಪಾಡಿಯಲ್ಲಿನ ಉಗ್ರಾಣ ಸಂಕೀರ್ಣವನ್ನು ಬಾಡಿಗೆಗೆ ನೀಡಿದ್ದು, ಅದರಿಂದ ಆದಾಯ ಬರುತ್ತಿದೆ. ಕಂಪನಿಯು ಪೀಣ್ಯ, ಹುಬ್ಬಳ್ಳಿ ಮತ್ತು ಕಲಬುರಗಿಯಲ್ಲಿರುವ ಜಮೀನುಗಳಲ್ಲಿ ಕಚೇರಿ ಹಾಗೂ ಉಗ್ರಾಣ ಸಂಕೀರ್ಣಗಳನ್ನು ನಿರ್ಮಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ಈ ಎಲ್ಲಾ ಯೋಜನೆಗಳಿಂದ ಮುಂಬರುವ ವರ್ಷಗಳಲ್ಲಿ ಕಂಪನಿಗೆ ಹೆಚ್ಚುವರಿ ಆದಾಯ ಉಂಟಾಗಲಿರುವುದು.

ನವಿ ಮುಂಬಯಿಯ ವಷಿಯಲ್ಲಿ ಕರ್ನಾಟಕ ಭವನ ನಿರ್ಮಾಣ ಪೂರ್ಣಗೊಂಡಿದೆ. ಈ ಕಟ್ಟಡವನ್ನು ಡಿಸೆಂಬರ್, 2017 ರಲ್ಲಿ ಉದ್ಘಾಟನೆ ಮಾಡಲಾಗಿದೆ. ಅತಿಥಿಗೃಹದ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಏಜೆನ್ಸಿ ಆಯ್ಕೆ ಪ್ರಕ್ರಿಯೆಲ್ಲಿ ಕಂಪನಿ ತೊಡಗಿದೆ. ಏಜೆನ್ಸಿಗೆ ಅತಿಥಿಗೃಹವನ್ನು ಬಾಡಿಗೆಗೆ ನೀಡಿದ ತರುವಾಯ ಸದರಿ ಭವನದಿಂದ ಕಂಪನಿಗೆ ಇನ್ನೂ ಹೆಚ್ಚು ಆದಾಯ ಬರುವುದು.

## 25. ನಿರ್ದೇಶಕರ ಹೊಣೆಗಾರಿಕೆ ವಿವರ:

ತಮ್ಮ ತಿಳುವಳಿಕೆ ಮತ್ತು ನಂಬಿಕೆಯಂತೆ ಮತ್ತು ಅವರು ಪಡೆದುಕೊಂಡಿರುವ ಮಾಹಿತಿ ಮತ್ತು ವಿವರಣೆಯ ಅನುಸಾರ ಕಂಪನಿಗಳ ಕಾಯ್ದೆ, 2013ರ ಪ್ರಕರಣ 134ರ ಉಪ–ಪ್ರಕರಣ (3)ರ ಕಲಂ (ಸಿ) ಅನ್ವಯ ನಿಮ್ಮ ನಿರ್ದೇಶಕರು ಈ ಕೆಳಕಂಡ ವಿವರಗಳನ್ನು ನೀಡುವರು, ಅವುಗಳೆಂದರೆ:–

(ಎ) 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದರಲ್ಲಿ ವಾಸ್ತವಿಕ ನಿರ್ವಹಣೆಗೆ ಸಂಬಂಧಿಸಿದಂತೆ ಸೂಕ್ತ ವಿವರಣೆಗಳ ಜೊತೆಗೆ ಅನ್ವಯವಾಗುವ ಲೆಕ್ಕಪತ್ರಗಳ ಮಾನದಂಡಗಳನ್ನು ಅನುಸರಿಸಲಾಗಿದೆ;

(ಬಿ) ನಿರ್ದೇಶಕರು ಅಂತಹ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡಿದ್ದು, ಅವುಗಳನ್ನು ನಿರಂತರವಾಗಿ ಅನ್ವಯಿಸಿದ್ದಾರೆ ಮತ್ತು 31ನೇ ಮಾರ್ಚ್ 2018ರಂದು ಇದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಯ ಬಗ್ಗೆ ಮತ್ತು ಸದರಿ ಅವಧಿಯಲ್ಲಿನ ಕಂಪನಿಯ ಲಾಭ ಮತ್ತು ನಷ್ಟದ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡಲು ಸೂಕ್ತವಾದ ಹಾಗೂ ಯುಕ್ತವಾದ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡಿರುವರು;

(ಸಿ) ಕಂಪನಿಯ ಆಸ್ತಿಗಳನ್ನು ಸಂರಕ್ಷಿಸಲು ಮತ್ತು ವಂಚನೆ ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು ಸದರಿ ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಲೆಕ್ಕಪತ್ರಗಳ ದಾಖಲೆಗಳ ನಿರ್ವಹಣೆಗೆ ನಿರ್ದೇಶಕರು ಸೂಕ್ತವಾದ ಮತ್ತು ಸಮಗ್ರವಾದ ಮುತುವರ್ಜಿ ವಹಿಸಿದ್ದಾರೆ;

(ಡಿ) ನಿರ್ದೇಶಕರು 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ವಾರ್ಷಿಕ ಲೆಕ್ಕಪತ್ರವನ್ನು ಪ್ರಗತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ಸಿದ್ಧಪಡಿಸಿದ್ದಾರೆ; ಮತ್ತು

(ಇ) ಅನ್ವಯವಾಗುವ ಎಲ್ಲಾ ಕಾನೂನುಗಳ ಉಪಬಂಧಗಳನ್ನು ಅನುಸರಿಸಿರುವುದನ್ನು ಖಾತರಿಪಡಿಸಲು ನಿರ್ದೇಶಕರು ಸೂಕ್ತವಾದ ವ್ಯವಸ್ಥೆಯನ್ನು ರೂಪಿಸಿರುವರು ಮತ್ತು ಆ ವ್ಯವಸ್ಥೆಗಳು ಸಾಕಷ್ಟು ಪ್ರಮಾಣದಲ್ಲಿದ್ದು ಸಮರ್ಥವಾಗಿ ಕಾರ್ಯಾಚರಣೆಯಾಗುತ್ತಿವೆ.

## 26. ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ಹಣದ ವರ್ಗಾವಣೆ:

ನಿಮ್ಮ ಕಂಪನಿಯು ಕಳೆದ ಏಳು ವರ್ಷಗಳ ಅವಧಿಯಲ್ಲಿ ಪಾವತಿಯಾಗದೆ ಅಥವಾ ಕೇಳುವುವವರಿಲ್ಲದೆ ಹಾಗೆಯೇ ಉಳಿದಿರುವ ಯಾವುದೇ ಹಣವನ್ನು ಹೊಂದಿರುವುದಿಲ್ಲ.

ಆದ್ದರಿಂದಾಗಿ, ಹೂಡಿಕೆದಾರರ ಶಿಕ್ಷಣಕ್ಕೆ ಮತ್ತು ರಕ್ಷಣೆ ನಿಧಿಗೆ (ಐಇಪಿಎಫ್) ವರ್ಗಾಯಿಸಬೇಕಾದ ಯಾವುದೇ ನಿಧಿ ಇರುವುದಿಲ್ಲ.

## 27. ಕೃತಜ್ಞತೆಗಳು

ಅಮೂಲ್ಯವಾದ ನೆರವು ಮತ್ತು ಬೆಂಬಲ ನೀಡಿದ್ದಕ್ಕಾಗಿ ಕರ್ನಾಟಕ ಸರ್ಕಾರಕ್ಕೆ, ಅದರಲ್ಲೂ ವಿಶೇಷವಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಹಣಕಾಸು ಇಲಾಖೆ, ಮೆ॥ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಮತ್ತು ಅಭಿವೃದ್ಧಿ ನಿಗಮ ನಿಯಮಿತ, ಮುಖ್ಯಸ್ಥರುಗಳು, ಸರಬರಾಜುದಾರರು, ಬ್ಯಾಂಕರುಗಳು, ಗ್ರಾಹಕರುಗಳಿಗೆ ಹಾಗೂ ವಿಸ್ತೃತವಾಗಿ ಸಮಾಜಕ್ಕೆ ಈ ಸಂದರ್ಭದಲ್ಲಿ ನಿಮ್ಮ ನಿರ್ದೇಶಕರು ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಧನ್ಯವಾದಗಳನ್ನು ಸಲ್ಲಿಸುವರು.

ಕಂಪನಿಯ ಗುಣಮಟ್ಟ ನೀತಿಯ ಬಗ್ಗೆ ಗ್ರಾಹಕರುಗಳ ಸಂಪೂರ್ಣ ತೃಪ್ತಿ ಸಾಧಿಸಲು ಸಮಸ್ತ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಿದ ಸ್ತುತ್ಯಾರ್ಹ ಕಾರ್ಯಕ್ಕಾಗಿ ನಿರ್ದೇಶಕರು ಮಾಧ್ಯಮಗಳಿಗೂ ಕೃತಜ್ಞತೆ ಸಲ್ಲಿಸುವರು.

ಕಂಪನಿಗೆ ನೆರವು ಮತ್ತು ಸಹಕಾರ ನೀಡಿದಕ್ಕಾಗಿ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು, ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ ಇವರಿಗೆ ಮತ್ತು ಪಿ.ಚಂದ್ರಶೇಖರ್ ಅಂಡ್ ಅಸೋಸಿಯೇಟ್ಸ್, ಶಾಸನಬದ್ಧ ಲೆಕ್ಕಪರಿಶೋಧಕರು ಮತ್ತು ಚಾರ್ಟರ್ಡ್ ಅಕೌಂಟೆಂಟ್ಸ್, ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರಿಗೂ ನಿಮ್ಮ ನಿರ್ದೇಶಕರು ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಲ್ಲಿಸುವರು.

ಕಂಪನಿಯ ಎಲ್ಲಾ ಮಟ್ಟದ ನೌಕರರು ಕಂಪನಿಯ ಪ್ರಗತಿಗೆ ಸಲ್ಲಿಸಿರುವ ಕೊಡುಗೆಯನ್ನು ನಿಮ್ಮ ನಿರ್ದೇಶಕರು ಸ್ಮರಿಸುವರು.

ನಿರ್ದೇಶಕರ ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-

**(ಕೆ.ಜೆ.ಜಾರ್ಜ್)**

ಅಧ್ಯಕ್ಷರು

ಸ್ಥಳ : ಬೆಂಗಳೂರು

ದಿನಾಂಕ:16ನೇ ನವೆಂಬರ್ 2018

| ಅನುಬಂಧ ವಿಷಯಸೂಚಿ | |
|---|---|
| **ಅನುಬಂಧ** | **ಮಾಹಿತಿ** |
| I | ಎಂಜಿಟಿ-9ರಲ್ಲಿ ವಾರ್ಷಿಕ ರಿಟರ್ನ್‌ನ ಸಾರಾಂಶ |
| II | ಸಹಾಯಕ ಕಂಪನಿಗಳ ವಿವರಗಳು-ಎಒಸಿ-1 |
| III | ಎಂಆರ್-2 ಕಾರ್ಯದರ್ಶಿ ಮಟ್ಟದ ಲೆಕ್ಕಪರಿಶೋಧನಾ ವರದಿ |

**2017-18ನೇ ವರ್ಷಕ್ಕೆ ಸಂಬಂಧಿಸಿದಂತೆ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯಲ್ಲಿನ ಆರೋಪಗಳಿಗೆ ಉತ್ತರಗಳು**

**(ಲೆಕ್ಕಪರಿಶೋಧನೆ ವರದಿ ಪುಟ ಸಂಖ್ಯೆ:2ರಲ್ಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರ ನೋಡಿ)**

| ಲೆಕ್ಕಪರಿಶೋಧಕರ ವರದಿಯ ಉಲ್ಲೇಖ | ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಆರೋಪ | ಉತ್ತರಗಳು |
|---|---|---|
| ಎ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ-1 ''ಹಣಕಾಸಿನ ವಿವರಗಳ ನಿರೂಪಣೆ''-ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ-1ರ ಮೇಲೆ ತಿಳಿಸಿರುವ ವಿವರಣೆ ಅನ್ವಯ ಕಂಪನಿಯು ಸಿದ್ಧಗೊಳಿಸಬೇಕಾಗಿರುವ ಹಣಕಾಸಿನ ವಿವರಣೆಯ ಒಂದು ಅಂಶವಾಗಿರುವ ಇತರೆ ಈಕ್ವಿಟಿಯಲ್ಲಿನ ಬದಲಾವಣೆ ಘೋಷಣೆ ವಿವರಗಳನ್ನು ಕಂಪನಿ ಸಿದ್ಧಪಡಿಸಿರುವುದಿಲ್ಲ. | ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟದ ಅನ್ವಯ ಹಣಕಾಸಿನ ವಿವರಗಳನ್ನು ಸಿದ್ಧಪಡಿಸುವ ಕಾರ್ಯ ಕಂಪನಿಗೆ ಇದು ಮೊದಲನೆಯ ವರ್ಷವಾಗಿರುವುದು. ಕಂಪನಿಯು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ವಿವರಗಳನ್ನು ಮೊದಲ ಬಾರಿಗೆ ಸಿದ್ಧಪಡಿಸಿದ್ದು, ಘೋಷಣೆ ಅಗತ್ಯತೆ ಅನುಸರಣೆಯಲ್ಲಿ ಉಂಟಾಗಿರುವ ತಪ್ಪನ್ನು ನಿರ್ಧರಣೆ ಮಾಡುವುದು ಕಾರ್ಯಸಾಧ್ಯವಾಗಿಲ್ಲ. ಆದಾಗ್ಯೂ ಮುಂಬರುವ ವರ್ಷಗಳಲ್ಲಿ ಭಾರತೀಯ ಲೆಕ್ಕ ನಿರ್ವಹಣೆಗೆ ಗುಣಮಟ್ಟದ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಅನುಸರಣೆಯನ್ನು ಪಾಲಿಸಲಾಗುವುದು. |
| ಬಿ | ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟ 8 ''ಲೆಕ್ಕ ನಿರ್ವಹಣೆ ನೀತಿಗಳು, ಲೆಕ್ಕ ನಿರ್ವಹಣೆ ಅಂದಾಜುಗಳಲ್ಲಿ ಬದಲಾವಣೆಗಳು ಮತ್ತು ತಪ್ಪುಗಳು''- ಹೊರಡಿಸಿರುವ ಆದರೆ ಇನ್ನೂ ಜಾರಿಗೆ ತಂದಿರದ ಹೊಸ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಬಗ್ಗೆ ಘೋಷಣೆ ಅಗತ್ಯತೆಯನ್ನು ಪಾಲಿಸಿರುವುದಿಲ್ಲ ಮತ್ತು ಮೊದಲ ಬಾರಿಯ ಅನುಸರಣೆಯಿಂದ ಅದು ಹಣಕಾಸಿನ ವಿವರಗಳ ಮೇಲೆ ಉಂಟು ಮಾಡುವ ಅದರ ಪರಿಣಾಮ ತಿಳಿಸಿರುವುದಿಲ್ಲ. | ಕೊರತೆಗಳು ಮತ್ತು ಯಾವುದೇ ಪರಿಣಾಮವನ್ನು ಲೆಕ್ಕ ಪರಿಶೋಧನೆಯಲ್ಲಿ ವಿವರಿಸಿರುವುದಿಲ್ಲ. |
| ಸಿ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 37 ''ವ್ಯವಸ್ಥೆಗಳು, ಪ್ರಾಸಂಗಿಕ ಹೊಣೆಗಾರಿಕೆಗಳು ಮತ್ತು ಪ್ರಾಸಂಗಿಕ ಸ್ವತ್ತಿನ ಘೋಷಣೆಯು'' ಅಗತ್ಯತೆ ಅನ್ವಯ ಇರುವುದಿಲ್ಲ. | ತಿಳಿದಿರುವ ಎಲ್ಲ ಬಾಬ್ತುಗಳಿಗೆ ಪ್ರಾಸಂಗಿಕ ಹೊಣೆಗಾರಿಕೆಯನ್ನು ಒದಗಿಸಲಾಗಿದೆ ಮತ್ತು ಪ್ರಾಸಂಗಿಕ ಖರ್ಚುಗಳನ್ನು ಮಾನ್ಯ ಮಾಡಿದೆ. ಆದಾಗ್ಯೂ ಕಂಪನಿಯು ಯಾವುದೇ ಪ್ರಾಸಂಗಿಕ ಸ್ವತ್ತನ್ನು ಮಾನ್ಯ ಮಾಡಿರುವುದಿಲ್ಲ ಮತ್ತು ತಿಳಿಸಿರುವುದಿಲ್ಲ. |
| ಡಿ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 101 ''ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟಗಳ ಪ್ರಥಮ ಬಾರಿಗೆ ಅಳವಡಿಕೆಯು'' ಕೆಳಕಂಡವುಗಳೂ ಸೇರಿದಂತೆ ಅನುಸರಣೆಯ ಕ್ರಮಗಳಲ್ಲಿರುವುದಿಲ್ಲ. | ಕೊರತೆಗಳು ಮತ್ತು ಯಾವುದೇ ಪರಿಣಾಮಗಳನ್ನು ಲೆಕ್ಕಪರಿಶೋಧನೆಯಲ್ಲಿ ವಿವರಿಸಿರುವುದಿಲ್ಲ. |

| ಲೆಕ್ಕಪರಿಶೋಧಕರ ವರದಿಯ ಉಲ್ಲೇಖ | ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಆರೋಪ | ಉತ್ತರಗಳು |
|---|---|---|
| ಡಿ (I) | ಹಿಂದಿನ ಜಿಎಎಪಿ ಮತ್ತು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಕ್ಕೆ ಬದಲಾದ ದಿನಾಂಕದಂದು ಇದ್ದ ಅಧಿಸೂಚಿತ ಭಾರತೀಯ ಲೆಕ್ಕ ನಿರ್ವಹಣೆ ಮತ್ತು ಹಿಂದಿನ ಜಿಎಎಪಿ ಅನುಸಾರ ಕಳೆದ ಅವಧಿ ನಿರೂಪಣೆ ಅನ್ವಯ ಈಕ್ವಿಟಿ ಸಮನ್ವಯತೆ ಸಿದ್ದಪಡಿಸಿರುವಿಕೆ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಗತ್ಯತೆ ಅನುಸಾರ ಈಕ್ವಿಟಿ ಸಮನ್ವಯತೆ ವಿವರವನ್ನು ಸಿದ್ಧಪಡಿಸಲಾಗಿದೆ ಮತ್ತು ಅದನ್ನು ಹಣಕಾಸಿನ ವಿವರಣೆಯಲ್ಲಿ ನಿರೂಪಿಸಿದೆ. |
| ಇ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 107 ''ಹಣಕಾಸಿನ ದಸ್ತಾವೇಜುಗಳ ಮಾಹಿತಿ ನೀಡಿಕೆ'' – ಹಣಕಾಸಿನ ದಸ್ತಾವೇಜುಗಳ ವರ್ಗೀಕರಣದ ಮಾಹಿತಿಯು ಅಗತ್ಯತೆ ಅನುಸಾರ ಇರುವುದಿಲ್ಲ. | ಅಗತ್ಯತೆ ಅನುಸಾರ, ನಿಶ್ಚಿತ ಠೇವಣಿಗೆ ಬ್ಯಾಂಕಿನ ಬಡ್ಡಿ ದರ ನೀಡುವಂತೆ ಜಾರಿಯಲ್ಲಿರುವ ಬಡ್ಡಿದರದ ವಿಧಾನ ಅನುಸರಿಸಿ ಹಣಕಾಸಿನ ಸ್ವತ್ತುಗಳಿಂದ ಬಂದ ಬಡ್ಡಿ ಆದಾಯವನ್ನು ಮಾನ್ಯ ಮಾಡಿದೆ. ಇದನ್ನು ರಿಯಾಯಿತಿ ವಿಧಾನದಲ್ಲಿ ಮಾಡಿರುವುದಿಲ್ಲ ಎಂಬುದಾಗಿ ಕಂಪನಿ ಸ್ಪಷ್ಟವಾಗಿ ತಿಳಿಸಿದೆ. ಕೊರತೆಗಳು ಮತ್ತು ಯಾವುದೇ ಪರಿಣಾಮಗಳು ಉಂಟಾಗಿರುವ ಬಗ್ಗೆ ಲೆಕ್ಕ ಪರಿಶೋಧನೆಯಲ್ಲಿ ತಿಳಿಸಿರುವುದಿಲ್ಲ. |
| ಎಫ್ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 108 ''ವಿಭಾಗದ ವರದಿಗಾರಿಕೆ'' ವರದಿ ಮಾಡಬಹುದಾದ ಪ್ರತಿ ವಿಭಾಗದ ಲಾಭ ಮತ್ತು ನಷ್ಟ/ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಬಗ್ಗೆ ಪ್ರಕಟಣೆ, ಭೌಗೋಳಿಕ ಮಾಹಿತಿಯು ಅಗತ್ಯತೆ ಅನುಸಾರ ಇರುವುದಿಲ್ಲ. | ಕೊರತೆಗಳು ಮತ್ತು ಯಾವುದೇ ಪರಿಣಾಮ ಉಂಟಾಗಿರುವ ಬಗ್ಗೆ ಲೆಕ್ಕ ಪರಿಶೋಧನೆಯಲ್ಲಿ ವಿವರಿಸಿರುವುದಿಲ್ಲ. |
| ಜಿ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 109 ''ಹಣಕಾಸಿನ ದಸ್ತಾವೇಜುಗಳು''– ಹಣಕಾಸಿನ ದಸ್ತಾವೇಜುಗಳ ಅಂಗೀಕಾರ, ಮಾಪನ ಮತ್ತು ದೌರ್ಬಲ್ಯವು ಅಗತ್ಯತೆಯನುಸಾರ ಇರುವುದಿಲ್ಲ. | ನಿವ್ವಳ ಮೊತ್ತವನ್ನು ನಗದಾಗಿ ಪಾವತಿ ಮಾಡುವ ಅಥವಾ ಬೇರೆ ಹಣಕಾಸಿನ ಸಾಧನದ ವರ್ಗಾವಣೆ ಅಥವಾ ನೀಡಿಕೆ ಮೂಲತಃ ಇತ್ಯರ್ಥಪಡಿಸುವ ಹಣಕಾಸೇತರ–ಸಾಧನದ ಖರೀದಿ ಅಥವಾ ಮಾರಾಟಕ್ಕೆ ಕಂಪನಿಯು ಸಾಲದ ಬದ್ಧತೆ/ಗುತ್ತಿಗೆಯನ್ನು ಹೊಂದಿರುವುದಿಲ್ಲ. ಯಾವುದೇ ಕೊರತೆ ಮತ್ತು ಪರಿಣಾಮದ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ವಿವರಿಸಿರುವುದಿಲ್ಲ. |
| ಎಚ್ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 7 ''ನಗದು ಹರಿವಿನ ವಿವರಗಳ'' ಪ್ರಕಟಣೆಯು ಅಗತ್ಯತೆ ಅನುಸಾರ ಇರುವುದಿಲ್ಲ. | ಯಾವುದೇ ಕೊರತೆಗಳು ಮತ್ತು ಪರಿಣಾಮದ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ವಿವರಿಸಿರುವುದಿಲ್ಲ. ಆದರೂ ಮುಂದಿನ ವರ್ಷಗಳಲ್ಲಿ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸದರಿ ಅನುಸರಣೆಯನ್ನು ಪರಿಶೀಲನೆ ಮಾಡಲಾಗುವುದು. |

| ಲೆಕ್ಕಪರಿಶೋಧಕರ ವರದಿಯ ಉಲ್ಲೇಖ | ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಆರೋಪ | ಉತ್ತರಗಳು |
|---|---|---|
| ಐ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 1 ''ಹಣಕಾಸಿನ ವಿವರಣೆಗಳ ನಿರೂಪಣೆಗಳು'' ಕೆಳಕಂಡ ಅಂಶಗಳೂ ಸೇರಿದಂತೆ ಅನುಪಾಲನೆ ರೀತಿಯಲ್ಲಿರುವುದಿಲ್ಲ: | |
| ಐ1 | ಸ್ವರೂಪ ಮತ್ತು ಕಾರ್ಯಾಚರಣೆ ಆಧಾರದ ಮೇಲೆ ಖರ್ಚುಗಳ ವರ್ಗೀಕರಣ | ಮುಂದಿನ ವರ್ಷಗಳಲ್ಲಿ, ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸದರಿ ಪದ್ಧತಿಯನ್ನು ಪುನರ್ ಪರಿಶೀಲಿಸಲಾಗುವುದು. |
| ಐ2 | ಬಾಬ್ತುಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರ ಬಾಬ್ತುಗಳೆಂದು ವರ್ಗೀಕರಿಸುವಿಕೆ | ಮುಂದಿನ ವರ್ಷಗಳಲ್ಲಿ, ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸದರಿ ಪದ್ಧತಿಯನ್ನು ಪುನರ್ ಪರಿಶೀಲಿಸಲಾಗುವುದು. |
| ಐ3 | ಪುನರ್ ವರ್ಗೀಕರಿಸಿದ ಬಾಬ್ತುಗಳ ಪ್ರಕಟಣೆ | ಮುಂದಿನ ವರ್ಷಗಳಲ್ಲಿ, ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸದರಿ ಪದ್ಧತಿಯನ್ನು ಪುನರ್ ಪರಿಶೀಲಿಸಲಾಗುವುದು. |
| ಐ4 | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ ಅನುಪಾಲನೆ ಬಗ್ಗೆ ಸಮಾಪ್ತಿ ಮತ್ತು ಮೀಸಲು ರಹಿತ ವಿವರಣೆ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅನುಷ್ಠಾನದ ಮೊದಲನೆಯ ವರ್ಷ ಇದಾಗಿರುವುದರಿಂದ, ಕಂಪನಿಯು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಉಪಬಂಧಗಳನ್ನು ಪೂರ್ಣವಾಗಿ ಪರಿಪಾಲನೆ ಮಾಡಿದಾಗ, ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ ಅನುಪಾಲನೆ ಬಗ್ಗೆ ಮುಂಬರುವ ವರ್ಷಗಳಲ್ಲಿ ಸಮಾಪ್ತಿ ಮತ್ತು ಮೀಸಲು ರಹಿತ ವಿವರಗಳನ್ನು ಸಿದ್ಧಪಡಿಸಲಾಗುವುದು. |
| ಜೆ | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 111 ''ಜಂಟಿ ವ್ಯವಸ್ಥೆಗಳು'' ಪ್ರಕಟಣೆಯು ಅಗತ್ಯತೆ ಅನುಸಾರ ಇರುವುದಿಲ್ಲ. | ಯಾವುದೇ ಕೊರತೆಗಳು ಮತ್ತು ಪರಿಣಾಮ ಉಂಟಾಗಿರುವ ಬಗ್ಗೆ ಲೆಕ್ಕ ಪರಿಶೋಧನೆಯಲ್ಲಿ ವಿವರಿಸಿರುವುದಿಲ್ಲ. ಆದರೂ ಮುಂದಿನ ವರ್ಷಗಳಲ್ಲಿ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಈ ಪದ್ಧತಿಯನ್ನು ಪುನರ್ ಪರಿಶೀಲಿಸಲಾಗುವುದು. |

FMSIL

| ಲೆಕ್ಕಪರಿಶೋಧಕರ ವರದಿಯ ಉಲ್ಲೇಖ | ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಆರೋಪ | ಉತ್ತರಗಳು |
|---|---|---|
| ಕೆ | ಗ್ರ್ಯಾಚ್ಯುಟಿಯ ವಿಮಾಗಣನ ಮೌಲ್ಯ ಮಾಪನವು 31ನೇ ಮಾರ್ಚ್ 2018ರ ಅಂತ್ಯದಲ್ಲಿದ್ದಂತೆ ಇತರೆ ಸಮಗ್ರ ಆದಾಯದಲ್ಲಿನ ರೂ.1.77 ಕೋಟಿಗಳ ವಿಮಾಗಣನ ನಷ್ಟದ ಮಾನ್ಯ ಮಾಡಿರದ ಪ್ರಮಾಣದವರೆಗೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ19ಕ್ಕೆ ಅನುಗುಣವಾಗಿರುವುದಿಲ್ಲ. ಇದರಿಂದಾಗಿ ನೌಕರರ ಸೌಲಭ್ಯದ ಖರ್ಚುಗಳನ್ನು ರೂ.1.77 ಕೋಟಿಗಳಷ್ಟು ಅಧಿಕವಾಗಿ ತಿಳಿಸಿರುವುದಕ್ಕೆ ಮತ್ತು ಇತರೆ ಸಮಗ್ರ ಆದಾಯವನ್ನು ಇದೇ ಮೊತ್ತದಷ್ಟು ಕಡಿಮೆಯಾಗಿ ತಿಳಿಸುವುದಕ್ಕೆ ಕಾರಣವಾಗಿದೆ. ಮುಂದುವರಿದು ಪರಿಷ್ಕೃತ ಗ್ರ್ಯಾಚ್ಯುಟಿ ಮಿತಿಯಲ್ಲಿ ಹೆಚ್ಚಳವಾಗಿರುವುದರಿಂದ ರೂ.4.08 ಕೋಟಿ ಪಾವತಿಸುವಂತೆ ಎಲ್‌ಐಸಿ ಯಿಂದ ಒತ್ತಾಯ ಬಂದಿದೆ. ಈ ಕಾರಣದಿಂದ ಗ್ರ್ಯಾಚ್ಯುಟಿಗೆ ಮಾಡಬೇಕಾದ ವ್ಯವಸ್ಥೆಯನ್ನು ಕಡಿಮೆಯಾಗಿ ತಿಳಿಸಿದೆ ಮತ್ತು ಸದರಿ ವರ್ಷದ ಲಾಭವನ್ನು ರೂ.4.08 ಕೋಟಿಗಳಷ್ಟು ಅಧಿಕವಾಗಿ ತಿಳಿಸಲಾಗಿದೆ. | ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅನುಷ್ಠಾನವು ಇದು ಮೊದಲನೆಯ ವರ್ಷವಾಗಿರುವುದರಿಂದ ಅಧಿಕೃತ ವೃತ್ತಿಪರರುಗಳಿಗೆ ಕೊಡಬೇಕಾದ ಗ್ರ್ಯಾಚ್ಯುಟಿ ಹೊಣೆಗಾರಿಕೆಯ ಬಗ್ಗೆ ವಿಮಾಗಣನ ಮೌಲ್ಯಮಾಪನ ಪಡೆದು ಹಾಗೂ ಎಲ್‌ಐಸಿ ಯಿಂದಲೂ ಅದರ ವಿವರ ಪಡೆದು ಕಂಪನಿಯು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಗತ್ಯತೆಯನ್ನು ಪಾಲನೆ ಮಾಡುವುದು. ಅದರಂತೆ ಮುಂದಿನ ವರ್ಷಗಳಲ್ಲಿ ಲೆಕ್ಕದ ಪುಸ್ತಕಗಳಲ್ಲಿ ವ್ಯವಸ್ಥೆ ಮಾಡಲಾಗುವುದು. |
| ಎಲ್ | ಕೆಲವು ವ್ಯಾಪಾರಕ್ಕೆ ಸಂಬಂಧಿಸಿದಂತೆ ಪಾವತಿ ಮಾಡಬೇಕಾಗಿರುವ ಬಗ್ಗೆ, ಇತರೆ ಚಾಲ್ತಿ ಹೊಣೆಗಾರಿಕೆಗಳ ಸಂಬಂಧ, ಎಲ್ಲಾ ವಿಭಾಗಗಳಿಗೆ ಸಂಬಂಧಿಸಿದಂತೆ ವ್ಯಾಪಾರದಿಂದ ಬರಬೇಕಾಗಿರುವ ಹಣ ಮತ್ತು ಮುಂಗಡಗಳು/ವ್ಯಾಪಾರಕ್ಕೆ ಸಂಬಂಧಿಸಿದ ಠೇವಣಿಗಳ ಶಿಲ್ಕುಗಳ ಬಗ್ಗೆ ಸ್ಥಿರೀಕರಣ ಮಾಡದಿರುವುದರಿಂದ ಇದಕ್ಕೆ ಸಂಬಂಧಿಸಿದ ಯಾವುದೇ ಸಮನ್ವಯತೆ ಮೇಲೆ, ಲಾಭ/ನಷ್ಟ ಮತ್ತು ಆಸ್ತಿಗಳು/ಹೊಣೆಗಾರಿಕೆಗಳ ಮೇಲೆ ಉಂಟಾಗುವ ಪರಿಣಾಮವೇನು ಎಂಬುದನ್ನು ತಿಳಿಯಲಾಗುವುದಿಲ್ಲ. | ಜಂಟಿ ಉದ್ಯಮಗಳು ಮತ್ತು ಮುಂಗಡಗಳು/ಠೇವಣಿಗಳು ಸೇರಿದಂತೆ ಸಾದಿಲ್ವಾರು ಲೇಣಿದಾರರು, ಸಾದಿಲ್ವಾರು ದೇಣಿದಾರರು, ಮತ್ತು ವ್ಯಾಪಾರಿ ಸಹವರ್ತಿಗಳ ಲೆಕ್ಕಗಳ ಸಂಬಂಧದಲ್ಲಿ ಕಂಪನಿಯು 31ನೇ ಮಾರ್ಚ್ 2018ರಂದು ಇದ್ದಂತೆ ಶಿಲ್ಕಿನ ಸ್ಥಿರೀಕರಣೆಯನ್ನು ಕಳುಹಿಸಿದ್ದು, ಈ ಸಂಬಂಧ ಭಾಗಶಃವಾಗಿ ನಮಗೆ ಸ್ಥಿರೀಕರಣ ಬಂದಿದೆ. |
| ಎಂ | ಯೋಜನೆಯ (ಕರ್ನಾಟಕ ಭವನ, ನವಿ ಮುಂಬಯಿ) ಒಪ್ಪಂದದ ಅನ್ವಯ ಕಾರ್ಯಗತಗೊಳಿಸುವುದರಲ್ಲಿ ಉಂಟಾಗಿರುವ ವಿಳಂಬಕ್ಕೆ ದಂಡ ವಿಧಿಸಿರುವುದಿಲ್ಲ. ತತ್ಪರಿಣಾಮವಾಗಿ ಇತರೆ ಆದಾಯ, ಲಾಭ, ತೆರಿಗೆಗೆ ವ್ಯವಸ್ಥೆ ಮತ್ತು ಚಾಲ್ತಿಯೇತರ ಆಸ್ತಿ–ಸಿಡಬ್ಲ್ಯೂಐಪಿ ಅನ್ನು ಅಧಿಕವಾಗಿ ತಿಳಿಸಿದೆ ಮತ್ತು ಇನ್ನಿತರೆ ಚಾಲ್ತಿ ಆಸ್ತಿಗಳನ್ನು ಕಡಿಮೆಯಾಗಿ ತಿಳಿಸಲಾಗಿದೆ. ಆದ್ದರಿಂದಾಗಿ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ವಿವರಗಳ ಮೇಲೆ ಉಂಟಾಗಿರುವ ಪರಿಣಾಮವನ್ನು ನಿರ್ಧರಣೆ ಮಾಡಲು ನಮಗೆ ಸಾಧ್ಯವಾಗಿಲ್ಲ. | ಕರ್ನಾಟಕ ಭವನ ಯೋಜನೆ, ನವಿ ಮುಂಬಯಿ ಇದರ ಕಾರ್ಯಾಚರಣೆಯಲ್ಲಿ ಉಂಟಾಗಿರುವ ವಿಳಂಬಕ್ಕೆ ದಂಡ ವಿಧಿಸುವ ಬಗ್ಗೆ ಪರಿಶೀಲಿಸಲಾಗುವುದು ಮತ್ತು 2018–19ರ ಸಾಲಿನಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು. |
| ಎನ್ | ರಜೆ ನಗದೀಕರಣದ ವ್ಯವಸ್ಥೆಯನ್ನು ವಿಮಾಗಣನ ಮೌಲ್ಯಮಾಪನ ವರದಿಯ ಅನುಸಾರ ಚಾಲ್ತಿ ಮತ್ತು ಚಾಲ್ತಿಯೇತರ ವ್ಯವಸ್ಥೆಗಳ ಅಡಿಯಲ್ಲಿ ಸರಿಯಾಗಿ ವರ್ಗೀಕರಿಸಿರುವುದಿಲ್ಲ. ಆದ್ದರಿಂದಾಗಿ ಚಾಲ್ತಿ/ಚಾಲ್ತಿಯೇತರ ವ್ಯವಸ್ಥೆಗಳನ್ನು ಕಡಿಮೆಯಾಗಿ/ಅಧಿಕವಾಗಿ ತಿಳಿಸಲು ಕಾರಣವಾಗಿದೆ. | ಮುಂಬರುವ ವರ್ಷಗಳಲ್ಲಿ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸದರಿ ಪದ್ಧತಿಯನ್ನು ಪರಿಶೀಲಿಸಲಾಗುವುದು. |

| ಲೆಕ್ಕಪರಿಶೋಧಕರ ವರದಿಯ ಉಲ್ಲೇಖ | ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಆರೋಪ | ಉತ್ತರಗಳು |
|---|---|---|
| ಒ | ಮರಣ ಪರಿಹಾರ ನಿಧಿಗೆ ಮಾಡುವ ವ್ಯವಸ್ಥೆಯನ್ನು ವಿಮಾಗಣನ ಮೌಲ್ಯಮಾಪನ ವರದಿ ಅನ್ವಯ ಚಾಲ್ತಿ ಮತ್ತು ಚಾಲ್ತಿಯೇತರ ವ್ಯವಸ್ಥೆಗಳ ಅಡಿಯಲ್ಲಿ ಸರಿಯಾಗಿ ವರ್ಗೀಕರಿಸಿರುವುದಿಲ್ಲ. ಇದರ ಪರಿಣಾಮವಾಗಿ ಚಾಲ್ತಿ/ಚಾಲ್ತಿಯೇತರ ವ್ಯವಸ್ಥೆಯನ್ನು ಕಡಿಮೆಯಾಗಿ/ಅಧಿಕವಾಗಿ ತಿಳಿಸಲಾಗಿದೆ. ಮುಂದುವರೆದು ರೂ.40.13 ಲಕ್ಷದ ಮೊತ್ತವನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ಇತರೆ ಸಮಗ್ರ ಆದಾಯದ ಅಡಿಯಲ್ಲಿ ತಿಳಿಸಿರುವುದಿಲ್ಲ. ಇದರಿಂದಾಗಿ ಇತರೆ ಸಮಗ್ರ ಆದಾಯ ಮತ್ತು ಒಟ್ಟು ಸಮಗ್ರ ಆದಾಯವನ್ನು ರೂ.40.13 ಲಕ್ಷಗಳಷ್ಟು ಕಡಿಮೆಯಾಗಿ ತಿಳಿಸಲು ಕಾರಣವಾಗಿದೆ | ಮುಂಬರುವ ವರ್ಷಗಳಲ್ಲಿ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಈ ಪದ್ಧತಿಯನ್ನು ಪರಿಶೀಲಿಸಲಾಗುವುದು. |
| ಪಿ | ಸ್ಥಿತಿ ವಿವರಣಾ ಪಟ್ಟಿಯಲ್ಲಿ ತಪಶೀಲು ಸರಕು ಮತ್ತು ವ್ಯಾಪಾರ ಸಂಬಂಧ ಪಾವತಿ ಮಾಡಬೇಕಿರುವ ಒಟ್ಟು ಮೊತ್ತವನ್ನು ರೂ.8.44 ಕೋಟಿಗಳ ಪ್ರಮಾಣದವರೆಗೆ ಅಧಿಕವಾಗಿ ತಿಳಿಸಲಾಗಿದೆ. ಟಿಪ್ಪಣಿ ಸಂ.9ರ ಅಡಿ ಟಿಪ್ಪಣಿಯಲ್ಲಿನ ಪ್ರಕಟಣೆ ಈ ಪ್ರಮಾಣದವರೆಗೆ ಸರಿಯಾಗಿರುವುದಿಲ್ಲ. | ಲೆಕ್ಕದ ಖಾತೆಯಲ್ಲಿ ತಿಳಿಸಿರುವಂತೆ ದಾಸ್ತಾನು ಮೌಲ್ಯಗಳನ್ನು ಗಣಕೀಕರಿಸುವಾಗ ಮರಳಿನ ದಾಸ್ತಾನು ಮತ್ತು ವ್ಯಾಪಾರ ಸಂಬಂಧ ಪಾವತಿ ಮಾಡಬೇಕಿರುವ ಮೊತ್ತದ ತಪ್ಪು ಅಂಕಿಗಳನ್ನು ಹಾಕಲಾಗಿದೆ. ಹಣಕಾಸಿನ ವರ್ಷ 2018-19ರ ಅವಧಿಯಲ್ಲಿ ಇದನ್ನು ಸಮನ್ವಯ ಗೊಳಿಸಲಾಗುವುದು ಮತ್ತು ಪರಿಶೀಲಿಸಲಾಗುವುದು ಹಾಗೂ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂಬ ಭರವಸೆಯನ್ನು ಕಂಪನಿ ನೀಡುವುದು. ಇದರಿಂದ ಲಾಭದ ವಿಚಾರದ ಮೇಲೆ ಯಾವುದೇ ಪರಿಣಾಮ ಉಂಟಾಗದು. |
| ಕ್ಯು | ಲಾಭ ಮತ್ತು ನಷ್ಟದ ವಿವರದ ಮುಖ ಪುಟದಲ್ಲಿ ವರ್ಷದ ಒಟ್ಟು ಸಮಗ್ರ ಆದಾಯದ ಬಗ್ಗೆ ಕಂಪನಿಯು ರೂ.14,16,49,817/-ರ ಬದಲಾಗಿ ರೂ.14,37,37,591/- ಅನ್ನು ನಮೂದಿಸಿದೆ. ರೂ.20,87,774/-ರ ವ್ಯತ್ಯಾಸವು ಕಾರ್ಯಾಚರಣೆ ಸ್ಥಗಿತದ ಕಾರಣದಿಂದ ಉಂಟಾದ ನಷ್ಟವಾಗಿರುವುದನ್ನು ತಪ್ಪಾಗಿ ಮುಂದುವರಿಯುತ್ತಿರುವ ಕಾರ್ಯಾಚರಣೆಯಿಂದ ಬಂದ ಸದರಿ ವರ್ಷದ ಲಾಭಕ್ಕೆ ತಪ್ಪಾಗಿ ಸೇರಿಸಲಾಗಿದೆ. | ಮುದ್ರಣ ದೋಷದಿಂದ ಈ ವ್ಯತ್ಯಾಸ ಉಂಟಾಗಿದೆ. ಇದನ್ನು ವಾರ್ಷಿಕ ವರದಿ ಮುದ್ರಣ ಮಾಡಿಸುವ ಸಮಯದಲ್ಲಿ ಸರಿಪಡಿಸಲಾಗುವುದು. |
| ಆರ್ | ಮೇಲೆ ತಿಳಿಸಿರುವ ಆಕ್ಷೇಪಣೆಗಳ ಪ್ರಯುಕ್ತ (ಪ್ಯಾರ ಸಂ.ಕೆ ಮತ್ತು ಒ) ಉಂಟಾಗಿರುವ ಒಟ್ಟಾರೆ ಪರಿಣಾಮವೇನೆಂದರೆ (i) ಸದರಿ ವರ್ಷದ ಒಟ್ಟು ಸಮಗ್ರ ಆದಾಯವನ್ನು ರೂ.3.68 ಕೋಟಿಗಳಷ್ಟು ಅಧಿಕವಾಗಿ ತಿಳಿಸಿದೆ ಮತ್ತು (ii)ತಪಶೀಲು ಸರಕು ಮತ್ತು ವ್ಯಾಪಾರದ ಸಂಬಂಧ ಪಾವತಿಯನ್ನು ರೂ.8.44 ಕೋಟಿಗಳಷ್ಟು ಅಧಿಕವಾಗಿ ತಿಳಿಸಲಾಗಿದೆ. | ಕೆ ಮತ್ತು ಒ ಪ್ಯಾರಾಗಳಲ್ಲಿ ಮೇಲಿನಂತೆ ಉತ್ತರಗಳನ್ನು ನೀಡಲಾಗಿದೆ. |

## ಅನುಬಂಧ-1

### ಫಾರಂ ನಂ. ಎಂಜಿಟಿ 9

### ವಾರ್ಷಿಕ ರಿಟರ್ನ್‌ನ ಸಾರಾಂಶ

**31.03.2018ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದಲ್ಲಿದ್ದಂತೆ**
**ಕಂಪನಿಗಳ ಕಾಯ್ದೆ, 2013ರ ಪ್ರಕರಣ 92(3) ಮತ್ತು ಕಂಪನಿ**
**(ಆಡಳಿತ ವರ್ಗ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ರ ಅನ್ವಯ**

### I. ನೋಂದಣಿ ಮತ್ತು ಇತರೆ ವಿವರಗಳು :

| | | |
|---|---|---|
| 1. | ಸಿಐಎನ್ | U85110KA1966SGC001612 |
| 2. | ನೋಂದಣಿ ದಿನಾಂಕ | 17.3.1966 |
| 3. | ಕಂಪನಿಯ ಹೆಸರು | ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ |
| 4. | ಕಂಪನಿಯ ಪ್ರವರ್ಗ/ಉಪ ಪ್ರವರ್ಗ | ಷೇರುಗಳಿಂದ ಕಂಪನಿ ನಿಯಮಿತವಾಗಿದೆ/ರಾಜ್ಯ ಸರ್ಕಾರದ ಕಂಪನಿ |
| 5. | ನೋಂದಾಯಿತ ಕಚೇರಿ ವಿಳಾಸ ಮತ್ತು ಸಂಪರ್ಕ ವಿವರಗಳು | "ಎಂಎಸ್‌ಐಎಲ್ ಹೌಸ್", ನಂ.36, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560 052. ದೂ. ಸಂಖ್ಯೆ : 080–22264021–26 |
| 6. | ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಕಂಪನಿಯೇ? | ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿಲ್ಲ |
| 7. | ಇದ್ದಲ್ಲಿ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು | ಅನ್ವಯಿಸುವುದಿಲ್ಲ |

**II. ಕಂಪನಿಯ ಪ್ರಮುಖ ವ್ಯವಹಾರದ ಚಟುವಟಿಕೆಗಳು** (ಕಂಪನಿಯ ಒಟ್ಟು ವಹಿವಾಟಿನ ಶೇ.10 ಅಥವಾ ಅದಕ್ಕೂ ಅಧಿಕ ಕೊಡುಗೆ ನೀಡುತ್ತಿರುವ ಎಲ್ಲಾ ವ್ಯವಹಾರಗಳನ್ನು ತಿಳಿಸತಕ್ಕದ್ದು)

| ಕ್ರ. ಸಂ. | ಪ್ರಮುಖ ಉತ್ಪನ್ನಗಳು / ಸೇವೆಗಳ ಹೆಸರು ಮತ್ತು ವಿವರಣೆ | ಉತ್ಪನ್ನ / ಸೇವೆಯ ಎನ್‌ಐಸಿ ಕೋಡ್ | ಕಂಪನಿಯ ಒಟ್ಟು ವಹಿವಾಟಿನ % |
|---|---|---|---|
| 1 | ಪಾನೀಯಗಳು | 47221 | 78.78 |
| 2 | ಚಿಟ್ ಫಂಡ್‌ಗಳು | 64990 | 12.86 |

### III. ಧಾರಕ, ಸಹಾಯಕ ಮತ್ತು ಸಹವರ್ತಿ ಕಂಪನಿಗಳ ವಿವರ :

| ಕ್ರ. ಸಂ. | ಹೆಸರು | ಕಂಪನಿ ವಿಳಾಸ | ಸಿಐಎನ್/ ಜಿಎಲ್‌ಎನ್ | ಧಾರಕ/ ಸಹಾಯಕ/ ಸಹವರ್ತಿ ಸಂಸ್ಥೆ | ಹೊಂದಿರುವ ಶೇಕಡವಾರು ಷೇರು | ಅನ್ವಯಿತ ಸೆಕ್ಷನ್ |
|---|---|---|---|---|---|---|
| 1. | ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | ನಂ.42, ಎಂಸಿಎ ಹೌಸ್, ಮಿಲ್ಲರ್‍ಸ್ ರಸ್ತೆ, ಬೆಂಗಳೂರು – 52 | U51101KA1972PLC002242 | ಸಹಾಯಕ | 100% | ಪ್ರಕರಣ 2(87) |
| 2. | ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | ಕೇರಾಫ್‌ಎಂಎಸ್‌ಐಎಲ್, ನಂ.36, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 52 | U85110KA1940SGC000261 | ಸಹಾಯಕ | 95.10% | ಪ್ರಕರಣ 2(87) |
| 3. | ಫುಡ್ ಕರ್ನಾಟಕ ಲಿಮಿಟೆಡ್ | ನಂ.17, ರಿಚ್‌ಮಂಡ್ ರಸ್ತೆ, ಬೆಂಗಳೂರು – 25 | U01513KA2003PLC031873 | ಸಹವರ್ತಿ ಸಂಸ್ಥೆ | 50% | ಪ್ರಕರಣ 2(6) |

## IV. ಷೇರು ಹೊಂದಿರುವಿಕೆ ಸ್ವರೂಪ (ಒಟ್ಟು ಈಕ್ವಿಟಿ ಶೇಕಡವಾರು ಆಗಿ ಈಕ್ವಿಟಿ ಷೇರು ಬಂಡವಾಳದ ವಿಭಜನೆ)

**ಪ್ರವರ್ಗವಾರು ಷೇರು ಹೊಂದಿರುವಿಕೆ**

| ಷೇರುದಾರರ ಪ್ರವರ್ಗ | ವರ್ಷಾರಂಭದಲ್ಲಿ (31ನೇ ಏಪ್ರಿಲ್ 2017ರಂದು) ಮತ್ತು ವರ್ಷಾಂತ್ಯದಲ್ಲಿ (31.03.2017) ಹೊಂದಿದ್ದ ಷೇರುಗಳ ಸಂಖ್ಯೆ | | | | ವರ್ಷಾಂತ್ಯದಲ್ಲಿ (31ನೇ ಮಾರ್ಚ್ 2018ರಂದು) ಹೊಂದಿದ್ದ ಷೇರುಗಳ ಸಂಖ್ಯೆ | | | | ವರ್ಷದಲ್ಲಿ ಬದಲಾವಣೆ ಶೇ. |
|---|---|---|---|---|---|---|---|---|---|
| | ಡಿಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರುಗಳ ಶೇ. | ಡಿಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರುಗಳ ಶೇ. | |
| **ಎ. ಪ್ರವರ್ತಕರು** | | | | | | | | | |
| (1) **ಭಾರತೀಯ** | | | | | | | | | |
| ಎ) ವೈಯಕ್ತಿಕ/ಹೆಚ್‌ಯುಎಫ್ | | | | | | | | | |
| ಬಿ) ಕೇಂದ್ರ ಸರ್ಕಾರ | | | | | | | | | |
| ಸಿ) ರಾಜ್ಯ ಸರ್ಕಾರ(ಗಳು) | | | | | | 2255817 | 2255817 | 53% | |
| ಡಿ) ಬಾಡೀಸ್ ಕಾರ್ಪೊರೇಟ್ | | 2017660 | 2017660 | 100% | N.A. | 2017660 | 2017660 | 47% | 53% ಕಡಿಮೆಯಾಗಿದೆ |
| ಇ) ಬ್ಯಾಂಕ್‌ಗಳು/ಎಫ್‌ಐ | | | | | | | | | |
| ಎಫ್) ಇತರೆ ಯಾವುದೇ | | | | | | | | | |
| **ಪ್ರವರ್ತಕರ (ಎ) ಒಟ್ಟು ಷೇರುದಾರಿಕೆ** | | | | | | | | | |
| **ಬಿ. ಸಾರ್ವಜನಿಕ ಷೇರುದಾರಿಕೆ** | | | | | | | | | |
| 1. ಸಂಸ್ಥೆಗಳು | | | | | | | | | |
| ಎ) ಮ್ಯೂಚುವಲ್ ಫಂಡ್ಸ್ | | | | | | | | | |
| ಬಿ) ಬ್ಯಾಂಕ್‌ಗಳು/ಎಫ್‌ಐ | | | | | | | | | |
| ಸಿ) ಕೇಂದ್ರ ಸರ್ಕಾರ | | | | | | | | | |
| ಡಿ) ರಾಜ್ಯ ಸರ್ಕಾರ(ಗಳು) | | | | | | | | | |
| ಇ) ವೆಂಚರ್ ಕ್ಯಾಪಿಟಲ್ ಫಂಡ್ಸ್ | | | | | | | | | |
| ಎಫ್) ವಿಮಾ ಕಂಪನಿಗಳು | | | | | | | | | |
| ಜಿ) ಎಫ್‌ಐಐಎಸ್ | | | | | | | | | |
| ಹೆಚ್) ವಿದೇಶಿ ವೆಂಚರ್ ಕ್ಯಾಪಿಟಲ್ ಫಂಡ್ಸ್ | | | | | | | | | |
| i) ಇತರೆ (ವಿವರಿಸಿ) | | | | | | | | | |
| **ಉಪ ಒಟ್ಟು (ಬಿ)(1):** | | | | | | | | | |

| | | | | | | | | | |
|---|---|---|---|---|---|---|---|---|---|
| **2. ಸಂಸ್ಥೆಯೇತರ** | | | | | | | | | |
| ಎ) ಬಾಡೀಸ್ ಕಾರ್ಪೋರೇಟ್ | | | | | | | | | |
| i) ಭಾರತೀಯ | | | | | | | | | |
| ii) ಸಾಗರೋತ್ತರ | | | | | | | | | |
| ಬಿ) ವೈಯಕ್ತಿಕ | | | | | | | | | |
| i) ರೂ.1 ಲಕ್ಷದವರೆಗಿನ ಸಾಧಾರಣ ಷೇರು ಬಂಡವಾಳ ಹೊಂದಿರುವ ವ್ಯಕ್ತಿ ಷೇರುದಾರರು | | | | | | | | | |
| ii) ರೂ.1 ಲಕ್ಷಕ್ಕೂ ಹೆಚ್ಚಿನ ಸಾಧಾರಣ ಷೇರು ಬಂಡವಾಳ ಹೊಂದಿರುವ ವ್ಯಕ್ತಿ ಷೇರುದಾರರು | | | | | | | | | |
| ಸಿ) ಇತರೆ (ವಿವರಿಸಿ) | | | | | | | | | |
| ಅನಿವಾಸಿ ಭಾರತೀಯರು | | | | | | | | | |
| ಸಾಗರೋತ್ತರ ಕಾರ್ಪೋರೇಟ್ ಸಂಸ್ಥೆಗಳು | | | | | | | | | |
| ವಿದೇಶಿ ಪ್ರಜೆಗಳು | | | | | | | | | |
| ಕ್ಲಿಯರಿಂಗ್ ಮೆಂಬರ್ಸ್ | | | | | | | | | |
| ಟ್ರಸ್ಟ್ಸ್ | | | | | | | | | |
| ವಿದೇಶಿ ಸಂಸ್ಥೆಗಳು – ಡಿ ಆರ್ | | | | | | | | | |
| **ಉಪ ಒಟ್ಟು (ಬಿ)(2):** | | | | | | | | | |
| ಒಟ್ಟು ಸಾರ್ವಜನಿಕ ಷೇರುದಾರಿಕೆ (ಬಿ)=(ಬಿ)(1)+ (ಬಿ)(2) | | | | | | | | | |
| **ಸಿ. ಜಿಡಿಆರ್ ಮತ್ತು ಎಡಿಆರ್‌ಗಳ ಮೇಲ್ವಿಚಾರಕರು ಹೊಂದಿರುವ ಷೇರು** | | | | | | | | | |
| **ಒಟ್ಟು (ಎ+ಬಿ+ಸಿ)** | | 2017660 | 2017660 | 100% | ಅನ್ವಯ ವಾಗದು | 4273477 | 4273477 | 100% | ಇಲ್ಲ |

## ಬಿ) ಪ್ರವರ್ತಕರು ಹೊಂದಿರುವ ಷೇರುದಾರಿಕೆ

| ಕ್ರ. ಸಂ. | ಷೇರುದಾರರ ಹೆಸರು | ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು | | | ವರ್ಷಾಂತ್ಯದಲ್ಲಿ ಹೊಂದಿದ್ದ ಷೇರುಗಳು | | | ವರ್ಷದಲ್ಲಿನ ಷೇರುದಾರಿಕೆಯ ಬದಲಾವಣೆ ಶೇ. |
|---|---|---|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರಿನ ಶೇ. | ಒಟ್ಟು ಷೇರುಗಳ ಅಡಮಾನ / ಹೊರೆ ಶೇ. | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. | ಒಟ್ಟು ಷೇರುಗಳ ಅಡಮಾನ / ಹೊರೆಯ/ ಶೇ. | |
| 1 | ಕರ್ನಾಟಕ ಸರ್ಕಾರ | – | – | – | 2017570 | 53% | – | |
| 1 | ಕೆಎಸ್ಐಐಡಿಸಿ | 2017570 | 99.999% | – | 2017570 | 47% | – | 53% ಕಡಿಮೆಯಾಗಿದ |
| | ಕೆಳಕಂಡ 6 ವ್ಯಕ್ತಿಗಳು ಕೆಎಸ್ಐಐಡಿಸಿಯ ಪರವಾಗಿ ಷೇರು ಹೊಂದಿರುವವರು | | | | | | | |
| | 1) ಎಂಡಿ, ಕೆಎಸ್ಐಐಡಿಸಿ | 30 | | | 30 | | | |
| | 2) ಎಂಡಿ, ಎಂಎಸ್ಐಎಲ್ | 10 | | | 10 | | | |
| | 3) ಎನ್.ಆರ್.ಎನ್. ಸಿಂಹ | 20 | | | 20 | | | |
| | 4) ವೈ. ಶ್ರೀನಿವಾಸಪ್ಪ | 10 | | | 10 | | | |
| | 5) ಎನ್.ಕೆ. ಪರಶುರಾಮ್ | 10 | | | 10 | | | |
| | 6) ಡಿ.ವಿಶ್ವನಾಥ್ | 10 | | | 10 | | | |

## ಸಿ) ಪ್ರವರ್ತಕರ ಷೇರುದಾರಿಕೆಯಲ್ಲಿ ಬದಲಾವಣೆ (ಬದಲಾವಣೆ ಇಲ್ಲದಿದ್ದರೆ ವಿವರಿಸಿ)

| ಕ್ರ. ಸಂ. | ವಿವರಗಳು | ವರ್ಷಾರಂಭದಲ್ಲಿ ಹೊಂದಿದ್ದ ಷೇರುದಾರಿಕೆ | | ವರ್ಷಾವಧಿಯಲ್ಲಿ ಹೊಂದಿದ್ದ ಸಂಚಿತ ಷೇರುದಾರಿಕೆ | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. |
| | ವರ್ಷಾರಂಭದಲ್ಲಿ | 2017660 | 100% | 2017660 | 47% |
| | ವರ್ಷದಲ್ಲಿ ಪ್ರವರ್ತಕರ ಷೇರುದಾರಿಕೆಯಲ್ಲಿ ದಿನಾಂಕವಾರು ಏರಿಕೆ/ಇಳಿಕೆ ಏರಿಕೆ / ಇಳಿಕೆ ಬಗ್ಗೆ ಕಾರಣ ತಿಳಿಸಿ (ಉದಾ: ಹಂಚಿಕೆ/ವರ್ಗಾವಣೆ/ ಬೋನಸ್/ಸ್ವೆಟ್ ಈಕ್ವಿಟಿ ಇತ್ಯಾದಿ): | ಕರ್ನಾಟಕ ರಾಜ್ಯಪಾಲರಿಗೆ 28ನೇ ಫೆಬ್ರುವರಿ 2018 ರಂದು 2255817 ಈಕ್ವಿಟಿ ಷೇರುಗಳ ನೂತನ ನೀಡಿಕೆ ಯಿಂದ ಪ್ರವರ್ತಕರ (ಮಾತೃ ಕಂಪನಿ) ಷೇರುದಾರಿಕೆಯು 100% ನಿಂದ 47%ಗೆ ಕಡಿಮೆಯಾಗಿದೆ. | | | |
| | ವರ್ಷಾಂತ್ಯದಲ್ಲಿ | | | 2017660 | 47% |

**ಡಿ) ಪ್ರಮುಖ 10 ಷೇರುದಾರರ ಷೇರುದಾರಿಕೆ ಮಾದರಿ :**

**(ನಿರ್ದೇಶಕರು, ಪ್ರವರ್ತಕರು ಮತ್ತು ಜಿಡಿಆರ್‌ಗಳು ಮತ್ತು ಎಡಿಆರ್‌ಗಳ ಧಾರಕರು ಹೊರತಾಗಿ): ಇಲ್ಲ**

### ಇ) ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿ ಹೊಂದಿರುವ ಷೇರುಗಳು:

| ಕ್ರ. ಸಂ. | ಪ್ರತಿ ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿ ಹೊಂದಿರುವ ಷೇರುಗಳು | ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು | | ವರ್ಷದಲ್ಲಿ ಹೊಂದಿದ್ದ ಸಂಚಿತ ಷೇರುಗಳು | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. |
| | ವರ್ಷಾರಂಭದಲ್ಲಿ- | | | | |
| 1. | ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ | 30 | 0.001% | 30 | 0.001% |
| 2 | ವ್ಯವಸ್ಥಾಪಕ ನಿರ್ದೇಶಕರು, ಎಂಎಸ್ಐಎಲ್/ಪ್ರಮುಖ ಆಡಳಿತ ಸಿಬ್ಬಂದಿ | 10 | 0.0005% | 10 | 0.0005% |
| | ವರ್ಷದಲ್ಲಿ ಪ್ರವರ್ತಕರ ಷೇರುದಾರಿಕೆಯಲ್ಲಿ ದಿನಾಂಕವಾರು ಏರಿಕೆ/ಇಳಿಕೆ. ಈ ಏರಿಕೆ / ಇಳಿಕೆಗೆ ಕಾರಣ ವಿವರಿಸಿ (ಉದಾ: ಹಂಚಿಕೆ/ವರ್ಗಾವಣೆ/ಬೋನಸ್/ಸ್ವೆಟ್ ಈಕ್ವಿಟಿ ಇತ್ಯಾದಿ) : | | | | |
| | ವರ್ಷಾಂತ್ಯದಲ್ಲಿ - ಷೇರುದಾರಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ | ಬದಲಾವಣೆ ಇಲ್ಲ | | | |

### V. ಋಣಗಾರಿಕೆ- ಕಂಪನಿಯ ಋಣಗಾರಿಕೆಯಲ್ಲಿ ಬಾಕಿಯಿರುವ/ಸಂಚಯನವಾದ ಆದರೆ ಪಾವತಿ ಮಾಡಬೇಕಿಲ್ಲದ ಬಡ್ಡಿ ಸೇರಿರುವುದು

(ರೂ. ಲಕ್ಷಗಳಲ್ಲಿ)

| | ಠೇವಣಿ ಹೊರತಾದ ಭದ್ರತಾ ಸಾಲಗಳು | ಅಭದ್ರತಾ ಸಾಲಗಳು | ಠೇವಣಿಗಳು | ಒಟ್ಟು ಋಣಬದ್ಧತೆ |
|---|---|---|---|---|
| ಹಣಕಾಸು ವರ್ಷಾರಂಭದಲ್ಲಿದ್ದ ಋಣಬದ್ಧತೆ | | | | |
| i) ಅಸಲು ಮೊತ್ತ | - | - | - | - |
| ii) ಪಾವತಿಸಬೇಕಾಗಿರುವ ಆದರೆ ಪಾವತಿಸದಿರುವ ಬಡ್ಡಿ | – | 53.88 | – | 53.88 |
| iii) ಸಂಚಯನವಾದ ಆದರೆ ಪಾವತಿ ಮಾಡಬೇಕಿಲ್ಲದ ಬಡ್ಡಿ | – | | – | |
| ಒಟ್ಟು (i+ii+iii) | – | 53.88 | – | 53.88 |
| ಹಣಕಾಸು ವರ್ಷದ ಅವಧಿಯಲ್ಲಿ ಋಣಬದ್ಧತೆಯಲ್ಲಿನ ಬದಲಾವಣೆ | | | | |
| ★ ಸೇರ್ಪಡೆ | | | | |
| ★ ಕ್ಷೀಣತೆ | | | | |
| ನಿವ್ವಳ ಬದಲಾವಣೆ | | | | |
| ಹಣಕಾಸು ವರ್ಷಾಂತ್ಯದಲ್ಲಿದ್ದ ಋಣಬದ್ಧತೆ | | | | |
| i) ಅಸಲು ಮೊತ್ತ | - | - | - | - |
| ii) ಪಾವತಿಸಬೇಕಾದ ಆದರೆ ಪಾವತಿಸಿಲ್ಲದ ಬಡ್ಡಿ | – | 53.88 | – | 53.88 |
| iii) ಸಂಚಯನವಾದ ಆದರೆ ಪಾವತಿಸಬೇಕಿಲ್ಲದ ಬಡ್ಡಿ | – | | – | |
| ಒಟ್ಟು (i+ii+iii) | – | 53.88 | – | 53.88 |

## VI. ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಸಂಭಾವನೆ :

### ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿಯ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರ ಸಂಭಾವನೆ :

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಸಂಭಾವನೆಯ ವಿವರ | ಎಂಡಿ/ಡಬ್ಲ್ಯೂಟಿಡಿ/ವ್ಯವಸ್ಥಾಪಕರ ಹೆಸರು | | | | ಒಟ್ಟು ಮೊತ್ತ |
|---|---|---|---|---|---|---|
| | | ಎಂಡಿ* | ..... | ..... | ..... | |
| 1 | ಒಟ್ಟು ವೇತನ | | | | | |
| | (ಎ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(1)ರಲ್ಲಿ ಒಳಗೊಂಡಿರುವ ಮುನ್ನೇರ್ಪಾಡುಗಳಂತೆ ವೇತನ | 7.89 | – | – | – | 7.89 |
| | (ಬಿ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(2)ರನ್ವಯ ಅನುಷಂಗಿಕ ಸವಲತ್ತುಗಳ ಮೌಲ್ಯ | | – | | | – |
| | (ಸಿ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(3)ರನ್ವಯ ವೇತನದ ಬದಲಾಗಿ ಲಾಭ | | | | | |
| 2 | ಸ್ಟಾಕ್ ಆಪ್ಷನ್ | | | | | |
| 3 | ಸ್ವೆಟ್ ಈಕ್ವಿಟಿ | | | | | |
| 4 | ಕಮಿಷನ್-ಲಾಭದ ಶೇಕಡವಾರು ಆಗಿ - ಇತರೆ, ವಿವರಿಸಿ ... | | | | | |
| 5 | ಇತರೆ, ವಿವರಿಸಿ ... | – | – | – | – | – |
| | ಒಟ್ಟು (ಎ) | 7.89 | | | | 7.89 |
| | ಕಾಯ್ದೆಯಂತೆ ಮಿತಿ | | | | | |

*ವ್ಯವಸ್ಥಾಪಕ ನಿರ್ದೇಶಕರವರಿಗೆ ನೀಡಿದ ಸಂಬಳದ ಅವಧಿ ಅಕ್ಟೋಬರ್ 10, 2017 ರಿಂದ 31ನೇ ಮಾರ್ಚ್ 2018ರವರೆಗೆ.

### ಬಿ. ಇತರೆ ನಿರ್ದೇಶಕರಿಗೆ ಸಂಭಾವನೆ :

| ಕ್ರ.ಸಂ. | ಸಂಭಾವನೆಯ ವಿವರ | ನಿರ್ದೇಶಕರ ಹೆಸರು | ಒಟ್ಟು ಮೊತ್ತ |
|---|---|---|---|
| 1 | ಸ್ವತಂತ್ರ ನಿರ್ದೇಶಕರು: | | |
| 2 | ಇತರೆ ಕಾರ್ಯನಿರ್ವಹಣೇತರ ನಿರ್ದೇಶಕರು<br>ಮಂಡಳಿ ಸಮಿತಿ ಸಭೆಗಳಿಗೆ ಹಾಜರಾಗಿದ್ದಕ್ಕೆ ಶುಲ್ಕ:<br>ಪ್ರತಿ ಸಭೆಗೆ ರೂ.3,000/- | ಶ್ರೀ ಹಂಪನಗೌಡ ಬಾದರ್ಲಿ<br>ಡಾ.ಜಿ.ಸಿ.ಪ್ರಕಾಶ್, ಭಾ.ಆ.ಸೇ.<br>ಶ್ರೀ ರಿತೇಶ್‌ಕುಮಾರ್ ಸಿಂಗ್, ಭಾ.ಆ.ಸೇ.<br>ಶ್ರೀ ದರ್ಪಣ್ ಜೈನ್, ಭಾ.ಆ.ಸೇ.<br>ಶ್ರೀ ಶ್ರೀವಸ್ತ ಕೃಷ್ಣ, ಭಾ.ಆ.ಸೇ.<br>ಶ್ರೀ ನವೀನ್‌ರಾಜ್ ಸಿಂಗ್, ಭಾ.ಆ.ಸೇ.<br>ಶ್ರೀಮತಿ ಪಿ.ಹೇಮಲತ, ಭಾ.ಆ.ಸೇ.<br>ಶ್ರೀ ರಾಜೇಂದ್ರಕುಮಾರ್ ಕಟಾರಿಯ ಭಾ.ಆ.ಸೇ.<br>ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ.<br>ಡಾ. ಏಕ್‌ರೂಪ್ ಕೌರ್ ಭಾ.ಆ.ಸೇ.<br>ಶ್ರೀ ಎನ್.ಜಯರಾಂ, ಭಾ.ಆ.ಸೇ.<br>ಶ್ರೀ ಆರ್. ರಮೇಶ್<br>ಶ್ರೀ ಎಸ್.ಆರ್. ಸನತ್‌ಕುಮಾರ್<br>ಶ್ರೀ ರಫಿಕ್ ಅಹ್ಮದ್ ಬಿ.ಪಕಾಲಿ<br>ಶ್ರೀ ಗುಣಶೇಖರ<br>ಶ್ರೀ ಚಲುವರಾಜು<br>ಶ್ರೀ ಎಂ.ಎಸ್. ಶ್ರೀಧರ<br>ಶ್ರೀ ಕೆ.ವೆಂಕಟಸ್ವಾಮಪ್ಪ<br>ಶ್ರೀ ಅನುರಾಧ ಬಿ ತಾಪ್ಲಿ<br>ಶ್ರೀ ಆರ್. ತಮ್ಮಣ್ಣ<br>ಶ್ರೀ ಎನ್.ಬಾಲ್‌ರಾಜು | ಇಲ್ಲ<br>ಇಲ್ಲ<br>ಇಲ್ಲ<br>ಇಲ್ಲ<br>ಇಲ್ಲ<br>ಇಲ್ಲ<br>ಇಲ್ಲ<br>ಇಲ್ಲ<br>6000<br>6000<br>ಇಲ್ಲ<br>ಇಲ್ಲ<br>18000<br>15540<br>15540<br>18000<br>15540<br>12000<br>15540<br>18000<br>12000 |
| | ಕಮಿಷನ್ | | |
| | ಇತರೆ, ದಯಮಾಡಿ ವಿವರಿಸಿ | | |
| | ಒಟ್ಟು (1) | | |

| | | | |
|---|---|---|---|
| 2 | ಮಂಡಳಿ ಸಮಿತಿ ಸಭೆಗಳಿಗೆ ಹಾಜರಾಗಿದ್ದಕ್ಕೆ ಶುಲ್ಕ | | |
| | ಕಮಿಷನ್ | | |
| | ಇತರೆ, ದಯಮಾಡಿ ವಿವರಿಸಿ | | |
| | ಒಟ್ಟು (2) | | 152160 |
| | ಒಟ್ಟು (ಬಿ)=(1+2) | | |
| | ವ್ಯವಸ್ಥಾಪಕರ ಒಟ್ಟು ಸಂಭಾವನೆ | | 152160 |
| | ಕಾಯ್ದೆಯಂತೆ ಒಟ್ಟಾರೆ ಮಿತಿ | | |

### ಸಿ. ಎಂಡಿ/ವ್ಯವಸ್ಥಾಪಕರು/ಡಬ್ಲ್ಯೂಟಿಡಿ ಹೊರತಾಗಿ ಪ್ರಮುಖ ಆಡಳಿತ ಸಿಬ್ಬಂದಿ ಸಂಭಾವನೆ

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಸಂಭಾವನೆಯ ವಿವರಗಳು | ಪ್ರಮುಖ ಆಡಳಿತ ಸಿಬ್ಬಂದಿ | | | |
|---|---|---|---|---|---|
| | | ಸಿಇಒ | ಸಿಎಸ್ | ಸಿಎಫ್‌ಒ | ಒಟ್ಟು |
| 1 | ಒಟ್ಟು ವೇತನ | | | | |
| | (ಎ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(1)ರಲ್ಲಿ ಇರುವ ಮುನ್ನೇರ್ಪಾಡುಗಳಂತೆ ವೇತನ | | 12.68 | 14.60 | 27.28 |
| | (ಬಿ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(2)ರನ್ವಯ ಅನುಷಂಗಿಕ ಸವಲತ್ತುಗಳ ಮೌಲ್ಯ | | 0.55 | 2.63 | 3.18 |
| | (ಸಿ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(3)ರನ್ವಯ ವೇತನಕ್ಕೆ ಬದಲಾಗಿ ಲಾಭ | | – | – | – |
| 2 | ಸ್ಟಾಕ್ ಆಪ್ಷನ್ | | – | – | – |
| 3 | ಸ್ವೆಟ್ ಈಕ್ವಿಟಿ | | | | |
| 4 | ಕಮಿಷನ್ | | | | |
| | - ಲಾಭ ಶೇ, ಆಗಿ | | | | |
| | - ಇತರೆ, ವಿವರಿಸಿ | | | | |
| 5 | ಇತರೆ, ದಯಮಾಡಿ ವಿವರಿಸಿ | | | | |
| | ಒಟ್ಟು | | 13.23 | 17.23 | 30.46 |

### VII. ದಂಡಗಳು/ಶಿಕ್ಷೆ/ಅಪರಾಧಗಳ ಸಂಯೋಜನೆ :

| ಮಾದರಿ | ಕಂಪನಿಗಳ ಕಾಯ್ದೆಯ ಸೆಕ್ಷನ್ | ಸಂಕ್ಷಿಪ್ತ ವಿವರ | ವಿಧಿಸಿದ ದಂಡ /ಶಿಕ್ಷೆ ಸಂಯೋಜಿತ ಶುಲ್ಕದ ವಿವರ | ಪ್ರಾಧಿಕಾರ [RD / NCLT/ ಕೋರ್ಟ್] | ಸಲ್ಲಿಸಿರುವ ಮೇಲ್ಮನವಿ ಯಾವುದೇ ಇದ್ದಲ್ಲಿ (ವಿವರ ನೀಡಿ) |
|---|---|---|---|---|---|
| ಎ. ಕಂಪನಿ | | | ಇಲ್ಲ | | |
| ದಂಡ | | | | | |
| ಶಿಕ್ಷೆ | | | | | |
| ಸಂಯೋಜಿತ | | | | | |
| ಬಿ. ನಿರ್ದೇಶಕರು | | | ಇಲ್ಲ | | |
| ದಂಡ | | | | | |
| ಶಿಕ್ಷೆ | | | | | |
| ಸಂಯೋಜಿತ | | | | | |
| ಸಿ. ತಪ್ಪಿತಸ್ಥ ಇತರೆ ಅಧಿಕಾರಿಗಳು | | | ಇಲ್ಲ | | |
| ದಂಡ | | | | | |
| ಶಿಕ್ಷೆ | | | | | |
| ಸಂಯೋಜಿತ | | | | | |

# ಅನುಬಂಧ-II

## ಸಹಾಯಕ ಕಂಪನಿ ಸಂಬಂಧ ಕಂಪನಿಗಳ ಕಾಯ್ದೆ 1956ರ ಸೆಕ್ಷನ್ 212(8)ರ ಅನ್ವಯ ಹೇಳಿಕೆ

ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ 2011ರ ಫೆಬ್ರವರಿ 8ರ ಸಾಮಾನ್ಯ ಸುತ್ತೋಲೆ ಸಂಖ್ಯೆ 2/2011ರ ಅನುಸಾರ ಸಹಾಯಕ ಕಂಪನಿಯ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ಇತರೆ ದಾಖಲಾತಿಗಳನ್ನು ಕಂಪನಿಯ ವಾರ್ಷಿಕ ಲೆಕ್ಕಪತ್ರಗಳೊಂದಿಗೆ ಲಗತ್ತಿಸಿಲ್ಲ. ಸಹಾಯಕ ಕಂಪನಿಯ ವಾರ್ಷಿಕ ಲೆಕ್ಕಪತ್ರಗಳು ಮತ್ತು ಸಂಬಂಧಿತ ಮಾಹಿತಿಯನ್ನು ಕೋರಿಕೆ ಮೇರೆಗೆ ಕಂಪನಿಯ ಮತ್ತು ಇದರ ಸಹಾಯಕ ಕಂಪನಿಯ ಷೇರುದಾರರಿಗೆ ಒದಗಿಸಲಾಗುವುದು ಹಾಗೂ ಇವುಗಳನ್ನು ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಮತ್ತು ಸಹಾಯಕ ಕಂಪನಿಯಲ್ಲಿ ಷೇರುದಾರರ ಪರಿಶೀಲನೆಗೆ ತೆರೆದಿಡಲಾಗುವುದು.

| | |
|---|---|
| ಸಹಾಯಕ ಕಂಪನಿಯ ಹೆಸರು | ಮೆ॥ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿ. |
| ವಿತರಿಸಿದ ಮತ್ತು ಚಂದಾದಾರಿತ ಬಂಡವಾಳ | ರೂ.75,74,040/- |
| ಮೀಸಲುಗಳು | ರೂ.(8,50,90,620/-) |
| ಒಟ್ಟು ಆಸ್ತಿಗಳು | ರೂ.1,31,05,647/- |
| ಒಟ್ಟು ಹೊಣೆಗಾರಿಕೆಗಳು | ರೂ.9,81,96,267/- |
| ಹೂಡಿಕೆಗಳು | - |
| ವಹಿವಾಟು | - |
| ತೆರಿಗೆಗೆ ಮುಂಚಿನ ಲಾಭ/(ನಷ್ಟ) | ರೂ.3,42,906/- |
| ತೆರಿಗೆಗಾಗಿ ಮುನ್ನೇರ್ಪಾಡು | ರೂ.90,500/- |
| ತೆರಿಗೆ ನಂತರದ ಲಾಭ/(ನಷ್ಟ) | ರೂ.2,52,406/- |
| ಉದ್ದೇಶಿತ ಲಾಭಾಂಶ | ಇಲ್ಲ |

| | |
|---|---|
| ಸಹಾಯಕ ಕಂಪನಿಯ ಹೆಸರು | ಮೆ॥ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ |
| ವಿತರಿಸಿದ ಮತ್ತು ಚಂದಾದಾರಿತ ಬಂಡವಾಳ | ರೂ.3,57,25,200/- |
| ಮೀಸಲುಗಳು | ರೂ.117,49,89,022/- |
| ಒಟ್ಟು ಆಸ್ತಿಗಳು | ರೂ.234,79,34,381/- |
| ಒಟ್ಟು ಹೊಣೆಗಾರಿಕೆಗಳು | ರೂ.117,29,45,359/- |
| ಹೂಡಿಕೆಗಳು | - |
| ವಹಿವಾಟು | ರೂ.368,52,79,465/- |
| ತೆರಿಗೆಗೆ ಮುಂಚಿನ ಲಾಭ/(ನಷ್ಟ) | ರೂ.33,71,52,791/- |
| ತೆರಿಗೆಗಾಗಿ ಮುನ್ನೇರ್ಪಾಡು | ರೂ.1,43,00,000/- |
| ತೆರಿಗೆ ನಂತರದ ಲಾಭ/(ನಷ್ಟ) | ರೂ.20,42,30,036/- |
| ಉದ್ದೇಶಿತ ಲಾಭಾಂಶ | - |

**ಅನುಬಂಧ-III**

**ಫಾರಂ ಸಂಖ್ಯೆ ಎಂಆರ್-3**
**ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿ**

**2018ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ**

**[ಕಂಪನಿಗಳ ಕಾಯ್ದೆ 2013 ಸೆಕ್ಷನ್ 204(1) ಮತ್ತು ಕಂಪನಿಗಳ (ಆಡಳಿತ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ ಸಂಖ್ಯೆ 9ರ ಅನ್ವಯ]**

ಗೆ,

ಸದಸ್ಯರು,
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಬೆಂಗಳೂರು**

ನಾನು ಅನ್ವಯಿತ ಶಾಸನಬದ್ಧ ಮುನ್ನೇರ್ಪಾಡುಗಳ ಸರಣಿಯ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ಹಾಗೂ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (**U85110KA1966SGC001612**) (ಇನ್ನು ಮುಂದೆ ಕಂಪನಿ ಎಂದು ಕರೆಯಲಾಗುವುದು) ಉತ್ತಮ ಕಾರ್ಪೋರೇಟ್ ಅಭ್ಯಾಸಗಳ ಅನುಸರಣೆಯ ಅನ್ವಯ ಲೆಕ್ಕಪರಿಶೋಧನೆ ಮಾಡಿದ್ದೇನೆ. ಕಾರ್ಪೋರೇಟ್ ನಡತೆ/ಶಾಸನಬದ್ಧ ಅನುಪಾಲನೆಗಳ ಮೌಲ್ಯಮಾಪನಕ್ಕೆ ಮತ್ತು ಇದರ ಬಗ್ಗೆ ನನ್ನ ಅಭಿಪ್ರಾಯ ತಿಳಿಸಲು ಸೂಕ್ತವಾದ ಆಧಾರವನ್ನು ನನಗೆ ಒದಗಿಸಿದ ರೀತಿಯಲ್ಲಿ ಸೆಕ್ರೆಟೇರಿಯಲ್ ಲೆಕ್ಕ ಪರಿಶೋಧನೆ ನಡೆಸಲಾಗಿದೆ.

ಕಂಪನಿಯು ನಿರ್ವಹಿಸಿರುವ ಪುಸ್ತಕಗಳು, ಪತ್ರಗಳು, ಮಿನಿಟ್ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಿರುವ ರಿಟರ್ನ್ ಇತರೆ ದಾಖಲಾತಿಗಳನ್ನು ನಾನು/ನಾವು ಪರಿಶೀಲನೆ ಮಾಡಿದ ಆಧಾರದಲ್ಲಿ ಕಾರ್ಯದರ್ಶಿ ಲೆಕ್ಕಪರಿಶೋಧನೆ ನಡೆಸಿದ ಅವಧಿಯಲ್ಲಿ ಕಂಪನಿ ತನ್ನ ಅಧಿಕಾರಿಗಳು, ಏಜೆಂಟ್ಸ್ ಮತ್ತು ಅಧಿಕೃತ ಪ್ರತಿನಿಧಿಗಳು ಒದಗಿಸಿದ ಮಾಹಿತಿಯನ್ನು ಗಮನಿಸಲಾಗಿದೆ. ನನ್ನ ಅಭಿಪ್ರಾಯದಂತೆ, ಕಂಪನಿ ಒದಗಿಸಿದಂತೆ 2018ನೇ ಮಾರ್ಚ್ 31ರ ಹಣಕಾಸು ವರ್ಷಾಂತ್ಯ ಒಳಗೊಳ್ಳುವ ಪರಿಶೋಧನಾ ಅವಧಿಯಲ್ಲಿ ನಾನು ವರದಿ ಮಾಡಿದ್ದೇನೆ ಹಾಗೂ ಕೆಳಗೆ ಪಟ್ಟಿ ಮಾಡಲಾದ ಶಾಸನಬದ್ಧ ಮುನ್ನೇರ್ಪಾಡುಗಳನ್ನು ಅನುಸರಿಸಲಾಗಿದೆ. ಕಂಪನಿಯು ಸೂಕ್ತ ಮಂಡಳಿ-ಪ್ರಕ್ರಿಯೆ ಮತ್ತು ಅನುಸರಣೆ - ವ್ಯವಸ್ಥೆ ಕೌಶಲ್ಯ ಹೊಂದಿದ್ದು ಅದರ ಅನುಸಾರ ವರದಿ ಮಾಡಲಾಗಿದೆ.

ಕೆಳಕಂಡ ಉಪಬಂಧಗಳ ಅನುಸಾರ 2018ನೇ ಮಾರ್ಚ್ 31ರ ವರ್ಷಾಂತ್ಯಕ್ಕೆ ಕಂಪನಿ ನಿರ್ವಹಿಸಿದ ಪುಸ್ತಕಗಳು, ಪತ್ರಗಳು, ಮಿನಿಟ್ ಪುಸ್ತಕಗಳು, ನಮೂನೆಗಳು ಮತ್ತು ರಿಟರ್ನ್ ಸಲ್ಲಿಕೆಗಳು ಮತ್ತು ಇತರೆ ದಾಖಲಾತಿಗಳನ್ನು ನಾನು ಪರಿಶೀಲಿಸಿದ್ದೇನೆ:

i. ಕಂಪನಿಗಳ ಕಾಯ್ದೆ, 2013(ಕಾಯ್ದೆ) ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳು, ಕಾಯ್ದೆಯ ಸೆಕ್ಷನ್ 129ರ ಅಡಿಯಲ್ಲಿನ ಹಣಕಾಸಿನ ಹೇಳಿಕೆಗಳ ಕ್ರೋಡೀಕರಣ ಅಗತ್ಯತೆ ಸಂಬಂಧ, ಕಂಪನಿಯು ಎಂಸಿಎ ಅಧಿಸೂಚನೆ ಸಂ.ಜಿ.ಎಸ್.ಆರ್. 742(ಇ) ದಿನಾಂಕ:13ನೇ ಜುಲೈ 2017ರ ಅನ್ವಯ ವಿನಾಯ್ತಿ ಪಡೆದಿದೆ (ಸಂಪೂರ್ಣ ಮಾಲಿಕತ್ವದ ಸಹಾಯಕ ಸಂಸ್ಥೆಯಾಗಿರುವುದರಿಂದ)

ii. ಸೆಕ್ಯುರಿಟೀಸ್ ಕಾಂಟ್ರಾಕ್ಟ್ (ನಿಯಂತ್ರಣ) ಕಾಯ್ದೆ 1956 (ಎಸ್‌ಸಿಆರ್‌ಎ) ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳು,

iii. ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ, 1999 ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹರಿವಿನ ಪ್ರಮಾಣಕ್ಕೆ ಇದರಡಿ ಮಾಡಿರುವ ನಿಯಮಗಳು ಮತ್ತು ನಿಬಂಧನೆಗಳು,

iv. ಕಂಪನಿಯು ಹೆಸರು ಸೇರ್ಪಡೆಯಾಗಿರದ ಸಾರ್ವಜನಿಕ ಕಂಪನಿ ಮತ್ತು ಸರ್ಕಾರದ ಕಂಪನಿಯಾಗಿರುವುದರಿಂದ ಕೆಳಕಂಡ ಕಾನೂನುಗಳ ಅನ್ವಯ ಅಗತ್ಯತೆಗಳನ್ನು ಅನುಸರಿಸಬೇಕಾಗಿರುವುದಿಲ್ಲ-

ಎ. ಡಿಪಾಸಿಟರೀಸ್ ಕಾಯ್ದೆ 1996 ಮತ್ತು ಇದರಡಿಯಲ್ಲಿ ಮಾಡಿರುವ ನಿಬಂಧನೆಗಳು.

ಬಿ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಷೇರುಗಳು ಮತ್ತು ಸ್ವಾಧೀನತೆಗಳ ಗಣನೀಯ ಸ್ವಾಧೀನತೆ) ನಿಬಂಧನೆಗಳು, 2016;

ಸಿ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಟ್ ಬೋರ್ಡ್ ಆಫ್ ಇಂಡಿಯಾ (ಆಂತರಿಕರ ವ್ಯಾಪಾರ ನಿಷೇಧ) ನಿಬಂಧನೆಗಳು, 2015;

ಡಿ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಬಂಡವಾಳ ಮತ್ತು ಪ್ರಕಟಣೆ ಅಗತ್ಯತೆಗಳ ನೀಡಿಕೆ) ನಿಬಂಧನೆಗಳು, 2016;

ಇ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಷೇರು ಆಧಾರಿತ ನೌಕರರ ಸೌಲಭ್ಯಗಳು) ನಿಬಂಧನೆಗಳು, 2014;

ಎಫ್. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ನೀಡಿಕೆಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರು) ನಿಬಂಧನೆಗಳು, 2006 ಕಂಪನಿಗಳ ಕಾಯ್ದೆ ಮತ್ತು ಗ್ರಾಹಕರ ಜೊತೆ ವ್ಯವಹರಿಸುವ ಸಂಬಂಧ;

ಜಿ. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಈಕ್ವಿಟಿ ಷೇರುಗಳ ಸೇರ್ಪಡೆ ತೆಗೆದುಹಾಕುವಿಕೆ) ನಿಬಂಧನೆಗಳು, 2009;

ಎಚ್. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಕ್ಯುರಿಟಿಗಳ ಮರು ಖರೀದಿ) ನಿಬಂಧನೆಗಳು, 2013; ಮತ್ತು

ಐ. ಸೆಬಿ (ಹೆಸರು ಸೇರ್ಪಡೆ ಹೊಣೆ ಮತ್ತು ಪ್ರಕಟಣೆ ಅಗತ್ಯತೆಗಳು) ನಿಬಂಧನೆಗಳು 2015 (ಎಲ್ಒಡಿಆರ್ ನಿಬಂಧನೆಗಳು)

ಮುಂದುವರಿದು ವರದಿ ಮಾಡುವುದೇನೆಂದರೆ, ಪಡೆದಿರುವ ಮಾಹಿತಿ ಮತ್ತು ನಿರ್ವಹಣೆ ಮಾಡಿರುವ ದಾಖಲೆಗಳ ಆಧಾರದ ಮೇಲೆ, ನನ್ನ ಅಭಿಪ್ರಾಯದಲ್ಲಿ ಕಂಪನಿಯು ಅನ್ವಯವಾಗುವ ಪ್ರಮಾಣದವರೆಗೆ ಈ ಕೆಳಕಂಡ ಉಪಬಂಧಗಳನ್ನು ಪರಿಪಾಲಿಸಿದೆ:

**1. ಕೈಗಾರಿಕೆಯ ನಿರ್ದಿಷ್ಟ ಕಾನೂನುಗಳು**

ಎ) ಕರ್ನಾಟಕ ಚಿಟ್ ಫಂಡ್ ಕಾಯ್ದೆ, 1982

ಬಿ) ಕರ್ನಾಟಕ ಅಬಕಾರಿ ಕಾಯ್ದೆ, 1968

ಸಿ) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಮಳಿಗೆಗಳ ಕಾಯ್ದೆ, 1961

ಡಿ) ವೃತ್ತಿಗಳು, ವ್ಯಾಪಾರಗಳು, ಕಸಬು ಮತ್ತು ಉದ್ಯೋಗಗಳ ಮೇಲಿನ ಕರ್ನಾಟಕ ತೆರಿಗೆ ಕಾಯ್ದೆ 1976

ಇ) ಅಗತ್ಯ ಪದಾರ್ಥಗಳ ಕಾಯ್ದೆ, 1955

ಎಫ್) ಔಷಧ ನಿಯಂತ್ರಣ ಕಾಯ್ದೆ, 1950

**2. ಸಾಮಾನ್ಯ ಕಾನೂನುಗಳು:**

ಎ. ಕಂಪನಿಗೆ ಅನ್ವಯವಾಗುವಂತೆ ಕೈಗಾರಿಕಾ ಮತ್ತು ಕಾರ್ಮಿಕ ಕಾನೂನುಗಳು.

ಬಿ. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹರಿಸುವಿಕೆ) ಕಾಯ್ದೆ, 2013

ಐಸಿಎಸ್ಐ ಹೊರಡಿಸಿದ ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಅಧಿಸೂಚಿಸಿರುವ ಸೆಕ್ರೆಟೇರಿಯಲ್ ಗುಣಮಟ್ಟಗಳು ಎಸ್ಎಸ್-1 ಮತ್ತು ಎಸ್ಎಸ್-2 ರ ಅನ್ವಯವಾಗುವ ಕಲಂಗಳ ಅನುಸರಣೆ ಮತ್ತು ಸಾಮಾನ್ಯವಾಗಿ ಅವರು ಸದರಿ ಗುಣಮಟ್ಟಗಳನ್ನು ಅನುಸರಿಸಿರುವ ಕುರಿತ ಟಿಪ್ಪಣಿಯನ್ನು ಸಹ ನಾವು ಪರಿಶೀಲಿಸಿದ್ದೇವೆ.

ಪರಾಮರ್ಶನೆಯಲ್ಲಿರುವ ಅವಧಿಯಲ್ಲಿ ಮೇಲೆ ತಿಳಿಸಿರುವ ಕಾಯ್ದೆಯ ಉಪಬಂಧಗಳು, ನಿಯಮಗಳು, ನಿಬಂಧನೆಗಳು, ಮಾರ್ಗದರ್ಶನಗಳು, ಗುಣಮಟ್ಟಗಳು ಇತ್ಯಾದಿಗಳನ್ನು ಕಂಪನಿಯು ಪರಿಪಾಲಿಸಿದೆ.

ನಾನು/ನಾವು ಮತ್ತೆ ವರದಿ ಮಾಡುವುದೇನೆಂದರೆ;

ಕಂಪನಿಯ ನಿರ್ದೇಶಕರ ಮಂಡಳಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕೇತರ ನಿರ್ದೇಶಕರು, ಸ್ವತಂತ್ರ ನಿರ್ದೇಶಕರು ಮತ್ತು ಒಬ್ಬರು ಮಹಿಳಾ ನಿರ್ದೇಶಕರ ಸೂಕ್ತ ಸಮತೋಲನದೊಂದಿಗೆ ಕ್ರಮವಾಗಿ ರಚಿಸಲಾಗಿದೆ. ಪರಾಮರ್ಶನೆಯಲ್ಲಿರುವ ಅವಧಿಯಲ್ಲಿ ಉಂಟಾಗಿರುವ ನಿರ್ದೇಶಕರುಗಳ ಮಂಡಳಿಯ ಸಂಯೋಜನೆಯಲ್ಲಿನ ಬದಲಾವಣೆಯನ್ನು ಕಾಯ್ದೆಯ ಉಪಬಂಧಗಳ ಅನುಸರಣೆ ಅನ್ವಯ ಮಾಡಲಾಗಿದೆ.

ಮಂಡಳಿ/ಸಮಿತಿ ಸಭೆಗಳನ್ನು ನಡೆಸುವ ಬಗ್ಗೆ ಎಲ್ಲಾ ನಿರ್ದೇಶಕರುಗಳಿಗೆ ಪರಿಪೂರ್ಣ ಸೂಚನೆ ನೀಡಿದೆ. ಕಾರ್ಯಸೂಚಿ ಮತ್ತು ಕಾರ್ಯಸೂಚಿಯ ಮೇಲಿನ ವಿವರವಾದ ಟಿಪ್ಪಣಿಗಳನ್ನು ಕನಿಷ್ಠ ಏಳು ದಿನಗಳ ಮುಂಚಿತವಾಗಿ ಕಳುಹಿಸಲಾಗಿದೆ. ಸಭೆಗೆ ಮುನ್ನ ಕಾರ್ಯಸೂಚಿ ಬಾಬ್ತುಗಳ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಸ್ಪಷ್ಟನೆಗಳನ್ನು ಕೇಳಲು ಮತ್ತು ಪಡೆಯಲು ಮತ್ತು ಸಭೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ವ್ಯವಸ್ಥೆಯು ಜಾರಿಯಲ್ಲಿರುವುದು.

ಬಹುಪಾಲು ನಿರ್ಧಾರಗಳನ್ನು ತೆಗೆದುಕೊಂಡಿದ್ದರೂ, ಸದಸ್ಯರ ಅಸಮ್ಮತಿ ನಿಲುವುಗಳನ್ನು ಗಣನೆಗೆ ತೆಗೆದುಕೊಂಡಿದ್ದು, ಅದನ್ನು ಮಿನಿಟ್‌ನ ಭಾಗವಾಗಿ ದಾಖಲು ಮಾಡಲಾಗಿದೆ.

ನಾನು/ನಾವು ಮತ್ತೆ ವರದಿ ಮಾಡುವುದೇನೆಂದರೆ, ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು ಹಾಗೂ ಮಾರ್ಗದರ್ಶನಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಅನುಸರಣೆಯನ್ನು ಖಾತರಿಪಡಿಸಲು ಕಂಪನಿಯ ಗಾತ್ರ ಮತ್ತು ಕಾರ್ಯಾಚರಣೆ ಆಧಾರದ ಮೇಲೆ ಕಂಪನಿಯಲ್ಲಿ ಸಾಕಷ್ಟು ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳು ಇರುವವು.

ನಾನು ಮುಂದುವರಿದು ವರದಿ ಮಾಡುವುದೇನೆಂದರೆ, ವರದಿಗಾರಿಕೆಯ ಅವಧಿಯಲ್ಲಿ ಮೇಲೆ ಪ್ರಸ್ತಾಪಿಸಿರುವ ಕಾನೂನುಗಳು, ನಿಯಮಗಳು, ನಿಬಂಧನೆಗಳು, ಮಾರ್ಗದರ್ಶನಗಳು, ಗುಣಮಟ್ಟಗಳು ಇತ್ಯಾದಿಯ ಅನುಸಾರ ಕಂಪನಿಯ ವ್ಯವಹಾರಗಳ ಗುಣಮಟ್ಟಗಳು ಇತ್ಯಾದಿಯ ಅನುಸಾರ ಕಂಪನಿಯ ವ್ಯವಹಾರಗಳ ಮೇಲೆ ಪ್ರಮುಖವಾದ ಹಿಡಿತ ಹೊಂದಿರುವ ಯಾವುದೇ ಇತರೆ ನಿರ್ದಿಷ್ಟ ಘಟನಾವಳಿಗಳು/ಕ್ರಮಗಳು ನಡೆದಿರುವುದಿಲ್ಲ.

**ಎಸ್.ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್** ಪರವಾಗಿ,

ಸಹಿ/-

**ಎಸ್.ಕೇದಾರ್‌ನಾಥ್**

**ಕಂಪನಿ ಕಾರ್ಯದರ್ಶಿ**

**ಸಿ.ಪಿ. ನಂ.4422**

**ದಿನಾಂಕ:16ನೇ ನವೆಂಬರ್ 2018**

**ಸ್ಥಳ: ಬೆಂಗಳೂರು**

ಸೂಚನೆ: ಸದರಿ ವರದಿಯನ್ನು ಅನುಬಂಧ-ಎ ಆಗಿ ಸೇರಿಸಿರುವ ಮತ್ತು ಸದರಿ ವರದಿಯ ಅವಿಭಾಜ್ಯ ಭಾಗವಾಗಿರುವ ಸಮ ದಿನಾಂಕದ ನಮ್ಮ ಪತ್ರದ ಜೊತೆಗೆ ಓದಿಕೊಳ್ಳಬೇಕು.

**ಅನುಬಂಧ-''ಎ''**

**ಸದಸ್ಯರುಗಳಿಗೆ,**

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್,**

ಮಾನ್ಯರೇ,

ಸಮ ದಿನಾಂಕದ ನಮ್ಮ ವರದಿಯನ್ನು ಸದರಿ ಪತ್ರದ ಜೊತೆಗೆ ಓದಿಕೊಳ್ಳುವುದು.

ಸೆಕ್ರೆಟೇರಿಯಲ್ ದಾಖಲೆ ನಿರ್ವಹಣೆಯು ಕಂಪನಿ ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಸದರಿ ಸೆಕ್ರೆಟೇರಿಯಲ್ ದಾಖಲೆಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು.

ಸೆಕ್ರೆಟೇರಿಯಲ್ ದಾಖಲೆಗಳ ಒಕ್ಕಣೆಗಳ ನಿಖರತೆ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ಸೂಕ್ತವಾದ ಲೆಕ್ಕಪರಿಶೋಧನೆ ಪದ್ಧತಿಗಳು ಮತ್ತು ಕ್ರಮಗಳನ್ನು ನಾವು ಅನುಸರಿಸಿದ್ದೇವೆ. ಸೆಕ್ರೆಟೇರಿಯಲ್ ದಾಖಲೆಗಳಲ್ಲಿ ಸರಿಯಾದ ಅಂಶಗಳು ಬಿಂಬಿತವಾಗಿರುವ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಲು ಪರೀಕ್ಷಾರ್ಥ ಆಧಾರದ ಮೇಲೆ ಪರಿಶೀಲನೆ ಮಾಡಲಾಗಿದೆ. ನಾವು ಅನುಸರಿಸಿರುವ ಕ್ರಮಗಳು ಮತ್ತು ಪದ್ಧತಿಗಳು ನಮ್ಮ ಅಭಿಪ್ರಾಯಕ್ಕೆ ಸೂಕ್ತವಾದ ಆಧಾರ ಒದಗಿಸುತ್ತವೆಂದು ನಾವು ನಂಬಿದ್ದೇವೆ.

ಸರಕುಗಳು ಮತ್ತು ಸೇವಾ ತೆರಿಗೆಗಳು, ಆದಾಯ ತೆರಿಗೆ, ಸೀಮಾ ಸುಂಕ ಮತ್ತು ಕಂಪನಿಗೆ ಅನ್ವಯವಾಗುವ ಇತರೆ ಸಂಬಂಧಪಟ್ಟ ಕಾನೂನುಗಳಿಗೆ ಸಂಬಂಧಿಸಿದ ದಾಖಲೆಗಳೂ ಸೇರಿದಂತೆ ಕಂಪನಿಯ ಯಾವುದೇ ಹಣಕಾಸಿನ ದಾಖಲೆಗಳು ಮತ್ತು ಲೆಕ್ಕದ ಪುಸ್ತಕಗಳು ಸರಿಯಾಗಿರುವಿಕೆ ಮತ್ತು ಸೂಕ್ತತೆಯನ್ನು ನಾವು ಪರಿಶೀಲಿಸಿರುವುದಿಲ್ಲ.

ಅಗತ್ಯವಿರುವಡೆಯಲ್ಲಿ ಕಾನೂನುಗಳು, ನಿಯಮಗಳು, ಮತ್ತು ನಿಬಂಧನೆಗಳ ಅನುಸರಣೆ ಬಗ್ಗೆ ಮತ್ತು ಕಾಲಕಾಲಕ್ಕೆ ಅನ್ವಯವಾಗುವಂತೆ ಘಟನಾವಳಿಗಳನ್ನು ಕಂಪನಿ ಪ್ರತಿನಿಧಿಸಿದೆ. ಕೈಗಾರಿಕಾ ನಿರ್ದಿಷ್ಟ ಕಾನೂನುಗಳ ಅಡಿಯಲ್ಲಿನ ಅನುಸರಣೆಯನ್ನು ಕಂಪನಿ ಒದಗಿಸಿರುವ ಅನ್ವಯವಾಗುವ ಕಾನೂನುಗಳ ಪಟ್ಟಿಯ ಆಧಾರದ ಮೇಲೆ ಪರಿಶೀಲಿಸಲಾಗಿದೆ.

ಕಾರ್ಪೋರೇಟ್ ಮತ್ತು ಇತರೆ ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳ ಗುಣಮಟ್ಟಗಳ ಉಪಬಂಧಗಳನ್ನು ಅನುಸರಿಸುವುದು ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ಪರೀಕ್ಷಾರ್ಥ ಆಧಾರದ ಮೇಲೆ ಕ್ರಮಾನುಸರಣೆಯನ್ನು ಪರಿಶೀಲುಸುವುದಕ್ಕೆ ಮಾತ್ರ ನಮ್ಮ ಪರೀಕ್ಷೆ ಸೀಮಿತವಾಗಿರುವುದು.

ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿಯು ಕಂಪನಿಯ ಮುಂದಿನ ಅಸ್ತಿತ್ವದ ಬಗ್ಗೆಯಾಗಲಿ ಅಥವಾ ಕಂಪನಿಯ ವ್ಯವಹಾರಗಳನ್ನು ಆಡಳಿತ ವರ್ಗ ನಡೆಸಿರುವ ಸಾಮರ್ಥ್ಯ ಮತ್ತು ಪರಿಣಾಮದ ಬಗ್ಗೆಯಾಗಲಿ ಭರವಸೆ ನೀಡುವುದಾಗಿರುವುದಿಲ್ಲ.

**ಎಸ್.ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್** ಪರವಾಗಿ,

ಸಹಿ/-

**ಎಸ್.ಕೇದಾರ್‌ನಾಥ್**

**ಕಂಪನಿ ಕಾರ್ಯದರ್ಶಿ**

**ಸಿ.ಪಿ. ನಂ.4422**

**ದಿನಾಂಕ:16ನೇ ನವೆಂಬರ್ 2018**

**ಸ್ಥಳ: ಬೆಂಗಳೂರು**

## ಫಾರಂ ಎಒಸಿ-1

## ಸಹಾಯಕ ಕಂಪನಿಗಳು/ಸಹವರ್ತಿ ಕಂಪನಿಗಳು/ಸಹಭಾಗಿ ಉದ್ಯಮಗಳ ಹಣಕಾಸು ಹೇಳಿಕೆಗಳ ವೈಶಿಷ್ಟ್ಯತೆಯನ್ನು ಒಳಗೊಂಡ ವಿವರ

### ಭಾಗ ಎ : ಸಹಾಯಕ ಕಂಪನಿಗಳು

| ಕ್ರ. ಸಂ. | ಸಹಾಯಕ ಕಂಪನಿ ಹೆಸರು | ವರದಿ ಅವಧಿ | ವರದಿಯಲ್ಲಿ ಬಳಸಿರುವ ಕರೆನ್ಸಿ | ಷೇರು ಬಂಡವಾಳ (ಆದ್ಯತಾ ಷೇರು ಸೇರಿ) | ಮೀಸಲುಗಳು ಮತ್ತು ಹೆಚ್ಚಳಗಳು | ಒಟ್ಟು ಆಸ್ತಿ | ಒಟ್ಟು ಹೊಣೆಗಾರಿಕೆಗಳು (ಷೇರು ಬಂಡವಾಳ ಮತ್ತು ಮೀಸಲು ಹೊರತುಪಡಿಸಿ) | ಹೂಡಿಕೆಗಳು | ವಹಿವಾಟು | ಇತರೆ ಆದಾಯ | ಒಟ್ಟು ಆದಾಯ | ತೆರಿಗೆಗೆ ಮುಂಚಿನ ಲಾಭ/ ನಷ್ಟ | ತೆರಿಗೆಗಾಗಿ ಮುನ್ನೇರ್ಪಾಡು (ಮುಂದೂಡಿದ ತೆರಿಗೆ ಸೇರಿ) | ತೆರಿಗೆ ನಂತರದ ಲಾಭ/(ನಷ್ಟ) | ಈಕ್ವಿಟಿ ಷೇರುಗಳ ಮೇಲೆ ಉದ್ದೇಶಿತ ಲಾಭಾಂಶ ಶೇ. | ಈಕ್ವಿಟಿ ಷೇರುಗಳ ಮೇಲೆ ಪ್ರಸ್ತಾಪಿತ ಲಾಭಾಂಶ | ಷೇರುದಾರಿಕೆ ಶೇಕಡವಾರು |
|---|---|---|---|---|---|---|---|---|---|---|---|---|---|---|---|---|---|
| 1 | ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | 31.03.2018 | ಭಾರತದ ರೂಪಾಯಿ | 357.25 | 11749.89 | 12107.14 | 12654.72 | - | 36852.79 | 387.21 | 37240.00 | 3371.53 | 1329.23 | 2042.30 | - | - | 100% |
| 2 | ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | 31.03.2018 | ಭಾರತದ ರೂಪಾಯಿ | 75.74 | (850.91) | 131.05 | 981.96 | - | - | 6.72 | 6.72 | 3.43 | 0.91 | 2.52 | - | - | 95.10% |

## 2018ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷಕ್ಕಾಗಿ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು ಇದರ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆ 2013ರ ಕಂಪನಿಗಳ ಕಾಯ್ದೆಯ ಪ್ರಕರಣ 143(6)(ಬಿ)ರ ಅನ್ವಯ ಭಾರತದ ಕಂಪ್ರ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆಗಳು

2013ರ ಕಂಪನಿಗಳ ಕಾಯ್ದೆಯಡಿಯಲ್ಲಿ (ಕಾಯ್ದೆ) ನಿಗದಿಪಡಿಸಿರುವ ಹಣಕಾಸು ವರದಿ ಚೌಕಟ್ಟಿನ ಅನುಸಾರ **31ನೇ ಮಾರ್ಚ್ 2018ಕ್ಕೆ** ಕೊನೆಗೊಂಡ ವರ್ಷಕ್ಕೆ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು** ಇದರ ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಯು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪ್ರಕರಣ 139(5)ರನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಇವರಿಂದ ನೇಮಕಗೊಂಡ ಲೆಕ್ಕಪರಿಶೋಧಕರು/ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆಯ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕಪರಿಶೋಧನೆ ಬಗ್ಗೆಗಿನ ಗುಣಮಟ್ಟದ ಅನುಸಾರ ಸ್ವತಂತ್ರ ಲೆಕ್ಕಪರಿಶೋಧನೆ ಆಧಾರದ ಮೇಲೆ, ಕಾಯ್ದೆಯ ಪ್ರಕರಣ 143ರ ಅನ್ವಯ ಸದರಿ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಹೊಣೆಯಾಗಿರುತ್ತಾರೆ. **ದಿನಾಂಕ 11ನೇ ಡಿಸೆಂಬರ್ 2018ರ** ಅವರ ಪರಿಷ್ಕೃತ ಲೆಕ್ಕಪರಿಶೋಧನೆ ವರದಿಯಂತೆ ಅವರಿಂದ ಇದನ್ನು ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ. ಸದರಿ ವರದಿಯು ದಿನಾಂಕ 16ನೇ ನವೆಂಬರ್ 2018ರ ನಮ್ಮ ಈ ಮೊದಲಿನ ಲೆಕ್ಕಪರಿಶೋಧನೆ ವರದಿಯನ್ನು ರದ್ದು ಮಾಡಿರುವುದು.

ಭಾರತದ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಪರವಾಗಿ, ನಾನು **31ನೇ ಮಾರ್ಚ್ 2018**ಕ್ಕೆ ಕೊನೆಗೊಂಡ ವರ್ಷದ **''ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು''**ನ ಹಣಕಾಸು ಹೇಳಿಕೆಗಳ ಕಾಯ್ದೆಯ ಸೆಕ್ಷನ್ 143(6)(ಎ) ಅಡಿಯಲ್ಲಿ ಪೂರಕ ಲೆಕ್ಕಪರಿಶೋಧನೆ ಮಾಡಿದ್ದೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಾಚರಣೆ ಕಾಗದ ಪತ್ರಗಳನ್ನು ಬಳಸದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನಿಯ ಸಿಬ್ಬಂದಿ ವಿಚಾರಣೆಗಳಿಗೆ ಮತ್ತು ಕೆಲವು ಆಯ್ದ ಲೆಕ್ಕಪತ್ರಗಳ ದಾಖಲೆಗಳ ಪರಿಶೀಲನೆಗೆ ಸೀಮಿತವಾಗಿರುತ್ತದೆ.

ಪೂರಕ ಲೆಕ್ಕಪರಿಶೋಧನೆ ಅವಧಿಯಲ್ಲಿ ತಿಳಿಸಿದ ನನ್ನ ಕೆಲವು ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಒತ್ತು ನೀಡಲು 'ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯಲ್ಲಿ ಮಾಡಿರುವ ಪರಿಷ್ಕರಣೆಗಳ ಹಿನ್ನೆಲೆಯಲ್ಲಿ ಇದರ ಮೇಲೆ ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಪೂರಕವಾಗಿ ಕಾಯ್ದೆಯ ಪ್ರಕರಣ 143(6)(ಬಿ) ಅನ್ವಯ ನಾನು ಯಾವುದೇ ಹೆಚ್ಚಿನ ಟೀಕೆಗಳನ್ನು ಮಾಡುವುದಿಲ್ಲ.

**ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ**
**ಪರವಾಗಿ ಮತ್ತು ಹೆಸರಿನಲ್ಲಿ**
**ಸಹಿ/-**
**(ಬಿಜಿತ್ ಕುಮಾರ್ ಮುಖರ್ಜಿ)**
**ಅಕೌಂಟೆಂಟ್ ಜನರಲ್**
**(ಆರ್ಥಿಕ ಮತ್ತು ಕಂದಾಯ ವಲಯ ಆಡಿಟ್)**
**ಕರ್ನಾಟಕ, ಬೆಂಗಳೂರು**

**ಬೆಂಗಳೂರು**
**ದಿನಾಂಕ : 12.12.2018**

# ಹತ್ತು ವರ್ಷಗಳ ಸಾಧನೆ

## ಹತ್ತು ವರ್ಷಗಳ ಹಣಕಾಸಿನ ಮುಖ್ಯಾಂಶಗಳು

(ರೂ.ಲಕ್ಷಗಳಲ್ಲಿ)

| | 2008-09 | 2009-10 | 2010-11 | 2011-12 | 2012-13 | 2013-14 | 2014-15 | 2015-16 | 2016-17 | 2017-18 |
|---|---|---|---|---|---|---|---|---|---|---|
| ನಿವ್ವಳ ಮೌಲ್ಯ | 15440.12 | 15737.73 | 16166.68 | 18412.05 | 20637.85 | 23701.53 | 26814.97 | 30051.70 | 33480.22 | **34896.72** |
| ಸಂದಾಯಿತ ಬಂಡವಾಳ | 366.23 | 366.23 | 366.23 | 366.23 | 366.23 | 2017.66 | 2017.66 | 2017.66 | 2017.66 | **4273.48** |
| ಷೇರು ಅರ್ಜಿ ಹಣ | 2397.76 | 2780.96 | 2780.96 | 3907.25 | 3907.25 | 2255.82 | 2255.82 | 2255.82 | 2255.82 | **-** |
| ಮೀಸಲು ಮತ್ತು ಹೆಚ್ಚಳ | 12676.13 | 12590.54 | 13019.49 | 14138.57 | 16364.37 | 19428.05 | 22541.49 | 25778.22 | 29206.74 | **30623.24** |
| ಬ್ಯಾಂಕ್‌ಗಳಿಂದ ಪಡೆದ ಸಾಲಗಳು | 402.90 | - | - | - | - | - | - | - | - | **-** |
| ನಿವ್ವಳ ಸ್ಥಿರಾಸ್ತಿಗಳು | 2160.38 | 3249.19 | 3999.03 | 4071.36 | 4097.95 | 4221.84 | 5624.66 | 5626.25 | 6225.01 | **6974.83** |
| ವಹಿವಾಟು | 26487.56 | 28637.27 | 50897.06 | 71749.54 | 97828.66 | 120066.32 | 146039.32 | 151490.75 | 161407.69 | **178875.91** |
| ತೆರಿಗೆಗೆ ಮುಂಚಿನ ಲಾಭ | (471.77) | (420.32) | 831.09 | 3160.37 | 3528.05 | 4660.26 | 6052.27 | 5400.50 | 5699.87 | **2361.49** |
| ಲಾಭಾಂಶ | - | - | - | - | 10% | 10% | 10% | 10% | 10% | **-** |
| ತೆರಿಗೆ ನಂತರದ ಪ್ರತಿ ಷೇರಿನ ನಿವ್ವಳ ಗಳಿಕೆ (ರೂ.ಗಳಲ್ಲಿ) | (147.00) | (23.00) | 146.00 | 755.35 | 625.69 | 162.96 | 166.36 | 178.71 | 181.68 | **33.15** |
| ಪ್ರತಿ ಷೇರಿನ ನಿವ್ವಳ ಮೌಲ್ಯ (ರೂ.ಗಳಲ್ಲಿ) | 4215.96 | 4297.23 | 4414.35 | 3960.57 | 4568.33 | 1062.90 | 1217.21 | 1377.63 | 1547.56 | **816.59** |

## ಹತ್ತು ವರ್ಷಗಳ ಸಂಕ್ಷಿಪ್ತ ಲಾಭ ಮತ್ತು ನಷ್ಟದ ಲೆಕ್ಕ

(ರೂ.ಲಕ್ಷಗಳಲ್ಲಿ)

| | 2008-09 | 2009-10 | 2010-11 | 2011-12 | 2012-13 | 2013-14 | 2014-15 | 2015-16 | 2016-17 | 2017-18 |
|---|---|---|---|---|---|---|---|---|---|---|
| ವಹಿವಾಟು | 26487.56 | 28637.27 | 50897.06 | 71749.54 | 97828.66 | 120066.32 | 146039.32 | 151490.75 | 161407.69 | **178875.91** |
| ಒಟ್ಟು ಆದಾಯ | 5604.82 | 3795.04 | 4946.44 | 8204.97 | 10751.19 | 12325.68 | 14919.86 | 15490.81 | 16453.84 | **15761.63** |
| ಮಾರಾಟ ಮತ್ತು ಆಡಳಿತಾತ್ಮಕ ವೆಚ್ಚಗಳು | 5012.49 | 2495.37 | 3830.23 | 6105.53 | 6646.46 | 6965.11 | 8923.90 | 9636.88 | 10433.61 | **12924.60** |
| ಬಡ್ಡಿ | 41.38 | 26.93 | 26.05 | 28.78 | 51.58 | 30.76 | 48.68 | 145.35 | 2.44 | **0.90** |
| ಸವಕಳಿ | 194.66 | 110.45 | 131.75 | 229.07 | 245.46 | 280.77 | 291.01 | 255.39 | 285.21 | **341.85** |
| ಮುನ್ನೇರ್ಪಾಡು/ವಜಾ | 828.06 | 1582.61 | 233.86 | 328.48 | 302.75 | 399.05 | 47.72 | 91.36 | 50.60 | **132.79** |
| **ಒಟ್ಟು** | **6076.59** | **4215.36** | **4221.89** | **6691.86** | **7246.25** | **7675.69** | **9311.31** | **10128.98** | **10771.86** | **13400.14** |
| ತೆರಿಗೆಗೆ ಮುಂಚಿನ ಲಾಭ | (471.77) | (420.32) | 724.55 | 1513.11 | 3504.94 | 4649.99 | 5608.55 | 5361.83 | 5681.98 | **2361.49** |
| ತೆರಿಗೆಗೆ ಮುನ್ನೇರ್ಪಾಡು | 12.86 | - | - | 1080.78 | 1313.16 | 1372.76 | 2252.67 | 1923.22 | 1978.80 | **939.77** |
| ಮುಂದೂಡಲಾದ ತೆರಿಗೆ ಸಾಲ | 128.60 | 334.73 | (295.60) | (686.75) | (76.58) | (20.96) | (0.62) | (167.21) | 37.48 | **5.22** |
| ತೆರಿಗೆ ನಂತರದ ಲಾಭ | (356.03) | (85.59) | 428.95 | 1119.08 | 2268.36 | 3298.19 | 3356.50 | 3605.82 | 3665.70 | **1416.50** |

MSIL

## ಹತ್ತು ವರ್ಷಗಳ ಸಂಕ್ಷಿಪ್ತ ಸ್ಥಿತಿ ವಿವರಣಾ ಪಟ್ಟಿ

(ರೂ.ಲಕ್ಷಗಳಲ್ಲಿ)

| | 2008-09 | 2009-10 | 2010-11 | 2011-12 | 2012-13 | 2013-14 | 2014-15 | 2015-16 | 2016-17 | 2017-18 |
|---|---|---|---|---|---|---|---|---|---|---|
| **ಸ್ವಂತ ನಿಧಿಗಳು** | | | | | | | | | | |
| ಷೇರು ಬಂಡವಾಳ | 366.23 | 366.23 | 366.23 | 366.23 | 366.23 | 2017.66 | 2017.66 | 2017.66 | 2017.66 | **4273.48** |
| ಷೇರು ಅರ್ಜಿ ಹಣ | 2397.76 | 2780.96 | 2780.96 | 3907.25 | 3907.25 | 2255.82 | 2255.82 | 2255.82 | 2255.82 | **-** |
| ಮೀಸಲು ಮತ್ತು ಹೆಚ್ಚಳ | 12676.12 | 12590.54 | 13019.49 | 14138.57 | 16364.37 | 19428.05 | 22541.49 | 25778.22 | 29206.74 | **30623.24** |
| **ಒಟ್ಟು** | **15440.11** | **15737.73** | **16166.68** | **18412.05** | **20637.85** | **23701.53** | **26814.97** | **30051.70** | **33480.22** | **34896.72** |
| **ಸಾಲ ನಿಧಿಗಳು** | | | | | | | | | | |
| ಅಲ್ಪಾವಧಿ ಸಾಲ | 1601.23 | 784.45 | 753.05 | 77.42 | 53.88 | 53.88 | 53.88 | 53.88 | 53.88 | **53.88** |
| ನಿಧಿಗಳ ಹೂಡಿಕೆ | 1601.23 | 784.45 | 753.05 | 77.42 | 53.88 | 53.88 | 53.88 | 53.88 | 53.88 | **53.88** |
| ಮುಂದೂಡಿದ ತೆರಿಗೆ ಹೊಣೆಗಾರಿಕೆ (ನಿವ್ವಳ) | - | - | - | - | - | - | - | **-** | - | - |
| **ಒಟ್ಟು** | **17041.34** | **16522.18** | **16919.73** | **18489.47** | **20691.73** | **23755.41** | **26868.85** | **30105.58** | **33534.10** | **34950.60** |
| **ನಿಧಿಗಳ ಉಪಯೋಗ** | | | | | | | | | | |
| ಸ್ಥಿರಾಸ್ತಿಗಳು | 2160.38 | 3249.19 | 3999.03 | 4071.36 | 4097.95 | 4221.84 | 5624.66 | 5626.25 | 6225.01 | **6974.83** |
| ಹೂಡಿಕೆಗಳು | 1336.06 | 1336.06 | 1336.06 | 1336.06 | 1336.06 | 1336.06 | 1336.06 | 1336.51 | 1346.00 | **1345.98** |
| ಮುಂದೂಡಿದ ತೆರಿಗೆ ಆಸ್ತಿ (ನಿವ್ವಳ) | 22.58 | 357.31 | 61.71 | 748.46 | 825.04 | 846.00 | 846.62 | 1013.83 | 976.35 | **971.13** |
| ದುಡಿಮೆ ಬಂಡವಾಳ | 13522.3 | 11579.61 | 11522.93 | 12333.59 | 14432.68 | 17351.51 | 19061.51 | 22128.99 | 24986.74 | **25658.66** |
| **ಒಟ್ಟು** | **17041.34** | **16522.17** | **16919.73** | **18489.47** | **20691.73** | **23755.41** | **26868.85** | **30105.58** | **33534.10** | **34950.60** |

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

## 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಕ್ರೋಢೀಕೃತ ಲೆಕ್ಕಗಳು

## ಸ್ವತಂತ್ರ ಲೆಕ್ಕಪರಿಶೋಧಕರ ಪರಿಷ್ಕೃತ ವರದಿ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**

**ಸದಸ್ಯರುಗಳಿಗೆ**

**ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ ಮೇಲಿನ ವರದಿ**

ನಾವು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ (ಇಲ್ಲಿ ಇದನ್ನು ಇನ್ನು ಮುಂದೆ 'ಧಾರಕ ಕಂಪನಿ' ಎಂಬುದಾಗಿ ಪ್ರಸ್ತಾಪಿಸಲಾಗುವುದು) ಇದರೊಡನಿರುವ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳು ಮತ್ತು ಇದರ ಸಹಾಯಕ ಸಂಸ್ಥೆಗಳ (ಧಾರಕ ಕಂಪನಿ ಮತ್ತು ಇದರ ಸಹಾಯಕ ಸಂಸ್ಥೆಗಳನ್ನು ಒಟ್ಟಾಗಿ 'ಗ್ರೂಪ್' ಎಂಬುದಾಗಿ ಪ್ರಸ್ತಾಪಿಸಲಾಗಿದೆ), ಮತ್ತು ಇದರ ಸಹವರ್ತಿ ಕಂಪನಿಯ, 31ನೇ ಮಾರ್ಚ್ 2018ರಂದು ಇದ್ದಂತಹ ಕ್ರೋಡೀಕೃತ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ (ಇತರೆ ಸಮಗ್ರ ಆದಾಯ ಒಳಗೊಂಡಂತೆ) ಕ್ರೋಡೀಕೃತ ವಿವರ, ಈ ಅವಧಿಗೆ ಕೊನೆಗೊಂಡ ವರ್ಷದ ಕ್ರೋಡೀಕೃತ ನಗದು ಹರಿವಿನ ವಿವರ, ಸದರಿ ದಿನಾಂಕದಂದು ಇದ್ದಂತೆ ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿಗಳ (ಇದನ್ನು ಇಲ್ಲಿ ಇನ್ನು ಮುಂದೆ "ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ" ಎಂಬುದಾಗಿ ಪ್ರಸ್ತಾಪಿಸಲಾಗುವುದು) ಲೆಕ್ಕ ಪರೀಶೋಧನೆ ಮಾಡಿದ್ದೇವೆ ಮತ್ತು ದಿನಾಂಕ:16ನೇ ನವೆಂಬರ್ 2018ರಂದು ನಮ್ಮ ವರದಿ ಸಲ್ಲಿಸಿದ್ದೇವು. ತದನಂತರ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅಭಿಪ್ರಾಯದ ಹಿನ್ನೆಲೆಯ್ಲಲಿ ಲೆಕ್ಕ ಪರಿಶೋಧನಾ ವರದಿಯನ್ನು ಪರಿಷ್ಕರಿಸಲಾಗಿದೆ. ಹಾಗಾಗಿ ಸದರಿ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯು ನಮ್ಮ ಈ ಮೊದಲಿನ ದಿನಾಂಕ 16ನೇ ನವೆಂಬರ್ 2018ರ ವರದಿಯನ್ನು ರದ್ದುಗೊಳಿಸಿದೆ.

**ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿ ಹೊಂದಿರುವ ಜವಾಬ್ದಾರಿ:**

ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ನಿಯಮಗಳು, 2015 (ತಿದ್ದುಪಡಿಯಾದಂತೆ) ಒದಿಕೊಂಡಂತೆ, ಕಾಯ್ದೆಯ ಪ್ರಕರಣ 133ರ ಅನ್ವಯ ನಿಗದಿಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು (Ind AS) ಸೇರಿದಂತೆ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಆದರ ಸಹವರ್ತಿ ಕಂಪನಿಯು ಸೇರಿದಂತೆ 'ಗ್ರೂಪ್' ನ ಕ್ರೋಡೀಕೃತ ಹಣಕಾಸಿನ ಸ್ಥಿತಿ, ಕ್ರೋಡೀಕೃತ ಹಣಕಾಸಿನ ಕಾರ್ಯಕ್ಷಮತೆ (ಇತರೆ ಸಮಗ್ರ ಆದಾಯ ಸೇರಿದಂತೆ) ಕ್ರೋಡೀಕೃತ ನಗದು ಹರಿವಿನ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಸದರಿ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳನ್ನು ಕಂಪನಿಗಳ ಕಾಯ್ದೆ, 2013ರ (ಇದನ್ನು ಇಲ್ಲಿ ಮುಂದೆ 'ಕಾಯ್ದೆ' ಎಂಬುದಾಗಿ ಪ್ರಸ್ತಾಪಿಸಲಾಗುವುದು) ಅಗತ್ಯತೆ ಅನುಸಾರ ಸಿದ್ಧಪಡಿಸುವುದು ಧಾರಕ ಕಂಪನಿಯ ನಿರ್ದೇಶಕರ ಮಂಡಳಿಯ ಜವಾಬ್ದಾರಿಯಾಗಿರುವುದು.

'ಗ್ರೂಪ್' ಮತ್ತು ಇದರ ಸಹವರ್ತಿ ಕಂಪನಿಯ ಆಸ್ತಿಗಳನ್ನು ಸುರಕ್ಷತೆ ಮಾಡಲು ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಪ್ರಮಾಣದಲ್ಲಿ ಲೆಕ್ಕ ನಿರ್ವಹಣೆ ದಾಖಲೆಗಳನ್ನು ನಿರ್ವಹಣೆ ಮಾಡಲು, ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು; ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡಲು ಮತ್ತು ಅವುಗಳನ್ನು ಅನ್ವಯಿಸಲು, ಸೂಕ್ತವಾದ ಮತ್ತು ನ್ಯಾಯಸಮ್ಮತವಾದ ತೀರ್ಮಾನಗಳನ್ನು ಮತ್ತು ಅಂದಾಜುಗಳನ್ನು ಮಾಡಲು; ಮತ್ತು ಮೇಲೆ ತಿಳಿಸಿರುವಂತೆ ಧಾರಕ ಕಂಪನಿಯ ನಿರ್ದೇಶಕರು ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುವ, ವಂಚನೆ ಅಥವಾ ತಪ್ಪಿನಿಂದಾಗಿ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವ ಮತ್ತು ನೈಜ ಮತ್ತು ನ್ಯಾಯಸಮ್ಮತ ಚಿತ್ರಣ ನೀಡುವ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸಲು ಮತ್ತು ನಿರೂಪಣೆ ಮಾಡಲು ಸಮ್ಮತವಾದ ಲೆಕ್ಕ ನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಬಗ್ಗೆ ಖಾತರಿಪಡಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುವ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಗೆ 'ಗ್ರೂಪ್' ಮತ್ತು ಇದರ ಸಹವರ್ತಿ ಕಂಪನಿಯಲ್ಲಿ ಒಳಗೊಂಡಿರುವ ಕಂಪನಿಗಳ ನಿರ್ದೇಶಕರುಗಳ ಸಂಬಂಧಪಟ್ಟ ಮಂಡಳಿಯು ಜವಾಬ್ದಾರಿಯಾಗಿರುವುದು.

**ಲೆಕ್ಕ ಪರಿಶೋಧಕರ ಜವಾಬ್ದಾರಿ:**

ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಸದರಿ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯ ಒಂದನ್ನು ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ನಮ್ಮ ಲೆಕ್ಕ ಪರಿಶೋಧನೆ ನಡೆಸಲು ನಾವು ಕಾಯ್ದೆಯ ಉಪಬಂಧಗಳು, ಲೆಕ್ಕ ನಿರ್ವಹಣೆ ಮತ್ತು ಲೆಕ್ಕ ಪರಿಶೋಧನೆ ಗುಣಮಟ್ಟಗಳು ಮತ್ತು ಕಾಯ್ದೆಯ ಉಪಬಂಧಗಳು ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳ ಅನ್ವಯ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕಾದ ವಿಚಾರಗಳನ್ನು ನಾವು ಗಣನೆಗೆ ತೆಗೆದುಕೊಂಡಿದ್ದೇವೆ.

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

ನಾವು ನಮ್ಮ ಲೆಕ್ಕಪರಿಶೋಧನಾ ಕಾರ್ಯವನ್ನು ಕಾಯ್ದೆಯ ಸೆಕ್ಷನ್ 143(10) ರ ಅಡಿಯಲ್ಲಿ ನಿಗದಿಪಡಿಸಿರುವ ಲೆಕ್ಕಪರಿಶೋಧನೆಯ ಗುಣಮಟ್ಟಗಳ ಅನುಸಾರ ನಡೆಸಿದ್ದೇವೆ. ಈ ಗುಣಮಟ್ಟದ ಅನುಸಾರ ನಾವು ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟದ ಹಣಕಾಸಿನ ಹೇಳಿಕೆಗಳು ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ನೈಜವಾಗಿರುವುವು ಎಂಬುದರ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಬೇಕಾಗುವುದು ಮತ್ತು ಲೆಕ್ಕಪರಿಶೋಧನೆ ನಡೆಸುವ ಬಗ್ಗೆ ಯೋಜನೆ ಮಾಡಬೇಕು ಹಾಗೂ ಲೆಕ್ಕಪರಿಶೋಧನೆ ನಡೆಸಬೇಕಾಗುವುದು.

ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳಲ್ಲಿನ ಮೊತ್ತಗಳು ಮತ್ತು ಪ್ರಕಟಣೆಗಳ ಬಗ್ಗೆ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ನಡೆಸುವ ಕಾರ್ಯವು ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ವಂಚನೆ ಅಥವಾ ತಪ್ಪಿನಿಂದಾಗಿ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಯ ಅಪಾಯಗಳನ್ನು ನಿರ್ಧರಣೆ ಮಾಡುವುದೂ ಸೇರಿದಂತೆ, ಲೆಕ್ಕಪರಿಶೋಧಕರ ತೀರ್ಮಾನದ ಆಧಾರದ ಮೇಲೆ ಕ್ರಮಾವಳಿಗಳನ್ನು ಆಯ್ಕೆ ಮಾಡಲಾಗಿದೆ. ಅಂತಹ ಅಪಾಯಗಳ ನಿರ್ಧರಣೆ ಮಾಡುವಲ್ಲಿ ಸಂಸ್ಥೆಯ ಆಂತರಿಕ ನಿಯಂತ್ರಣಗಳ ಪರಿಣಾಮದ ಬಗ್ಗೆ ಅಭಿಪ್ರಾಯ ತಿಳಿಸುವ ಉದ್ದೇಶಕ್ಕಲ್ಲದೆ, ಆ ಸಂದರ್ಭಗಳಲ್ಲಿ ಸೂಕ್ತವಾದ ಲೆಕ್ಕಪರಿಶೋಧನಾ ಕ್ರಮಾವಳಿಗಳನ್ನು ವಿನ್ಯಾಸ ಮಾಡಲು ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳನ್ನು ಧಾರಕ ಕಂಪನಿಯು ಸಿದ್ಧಪಡಿಸಲು ಮತ್ತು ಅವುಗಳನ್ನು ನ್ಯಾಯೋಚಿತವಾಗಿ ನಿರೂಪಣೆ ಮಾಡಲು ಅನುರೂಪವಾದ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಲೆಕ್ಕಪರಿಶೋಧಕರು ಪರಿಗಣಿಸುವರು. ಅನುಸರಿಸಿರುವ ಲೆಕ್ಕ ನಿರ್ವಹಣೆ ನೀತಿಗಳ ಸೂಕ್ತಾಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದು ಮತ್ತು ಧಾರಕ ಕಂಪನಿಯ ನಿರ್ದೇಶಕರ ಮಂಡಳಿ ಮಾಡಿರುವ ಲೆಕ್ಕ ನಿರ್ವಹಣೆ ಅಂದಾಜುಗಳ ಸೂಕ್ತತೆ ಬಗ್ಗೆ ಮೌಲ್ಯ ಮಾಪನ ಮಾಡುವುದು ಹಾಗೂ ಕ್ರೋಡೀಕೃತ ಭಾರತೀಯ ಹಣಕಾಸು ನಿರ್ವಹಣೆ ಮಾನದಂಡದ ಹಣಕಾಸಿನ ಹೇಳಿಕೆಗಳ ಸಮಗ್ರ ನಿರೂಪಣೆಯ ಮೌಲ್ಯಮಾಪನ ಮಾಡುವುದೂ ಲೆಕ್ಕ ಪರಿಶೋಧನಾ ಕಾರ್ಯದಲ್ಲಿ ಒಳಗೊಂಡಿರುವುದು.

ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆ ಮತ್ತು ಕೆಳಗಿನ ಇತರೆ ವಿಚಾರಗಳ ಪ್ಯಾರಾಗ್ರಾಫ್‌ನ ಉಪ ಪ್ಯಾರಾಗ್ರಾಫ್‌ನಲ್ಲಿ ತಿಳಿಸಿರುವ ಅವರ ವರದಿಯ ಅನ್ವಯ ಇತರೆ ಲೆಕ್ಕ ಪರಿಶೋಧಕರು ಪಡೆದಿರುವ ಲೆಕ್ಕಪರಿಶೋಧನಾ ಪುರಾವೆಯು, ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ ಬಗ್ಗೆ ನಮ್ಮ ಅರ್ಹತಾ ಲೆಕ್ಕಪರಿಶೋಧನಾ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟು ಪ್ರಮಾಣದ್ದಾಗಿರುವುದು ಮತ್ತು ಸೂಕ್ತವಾಗಿರುವುದು.

**ಅರ್ಹತಾ ಅಭಿಪ್ರಾಯ ತಿಳಿಸಲು ಇರುವ ಆಧಾರ**

ಕೆಳಗೆ ತಿಳಿಸಿರುವುದು ಹೊರತುಪಡಿಸಿ, ಕಾಯ್ದೆಯ ಪ್ರಕರಣ 133ರ ಅನ್ವಯ, ಇದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಗಳನ್ನು ಓದಿಕೊಂಡಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ (Ind AS) ರ ಅನುಸಾರ ಕಂಪನಿ ಸಿದ್ಧಪಡಿಸಿರುವಂತೆ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳು–

ಎ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 1 ''ಹಣಕಾಸು ಹೇಳಿಕೆಗಳ ನಿರೂಪಣೆ'' – ಇತರೆ ಈಕ್ವಿಟಿಯಲ್ಲಿನ ಬದಲಾವಣೆಗಳ ವಿವರಗಳ ಪ್ರಕಟಣೆ, ಕಂಪನಿಯಿಂದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 1ರ ಮೇಲೆ ತಿಳಿಸಿರುವ ನಿಬಂಧನೆಗಳ ಅನ್ವಯ ಕಂಪನಿಯಿಂದ ಸಿದ್ಧಪಡಿಸಬೇಕಾಗಿದ್ದ ಹಣಕಾಸಿನ ಹೇಳಿಕೆಗಳಲ್ಲಿ ಒಂದನ್ನು ಕಂಪನಿ ಸಿದ್ಧಪಡಿಸಿರುವುದಿಲ್ಲ.

ಬಿ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 8– ''ಲೆಕ್ಕ ನಿರ್ವಹಣೆ ನೀತಿಗಳು, ಲೆಕ್ಕ ನಿರ್ವಹಣೆ ಅಂದಾಜುಗಳಲ್ಲಿ ಬದಲಾವಣೆಗಳು ಮತ್ತು ತಪ್ಪುಗಳು'' – ಹೊರಡಿಸಿರುವ ಆದರೆ ಇನ್ನೂ ಜಾರಿಗೊಳಿಸದಿರುವ ಹೊಸ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 115ರ ಬಗ್ಗೆ ಮತ್ತು ಮೊದಲಬಾರಿಗೆ ಅನ್ವಯವಾಗಿರುವುದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಅದರಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸುವಿಕೆ ಅಗತ್ಯತೆಯನ್ನು ಪಾಲಿಸಿರುವುದಿಲ್ಲ.

ಸಿ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 37 ''ಅವಕಾಶಗಳು, ಅನುಷಂಗಿಕ ಹೊಣೆಗಾರಿಕೆಗಳು ಮತ್ತು ಅನುಷಂಗಿಕ ಆಸ್ತಿ ಪ್ರಕಟಣೆಯು'' ಅಗತ್ಯತೆ ಅನುಸಾರ ಇರುವುದಿಲ್ಲ.

ಡಿ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 101 ''ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಮೊದಲಬಾರಿಗೆ ಅಳವಡಿಕೆಯು'' ಕೆಳಕಂಡವುಗಳು ಸೇರಿದಂತೆ ಅನುಸರಣೆ ಪ್ರಕಾರವಿರುವುದಿಲ್ಲ–

i) ಹಿಂದಿನ ಜಿಎಎಪಿ ಮತ್ತು ಅಧಿಸೂಚಿತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅನುಸಾರ ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟಕ್ಕೆ ವರ್ಗಾವಣೆಯಾದ ದಿನಾಂಕದಂದು ಮತ್ತು ಹಿಂದಿನ ಜಿಎಎಪಿ ಅನುಸಾರ ನಿರೂಪಿಸಿದ ಇತ್ತೀಚಿನ ಅವಧಿಯಲ್ಲಿ ಈಕ್ವಿಟಿಯ ಸಮಂಜಸತೆ ಸಿದ್ಧಪಡಿಸಿರುವಿಕೆ.

ii) ಸ್ವತ್ತು, ಸ್ಥಾವರ ಮತ್ತು ಉಪಕರಣದ ಐಟಂಗೆ, ಹಣ ಹೂಡಿಕೆ ಸ್ವತ್ತಿಗೆ ಅಥವಾ ಅಗೋಚರಿತ ಆಸ್ತಿಗೆ ಪರಿಭಾವಿತ ಬೆಲೆಯಾಗಿ ಕಂಪನಿಯು

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

ಐತಿಹಾಸಿಕ ಬೆಲೆಯನ್ನು ಅಳವಡಿಸಿಕೊಂಡಿದೆ. ಆದರೆ ಕಂಪನಿಯು ಅಗತ್ಯತೆ ಅನುಸಾರ ಅಳವಡಿಸಿಕೊಂಡಿರುವ ವಿಧಾನವನ್ನು ತಿಳಿಸಿರುವುದಿಲ್ಲ.

ಇ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 107 ''ಹಣಕಾಸಿನ ದಾಖಲೆಗಳ ಪ್ರಕಟಣೆ'' -ಹಣಕಾಸಿನ ದಾಖಲೆಗಳ ವರ್ಗೀಕರಣದ ಪ್ರಕಟಣೆಯು ಅಗತ್ಯತೆಗಳ ಅನ್ವಯ ಪರಿಪಾಲಿಸಬೇಕಾಗಿದ್ದ ರೀತಿಯಲ್ಲಿರುವುದಿಲ್ಲ.

ಎಫ್. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 108 ''ವರದಿ ಮಾಡಬೇಕಾಗಿರುವ ಪ್ರತಿ ವಿಭಾಗದ ಲಾಭ ಮತ್ತು ನಷ್ಟ/ಆಸ್ತಿ ಮತ್ತು ಹೊಣೆಗಾರಿಕೆಗಳ ವಿಭಾಗದ ವರದಿಗಾರಿಕೆ'' ಪ್ರಕಟಣೆ, ಭೌಗೋಳಿಕ ಮಾಹಿತಿ ಪ್ರಕಟಣೆ ಅಗತ್ಯತೆ ಅನುಸಾರ ಇರುವುದಿಲ್ಲ.

ಜಿ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 109 ''ಹಣಕಾಸಿನ ದಾಖಲೆಗಳು''-ಹಣಕಾಸಿನ ಸಾಧನಗಳ ಮಾನ್ಯ ಮಾಡುವಿಕೆ, ಅಳತೆ ಮಾಡುವಿಕೆ ಮತ್ತು ದುರ್ಬಲತೆ ಗಣನೆಯು ಅಗತ್ಯತೆ ಅನುಸಾರ ಇರುವುದಿಲ್ಲ.

ಎಚ್. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 7 ''ನಗದು ಹರಿವಿನ ಹೇಳಿಕೆಯ'' ಪ್ರಕಟಣೆಯು ಅಗತ್ಯತೆ ಅನುಸಾರ ಇರುವುದಿಲ್ಲ. ತೆರಿಗೆ ಪಾವತಿಗೆ ಮುನ್ನ ಲಾಭವು ರೂ.57,14,51,679/- ಇರುವುದಕ್ಕೆ ಎದುರಾಗಿ ನಗದು ಹರಿಯುವಿಕೆ ಹೇಳಿಕೆಯಲ್ಲಿ ಸದರಿ ವರ್ಷದ ಲಾಭವನ್ನು ರೂ.43,96,66,818/- ಅನ್ನು ಕಂಪನಿ ಮಾನ್ಯ ಮಾಡಿದೆ, ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಿರುವ ರೂ.13,17,84,861/-ರ ವ್ಯತ್ಯಾಸವನ್ನು ಗುರುತಿಸಿರುವುದಿಲ್ಲ. ಇದು ನಗದು ಹರಿಯುವಿಕೆ ಹೇಳಿಕೆಯಲ್ಲಿ, 31ನೇ ಮಾರ್ಚ್ 2018ರ ಅಂತ್ಯದಲ್ಲಿದ್ದಂತೆ ಗುರುತಿಸಿದ ನಗದು ಮತ್ತು ನಗದು ಸಮಾನತೆ ಮೇಲೆ ಪರಿಣಾಮ ಉಂಟು ಮಾಡುವುದು.

ಐ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 1''ಹಣಕಾಸಿನ ಹೇಳಿಕೆಯ ನಿರೂಪಣೆಯು'' ಕೆಳಕಂಡವುಗಳೂ ಸೇರಿದಂತೆ ಅನುಸರಣೆಯ ಅನುಸಾರ ಇರುವುದಿಲ್ಲ;

1. ಸ್ವರೂಪ ಮತ್ತು ಕಾರ್ಯದ ಆಧಾರದ ಖರ್ಚುಗಳ ವರ್ಗೀಕರಣ
2. ಐಟಂಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರ ಎಂಬುದಾಗಿ ವರ್ಗೀಕರಣ
3. ಮರು ವರ್ಗೀಕರಣ ಐಟಂಗಳ ಪ್ರಕಟಣೆ
4. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ ಅನುಸರಣೆ ಬಗ್ಗೆ ಸಮಾಪ್ತಿ ಮತ್ತು ಮೀಸಲು ರಹಿತ ಹೇಳಿಕೆ.

ಜೆ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 111 ''ಜಂಟಿ ವ್ಯವಸ್ಥೆಗಳ'' ಘೋಷಣೆಯು ಅಗತ್ಯತೆ ಅನುಸಾರ ಇರುವುದಿಲ್ಲ.

ಕೆ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 28 ''ಕಂಪನಿ ಸಹವರ್ತಿ ಮತ್ತು ಜಂಟಿ ಉದ್ಯಮಗಳಲ್ಲಿ ಮಾಡಿರುವ ಹೂಡಿಕೆಗಳ'' ಸಂಬಂಧ ಅನುಸರಿಸಿರುವ ಕ್ರೋಡೀಕರಣ ಕ್ರಮಾವಳಿ ಅಗತ್ಯತೆ ಅನುಸಾರ ಇರುವುದಿಲ್ಲ. ಸಹವರ್ತಿ ಕಂಪನಿಯ ಸಂಬಂಧದಲ್ಲಿ ಈಕ್ವಿಟಿ ವಿಧಾನಕ್ಕೆ ಬದಲಾಗಿ ಕಂಪನಿಯು ಸಾಲು ಸಾಲು ಕ್ರೋಡೀಕರಣ ವಿಧಾನ ಅನುಸರಿಸಿದೆ.

ಎಲ್. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 110 ''ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು'' ಕಂಪನಿಯು ಅನುಸರಿಸಿರುವ ಕ್ರೋಡೀಕರಣ ಕ್ರಮಾವಳಿಯನ್ನು ಲೆಕ್ಕಗಳ ಟಿಪ್ಪಣಿಯಲ್ಲಿ ತಿಳಿಸಿರುವುದಿಲ್ಲ.

ಆದ್ದರಿಂದಾಗಿ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳ ಮೇಲೆ ತಿಳಿಸಿರುವ ವಿಚಾರಗಳಿಂದ ಉಂಟಾಗಬಹುದಾದ ಪರಿಣಾಮಗಳನ್ನು ತಿಳಿಯಲಾಗುವುದಿಲ್ಲ.

ಎಂ. ದಿನಾಂಕ 31ನೇ ಮಾರ್ಚ್ 2018ರ ಅಂತ್ಯದಲ್ಲಿದ್ದಂತೆ ಇತರೆ ಸಮಗ್ರ ಆದಾಯದಲ್ಲಿನ ರೂ.1.77 ಕೋಟಿಗಳ ವಿಮಾಗಣನ ನಷ್ಟದ ಮಾನ್ಯ ಮಾಡಿರದ ಪ್ರಮಾಣದವರೆಗೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 19ಕ್ಕೆ ಅನುಗುಣವಾಗಿ ಗ್ರ್ಯಾಚ್ಯುಟಿಯ ವಿಮಾಗಣನ ಮೌಲ್ಯಮಾಪನ ಇರುವುದಿಲ್ಲ. ಇದರಿಂದ ನೌಕರರ ಸೌಲಭ್ಯ ಖರ್ಚುಗಳನ್ನು ರೂ.1.77 ಕೋಟಿಗಳಷ್ಟು ಅಧಿಕವಾಗಿ ತಿಳಿಸಲು ಮತ್ತು ಇತರೆ ಸಮಗ್ರ ಆದಾಯವನ್ನು ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ ತಿಳಿಸುವಂತಾಗಿದೆ. ಮುಂದುವರೆದಂತೆ, ಪರಿಷ್ಕೃತ ಗ್ರ್ಯಾಚ್ಯುಟಿ ಮಿತಿಯಲ್ಲಿ ಹೆಚ್ಚಳವಾಗಿರುವ ಪ್ರಯುಕ್ತ ಎಲ್‌ಐಸಿಯಿಂದ ರೂ.4.08 ಕೋಟಿ ಪಾವತಿ ಮಾಡುವಂತೆ ಬೇಡಿಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಗ್ರ್ಯಾಚ್ಯುಟಿಗೆ ವ್ಯವಸ್ಥೆಯನ್ನು ರೂ.4.08 ಕೋಟಿಗಳಷ್ಟು ಕಡಿಮೆಯಾಗಿ ತೋರಿಸಿದೆ ಮತ್ತು ವರ್ಷದ ಲಾಭವನ್ನು ಅಧಿಕವಾಗಿ ತೋರಿಸಿದೆ.

ಎನ್. ಎಲ್ಲಾ ವಿಭಾಗಗಳಿಗೆ ಸಂಬಂಧಿಸಿದಂತೆ ಕೆಲವು ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವ ಬಗ್ಗೆ, ಇತರೆ ಚಾಲ್ತಿ ಹೊಣೆಗಾರಿಕೆಗಳ ಬಗ್ಗೆ, ವ್ಯಾಪಾರದ ಸಂಬಂಧ ಬರಬೇಕಾಗಿರುವ ಬಗ್ಗೆ ಮತ್ತು ಮುಂಗಡಗಳು/ ವ್ಯಾಪಾರ ಸಂಬಂಧ ಠೇವಣಿಗಳ ಸಂಬಂಧ ಶಿಲ್ಕುಗಳ ಬಗ್ಗೆ ಸ್ಥಿರೀಕರಣ ಮಾಡಿಲ್ಲದ ಪ್ರಯುಕ್ತ ಲಾಭ/ನಷ್ಟ ಮತ್ತು ಆಸ್ತಿಗಳು/ಹೊಣೆಗಾರಿಕೆಗಳ ಮೇಲೆ ಸಮಂಜಸತೆಗಳನ್ನು ಮಾಡುವುದರಿಂದ ಉಂಟಾಗಬಹುದಾದ ಪರಿಣಾಮವನ್ನು ತಿಳಿಯಲಾಗದು.

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

ಓ. ಒಪ್ಪಂದದನ್ವಯ ಯೋಜನೆಯನ್ನು (ಕರ್ನಾಟಕ ಭವನ, ನವಿ ಮುಂಬಯಿ) ಕಾರ್ಯಗತಗೊಳಿಸುವುದರಲ್ಲಿ ಉಂಟಾಗಿರುವ ವಿಳಂಬಕ್ಕೆ ದಂಡವನ್ನು ವಿಧಿಸಿರುವುದಿಲ್ಲ. ತತ್ಪರಿಣಾಮವಾಗಿ ಇತರೆ ವರಮಾನ, ಲಾಭ, ತೆರಿಗೆಗೆ ವ್ಯವಸ್ಥೆ ಮತ್ತು ಚಾಲ್ತಿಯೇತರ ಆಸ್ತಿ-ಸಿಡಬ್ಲ್ಯೂಐಪಿ ಇವುಗಳನ್ನು ಅಧಿಕವಾಗಿ ತಿಳಿಸಿದೆ ಮತ್ತು ಇತರೆ ಚಾಲ್ತಿ ಆಸ್ತಿಯನ್ನು ಕಡಿಮೆಯಾಗಿ ತಿಳಿಸಿದೆ. ಇದರಿಂದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಪರಿಣಾಮದ ಪ್ರಮಾಣವನ್ನು ಗಣನೆ ಮಾಡಲು ನಮಗೆ ಸಾಧ್ಯವಾಗದು.

ಪಿ. ರಜೆಗೆ ನಗದು ನೀಡಿಕೆ ಅವಕಾಶವನ್ನು ವಿಮಾಗಣನ ಮೌಲ್ಯಮಾಪನ ವರದಿ ಅನುಸಾರ ಚಾಲ್ತಿ ಮತ್ತು ಚಾಲ್ತಿಯೇತರ ಏರ್ಪಾಡುಗಳ ಅನ್ವಯ ಸರಿಯಾಗಿ ವರ್ಗೀಕರಿಸಿರುವುದಿಲ್ಲ. ಇದರಿಂದ ಚಾಲ್ತಿ/ಚಾಲ್ತಿಯೇತರ ವ್ಯವಸ್ಥೆಗಳನ್ನು ಕಡಿಮೆಯಾಗಿ/ಅಧಿಕವಾಗಿ ತಿಳಿಸಲು ಕಾರಣವಾಗಿದೆ.

ಕ್ಯು. ಮರಣ ಪರಿಹಾರ ನಿಧಿ ವ್ಯವಸ್ಥೆಯನ್ನು ವಿಮಾಗಣನ ಮೌಲ್ಯ ಮಾಪನ ವರದಿ ಅನುಸಾರ ಚಾಲ್ತಿ ಮತ್ತು ಚಾಲ್ತಿಯೇತರ ವ್ಯವಸ್ಥೆಗಳ ಅಡಿಯಲ್ಲಿ ಸರಿಯಾಗಿ ವರ್ಗೀಕರಿಸಿರುವುದಿಲ್ಲ. ಆದ್ದರಿಂದಾಗಿ ಚಾಲ್ತಿ/ಚಾಲ್ತಿಯೇತರ ವ್ಯವಸ್ಥೆಗಳನ್ನು ಕಡಿಮೆಯಾಗಿ/ಅಧಿಕವಾಗಿ ತಿಳಿಸಲು ಕಾರಣವಾಗಿದೆ. ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ರೂ.40.13 ಲಕ್ಷಗಳ ಮೊತ್ತವನ್ನು ಇತರೆ ಸಮಗ್ರ ಆದಾಯದ ಅಡಿಯಲ್ಲಿ ತಿಳಿಸಿರುವುದಿಲ್ಲ. ಇದರಿಂದ ಇತರೆ ಸಮಗ್ರ ಆದಾಯ ಮತ್ತು ಒಟ್ಟು ಸಮಗ್ರ ಆದಾಯವನ್ನು ರೂ.40.13 ಲಕ್ಷಗಳಷ್ಟು ಕಡಿಮೆಯಾಗಿ ತೋರಿಸಲು ಕಾರಣವಾಗಿದೆ.

ಆರ್. "ಗ್ರೂಪ್" ಮತ್ತು ಇದರ ಸಹವರ್ತಿ ಕಂಪನಿಗಳ ಸ್ವತಂತ್ರ ಹಣಕಾಸಿನ ಅಂಕಿ ಅಂಶಗಳನ್ನು ಕ್ರೋಢೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ವಿವರಗಳ ಜೊತೆ ತಾಳೆ ಮಾಡಿದಾಗ ವೈಯಕ್ತಿಕ ಐಟಂಗಳ ನಡುವೆ ವ್ಯತ್ಯಾಸವಿರುವುದನ್ನು ನಾವು ಗಮನಿಸಿದ್ದೇವೆ. ವಿವರಗಳು ಈ ಕೆಳಕಂಡಂತಿರುವುದು:-

**ಕ್ರೋಢೀಕೃತ ಸ್ಥಿತಿ ವಿವರಣಾ ಪಟ್ಟಿ:**

| ವಿವರಗಳು | ಲೆಕ್ಕಾಚಾರ ಮಾಡಿದಂತೆ ರೂ. | ಕ್ರೋಢೀಕರಿಸಿದಂತೆ ರೂ. | ವ್ಯತ್ಯಾಸ ರೂ. |
|---|---|---|---|
| ಒಟ್ಟು ಚಾಲ್ತಿಯೇತರ ಆಸ್ತಿಗಳು | 2213754611 | 2154637042 | 9117569 |
| ಒಟ್ಟು ಚಾಲ್ತಿ ಆಸ್ತಿಗಳು | 7464916567 | 7461041243 | 3875324 |
| ಒಟ್ಟು ಆಸ್ತಿಗಳು | 9678671178 | 9615678285 | 62992893 |
| ಒಟ್ಟು ಈಕ್ವಿಟಿ | 4459566994 | 4398938308 | 60628686 |
| ಒಟ್ಟು ಚಾಲ್ತಿಯೇತರ ಹೊಣೆಗಾರಿಕೆಗಳು | 1329360155 | 1330809228 | -449073 |
| ಒಟ್ಟು ಚಾಲ್ತಿ ಹೊಣೆಗಾರಿಕೆಗಳು | 3889744011 | 3885930749 | 3813262 |
| ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು | 9678671160 | 9615678285 | 62992875 |

**ಲಾಭ ಮತ್ತು ನಷ್ಟದ ಕ್ರೋಢೀಕೃತ ವಿವರ:**

| ವಿವರಗಳು | ಲೆಕ್ಕಾಚಾರ ಮಾಡಿದಂತೆ ರೂ. | ಕ್ರೋಢೀಕರಿಸಿದಂತೆ ರೂ. | ವ್ಯತ್ಯಾಸ ರೂ. |
|---|---|---|---|
| ಕಾರ್ಯಾಚರಣೆಯಿಂದ ಬಂದ ಆದಾಯ | 19360395787 | 19349520826 | 1874961 |
| ಇತರೆ ಆದಾಯ | 227424167 | 223851647 | 3572520 |
| ಒಟ್ಟು ಆದಾಯ | 19587819954 | 19573372473 | 14447481 |
| ಒಟ್ಟು ಖರ್ಚುಗಳು | 19013267547 | 19000637640 | 12629907 |
| ವಿಶೇಷ ಐಟಂಗಳಿಗೆ ಮುನ್ನ ಲಾಭ | 574552408 | 572734833 | 1817575 |
| ವಿಶೇಷ ಐಟಂಗಳು | 1283154 | 1283154 | 0 |
| ತೆರಿಗೆಗೆ ಮುನ್ನ ಲಾಭ | 573269255 | 571451679 | 1817576 |
| ಒಟ್ಟು ತೆರಿಗೆ ಖರ್ಚು | 227615858 | 227615860 | -2 |
| ಮುಂದುವರೆದ ಕಾರ್ಯಾಚರಣೆಯಿಂದ ಬಂದ ಆ ವರ್ಷದ ಲಾಭ | 345653397 | 343835820 | 1817577 |
| ಸ್ಥಗಿತಗೊಂಡ ವ್ಯವಹಾರದಿಂದ ಆದ ಲಾಭ/ನಷ್ಟ | -1043887 | -1043887 | 0 |
| ಇತರೆ ಸಮಗ್ರ ಆದಾಯ | 1754940 | 0 | 1754940 |
| ವರ್ಷದ ಒಟ್ಟು ಸಮಗ್ರ ಆದಾಯ | 348452224 | 342791933 | 5660291 |

ಮೇಲಿನ ತಃಖ್ತೆಯಲ್ಲಿ ಕಂಡುಬಂದಂತೆ ಒಟ್ಟು ಸಮಗ್ರ ಆದಾಯವನ್ನು ರೂ.56.60 ಲಕ್ಷಗಳಷ್ಟು ಕಡಿಮೆಯಾಗಿ ತಿಳಿಸಿದೆ. ಕ್ರೋಢೀಕೃತ ಸ್ಥಿತಿ ವಿವರಣಾ ಪಟ್ಟಿಯಲ್ಲಿ ಒಟ್ಟು ಚಾಲ್ತಿ ಮತ್ತು ಚಾಲ್ತಿಯೇತರ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಹಾಗೂ ಒಟ್ಟು ಈಕ್ವಿಟಿಯಲ್ಲಿ ತಪ್ಪು ವರ್ಗೀಕರಣ ಮಾಡಲಾಗಿದೆ. ಒಟ್ಟು ಆಸ್ತಿಗಳು ಮತ್ತು ಒಟ್ಟು ಹೊಣೆಗಾರಿಕೆಗಳ ನಡುವಿನ ನಿವ್ವಳ ವ್ಯತ್ಯಾಸ ರೂ.18 ಆಗಿರುವುದು.

ಎಸ್. ಸ್ಥಿತಿ ವಿವರಣಾ ಪಟ್ಟಿಯಲ್ಲಿ ತಪಶೀಲು ಸರಕು ಮತ್ತು ವ್ಯಾಪಾರ ಸಂಬಂಧ ಪಾವತಿ ಮಾಡಬೇಕಿರುವ ಒಟ್ಟು ಮೊತ್ತವನ್ನು ರೂ.8.44 ಕೋಟಿಗಳ ಪ್ರಮಾಣದವರೆಗೆ ಹೆಚ್ಚಿಗೆಯಾಗಿ ತಿಳಿಸಿದೆ. ಟಿಪ್ಪಣಿ ಸಂ.9ರಲ್ಲಿನ ಪ್ರಕಟಣೆಯು ಈ ಪ್ರಮಾಣದವರೆಗೆ ಸರಿಯಾಗಿರುವುದಿಲ್ಲ.

ಟಿ. ಸಹಾಯಕ ಕಂಪನಿಯಾದ ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿಯು 1983 ರಿಂದ ಯಾವುದೇ ತಯಾರಿಕೆ ಚಟುವಟಿಕೆಗಳನ್ನು ನಡೆಸುತ್ತಿಲ್ಲವಾದ್ದರಿಂದ ಚಲನೆಯಲ್ಲಿರದ ಸಂಸ್ಥೆಯಾಗಿದೆ. ಕಂಪನಿಯು ರೂ.85090620/- (ರೂ.85343026/-) ಮೊತ್ತದ ಸಂಚಿತ ನಷ್ಟ ಹೊಂದಿದೆ ಮತ್ತು ನಿವ್ವಳ ಮೌಲ್ಯ ಕ್ಷೀಣಿಸಿದೆ. ಸದರಿ ದಿನಾಂಕದಂದು ಕಂಪನಿಯ ಚಾಲ್ತಿ ಹೊಣೆಗಾರಿಕೆಯು ಅದರ ಒಟ್ಟು ಆಸ್ತಿಗಳಿಗಿಂತ ರೂ.77516168/- ರಷ್ಟು ಅಧಿಕವಾಗಿದೆ. ಟಿಪ್ಪಣಿ ಸಂಖ್ಯೆ:1.10 ರಲ್ಲಿ ತಿಳಿಸಿರುವಂತೆ ಈ ಘಟನಾವಳಿಗಳು ಅಥವಾ ಸ್ಥಿತಿಗಳು ಜೊತೆಗೆ ಇತರೆ ವಿಚಾರಗಳು, ಕಂಪನಿಯು ಚಲನಾಶೀಲ ಸಂಸ್ಥೆಯಾಗಿ ಮುಂದುವರಿಯುವ ಸಾಮರ್ಥ್ಯದ ಬಗ್ಗೆ ಬಲವಾದ ಅನುಮಾನ ಉಂಟುಮಾಡುವ ವಾಸ್ತವಿಕ ಅನಿಶ್ಚಿತತೆ ತಲೆದೋರಿರುವುದನ್ನು ಸೂಚಿಸುತ್ತದೆ.

ಯು. ಸಹಾಯಕ ಕಂಪನಿಯಾದ ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿಯು ಎಂಎಸ್ಐಎಲ್, ಕೆಎಸ್ಐಐಡಿಸಿ ಮತ್ತು ಕರ್ನಾಟಕ ಸರ್ಕಾರದಿಂದ ಪಡೆದಿರುವ ಸಾಲದ ಮೇಲಿನ ರೂ.548111/- (ರೂ.548111/-) ಮೊತ್ತದ ಚಾಲ್ತಿ ವರ್ಷದ ಬಡ್ಡಿಯನ್ನು ಮತ್ತು ಏಪ್ರಿಲ್ 1999 ರಿಂದ ರೂ.11569092/- ಮೊತ್ತದ ಬಡ್ಡಿಯನ್ನು ಪಾವತಿಸಿರುವುದಿಲ್ಲ. ಸಾಲದ ಮೇಲಿನ ಈ ಬಡ್ಡಿ ಪಾವತಿ ಮಾಡಿದ್ದರೆ, ವರ್ಷದ ನಷ್ಟವು ರೂ.295705/- ಆಗಿರುತ್ತಿತ್ತು. 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ವಿವರಣೆ ಅನ್ವಯ ವರ್ಷದ ಲಾಭ ರೂ.252406/-ರಲ್ಲಿ ಕಳೆದಿದ್ದರೆ ನಷ್ಟವು ಮೇಲೆ ತಿಳಿಸಿದಂತಿರುತ್ತಿತ್ತು. (ಹಿಂದಿನ ವರ್ಷದ ನಷ್ಟವು, ಆ ವರ್ಷದ ಲಾಭ ರೂ.410072/-ರ ಎದುರಾಗಿ ರೂ.138039/- ಆಗಿರುವುದು). ಚಾಲ್ತಿ ವರ್ಷಕ್ಕೆ ಚಾಲ್ತಿ ಹೊಣೆಗಾರಿಕೆಯನ್ನು ರೂ.548111/- ಪ್ರಮಾಣದವರೆಗೆ ಕಡಿಮೆಯಾಗಿ ತೋರಿಸಿದೆ (ಹಿಂದಿನ ವರ್ಷದ ಹೊಣೆಗಾರಿಕೆಯನ್ನು ರೂ.548111/- ರಷ್ಟು ಕಡಿಮೆಯಾಗಿ ತಿಳಿಸಿದೆ)

ವಿ. ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿಯು ಮೊದಲಬಾರಿಗೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅಳವಡಿಕೆಯಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ 101ರ ಪ್ಯಾರಾಗ್ರಾಫ್ 23ರಂತೆ ಅಗತ್ಯವಾದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳಿಗೆ ಹಿಂದಿನ ಜಿಎಪಿಪಿಯಿಂದ ಬದಲಾವಣೆಯಾದ ಬಗ್ಗೆ ಸಮಂಜಸತೆಯನ್ನು ಸಿದ್ಧಪಡಿಸಿರುವುದಿಲ್ಲ.

ಡಬ್ಲ್ಯೂ. ಸಹಾಯಕ ಕಂಪನಿಯಾದ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ವ್ಯಾಪಾರದ ಸಂಬಂಧ ಬರಬೇಕಾಗಿರುವ ಮೊತ್ತ ಮತ್ತು ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವ ಮೊತ್ತದ ಬಗ್ಗೆ ಎದುರು ಪಾರ್ಟಿಗಳು ದೃಢಪಡಿಸಿರುವುದಿಲ್ಲ. ಸದರಿ ಅನುಸರಣೆ ಮಾಡದಿರುವುದರಿಂದ ಉಂಟಾಗಿರುವ ಹಣಕಾಸಿನ ಪರಿಣಾಮವನ್ನು ನಿರ್ಧರಣೆ ಮಾಡಲಾಗದು.

ಒಟ್ಟು ಬಾಕಿಗಳು, ದೃಢಪಡಿಸಿದ ಬಾಕಿಗಳು ಮತ್ತು ದೃಢಪಡಿಸಿರದ ಬಾಕಿಗಳ ಶೇಕಡವಾರು ಪ್ರಮಾಣದ ಸ್ಥಿತಿಯನ್ನು ಈ ಕೆಳಗೆ ಕೊಟ್ಟಿದೆ:

| ಕ್ರ. ಸಂ. | ವಿವರಗಳು | ಪುಸ್ತಕಗಳ ಅನ್ವಯ ಬಾಕಿ ರೂ. | ದೃಢೀಕರಣ ಪಡೆದಿರುವ ಮತ್ತು ಸಮನ್ವಯ ಗೊಳಿಸಿದ ಮೊತ್ತ | ದೃಢಪಡಿಸ ದಿರುವ ಶೇಕಡ ಪ್ರಮಾಣ |
|---|---|---|---|---|
| 1. | ವ್ಯಾಪಾರದ ಸಂಬಂಧ ಬರಬೇಕಾಗಿರುವುದು | 1499533741.00 | 8687042.00 | 99.42% |
| 2. | ವ್ಯಾಪಾರದ ಮುಂಗಡಗಳು | 66712373.00 | 0 | 100% |
| 3. | ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು | 1064218978.00 | 2367212 | 99.78% |
| 4. | ಗ್ರಾಹಕರಿಂದ ಬಂದಿರುವ ಮುಂಗಡ | 48179799.00 | 0 | 100% |

ಎಕ್ಸ್. ಮೇಲಿನ ನ್ಯೂನತೆಗಳ ಪ್ರಯುಕ್ತ (ಪ್ಯಾರ ನಂ.ಎಂ ಮತ್ತು ಕ್ಯು) ಉಂಟಾಗಿರುವ ಒಟ್ಟಾರೆ ಪರಿಣಾಮದಿಂದಾಗಿ ವರ್ಷದ ಸಮಗ್ರ ಆದಾಯವನ್ನು ರೂ.3.11 ಕೋಟಿಗಳಷ್ಟು ಅಧಿಕವಾಗಿ ತಿಳಿಸಿದೆ ಮತ್ತು ತಪಶೀಲು ಸರಕು ಮತ್ತು ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವುದನ್ನು ರೂ.8.44 ಕೋಟಿಗಳಷ್ಟು ಅಧಿಕವಾಗಿ ತೋರಿಸಲಾಗಿದೆ.

**ಅರ್ಹತೆ ಹೊಂದಿದ ಅಭಿಪ್ರಾಯ:**

ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ದೊರೆತಿರುವ ಮಾಹಿತಿಯಂತೆ ಮತ್ತು ನಮಗೆ ನೀಡಿದ ವಿವರಣೆಯನುಸಾರ ಹಾಗೂ ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಯ ಪ್ರತ್ಯೇಕ ಹಣಕಾಸಿನ ಹೇಳಿಕೆಗಳ ಮೇಲಿನ ಲೆಕ್ಕಪರಿಶೋಧಕರ

ವರದಿ, ಇತರೆ ವಿಷಯಗಳ ಪ್ಯಾರಾಗ್ರಾಫ್ ಅಡಿಯಲ್ಲಿ ಪ್ರಸ್ತಾಪಿಸಿರುವ ವರದಿಯ ಪರಿಗಣನೆಯ ಆಧಾರದ ಮೇಲೆ, ಮೇಲೆ ತಿಳಿಸಿರುವ ಅರ್ಹತೆ ಹೊಂದಿದ ಅಭಿಪ್ರಾಯದ ಪ್ಯಾರಾಗ್ರಾಫ್‌ಗಳಿಗೆ ಆಧಾರವೆಂದು ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ಮೇಲೆ ತಿಳಿಸಿರುವ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳು ದಿನಾಂಕ: 31ನೇ ಮಾರ್ಚ್ 2018 ರಂದು ಇದ್ದಂತೆ ''ಗ್ರೂಪ್'' ನ, ಇದರ ಸಹವರ್ತಿ ಕಂಪನಿಯ ವ್ಯವಹಾರಗಳ (ಹಣಕಾಸಿನ ಸ್ಥಿತಿಗತಿ) ಕ್ರೋಡೀಕೃತ ವಿವರ, ಮತ್ತು ಅವುಗಳ ಕ್ರೋಡೀಕೃತ ಲಾಭ, (ಇತರೆ ಸಮಗ್ರ ಆದಾಯ ಸೇರಿದಂತೆ ಹಣಕಾಸಿನ ಕಾರ್ಯಕ್ಷಮತೆ), ಸದರಿ ದಿನಾಂಕಕ್ಕೆ ಕೊನೆಗೊಂಡ ವರ್ಷದ ಅವುಗಳ ಕ್ರೋಡೀಕೃತ ನಗದು ಹರಿವಿನ ಬಗ್ಗೆ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿ ಮೇಲೆ ತಿಳಿಸಿದ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳು ಅಗತ್ಯತೆ ರೀತಿಯಲ್ಲಿ ಕಾಯ್ದೆಯಲ್ಲಿ ಅಗತ್ಯವೆಂದು ತಿಳಿಸಿದ ಮಾಹಿತಿಯನ್ನು ಒದಗಿಸುವುದು ಹಾಗೂ ನೈಜ ಮತ್ತು ನ್ಯಾಯೋಚಿತ ಚಿತ್ರಣವನ್ನು ನೀಡುವುದು.

**ಮಹತ್ವವಾದ ವಿಷಯ:**

**ಹಣಕಾಸಿನ ಹೇಳಿಕೆಗಳ ಟಿಪ್ಪಣಿಗಳಲ್ಲಿನ ಈ ಕೆಳಕಂಡ ವಿಚಾರಗಳ ಬಗ್ಗೆ ನಾವು ಗಮನಸೆಳೆಯುವೆವು:**

ಎ. ನಿರ್ದೇಶಕರು, ಪಿಂಚಣಿ ನಿರ್ದೇಶನಾಲಯ, ಸಣ್ಣ ಉಳಿತಾಯಗಳ ಆಸ್ತಿ ಮೇಲ್ವಿಚಾರಣೆ ಇವರು ದಿನಾಂಕ:08.03.2017ರ ತಮ್ಮ ಪತ್ರದ ಅನುಸಾರ, ಮಾರಾಟದ ವತಿಯಿಂದ ಬಂದ ಹಣವನ್ನು ಕಡಿಮೆಯಾಗಿ ಸಂದಾಯ ಮಾಡಿರುವ ಬಗ್ಗೆ ಮತ್ತು ವಿಳಂಬವಾಗಿ ಹಣ ಪಾವತಿ ಮಾಡಿದ ಕಾರಣಕ್ಕಾಗಿ ರೂ.46,09,86,366/-ರ ಮೊತ್ತದ ಬಡ್ಡಿ ಪಾವತಿಸುವಂತೆ ಮಾಡಿರುವ ಹಕ್ಕು ಕೇಳಿಕೆಯು ಸೇರಿದಂತೆ ಟಿಪ್ಪಣಿ ಸಂ.55 ಅನುಷಂಗಿಕ ಹೊಣೆಗಾರಿಕೆ ಬಗ್ಗೆ ಗಮನ ಸೆಳೆಯುತ್ತೇವೆ. ಕಂಪನಿಯು ಪೂರ್ಣ ಮತ್ತು ಅಂತಿಮ ಪಾವತಿಯ ಇತ್ಯರ್ಥ ಮಾಡಿರುವುದರಿಂದ ಮತ್ತು ದಿನಾಂಕ 18.10.2017ರ ಪತ್ರದ ಅನುಸಾರ ಕಂಪನಿ ಈ ಬಗ್ಗೆ ತಿಳಿಸಿರುವುದರಿಂದ ಹಾಗೂ ಪೂರ್ಣ ಮತ್ತು ಅಂತಿಮ ಪಾವತಿ ಇತ್ಯರ್ಥದ ಬಗ್ಗೆ ರೂ.3,52,60,961/- ರ ಮೊತ್ತ ಪಾವತಿ ಮಾಡಿರುವುದಾಗಿ ಮತ್ತು ಮೇಲಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಕಂಪನಿಯಿಂದ ಪಾವತಿ ಮಾಡಬೇಕಾಗಿರುವ ಯಾವುದೇ ಹಕ್ಕುಗಳು ಇರುವುದಿಲ್ಲವೆಂದು ಪತ್ರದಲ್ಲಿ ಕಂಪನಿ ಸ್ಪಷ್ಟವಾಗಿ ತಿಳಿಸಿದೆ. ಸದರಿ ಪತ್ರ ಸ್ವೀಕರಿಸಿರುವ ಬಗ್ಗೆ ಮರು ಸ್ವೀಕೃತಿ ಪಡೆದಿದೆ. ವರ್ಷದ ಅವಧಿಯಲ್ಲಿ ಒದಗಿಸಿರುವ ಮಾಹಿತಿಯ ಅನುಸಾರ ಯಾವುದೇ ಮುಂದಿನ ಬೆಳವಣಿಗೆಗಳು ಸಂಭವಿಸಿರುವುದಿಲ್ಲ.

ಬಿ. ನಾವು ಟಿಪ್ಪಣಿ ಸಂ.55(1) ರ ಬಗ್ಗೆ ಗಮನ ಸೆಳೆಯುವುದೇನೆಂದರೆ, ಕೇಳಿರುವ ಒಟ್ಟು ಮೊತ್ತದ 25% ಆಗಿ ವಿಮಾ ಕಂಪನಿಯ ಪರವಾಗಿ ತೀರ್ಪು ನೀಡಿದ್ದ ರೂ.13.02 ಕೋಟಿ (ವಾರ್ಷಿಕ 6% ದರದಲ್ಲಿ 31.03.2018ರವರೆಗೆ ಬಡ್ಡಿ ಸೇರಿ) ಸಂಬಂಧ ಕಂಪನಿ ರೂ.3.25ಕೋಟಿ ಪಾವತಿಗೆ ಅವಕಾಶ ಮಾಡಿದೆ. ಸದರಿ ವ್ಯವಹಾರಕ್ಕೆ ವಿಮಾ ಕಂಪನಿಗಳು ಮತ್ತು ಸೀಮಾ ಸುಂಕ ಇಲಾಖೆಯು ಸಹ ಬಾಜುದಾರರಾಗಿರುವುದರಿಂದ ಕಂಪನಿಯು ಹೊಣೆಗಾರಿಕೆಯ 1/4ನೇ ಭಾಗಕ್ಕೆ ಮಾತ್ರ ಬಾಧ್ಯವಾಗಿರುವುದೆಂದು ಭಾವಿಸಿದೆ.

ಸಿ. ಕಂಪನಿಯಿಂದ/ಕಂಪನಿ ವಿರುದ್ಧ ಮಾಡಿರುವ ಹಕ್ಕು ಹೇಳಿಕೆಗಳು/ಮಧ್ಯಸ್ಥಿಕೆ ನಡಾವಳಿಗಳು ಮತ್ತು ಹೂಡಿರುವ ಕಾನೂನು ದಾವೆಗಳ ಫಲಿತಾಂಶಗಳಿಗೆ ಸಂಬಂಧಿಸಿದಂತೆ ಅನಿಶ್ಚಿತತೆಯನ್ನು ವ್ಯಕ್ತಪಡಿಸಿರುವ ಹಣಕಾಸಿನ ಹೇಳಿಕೆಗಳು, ಅನುಷಂಗಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಟಿಪ್ಪಣಿ ಸಂ.55 ರಲ್ಲಿನ (ಕ್ರ.ಸಂ.4 ಹೊರತಾಗಿ) ಐಟಂಗಳು

ಡಿ. ಈಕ್ವಿಟಿ ಷೇರುಗಳ ಹಕ್ಕಿನ ನೀಡಿಕೆಯನ್ನು ಫೆಬ್ರುವರಿ 2018ರ ಅವಧಿಯಲ್ಲಿ ಕರ್ನಾಟಕ ಸರ್ಕಾರಕ್ಕೆ ಹಂಚಿಕೆ ಮಾಡಿರುವ ಮತ್ತು ಇದರ ಮಾಲೀಕತ್ವ ಮತ್ತು ನಿಯಂತ್ರಣ ಕೆಎಸ್‌ಎಸ್‌ಐಡಿಸಿಯಿಂದ ಕರ್ನಾಟಕ ಸರ್ಕಾರಕ್ಕೆ ಸ್ಥಳಾಂತರವಾಗಿರುವ ವಿಚಾರ ಒಳಗೊಂಡ ಟಿಪ್ಪಣಿ ಸಂ.15.2ರ ಬಗ್ಗೆ ನಾವು ಗಮನ ಸೆಳೆಯುವೆವು.

ಈ ವಿಚಾರಗಳ ಬಗ್ಗೆ ನಮ್ಮ ಅಭಿಪ್ರಾಯ ಅನ್ವಯವಾಗದು.

**ಇತರೆ ವಿಚಾರಗಳು:**

ದಿನಾಂಕ 31ನೇ ಮಾರ್ಚ್ 2018 ರಂದಿದ್ದಂತೆ ರೂ.28240.49 ಲಕ್ಷಗಳ ಒಟ್ಟು ಆಸ್ತಿಗಳನ್ನು ತೋರಿಸಿರುವ ಹಣಕಾಸಿನ ಹೇಳಿಕೆಗಳು, ಸದರಿ ದಿನಾಂಕದಂದು ಕೊನೆಗೊಂಡ ವರ್ಷದ ರೂ.9057.02 ಲಕ್ಷಗಳ ಮೊತ್ತದ ನಿವ್ವಳ ನಗದು ಹರಿವು ಮತ್ತು ರೂ.37257.10 ಲಕ್ಷಗಳ ಒಟ್ಟು ಆದಾಯ ತೋರಿಸುವ ಸಹಾಯಕ ಕಂಪನಿಗಳ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ಲೆಕ್ಕಪರಿಶೋಧನೆ ಮಾಡಿರುವುದಿಲ್ಲ. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಸಹ 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಕ್ಕೆ ರೂ.1990.54 ಲಕ್ಷಗಳ ನಿವ್ವಳ ಲಾಭದ ಪಾಲನ್ನು ಒಳಗೊಂಡಿರುವುದು. ಈ ಹಣಕಾಸಿನ ಹೇಳಿಕೆಗಳನ್ನು ಬೇರೆ ಲೆಕ್ಕಪರಿಶೋಧಕರು ಪರಿಶೋಧನೆ ಮಾಡಿರುವರು. ಇವರ ವರದಿಯನ್ನು ಆಡಳಿತ ವರ್ಗ ನಮಗೆ ಸಲ್ಲಿಸಿದೆ. ಸಹಾಯಕ ಕಂಪನಿಗಳ ಸಂಬಂಧ ಸೇರ್ಪಡೆ ಮಾಡಿರುವ ಮೊತ್ತಗಳು ಮತ್ತು ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಅಭಿಪ್ರಾಯವು ಬೇರೆ ಲೆಕ್ಕಪರಿಶೋಧಕರ ವರದಿಯ ಮೇಲೆ ಸಂಪೂರ್ಣವಾಗಿ ಆಧಾರಿತವಾಗಿರುವುದು.

ಮೇಲೆ ತಿಳಿಸಿರುವ ವಿಚಾರಗಳ ಸಂಬಂಧದಲ್ಲಿ, ಜೊತೆಗೆ ಇತರೆ ಲೆಕ್ಕಪರಿಶೋಧಕರು ಮಾಡಿರುವ ಕೆಲಸದ ಬಗ್ಗೆ ಮತ್ತು ವರದಿಯ ಬಗ್ಗೆ ಹಾಗೂ ಆಡಳಿತ ವರ್ಗ ದೃಢೀಕರಿಸಿರುವ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ಹೊಂದಿರುವ ವಿಶ್ವಾಸದ ವಿಚಾರದಲ್ಲಿ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಮತ್ತು ಕೆಳಗೆ ತಿಳಿಸಿರುವ ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಬಗ್ಗೆಗಿನ ನಮ್ಮ ವರದಿ ಬಗ್ಗೆ ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಿರುವುದಿಲ್ಲ.

ಈ ವಿಚಾರಗಳ ಸಂಬಂಧ ನಮ್ಮ ಅಭಿಪ್ರಾಯ ಅನ್ವಯವಾಗದು.

**ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯಗಳ ಮೇಲಿನ ವರದಿ:**

1. ಕಾಯ್ದೆಯ ಪ್ರಕರಣ 143(11)ರ ಅನ್ವಯ ಕೇಂದ್ರ ಸರ್ಕಾರ ಹೊರಡಿಸಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ (''ಆದೇಶ'') ಅನ್ವಯ ಅಗತ್ಯವಾದಂತೆ, ಭಾರತದಲ್ಲಿ ಸ್ಥಾಪನೆ ಆಗಿರುವ ಧಾರಕ ಕಂಪನಿ ಮತ್ತು ಸಹಾಯಕ ಕಂಪನಿಗಳ ಲೆಕ್ಕಪರಿಶೋಧಕರ ವರದಿಯಲ್ಲಿನ ಅಭಿಪ್ರಾಯಗಳ ಆಧಾರದ ಮೇಲೆ ಆದೇಶದ ಪ್ಯಾರಾಗ್ರಾಫ್‌ಗಳು 3 ಮತ್ತು 4ರಲ್ಲಿ ತಿಳಿಸಿರುವ ವಿಚಾರಗಳ ಬಗ್ಗೆ ಅನುಬಂಧ-ಎ ರಲ್ಲಿ ವಿವರಗಳನ್ನು ನಾವು ನೀಡಿದ್ದೇವೆ.

2. ಕಾಯ್ದೆಯ ಪ್ರಕರಣ 143ರ ಉಪ ಪ್ರಕರಣ 3 ಅನ್ವಯ ಅಗತ್ಯವಾದಂತೆ ನಾವು ವರದಿ ಮಾಡುವುದೇನೆಂದರೆ :

ಎ) ಮೇಲೆ ತಿಳಿಸಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ಲೆಕ್ಕಪರಿಶೋಧನೆ ಮಾಡುವ ಉದ್ದೇಶಕ್ಕಾಗಿ ಅಗತ್ಯವೆಂದು ನಮಗೆ ತಿಳಿದು ಬಂದ ಮತ್ತು ನಾವು ನಂಬಿರುವಂತೆ ನಾವು ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಕೇಳಿ ಪಡೆದುಕೊಂಡಿದ್ದೇವೆ.

ಬಿ) ನಮ್ಮ ಅಭಿಪ್ರಾಯದ ಪ್ರಕಾರ ನಾವು ಆ ಪುಸ್ತಕಗಳು ಮತ್ತು ಇತರೆ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲನೆ ಮಾಡಿದಾಗ ಕಂಡುಬಂದಿರುವಂತೆ, ಮೇಲೆ ತಿಳಿಸಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ಕಾನೂನಿನ ಅನ್ವಯ ಅಗತ್ಯವಾದಂತೆ ಸೂಕ್ತವಾದ ಲೆಕ್ಕದ ಪುಸ್ತಕಗಳನ್ನು ಇಡಲಾಗಿದೆ.

ಸಿ) ಸದರಿ ವರದಿಯಲ್ಲಿ ಒಳಗೊಂಡಿರುವ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ಥಿತಿ ವಿವರಣಾ ಪಟ್ಟಿ, ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಲಾಭ ಮತ್ತು ನಷ್ಟದ ವಿವರ ಮತ್ತು ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ನಗದು ಹರಿಯುವಿಕೆ ಹೇಳಿಕೆಯು, ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ನಿರ್ವಹಣೆ ಮಾಡಿರುವ ಸಂಬಂಧಪಟ್ಟ ಲೆಕ್ಕಗಳ ಪುಸ್ತಕಗಳ ಅನುಸಾರವಿರುವುದು.

ಡಿ) ನಮ್ಮ ಅಭಿಪ್ರಾಯದಲ್ಲಿ, ಮೇಲೆ ತಿಳಿಸಿರುವ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳು, ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7 ಒದಿಕೊಂಡಂತೆ ಕಾಯ್ದೆಯ ಪ್ರಕರಣ 133ರ ಅನ್ವಯ ನಿರ್ದಿಷ್ಟಪಡಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಅನುಸಾರ ಇರುವವು.

ಇ) ಧಾರಕ ಕಂಪನಿಯ ನಿರ್ದೇಶಕರುಗಳಿಂದ ಬಂದಿರುವ ಲಿಖಿತ ಮನವಿಗಳ ಆಧಾರದ ಮೇಲೆ, ದಿನಾಂಕ 31ನೇ ಮಾರ್ಚ್ 2018ರಂದು ಇದ್ದಂತೆ ಧಾರಕ ಕಂಪನಿಯ ನಿರ್ದೇಶಕರ ಮಂಡಳಿಯು ದಾಖಲೆ ಮಾಡಿರುವಂತೆ ಮತ್ತು ಭಾರತದಲ್ಲಿ ಸ್ಥಾಪನೆಯಾಗಿರುವ ಇದರ ಸಹಾಯಕ ಕಂಪನಿಗಳ ಇತರೆ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯಂತೆ ದಿನಾಂಕ 31ನೇ ಮಾರ್ಚ್ 2018ರಂದು ಇದ್ದಂತೆ, ಕಾಯ್ದೆಯ ಪ್ರಕರಣ 164(2)ರ ಅನ್ವಯ, ನಿರ್ದೇಶಕರಾಗಿ ನೇಮಕವಾಗಿರುವುದರಿಂದ ಯಾವುದೇ ನಿರ್ದೇಶಕರು ಅನರ್ಹಗೊಂಡಿರುವುದಿಲ್ಲ.

ಎಫ್) ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿರುವಿಕೆಗೆ ಸಂಬಂಧಿಸಿದಂತೆ ಮತ್ತು ಈ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಗಳಿಗೆ ಸಂಬಂಧಿಸಿದಂತೆ ವಿಚಾರವನ್ನು ''ಅನುಬಂಧ-ಬಿ'' ನಲ್ಲಿನ ನಮ್ಮ ಪ್ರತ್ಯೇಕ ವರದಿಯಲ್ಲಿ ತಿಳಿಸಿದೆ. ಇದನ್ನು ಧಾರಕ ಕಂಪನಿ, ಸಹಾಯಕ ಕಂಪನಿ ಮತ್ತು ಸಹವರ್ತಿ ಕಂಪನಿಯ ಲೆಕ್ಕಪರಿಶೋಧಕರ ವರದಿಗಳ ಆಧಾರದ ಮೇಲೆ ಮಾಡಿದೆ. ಧಾರಕ ಕಂಪನಿ, ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಯ ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿರುವಿಕೆ ಮತ್ತು ಅವುಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ನಮ್ಮ ವರದಿಯಲ್ಲಿ ಸ್ಥಿರ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನುಸಾರದ ಲೆಕ್ಕ ಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿರುವ ಇತರೆ ವಿಷಯಗಳ ಸಂಬಂಧದಲ್ಲಿ ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ತಿಳಿದಿರುವ ಮಾಹಿತಿಯನುಸಾರ ಹಾಗೂ ನಮಗೆ ಕೊಟ್ಟಿರುವ ವಿವರಣೆಗಳ ಅನುಸಾರ ತಿಳಿಸುವುದೇನೆಂದರೆ;

i. ಇತ್ಯರ್ಥವಾಗದೆ ಉಳಿದಿರುವ ವಿವಾದಗಳಿಂದ ಕಂಪನಿಯ ಕ್ರೋಡೀಕೃತ ಹಣಕಾಸಿನ ಸ್ಥಿತಿಗತಿ ಮೇಲೆ ಉಂಟು ಮಾಡಿರುವ

ಪರಿಣಾಮವನ್ನು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ತಿಳಿಸಿವೆ- ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ 37,43 ಮತ್ತು 55 ನೋಡಿ.

ii. ಸಹಾಯಕ ಕಂಪನಿ ಫುಡ್ ಕರ್ನಾಟಕ ಲಿಮಿಟೆಡ್ ಸಂಬಂಧದಲ್ಲಿ ಶಿವಮೊಗ್ಗದಲ್ಲಿನ ಫುಡ್ ಕೋರ್ಟ್‌ಗೆ ಜಮೀನನ್ನು ಹಸ್ತಾಂತರಿಸುವ ಬಗ್ಗೆ ಮೆ॥ ಎಲ್‌ಎಂಜೆ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ಜೊತೆಗಿನ ವಿವಾದವು ಇತ್ಯರ್ಥವಾಗದೆ ಉಳಿದಿದೆ. ಆದರೆ, ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014 ರ ನಿಯಮ 11ರ ಅನ್ವಯ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿದ್ದ ಇತರೆ ವಿಚಾರಗಳಲ್ಲಿ ಇತರೆ ಲೆಕ್ಕಪರಿಶೋಧಕರು ವರದಿ ಮಾಡಿರುವಂತೆ ಕಂಪನಿಯ ಹಣಕಾಸಿನ ಸ್ಥಿತಿಯ ಮೇಲೆ ಇದು ಯಾವುದೇ ಪರಿಣಾಮ ಉಂಟುಮಾಡದು.

iii. ಯಾವುದೇ ವಾಸ್ತವಿಕ ನಿರೀಕ್ಷಿಸಬಹುದಾದ ನಷ್ಟಗಳಿಗೆ ಒಳಗಾದ ಗುತ್ತಿಗೆಗಳೂ ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಕಂಪನಿ ಹೊಂದಿರುವುದಿಲ್ಲ; ಮತ್ತು

iv. ಭಾರತದಲ್ಲಿ ಸ್ಥಾಪನೆಯಾಗಿರುವ ಧಾರಕ ಕಂಪನಿ, ಇದರ ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಯಿಂದ ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ವರ್ಗಾಯಿಸಬೇಕಾಗಿರುವ ಹಣವನ್ನು ವರ್ಗಾಯಿಸಿರುವುದರಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ.

**ಮೆ॥ ಪಿ.ಚಂದ್ರಶೇಖರ್ ಎಲ್‌ಎಲ್‌ಪಿ**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.000580ಎಸ್/ಎಸ್ 200066**
**ಸಹಿ/-**
**ಮಣಿಕುಮಾರ್ ಡಿ.**
**ಪಾಲುದಾರರು**
**ಸದಸ್ಯತ್ವ ಸಂ.212544**

ಸ್ಥಳ: ಬೆಂಗಳೂರು
ದಿನಾಂಕ:11.12.2018

# ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

## ಸ್ವತಂತ್ರ ಲೆಕ್ಕ ಪರಿಶೋಧಕರ ಪರಿಷ್ಕೃತ ವರದಿಗೆ ಅನುಬಂಧ-ಎ

**(ಸಮ ದಿನಾಂಕದ ನಮ್ಮ ವರದಿಯ ''ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆ'' ಸೆಕ್ಷನ್‌ನ ಅನ್ವಯದ ವರದಿ ಅಡಿಯಲ್ಲಿನ ಪ್ಯಾರಾಗ್ರಾಫ್-1 ಅನ್ನು ನೋಡಿ)**

i. ಅದರ ಸ್ಥಿರಾಸ್ತಿಗಳ ವಿಚಾರದಲ್ಲಿ:

ಎ) ಸ್ಥಿರಾಸ್ತಿಗಳ ಗುಣಾತ್ಮಕ ವಿವರಗಳು ಮತ್ತು ಸ್ಥಿತಿ ಒಳಗೊಂಡಂತೆ ಪೂರ್ಣ ವಿವರಗಳನ್ನು ತಿಳಿಸುವ ಸೂಕ್ತ ದಾಖಲೆಗಳನ್ನು ಕಂಪನಿ ನಿರ್ವಹಣೆ ಮಾಡಿದೆ.

ಬಿ) ನಮಗೆ ಸಮಜಾಯಿಷಿ ನೀಡಿರುವಂತೆ ಆಡಳಿತ ಮಂಡಳಿಯು ಎಲ್ಲಾ ಸ್ಥಿರಾಸ್ತಿಗಳನ್ನು ಭೌತಿಕವಾಗಿ ಪರಿಶೀಲನೆ ಮಾಡಿದೆ. ಈ ಪರಿಶೀಲನೆಯಲ್ಲಿ ಯಾವುದೇ ವಾಸ್ತವಿಕ ವ್ಯತ್ಯಾಸಗಳು ಕಂಡುಬಂದಿರುವುದಿಲ್ಲ.

ಸಿ) ನಮಗೆ ದೊರೆತ ಮಾಹಿತಿ ಮತ್ತು ನೀಡಿದ ವಿವರಣೆ ಅನುಸಾರ ಮತ್ತು ಕಂಪನಿಯ ದಾಖಲೆಗಳನ್ನು ನಾವು ಪರಿಶೀಲಿಸಿದ ಆಧಾರದ ಮೇಲೆ, ಸ್ಥಿರಾಸ್ತಿಗಳ ಹಕ್ಕು ಪತ್ರಗಳು ಕಂಪನಿಯ ಹೆಸರಿನಲ್ಲಿರುವುದು ಕಂಡುಬಂದಿದೆ.

ii. ಇದರ ತಪಶೀಲು ಪಟ್ಟಿ ವಿಚಾರದಲ್ಲಿ:

ಎ) ನಮಗೆ ವಿವರಿಸಿದಂತೆ, ಆಡಳಿತ ಮಂಡಳಿಯು ಸದರಿ ವರ್ಷದಲ್ಲಿ ಸೂಕ್ತವಾದ ಅಂತರಗಳಲ್ಲಿ ತಪಶೀಲು ಪಟ್ಟಿಯನ್ನು ಭೌತಿಕವಾಗಿ ಪರಿಶೀಲಿಸಿದೆ.

ಬಿ) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಆಡಳಿತ ಮಂಡಳಿ ತಪಶೀಲು ಪಟ್ಟಿಗಳ ಭೌತಿಕ ಪರಿಶೀಲನೆಗೆ ಅನುಸರಿಸಿರುವ ಕ್ರಮಾವಳಿಗಳು ಕಂಪನಿಯ ಗಾತ್ರ ಮತ್ತು ಇದರ ವ್ಯವಹಾರದ ಸ್ವರೂಪಕ್ಕೆ ಸಂಬಂಧಿಸಿದಂತೆ ಸೂಕ್ತವಾಗಿರುವುದು ಮತ್ತು ಸಾಕಷ್ಟಿರುವುದು.

ಸಿ) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಕಂಪನಿಯು ತನ್ನ ತಪಶೀಲು ಪಟ್ಟಿಗಳ ಸೂಕ್ತವಾದ ದಾಖಲೆಗಳನ್ನು ನಿರ್ವಹಣೆ ಮಾಡಿದೆ ಮತ್ತು ಭೌತಿಕ ಪರಿಶೀಲನೆ ನಡೆಸಿದ ಸಮಯದಲ್ಲಿ ಯಾವುದೇ ವಾಸ್ತವಿಕ ವ್ಯತ್ಯಾಸಗಳು ಕಂಡುಬಂದಿರುವುದಿಲ್ಲ.

iii. ನಮಗೆ ವಿವರಿಸಿರುವಂತೆ ಕಂಪನಿಗಳ ಕಾಯ್ದೆಯ ಪ್ರಕರಣ 189ರ ಅನ್ವಯ ನಿರ್ವಹಿಸಿರುವ ರಿಜಿಸ್ಟರ್‌ನಲ್ಲಿ ಒಳಪಟ್ಟಿರುವ ಕಂಪನಿಗಳು, ಸಂಸ್ಥೆಗಳು ಅಥವಾ ಇತರೆ ವ್ಯಕ್ತಿಗಳಿಗೆ ಕಂಪನಿಯು ಭದ್ರತೆಯುಳ್ಳ ಅಥವಾ ಭದ್ರತೆಯಿಲ್ಲದ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ. ಆದ್ದರಿಂದ ಸಿಎಆರ್‌ಒ 2016ರ ಪ್ಯಾರಾಗ್ರಾಫ್-3 ರ ಕಲಂ (iii) ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

iv. ಸಾಲಗಳು, ಹೂಡಿಕೆಗಳು, ಜಾಮೀನುಗಳು ಮತ್ತು ಭದ್ರತೆ ಸಂಬಂಧದಲ್ಲಿ ಕಂಪನಿಗಳ ಕಾಯ್ದೆ 2013ರ ಪ್ರಕರಣ 185 ಮತ್ತು 186ರ ಉಪಬಂಧಗಳನ್ನು ಪರಿಪಾಲಿಸಿದೆ.

v. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ. ಆದ್ದರಿಂದಾಗಿ ಸಿಎಆರ್‌ಒ 2016ರ ಪ್ಯಾರಾಗ್ರಾಫ್-3ರ ಕಲಂ (v)ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

vi. ಕೇಂದ್ರ ಸರ್ಕಾರ ಕಂಪನಿಗಳ ಕಾಯ್ದೆ, 2013ರ ಪ್ರಕರಣ 148(1)ರ ಅನ್ವಯ ವೆಚ್ಚದ ದಾಖಲೆ ನಿರ್ವಹಣೆ ಮಾಡುವಂತೆ ನಿಗದಿಪಡಿಸಿರುವುದಿಲ್ಲ.

vii. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಶಾಸನಬದ್ಧ ಬಾಕಿಗಳ ಸಂಬಂಧ ತಿಳಿಸುವುದೇನೆಂದರೆ;

ಎ) ಕಂಪನಿಯು ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸಂಪತ್ತು ತೆರಿಗೆ, ಸೇವಾ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಸೆಸ್ ಮತ್ತು ಇದಕ್ಕೆ ಅನ್ವಯವಾಗುವ ಇತರೆ ವಾಸ್ತವಿಕ ಶಾಸನಬದ್ಧ ಬಾಕಿಗಳು ಸೇರಿದಂತೆ ವಿವಾದರಹಿತ ಶಾಸನಬದ್ಧ ಬಾಕಿಗಳನ್ನು ಸಕ್ಷಮ ಅಧಿಕಾರಿಗಳಿಗೆ ಸಾಮಾನ್ಯವಾಗಿ ನಿಯಮಿತವಾಗಿ ಸಂದಾಯ ಮಾಡುತ್ತಿದೆ.

ಬಿ) ಪಾವತಿ ಮಾಡಬೇಕಿರುವ ದಿನಾಂಕದಿಂದ ಆರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ, 31ನೇ ಮಾರ್ಚ್ 2018ರಂದು ಇದ್ದಂತೆ ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸಂಪತ್ತು ತೆರಿಗೆ, ಸೇವಾ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಸೆಸ್ ಮತ್ತು ಇತರೆ ವಾಸ್ತವಿಕ ಶಾಸನಬದ್ಧ ಬಾಕಿಗಳನ್ನು ಪಾವತಿ ಮಾಡಬೇಕಿರುವ ಯಾವುದೇ ವಿವಾದರಹಿತ ಮೊತ್ತಗಳಿರುವುದಿಲ್ಲ.

ಸಿ) ವಿವಾದವಿರುವ ಪ್ರಯುಕ್ತ 31ನೇ ಮಾರ್ಚ್ 2018ರಂದು ಇದ್ದಂತೆ ಸಂದಾಯ ಮಾಡಿರದ ಆದಾಯ ತೆರಿಗೆ ಬಾಕಿಗಳ ವಿವರಗಳನ್ನು ಈ ಕೆಳಗೆ ನೀಡಿದೆ:

| ಕ್ರಮ ಸಂಖ್ಯೆ | ಕಾಯ್ದೆಯ ಹೆಸರು | ಬಾಕಿಯ ಸ್ವರೂಪ | ವಿವಾದವು ಇತ್ಯರ್ಥವಾಗದೆ ಉಳಿದಿರುವ ಸಂಬಂಧಿತ ನ್ಯಾಯ ಸ್ಥಾನ | ಯಾವ ಅವಧಿಗೆ ಈ ಮೊತ್ತ ಸಂಬಂಧಿಸಿದೆ | ಮೊತ್ತ ರೂ. ಕೋಟಿಗಳಲ್ಲಿ | ಪಾವತಿಸಿದ ಮೊತ್ತ ರೂ.ಕೋಟಿಗಳಲ್ಲಿ★ | ಬಾಕಿ ರೂ.ಕೋಟಿಗಳಲ್ಲಿ |
|---|---|---|---|---|---|---|---|
| 1. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2005-06 ಮತ್ತು 2006-07 | 0.48 | 0.10 | 0.38 |
| 2. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2002-03 ಮತ್ತು 2003-04 | 0.26 | 0.20 | 0.06 |
| 3. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2003-04 ರಿಂದ | 0.37 | 0.37 | 0.00 |
| 4. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಆಯುಕ್ತರು (ಎಲ್‌ಟಿಯು) | ಜೂನ್ 2007 ರಿಂದ ಮಾರ್ಚ್ 2011 | 0.13 | 0.00 | 0.13 |
| 5. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2007-08 ಮತ್ತು 2008-09 | 0.36 | 0.10 | 0.26 |
| 6. | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ - ಮೂಲದಲ್ಲೇ ತೆರಿಗೆ ಸಂಗ್ರಹ | ಸುಪ್ರೀಂ ಕೋರ್ಟ್ | 1995-96ರಿಂದ 2000-01 | 20.05 | 20.05 | 0.00 |
| | | ಆದಾಯ ತೆರಿಗೆ - ಮೂಲದಲ್ಲೇ ತೆರಿಗೆ ಸಂಗ್ರಹ | ಹೈಕೋರ್ಟ್, ಬೆಂಗಳೂರು | 2001-02ರಿಂದ 2003-04 | 10.17 | 4.00 | 6.17 |
| | | ಆದಾಯ ತೆರಿಗೆ - ಮೂಲದಲ್ಲೇ ಸಂಗ್ರಹಿಸಿದ ತೆರಿಗೆ ಮೇಲೆ ಬಡ್ಡಿ | ಸುಪ್ರೀಂ ಕೋರ್ಟ್ | 1994-95ರಿಂದ 1999-2000 | 30.67 | 0.00 | 30.67 |
| 7. | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2010-11 | 3.42 | 0.00 | 3.42 |
| | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2012-13 | 0.26 | 0.00 | 0.26 |
| | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2014-15 | 1.08 | 0.00 | 1.08 |
| | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2015-16 | 0.19 | 0.00 | 0.19 |

★ ಬಡ್ಡಿ ಹೊರತುಪಡಿಸಿ

(viii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಮತ್ತು ನಾವು ಪರಿಶೀಲಿಸಿದ ದಾಖಲೆಗಳ ಆಧಾರದ ಮೇಲೆ ನಾವು ತಿಳಿಸುವುದೇನೆಂದರೆ ಕಂಪನಿಯು ಹಣಕಾಸು ಸಂಸ್ಥೆ, ಬ್ಯಾಂಕು ಅಥವಾ ಸರ್ಕಾರದಿಂದ ಪಡೆದಿರುವ ಸಾಲಗಳ ಮರು ಪಾವತಿ ಮಾಡುವುದರಲ್ಲಿ ತಪ್ಪಿತಸ್ಥರಾಗಿರುವುದಿಲ್ಲ.

(ix) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಮತ್ತು ನಾವು ಪರಿಶೀಲಿಸಿದ ದಾಖಲೆಯ ಆಧಾರದ ಮೇಲೆ ಸದರಿ ವರ್ಷಾವಧಿಯಲ್ಲಿ ಕಂಪನಿಯು ಪ್ರಾರಂಭಿಕ ಸಾರ್ವಜನಿಕರ ಕೊಡುಗೆ ಅಥವಾ ಮುಂದುವರಿದ ಸಾರ್ವಜನಿಕ ಕೊಡುಗೆ ರೂಪದಲ್ಲಿ (ಸಾಲ ಪತ್ರಗಳು ಸೇರಿದಂತೆ) ಮತ್ತು ಅವಧಿ ಸಾಲಗಳ ರೂಪದಲ್ಲಿ ಹಣವನ್ನು ಪಡೆದಿರುವುದಿಲ್ಲ.

(x) ನಮ್ಮ ಅಭಿಪ್ರಾಯದಲ್ಲಿ, ನಮಗೆ ಒದಗಿಸಿರುವ ಮಾಹಿತಿ ಅನುಸಾರ, ನಮ್ಮ ಲೆಕ್ಕಪರಿಶೋಧನೆ ನಡೆಸಿದ ಆಧಾರದ ಮೇಲೆ ಹಾಗೂ ಕಂಪನಿಯ ಪುಸ್ತಕಗಳು ಮತ್ತು ದಾಖಲೆ ಪತ್ರಗಳ ಸಮಗ್ರ ಪರಿಶೀಲನೆ ನಡೆಸಿದ ಮೇರೆಗೆ ಸದರಿ ವರ್ಷದ ಅವಧಿಯಲ್ಲಿ ಕಂಪನಿಯಿಂದಾಗಲಿ ಅಥವಾ ಕಂಪನಿಗಾಗಲಿ ಯಾವುದೇ ವಂಚನೆ ಮಾಡಿರುವುದಾಗಲಿ ಅಥವಾ ಆಗಿರುವುದಾಗಲಿ ಕಂಡು ಬಂದಿರುವುದಿಲ್ಲ ಅಥವಾ ವರದಿಯಾಗಿರುವುದಿಲ್ಲ.

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

(xi) ಕಂಪನಿಗಳ ಕಾಯ್ದೆಯ ಪರಿಶಿಷ್ಟ-V ಒದಿಕೊಂಡಂತೆ ಪ್ರಕರಣ 197ರ ಉಪಬಂಧಗಳ ಅನ್ವಯ ಕಡ್ಡಾಯಗೊಳಿಸಿರುವ ಅಗತ್ಯ ಅನುಮೋದನೆಗಳ ಅನುಸಾರ ವ್ಯವಸ್ಥಾಪನಾ ಸಂಭಾವನೆಯನ್ನು ಪಾವತಿ ಮಾಡಲಾಗಿದೆ ಅಥವಾ ಏರ್ಪಾಡು ಮಾಡಲಾಗಿದೆ.

(xii) ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದ ಪ್ರಯುಕ್ತ ಸಿಎಆರ್‌ಒ 2016ರ ಕಂಡಿಕೆ 3 ರ ಕಲಂ (xii) ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

(xiii) ಸಂಬಂಧಪಟ್ಟ ವ್ಯಕ್ತಿಗಳ ಜೊತೆಗಿನ ವ್ಯವಹಾರವು ಕಂಪನಿಗಳ ಕಾಯ್ದೆ 2013ರ ಪ್ರಕರಣ 177 ಮತ್ತು 188ರ ಅನುಸಾರ ಇರುವುದು ಮತ್ತು ಅನ್ವಯವಾಗುವ ಲೆಕ್ಕಪತ್ರದ ಗುಣಮಟ್ಟದನ್ವಯ ಅಗತ್ಯವಾದಂತೆ ಹಣಕಾಸಿನ ಹೇಳಿಕೆಯಲ್ಲಿ ವಿವರಗಳನ್ನು ತಿಳಿಸಲಾಗಿದೆ.

(xiv) ಕಂಪನಿಯು ಪರಾಮರ್ಶನೆಯಲ್ಲಿರುವ ವರ್ಷದಲ್ಲಿ ಯಾವುದೇ ಷೇರುಗಳ ಆದ್ಯತಾ ಹಂಚಿಕೆಯನ್ನಾಗಲಿ ಅಥವಾ ಖಾಸಗಿಯವರಿಗೆ ನೀಡುವುದನ್ನಾಗಲಿ ಅಥವಾ ಪೂರ್ಣವಾಗಿ ಅಥವಾ ಭಾಗಶಃವಾಗಿ ಪರಿವರ್ತಿಸಬಹುದಾದ ಡಿಬೆಂಚರುಗಳನ್ನಾಗಲಿ ಹಂಚಿಕೆ ಮಾಡಿರುವುದಿಲ್ಲ.

(xv) ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಯು ನಿರ್ದೇಶಕರುಗಳ ಜೊತೆ ಅಥವಾ ಇವರಿಗೆ ಸಂಬಂಧಿಸಿರುವ ವ್ಯಕ್ತಿಗಳ ಜೊತೆಯಾಗಲಿ ಯಾವುದೇ ನಗದೇತರ ವ್ಯವಹಾರ ಮಾಡಿಕೊಂಡಿರುವುದಿಲ್ಲ.

(xvi) ಕಂಪನಿಯು ಬ್ಯಾಂಕಿಂಗೇತರ ಹಣಕಾಸು ಕಂಪನಿಯಾಗಿರುವುದಿಲ್ಲ. ಆದ ಪ್ರಯುಕ್ತ ಸಿಎಆರ್‌ಒ 2016ರ ಕಂಡಿಕೆ 3ರ ಕಲಂ (xvi) ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

**ಮೆ|| ಪಿ. ಚಂದ್ರಶೇಖರ್ ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066

ಸಹಿ/-
**ಮಣಿಕುಮಾರ್.ಡಿ**
ಪಾಲುದಾರರು
ಸದಸ್ಯತ್ವ ಸಂಖ್ಯೆ: 212544

ಸ್ಥಳ : ಬೆಂಗಳೂರು
ದಿನಾಂಕ : 11.12.2018

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ ಬಗ್ಗೆಗಿನ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-ಬಿ

**(ಸಮ ದಿನಾಂಕದ ನಮ್ಮ ವರದಿಯ ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಮೇಲಿನ ವರದಿ ಅಡಿಯಲ್ಲಿನ ಪ್ಯಾರಾಗ್ರಾಫ್ (ಎಫ್) ನೋಡಿ)**

**ಕಂಪನಿಗಳ ಕಾಯ್ದೆ, 2013ರ ('ಕಾಯ್ದೆ') ಪ್ರಕರಣ 143ರ ಉಪ ಪ್ರಕರಣ 3 ರ ಕಲಂ(ಐ)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿ**

'ಗ್ರೂಪ್' ಮತ್ತು ಇದರ ಸಹವರ್ತಿ ಕಂಪನಿಯ ಇಂದಿನವರೆಗಿನ ಮತ್ತು 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಕ್ರೋಡೀಕೃತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆ ಜೊತೆಗೆ ಸದರಿ ದಿನಾಂಕಕ್ಕೆ ಕೊನೆಗಂಡ ವರ್ಷದ ಬಗ್ಗೆ ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಇದನ್ನು ಇಲ್ಲಿ ಇನ್ನು ಮುಂದೆ 'ಧಾರಕ ಕಂಪನಿ' ಎಂಬುದಾಗಿ ಪ್ರಸ್ತಾಪಿಸಲಾಗುವುದು), ಇದರ ಸಹಾಯಕ ಕಂಪನಿಗಳ (ಧಾರಕ ಕಂಪನಿ ಮತ್ತು ಇದರ ಸಹಾಯಕ ಕಂಪನಿಗಳನ್ನು ಒಟ್ಟಾಗಿ 'ಗ್ರೂಪ್' ಎಂಬುದಾಗಿ ಪ್ರಸ್ತಾಪಿಸಲಾಗುವುದು), ಮತ್ತು ಇದರ ಸಹವರ್ತಿ ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕ ಪರಿಶೋಧನೆಯನ್ನು ನಾವು ಮಾಡಿದ್ದೇವೆ.

**ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ:**

ಭಾರತದಲ್ಲಿ ಸ್ಥಾಪನೆಯಾಗಿರುವ ಕಂಪನಿಗಳಾದ ಧಾರಕ ಕಂಪನಿ, ಇದರ ಸಹಾಯಕ ಮತ್ತು ಇದರ ಸಹವರ್ತಿ ಕಂಪನಿಗಳ ಸಂಬಂಧಪಟ್ಟ ನಿರ್ದೇಶಕರ ಮಂಡಳಿಯು, 'ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಯ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಸಂಬಂಧಪಟ್ಟ ಕಂಪನಿಗಳು ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣ' ದ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸುವ ಮತ್ತು ನಿರ್ವಹಣೆ ಮಾಡುವ ಜವಾಬ್ದಾರಿ ಹೊಂದಿರುವುದು. ಈ ಜವಾಬ್ದಾರಿಗಳಲ್ಲಿ ಕಂಪನಿಗಳ ಕಾಯ್ದೆ, 2013ರ ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಅನುಸರಣೆ, ತನ್ನ ಆಸ್ತಿಗಳ ಸಂರಕ್ಷಣೆ ಮಾಡುವಿಕೆ, ವಂಚನೆಗಳು ಮತ್ತು ತಪ್ಪುಗಳ ತಡೆಯುವಿಕೆ ಮತ್ತು ಪತ್ತೆ ಹಚ್ಚುವಿಕೆ, ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ, ಮತ್ತು ವಿಶ್ವಾಸನೀಯವಾದ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವಿಕೆಯೂ ಒಳಗೊಂಡಂತೆ, ತನ್ನ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸಪಡಿಸುವುದು, ಅನುಷ್ಠಾನ ಮಾಡುವುದು ಮತ್ತು ನಿರ್ವಹಣೆ ಮಾಡುವುದು ಒಳಗೊಂಡಿರುವುದು.

**ಲೆಕ್ಕ ಪರಿಶೋಧಕರ ಜವಾಬ್ದಾರಿ:**

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(10)ರ ಅನ್ವಯ ನಿಗದಿಪಡಿಸಲಾಗಿರುವುದು ಎಂಬುದಾಗಿ ಭಾವಿಸಲಾದ ಮತ್ತು ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ (ಐಸಿಎಐ) ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿ ('ಮಾರ್ಗದರ್ಶಿ ಟಿಪ್ಪಣಿ') ಮತ್ತು ಲೆಕ್ಕಪರಿಶೋಧನೆಯ ಗುಣಮಟ್ಟಗಳ ಅನುಸಾರ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ನಾವು ನಮ್ಮ ಲೆಕ್ಕಪರಿಶೋಧನೆ ಕಾರ್ಯವನ್ನು ನಡೆಸಿದ್ದೇವೆ. ಈ ಎರಡೂ ಮಾರ್ಗದರ್ಶನಗಳನ್ನು ಐಸಿಎಐ ಹೊರಡಿಸಿದ್ದು, ಇವೆರಡೂ ಮಾರ್ಗದರ್ಶನಗಳು ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಅನ್ವಯವಾಗುವುವು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿರುವುದೇ ಮತ್ತು ನಿರ್ವಹಣೆ ಮಾಡಲಾಗಿರುವುದೇ ಹಾಗೂ ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವುವೇ ಎಂಬ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಿ ಲೆಕ್ಕಪರಿಶೋಧನೆ ನಡೆಸಲು ಯೋಜನೆ ಮಾಡಬೇಕು ಮತ್ತು ಲೆಕ್ಕ ಪರಿಶೋಧನೆ ನಡೆಸಬೇಕೆಂದು ಸದರಿ ಗುಣಮಟ್ಟಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳು ತಿಳಿಸುತ್ತವೆ.

ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆಯು ಸಾಕಷ್ಟು ಪ್ರಮಾಣದಲ್ಲಿರುವುದೇ ಎಂಬುದರ ಬಗ್ಗೆ ಮತ್ತು ಅವುಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ಅನುಸರಿಸುವ ಕಾರ್ಯವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥವಂತಿಕೆ ಪಡೆಯುವುದು, ಇರುವ ವಾಸ್ತವಿಕ ದೌರ್ಬಲ್ಯದ ಅಪಾಯ ನಿರ್ಧರಣೆ ಮಾಡುವುದು, ನಿರ್ಧರಣೆ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆ ಪರಿಣಾಮವನ್ನು ಪರೀಕ್ಷಿಸುವುದು ಮತ್ತು ಮೌಲ್ಯ ಮಾಪನವೂ ಸಹ ಒಳಗೊಂಡಿರುವುದು. ಆಯ್ಕೆ ಮಾಡಿದ ಕ್ರಮಾವಳಿಗಳು, ವಂಚನೆ ಅಥವಾ ತಪ್ಪಿನ ಪ್ರಯುಕ್ತ ಹಣಕಾಸಿನ ಹೇಳಿಕೆಗಳಲ್ಲಿ ಉಂಟಾಗುವ ವಾಸ್ತವಿಕ ತಪ್ಪು

ಹೇಳಿಕೆಯ ಅಪಾಯದ ನಿರ್ಧರಣೆ ಸೇರಿದಂತೆ ಲೆಕ್ಕಪರಿಶೋಧಕರು ಮಾಡುವ ತೀರ್ಮಾನಗಳ ಮೇಲೆ ಅವಲಂಬಿತವಾಗಿರುತ್ತದೆ.

ನಾವು ಪಡೆದಿರುವ ಲೆಕ್ಕಪರಿಶೋಧನೆ ಪುರಾವೆ ಮತ್ತು ಸಹಾಯಕ ಕಂಪನಿಗಳ ಇತರೆ ಲೆಕ್ಕಪರಿಶೋಧಕರು ತಮ್ಮ ವರದಿ ಅನುಸಾರ ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆಗಳನ್ನು ಈ ಕೆಳಗಿನ ಇತರೆ ವಿಚಾರಗಳ ಪ್ಯಾರಾಗ್ರಾಫ್‌ನಲ್ಲಿ ತಿಳಿಸಿದ್ದು, ಇವು ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು.

**ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥ:**

ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದು ಮತ್ತು ಹಣಕಾಸಿನ ವರದಿಯ ವಿಶ್ವಾಸಾರ್ಹತೆ ಬಗ್ಗೆ ಸೂಕ್ತವಾದ ಆಶ್ವಾಸನೆ ಒದಗಿಸಲು ರೂಪಿಸಿರುವ ಒಂದು ಪ್ರಕ್ರಿಯೆ ಆಗಿದೆ. ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಒಳಪಡುವ ನೀತಿಗಳು ಮತ್ತು ಕ್ರಮಾವಳಿಗಳು ಈ ಕೆಳಕಂಡಂತಿರುವವು:

1) ಕಂಪನಿಯ ವ್ಯವಹಾರಗಳನ್ನು ಮತ್ತು ಆಸ್ತಿಗಳ ಸ್ಥಾನಮಾನವನ್ನು ಸೂಕ್ತವಾದ ವಿವರಣೆಗಳೊಡನೆ ನಿಖರವಾಗಿ ಮತ್ತು ಅತ್ಯುತ್ತಮವಾಗಿ ನಿರೂಪಿಸುವ ದಾಖಲೆಗಳ ನಿರ್ವಹಣೆ.

2) ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾದಂತೆ ವ್ಯವಹಾರವನ್ನು ದಾಖಲು ಮಾಡಲಾಗಿದೆ, ಮತ್ತು ಕಂಪನಿಯ ಸ್ವೀಕರಣೆ ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರು ನೀಡಿರುವ ಅಧಿಕಾರಿಗಳ ಅನುಸಾರ ಮಾತ್ರ ಮಾಡಲಾಗುತ್ತಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ನೀಡಿಕೆ; ಮತ್ತು

3) ಹಣಕಾಸಿನ ಹೇಳಿಕೆಗಳ ಮೇಲೆ ವಾಸ್ತವಿಕವಾಗಿ ಪರಿಣಾಮ ಬೀರಬಹುದಾದ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನತೆ, ಉಪಯೋಗ ಅಥವಾ ವ್ಯವಸ್ಥೆಯ ತಡೆ ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವಿಕೆ ಬಗ್ಗೆ ಸೂಕ್ತ ಭರವಸೆ ಒದಗಿಸುವುದು.

**ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅಂತರ್ಗತ ಮಿತಿಗಳು:**

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಅಂತರ್ಗತ ಮಿತಿಗಳಿಂದಾಗಿ ಮೋಸ ಅಥವಾ ಅಸಮರ್ಪಕ ಆಡಳಿತವು ನಿಯಂತ್ರಣಗಳನ್ನು ದಾಟಿ ಹೋಗುವ ತಪ್ಪು ಅಥವಾ ವಂಚನೆಯ ಪ್ರಯುಕ್ತ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ಸಾಧ್ಯತೆಗಳಿರುತ್ತವೆ. ಇವುಗಳನ್ನು ಪತ್ತೆ ಹಚ್ಚುವುದು ಸಾಧ್ಯವಾಗುವುದಿಲ್ಲ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಮುಂದಿನ ಅವಧಿಗಳಿಗೆ ಅನ್ವಯಿಸಿದರೆ ಅದು ಪರಿಸ್ಥಿತಿಯ ಬದಲಾವಣೆಗಳ ಪ್ರಯುಕ್ತ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಕೊರತೆಯಾಗುವ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ನೀತಿಗಳು ಅಥವಾ ಕ್ರಮಾವಳಿಗಳ ಅನುಸರಣೆ ಪ್ರಮಾಣ ಕ್ಷೀಣಿಸಬಹುದಾಗಿರುತ್ತದೆ.

**ಅಭಿಪ್ರಾಯ:**

ನಮ್ಮ ಅಭಿಪ್ರಾಯವೇನೆಂದರೆ, ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ ಭಾರತದಲ್ಲಿ ಸ್ಥಾಪನೆಯಾಗಿರುವ ಧಾರಕ ಕಂಪನಿ, ಇದರ ಸಹಾಯಕ ಕಂಪನಿ ಮತ್ತು ಇದರ ಸಹವರ್ತಿ ಕಂಪನಿಗಳು ಪ್ರತಿಯೊಂದು ವಾಸ್ತವಿಕ ವಿಚಾರಗಳ ಸಂಬಂಧದಲ್ಲಿ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿದೆ. ಹಣಕಾಸಿನ ವರದಿಯ ಮೇಲಿನ ಈ ಆಂತರಿಕ ಹಣಕಾಸು ನಿಯಂತ್ರಣಗಳು ದಿನಾಂಕ 31ನೇ ಮಾರ್ಚ್ 2018ರಂದು ಇದ್ದಂತೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಯಾಗುತ್ತಿವೆ; ಭಾರತದ ಲೆಕ್ಕಪರಿಶೋಧಕರ ಸಂಸ್ಥೆಯು ಹೊರಡಿಸಿರುವ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ರೂಪಿಸಿರುವ ಹಣಕಾಸಿನ ವರದಿಯ ಮೇಲಿನ ಆಂತರಿಕ ನಿಯಂತ್ರಣಗಳ ಅರ್ಹತೆಯ ಮೇಲೆ ಇವು ಆಧಾರಿತವಾಗಿವೆ.

**ಮೆ॥ ಪಿ. ಚಂದ್ರಶೇಖರ್ ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066

ಸಹಿ/-
**ಮಣಿಕುಮಾರ್.ಡಿ**
ಪಾಲುದಾರರು
ಸದಸ್ಯತ್ವ ಸಂಖ್ಯೆ: 212544

ಸ್ಥಳ : ಬೆಂಗಳೂರು
ದಿನಾಂಕ : 11.12.2018

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2018ರಂದು ಇದ್ದಂತೆ ಕ್ರೋಡೀಕೃತ ಸ್ಥಿತಿ ವಿವರಣಾ ಪಟ್ಟಿ

(ರೂ.ಗಳಲ್ಲಿ)

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|---|---|
| ಎ. | ಆಸ್ತಿಗಳು | | | | |
| | **ಚಾಲ್ತಿಯೇತರ ಆಸ್ತಿಗಳು** | | | | |
| | (ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ | 2 | 76,58,46,972 | 35,13,85,817 | 31,86,09,695 |
| | (ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | 2 | 20,11,291 | 34,02,40,465 | 31,31,72,589 |
| | (ಸಿ) ಹೂಡಿಕೆ ಸ್ವತ್ತು | 3 | - | - | - |
| | (ಡಿ) ಇತರೆ ಅಗೋಚರ ಆಸ್ತಿಗಳು | 4 | - | - | - |
| | (ಇ) ಹಣಕಾಸಿನ ಆಸ್ತಿಗಳು | | | | |
| | (i) ಹೂಡಿಕೆಗಳು | | | | |
| | (ಎ) ಇತರೆ ಹೂಡಿಕೆಗಳು | 5 | 7,43,54,431 | 7,43,57,431 | 7,34,07,431 |
| | (ಬಿ) ಸಹವರ್ತಿ ಕಂಪನಿಗಳಲ್ಲಿ ಹೂಡಿಕೆ | | | | |
| | (ii) ಇತರೆ ಹಣಕಾಸಿನ ಆಸ್ತಿಗಳು | 6 | - | - | - |
| | (ಎಫ್) ಮುಂದೂಡಿದ ತೆರಿಗೆ ಆಸ್ತಿಗಳು | 7 | 15,24,64,971 | 12,61,78,322 | 12,63,49,940 |
| | (ಜಿ) ಇತರೆ ಚಾಲ್ತಿಯೇತರ ಆಸ್ತಿಗಳು | 8 | 1,15,99,59,377 | 1,02,93,01,974 | 1,09,91,28,878 |
| | **ಒಟ್ಟು ಚಾಲ್ತಿಯೇತರ ಆಸ್ತಿಗಳು** | | **2,15,46,37,042** | **1,92,14,64,009** | **1,93,06,68,533** |
| | **ಚಾಲ್ತಿ ಆಸ್ತಿಗಳು** | | | | |
| | (ಎ) ತಪಶೀಲುಗಳು | 9 | 1,22,54,31,116 | 94,78,29,730 | 78,41,84,842 |
| | (ಬಿ) ಹಣಕಾಸಿನ ಆಸ್ತಿಗಳು | | | | |
| | (i) ಇತರೆ ಹೂಡಿಕೆಗಳು | 10 | - | - | - |
| | (ii) ವ್ಯಾಪಾರದಿಂದ ಬರಬೇಕಾಗಿರುವುದು | 11 | 1,59,48,76,342 | 73,81,00,036 | 74,67,23,320 |
| | (iii) ನಗದು ಮತ್ತು ನಗದು ಸಮಾನಗಳು | 12 | 2,25,24,53,868 | 2,20,80,46,193 | 1,55,80,87,280 |
| | (iv) ಮೇಲಿನ (iii) ಹೊರತಾಗಿ ಬ್ಯಾಂಕ್ ಶಿಲ್ಕುಗಳು | 13 | 77,41,40,728 | 74,84,14,714 | 65,93,15,606 |
| | (v) ಇತರೆ ಹಣಕಾಸಿನ ಆಸ್ತಿಗಳು | 6 | - | - | - |
| | (ಸಿ) ಚಾಲ್ತಿ ತೆರಿಗೆ ಆಸ್ತಿಗಳು (ನಿವ್ವಳ) | 14 | - | - | - |
| | (ಡಿ) ಇತರೆ ಚಾಲ್ತಿ ಆಸ್ತಿಗಳು | 8 | 1,61,41,39,189 | 1,44,23,39,936 | 1,72,52,43,022 |
| | **ಒಟ್ಟು ಚಾಲ್ತಿ ಆಸ್ತಿಗಳು** | | **74,61,041,243** | **6,084,730,609** | **5,473,554,070** |
| | **ಒಟ್ಟು ಆಸ್ತಿಗಳು** | | **9,615,678,285** | **8,006,194,618** | **7,404,222,603** |

| | | | | | |
|---|---|---|---|---|---|
| ಬಿ | **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | | |
| | **ಈಕ್ವಿಟಿ** | | | | |
| | (ಎ) ಈಕ್ವಿಟಿ ಷೇರು ಬಂಡವಾಳ | 15 | 42,82,13,402 | 20,26,31,702 | 20,26,34,702 |
| | (ಬಿ) ಇತರೆ ಈಕ್ವಿಟಿ | 16 | 3,97,07,24,906 | 3,85,03,27,433 | 3,38,36,42,105 |
| | **ಒಟ್ಟು ಈಕ್ವಿಟಿ** | | **4,39,89,38,308** | **4,05,29,59,135** | **3,59,12,73,807** |
| | **ಹೊಣೆಗಾರಿಕೆಗಳು**<br>**ಚಾಲ್ತಿಯೇತರ ಹೊಣೆಗಾರಿಕೆಗಳು** | | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | | |
| | (i) ಸಾಲಗಳು | 17 | 9,05,88,573 | 9,05,88,573 | 9,05,88,573 |
| | (ii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 18 | - | - | - |
| | (ಬಿ) ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು | 7 | 1,55,21,665 | 79,87,600 | 50,46,770 |
| | (ಸಿ) ವ್ಯವಸ್ಥೆಗಳು | 19 | 10,08,10,937 | 10,92,58,592 | 10,53,65,375 |
| | (ಡಿ) ಇತರೆ ಚಾಲ್ತಿಯೇತರ ಹೊಣೆಗಾರಿಕೆಗಳು | 20 | 1,12,38,88,053 | 1,09,97,57,591 | 1,07,01,62,830 |
| | **ಒಟ್ಟು ಚಾಲ್ತಿಯೇತರ ಹೊಣೆಗಾರಿಕೆಗಳು** | | **1,33,08,09,228** | **1,30,75,92,356** | **1,27,11,63,548** |
| | **ಚಾಲ್ತಿ ಹೊಣೆಗಾರಿಕೆಗಳು** | | | | |
| | (ಎ) ಹಣಕಾಸಿನ ಆಸ್ತಿಗಳು | | | | |
| | (i) ಸಾಲಗಳು | 21 | - | - | - |
| | (ii) ವ್ಯಾಪಾರದ ಸಂಬಂಧ ಮಾಡಬೇಕಾದ ಪಾವತಿಗಳು | 22 | 2,87,74,88,051 | 1,57,88,69,822 | 1,55,51,68,156 |
| | (i) ಇತರೆ ಹಣಕಾಸಿನ ಹೊಣೆಗಾರಿಕೆಗಳು | 18 | - | - | - |
| | (ಬಿ) ವ್ಯವಸ್ಥೆಗಳು | 19 | 55,26,24,178 | 61,70,73,184 | 59,35,15,247 |
| | (ಸಿ) ಇತರೆ ಚಾಲ್ತಿ ಹೊಣೆಗಾರಿಕೆಗಳು | 20 | 45,58,18,519 | 44,97,00,122 | 39,31,01,847 |
| | **ಒಟ್ಟು ಚಾಲ್ತಿ ಹೊಣೆಗಾರಿಕೆಗಳು** | | **3,88,59,30,749** | **2,64,56,43,128** | **2,54,17,85,250** |
| | **ಒಟ್ಟು ಹೊಣೆಗಾರಿಕೆಗಳು** | | **5,21,67,39,977** | **3,95,32,35,484** | **3,81,29,48,798** |
| | **ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | **9,61,56,78,285** | **8,00,61,94,618** | **7,40,42,22,603** |

ಇದರೊಡನೆ ಸೇರಿಸಿರುವ ಟಿಪ್ಪಣಿಗಳು ಈ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವುದು.

ಲಗತ್ತಿಸಿರುವ ನಮ್ಮ ವರದಿಯ ಅನುಸಾರ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

ಸಹಿ/-
**ಕೆ.ಜೆ.ಜಾರ್ಜ್**
ಅಧ್ಯಕ್ಷರು

ಸಹಿ/-
**ಡಾ. ಜಿ.ಸಿ. ಪ್ರಕಾಶ್**
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
**ಶ್ರೀದೇವಿ ಬಿ.ಎಸ್.**
ಕಂಪನಿ ಕಾರ್ಯದರ್ಶಿ

ಸಹಿ/-
**ಸುಬ್ರಮಣ್ಯ**
ಮುಖ್ಯ ಹಣಕಾಸು ಅಧಿಕಾರಿ

ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ
**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
**ಡಿ. ಮಣಿಕುಮಾರ್**
ಪಾಲುದಾರರು
ಸದಸ್ಯತ್ವ ಸಂಖ್ಯೆ: 212544

ದಿನಾಂಕ : 16.11.2018
ಸ್ಥಳ : ಬೆಂಗಳೂರು

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ಕ್ರೋಢೀಕೃತ ವಿವರ

(ರೂ.ಗಳಲ್ಲಿ)

| ಕ್ರ. ಸಂ. | ವಿವರಗಳು | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಕ್ಕೆ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷಕ್ಕೆ |
|---|---|---|---|---|
| I. | ಕಾರ್ಯಾಚರಣೆಗಳಿಂದ ಬಂದ ಆದಾಯ | 23 | 19,34,95,20,826 | 15,98,50,93,789 |
| II. | ಇತರೆ ಆದಾಯ | 24 | 22,38,51,647 | 22,80,50,165 |
| III. | **ಒಟ್ಟು ಆದಾಯ (I+II)** | | **19,57,33,72,473** | **16,21,31,43,954** |
| IV. | **ಖರ್ಚುಗಳು:** | | | |
| | ಬಳಸಿರುವ ಸಾಮಗ್ರಿಗಳ ಬೆಲೆ | 25 | 7,45,48,319 | 10,45,30,364 |
| | ವ್ಯಾಪಾರದ ಸರಕಿನ ಖರೀದಿ | | 14,70,26,94,166 | 13,05,90,24,358 |
| | ಸಿದ್ಧಪಡಿಸಿದ ಸರಕುಗಳ ತಪಶೀಲಿನಲ್ಲಿ ಬದಲಾವಣೆಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ವ್ಯಾಪಾರಿ ಸರಕು | 26 | -20,18,92,853 | -19,64,67,991 |
| | ಸೇವೆಗಳ ವೆಚ್ಚ | | 2,69,35,39,240 | 1,26,05,34,454 |
| | ನೌಕರರ ಸೌಲಭ್ಯ ವೆಚ್ಚಗಳು | 27 | 33,08,16,707 | 27,38,31,629 |
| | ಹಣಕಾಸಿನ ವೆಚ್ಚಗಳು | 28 | 1,06,95,671 | 54,41,117 |
| | ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು | 29 | 3,87,40,283 | 3,46,63,899 |
| | ಇತರೆ ಖರ್ಚುಗಳು | 30 | 1,35,14,96,108 | 88,35,71,495 |
| | **ಒಟ್ಟು ಖರ್ಚುಗಳು (IV)** | | **19,00,06,37,640** | **15,42,51,29,325** |
| V. | ಅಸಾಧಾರಣ ಐಟಂಗಳು ಮತ್ತು ತೆರಿಗೆಗೆ ಮುನ್ನ ಲಾಭ (III-IV) | | 57,27,34,833 | 78,80,14,629 |
| VI. | ಅಸಾಧಾರಣ ಐಟಂಗಳು | 31 | 12,83,154 | 30,73,863 |
| VII. | ತೆರಿಗೆಗೆ ಮುನ್ನ ಲಾಭ (V-VI) | | 57,14,51,679 | 78,49,40,766 |
| VIII. | ತೆರಿಗೆ ಖರ್ಚುಗಳು: | | | |
| | (1) ಚಾಲ್ತಿ ತೆರಿಗೆ | | 23,71,66,550 | 28,14,10,533 |
| | (2) ಹಿಂದಿನ ಅವಧಿ ತೆರಿಗೆ | | 92,01,895 | 1,36,10,053 |
| | (3) ಮುಂದೂಡಿದ ತೆರಿಗೆ | | -1,87,52,585 | 31,12,451 |
| | **ಒಟ್ಟು ತೆರಿಗೆ ಖರ್ಚುಗಳು** | | **22,76,15,860** | **29,81,33,037** |
| IX. | ವರ್ಷದ ಲಾಭ (VII-VIII) | | 34,38,35,820 | 48,68,07,729 |
| | ಸ್ಥಗಿತವಾದ ಕಾರ್ಯಾಚರಣೆಗಳು | | | |
| | ಸ್ಥಗಿತವಾದ ಕಾರ್ಯಾಚರಣೆಗಳಿಂದ ಬಂದ ವರ್ಷದ ತೆರಿಗೆ ಪಾವತಿಗೆ ಮುನ್ನಿನ ಲಾಭ /(ನಷ್ಟ) | | -10,43,887 | 2,01,859 |
| | ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ತೆರಿಗೆ ಆದಾಯ (ಖರ್ಚು) | | - | - |
| | ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ವರ್ಷದಲ್ಲಿ ಆದ ಲಾಭ/(ನಷ್ಟ) | | **-10,43,887** | **2,01,859** |

| | | | | |
|---|---|---|---|---|
| | **ಇತರೆ ಸಮಗ್ರ ಆದಾಯ** | | | |
| ಎ. | i. ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳು | | – | – |
| | ii. ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ | | – | – |
| | **ಒಟ್ಟು ಇತರೆ ಸಮಗ್ರ ಆದಾಯ (ಎ(i-ii)+ (ಬಿ(i-ii)** | | – | – |
| | **ವರ್ಷದ ಒಟ್ಟು ಸಮಗ್ರ ಆದಾಯ** | | **34,27,91,933** | **48,70,09,588** |
| | **ಈಕ್ವಿಟಿ ಷೇರು ಒಂದರ ಗಳಿಕೆ** | | | |
| | ನಿರಂತರ ಕಾರ್ಯಾಚರಣೆಯ ಷೇರು ಒಂದರ ಗಳಿಕೆಗಳು | | | |
| | ಈಕ್ವಿಟಿ ಧಾರಕರುಗಳಿಗೆ ಅನ್ವಯ ಮಾಡಬಹುದಾದ ಮುಂದುವರಿದ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕ ಹಾಕಿದ ಮೂಲ ಮೊತ್ತ | | 163.89 | 241.27 |
| | ಈಕ್ವಿಟಿ ಧಾರಕರುಗಳಿಗೆ ಅನ್ವಯ ಮಾಡಬಹುದಾದ ಮುಂದುವರಿದ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕ ಹಾಕಿದ ದ್ರವೀಕೃತ ಮೊತ್ತ | | 163.89 | 241.27 |
| | **ಸ್ಥಗಿತಗೊಂಡ ಕಾರ್ಯಾಚರಣೆ ಬಗ್ಗೆ ಷೇರು ಒಂದರ ಗಳಿಕೆ** | | | |
| | ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ಮೂಲ ಮೊತ್ತ | | (0.50) | 0.10 |
| | ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ದ್ರವೀಕೃತ ಮೊತ್ತ | | (0.50) | 0.10 |
| | **ಮುಂದುವರಿದ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಷೇರು ಒಂದರ ಗಳಿಕೆಗಳು** | | | |
| | (ಎ) ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ಮೂಲ ಮೊತ್ತ | | 163.39 | 241.37 |
| | (ಬಿ) ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ದ್ರವೀಕೃತ ಮೊತ್ತ | | 163.39 | 241.37 |

ಇದರೊಡನೆ ಸೇರಿಸಿರುವ ಟಿಪ್ಪಣಿಗಳು ಈ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವುದು.

ಲಗತ್ತಿಸಿರುವ ನಮ್ಮ ವರದಿಯ ಅನುಸಾರ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

| | | | | |
|---|---|---|---|---|
| ಸಹಿ/- | ಸಹಿ/- | ಸಹಿ/- | ಸಹಿ/- | ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ |
| **ಕೆ.ಜೆ.ಜಾರ್ಜ್** | **ಡಾ. ಜಿ.ಸಿ. ಪ್ರಕಾಶ್** | **ಶ್ರೀದೇವಿ ಬಿ.ಎನ್.** | **ಸುಬ್ರಮಣ್ಯ** | **ಪಿ. ಚಂದ್ರಶೇಖರ್ ಎಲ್‌ಎಲ್‌ಪಿ** |
| ಅಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು | ಕಂಪನಿ ಕಾರ್ಯದರ್ಶಿ | ಮುಖ್ಯ ಹಣಕಾಸು ಅಧಿಕಾರಿ | ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ |

ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066

ಸಹಿ/-

**ಡಿ. ಮಣಿಕುಮಾರ್**

ಪಾಲುದಾರರು

ಸದಸ್ಯತ್ವ ಸಂಖ್ಯೆ: 212544

ದಿನಾಂಕ : 16.11.2018

ಸ್ಥಳ : ಬೆಂಗಳೂರು

## 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ನಗದು ಹರಿಯುವಿಕೆ ವಿವರ

ಕ್ರೋಡೀಕರಿಸಿರುವುದು
(ಮೊತ್ತ ರೂ.ಗಳಲ್ಲಿ)

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಎ. ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಹರಿಯುವಿಕೆ | | |
| ತೆರಿಗೆಗೆ ಮುನ್ನ ಲಾಭ | 43,96,66,818 | 69,16,52,122 |
| ಕೆಳಕಂಡವುಗಳಿಗೆ ಹೊಂದಾಣಿಕೆ: | | |
| ಸವಕಳಿ ಮತ್ತು ಅಮಾರ್ಟೈಜೇಷನ್ | 3,87,40,286 | 3,46,63,899 |
| ಹಣಕಾಸಿನ ವೆಚ್ಚ(ನಿವ್ವಳ) | 1,04,42,675 | 1,04,42,675 |
| ಸರ್ಕಾರದ ಸಾಲಗಳ ಮೇಲೆ ನೀಡಿದ ಬಡ್ಡಿ ಅನುದಾನ | – | – |
| ಉಂಟಾದ ನಿವ್ವಳ (ಲಾಭ)/ನಷ್ಟ | – | – |
| ನೌಕರರ ಸೌಲಭ್ಯ ಯೋಜನೆಯ ಪುನರ್‌ಮಾಪನ | 14,30,00,000 | 8,34,51,495 |
| ಲಾಭಾಂಶದ ಆದಾಯ | – | – |
| ಸ್ಥಿರಾಸ್ತಿಗಳ ಮಾರಾಟದ ಮೇಲಿನ ಲಾಭ (ನಿವ್ವಳ) | -4,88,427 | 16,009 |
| ಬಡ್ಡಿ ಆದಾಯ | -15,52,12,873 | 8,76,32,509 |
| ವಸೂಲಾಗದ ಸಾಲ | 71,75,104 | – |
| ಹಿಂದಿರುಗಿಸುವ ಅಗತ್ಯವಾಗಿರದ ಹೊಣೆಗಾರಿಕೆ | -1,19,89,552 | -47,83,712 |
| ಹೂಡಿಕೆಗಳ ಮೌಲ್ಯದಲ್ಲಿ ವೃದ್ಧಿ | – | – |
| ನೌಕರರ ಸೌಲಭ್ಯಗಳಿಗೆ ವ್ಯವಸ್ಥೆ | – | – |
| ಹಿಂದಿನ ಅವಧಿಯ ಆದಾಯ | 92,01,895 | 1,36,10,053 |
| ನಗದಾಗಿರದ ವಿನಿಮಯ (ಗಳಿಕೆ)/ನಷ್ಟ | – | – |
| ಹೂಡಿಕೆಗಳ ಮಾರಾಟದಿಂದ ಆದ ನಷ್ಟ/(ಗಳಿಕೆ) | -1,92,79,139 | -6,40,748 |
| **ದುಡಿಮೆಯ ಬಂಡವಾಳ ಬದಲಾವಣೆಗಳಿಗೆ ಮುನ್ನ ಕಾರ್ಯಾಚರಣೆ ಲಾಭ** | **46,12,56,787** | **91,60,46,302** |
| **ದುಡಿಮೆ ಬಂಡವಾಳದಲ್ಲಿ ಬದಲಾವಣೆ :** | | |
| ಹೆಚ್ಚಳ / (ಇಳಿಕೆ) ಗೆ ಹೊಂದಾಣಿಕೆಗಳು | – | – |
| ವ್ಯಾಪಾರ ಮತ್ತು ಇತರೆ ಸ್ವೀಕಾರಗಳು | -86,59,17,951 | 1,27,92,284 |
| ತಪಶೀಲುಗಳು | -27,64,23,000 | -16,36,44,888 |
| ನಗದು ಮತ್ತು ನಗದಿಗೆ ಸಮಾನವಾದವುಗಳು ಹೊರತಾಗಿ ಬ್ಯಾಂಕ್ ಶಿಲ್ಕುಗಳು | – | – |
| ಇತರೆ ಆಸ್ತಿಗಳು | -28,48,82,543 | 23,10,42,996 |
| ಇತರೆ ಹಣಕಾಸಿನ ಆಸ್ತಿಗಳು | -2,94,73,571 | 1,94,46,278 |
| ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದ್ದು | 1,29,90,65,381 | 2,24,76,303 |
| ಇತರೆ ಹೊಣೆಗಾರಿಕೆಗಳು | 2,98,77,302 | 6,49,74,680 |
| ಇತರೆ ಹಣಕಾಸಿನ ಹೊಣೆಗಾರಿಕೆಗಳು | -2,83,24,785 | 2,02,62,930 |
| **ಕಾರ್ಯಾಚರಣೆಯಿಂದ ಉತ್ಪತ್ತಿಯಾದ ನಗದು** | **-15,60,79,167** | **20,73,50,583** |

| | | |
|---|---|---|
| ಪಾವತಿ ಮಾಡಿದ ತೆರಿಗೆ | -32,06,63,890 | -27,81,94,774 |
| ಕಾರ್ಯಾಚರಣೆ ಚಟುವಟಿಕೆಗಳಿಂದ ಉತ್ಪತ್ತಿಯಾದ ನಿವ್ವಳ ನಗದು | -1,54,86,270 | 84,52,02,111 |
| **ಬಿ. ಹೂಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| ಬಂಡವಾಳ ಮುಂಗಡಗಳು ಸೇರಿದಂತೆ ಸ್ಥಿರಾಸ್ತಿಗಳ ಖರೀದಿ | -11,49,42,840 | -9,45,28,516 |
| ಸ್ಥಿರಾಸ್ತಿಗಳ ಮಾರಾಟದಿಂದ ಬಂದ ಹಣ | 4,59,000 | 4,610 |
| ಹೂಡಿಕೆಗಳ (ಖರೀದಿ)/ಮಾರಾಟ | 3,000 | 10,75,78,750 |
| ಹೂಡಿಕೆ ಆದಾಯ | - | - |
| ಪಡೆದಿರುವ ಬಡ್ಡಿ | 15,82,26,171 | -9,01,77,190 |
| ಪಡೆದಿರುವ ಲಾಭಾಂಶ | - | - |
| **ಹೂಡಿಕೆ ಚಟುವಟಿಕೆಗಳಲ್ಲಿ ಬಳಸಿರುವ ನಿವ್ವಳ ನಗದು** | **4,37,45,331** | **-7,71,22,346** |
| **ಸಿ. ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| ಷೇರು ಬಂಡವಾಳ ನೀಡಿಕೆಯಿಂದ ಬಂದ ಹಣ | -10,43,887 | 2,01,859 |
| ಅಲ್ಪಾವಧಿ ಸಾಲಗಳಿಂದ ಬಂದ ಹಣ | 3,19,34,979 | 38,73,564 |
| ದೀರ್ಘಾವಧಿ ಸಾಲಗಳ ಮರುಪಾವತಿ | - | - |
| ಹಣಕಾಸಿನ ವೆಚ್ಚ | -1,04,42,675 | -1,04,42,675 |
| ಪಾವತಿ ಮಾಡಿದ ಲಾಭಾಂಶ | -35,72,520 | -26,79,390 |
| ಪಾವತಿ ಮಾಡಿದ ಲಾಭಾಂಶ ವಿತರಣೆ ತೆರಿಗೆ | -7,27,281 | -5,45,461 |
| ಹಣಕಾಸು ನೀಡಿಕೆ ಚಟುವಟಿಕೆಗಳಿಗೆ ಬಳಸಿದ ನಿವ್ವಳ ನಗದು | 1,61,48,616 | -95,92,103 |
| ನಗದು ಮತ್ತು ನಗದಿಗೆ ಸಮಾನದಲ್ಲಿನ ನಿವ್ವಳ (ಇಳಿಕೆ)/ಹೆಚ್ಚಳ | | |
| (ಎ+ಬಿ+ಸಿ) | **4,44,07,677** | **75,84,87,662** |
| ಸಮಂಜಸತೆ | | |
| ವರ್ಷದ ಆರಂಭದಲ್ಲಿದ್ದಂತೆ ನಗದು ಮತ್ತು ನಗದು ಸಮಾನಗಳು | **2,20,80,46,193** | **1,55,80,87,280** |
| ವರ್ಷಾಂತ್ಯದಲ್ಲಿದ್ದ ನಗದು ಮತ್ತು ನಗದು ಸಮಾನಗಳು | **2,25,24,53,868** | **2,20,80,46,193** |
| **ನಗದು ಮತ್ತು ನಗದು ಸಮಾನಗಳಲ್ಲಿನ ನಿವ್ವಳ (ಹೆಚ್ಚಳ)/ಇಳಿಕೆ** | **4,44,07,675** | **64,99,58,913** |

ಇದರೊಡನೆ ಸೇರಿಸಿರುವ ಟಿಪ್ಪಣಿಗಳು ಈ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವುದು.

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

| ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|
| **ಕೆ.ಜೆ.ಜಾರ್ಜ್** | **ಡಾ. ಜಿ.ಸಿ. ಪ್ರಕಾಶ್** | **ಶ್ರೀದೇವಿ ಬಿ.ಎನ್.** | **ಸುಬ್ರಮಣ್ಯ** |
| ಅಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು | ಕಂಪನಿ ಕಾರ್ಯದರ್ಶಿ | ಮುಖ್ಯ ಹಣಕಾಸು ಅಧಿಕಾರಿ |

ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ
**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
**ಡಿ. ಮಣಿಕುಮಾರ್**
ಪಾಲುದಾರರು
ಸದಸ್ಯತ್ವ ಸಂಖ್ಯೆ: 212544

ದಿನಾಂಕ : 16.11.2018
ಸ್ಥಳ : ಬೆಂಗಳೂರು

# 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು

## 1. ಕಂಪನಿ ಕುರಿತ ಮಾಹಿತಿ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿಯು ಕರ್ನಾಟಕ ಸರ್ಕಾರದ ಒಂದು ಪ್ರಮುಖ ಉದ್ಯಮವಾಗಿರುವುದು. ಇದು ವಿವಿಧ ಉತ್ಪನ್ನಗಳು ಮತ್ತು ಸೇವೆಗಳ ವ್ಯವಹಾರ ನಡೆಸುತ್ತಿರುವುದು. ಇದು ಒಂದು ವ್ಯಾಪಾರ ಸಂಸ್ಥೆಯಾಗಿ 1966ರಲ್ಲಿ ಪ್ರಾರಂಭವಾಗಿದೆ. ಈ ಕಂಪನಿಯು ಪ್ರಾರಂಭವಾದ ಸಮಯದಿಂದ ಪ್ರಮುಖ ಮಾರಾಟ ಶಕ್ತಿಯಾಗಿ ರಾಷ್ಟ್ರಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿದೆ. ಇದು ಕರ್ನಾಟಕದಾದ್ಯಂತ ಕಚೇರಿಗಳ ವ್ಯಾಪಕ ಜಾಲಬಂಧ ಹೊಂದಿರುವುದರ ಜೊತೆಗೆ, ದೇಶದಲ್ಲಿನ ಕೆಲವು ಪ್ರಮುಖ ಸ್ಥಳಗಳಲ್ಲಿಯೂ ಕಚೇರಿಗಳನ್ನು ಹೊಂದಿದೆ. ಭಾರತದಲ್ಲಿ ತಯಾರಾದ ವಿದೇಶಿ ಮದ್ಯದ ವ್ಯಾಪಾರ ವ್ಯವಹಾರ, ಚಿಟ್ ಫಂಡ್‌ಗಳನ್ನು ನಡೆಸುವುದು, ಕಾಗದದ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ಮತ್ತು ಆಮದಾದ ಮರಳಿನ ವ್ಯಾಪಾರ/ಮಾರಾಟ, ಫಾರ್ಮಸ್ಯೂಟಿಕಲ್, ಕೈಗಾರಿಕೆ ಮತ್ತು ಗ್ರಾಹಕರ ಉತ್ಪನ್ನಗಳ ಮಾರಾಟ ವ್ಯವಹಾರವನ್ನು ನಡೆಸುತ್ತಿರುವುದು.

## 2. ಮಹತ್ತರವಾದ ಲೆಕ್ಕ ನಿರ್ವಹಣೆ ನೀತಿಗಳು :

### ಎ. ಸಿದ್ಧತೆಗೆ ಮೂಲಾಧಾರ:

ಕಂಪನಿಯ ಹಣಕಾಸಿನ ಹೇಳಿಕೆಗಳನ್ನು ಅನ್ವಯವಾಗುವ ರೀತಿಯಲ್ಲಿ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು (Ind AS) ಮತ್ತು ಕಂಪನಿಗಳ ಕಾಯ್ದೆ 2013ರ ('ಕಾಯ್ದೆ') ಸಂಬಂಧಪಟ್ಟ ಉಪಬಂಧಗಳ ಅನುಸಾರ ಸಿದ್ಧಪಡಿಸಲಾಗಿದೆ ಮತ್ತು ಮಂಡಿಸಲಾಗಿದೆ. ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ) ನಿಯಮಗಳು, 2015 ಓದಿಕೊಂಡಂತೆ, ಕಾಯ್ದೆಯ ಪ್ರಕರಣ 133ರ ಅನ್ವಯ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳನ್ನು ನಿಗದಿಪಡಿಸಲಾಗಿದೆ.

31ನೇ ಮಾರ್ಚ್ 2018ರವರೆಗೆ ಮತ್ತು ಈ ಅವಧಿಗೆ ಮುಕ್ತಾಯಗೊಂಡ ವರ್ಷವೂ ಸೇರಿದಂತೆ ಎಲ್ಲಾ ಅವಧಿಗೆ ಅನ್ವಯವಾಗುವಂತೆ ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014 (ಭಾರತೀಯ ಜಿಎಎಪಿ)ರ ಪ್ಯಾರಾಗ್ರಾಫ್ 7ರ ಜೊತೆಗೆ ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 133ರ ಅನ್ವಯ ಪ್ರಕಟಪಡಿಸಿರುವಂತೆ ಲೆಕ್ಕನಿರ್ವಹಣೆ ಗುಣಮಟ್ಟಗಳ ಅನುಸಾರ ಕಂಪನಿಯು ತನ್ನ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿದೆ. 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಈ ಹಣಕಾಸಿನ ಹೇಳಿಕೆಗಳು ಕಂಪನಿಯು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ (Ind AS) ಅನುಸಾರ ಸಿದ್ಧಪಡಿಸಿರುವ ಹಣಕಾಸಿನ ಹೇಳಿಕೆಯ ಪ್ರಥಮ ಸೆಟ್ ಆಗಿರುವುದು.

ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟವನ್ನು (Ind AS) ಐಎನ್‌ಡಿ ಎಎಸ್ 101ರ ಅನುಸಾರ ಅಳವಡಿಸಿಕೊಳ್ಳಲಾಗಿದೆ. - ಇದು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಮೊದಲ ಬಾರಿಯ ಅಳವಡಿಕೆಯಾಗಿರುವುದು.

ಹಿಂದಿನ ಜಿಎಎಪಿ ಆಗಿದ್ದ ಭಾರತೀಯ ಜಿಎಎಪಿಯಿಂದ ಬದಲಾವಣೆಯನ್ನು ಮಾಡಲಾಗಿದೆ.

ನ್ಯಾಯೋಚಿತ ಮೌಲ್ಯಗಳಲ್ಲಿ ಮಾಪನ ಮಾಡಿರುವ ಕೆಲವು ಹಣಕಾಸಿನ ಸಾಧನಗಳ ಹೊರತಾಗಿ, ಹಣಕಾಸಿನ ಹೇಳಿಕೆಗಳನ್ನು ಸಂಚಯನ ಆಧಾರದ ಮೇಲೆ ಐತಿಹಾಸಿಕ ವೆಚ್ಚ ಒಪ್ಪಂದ ಅನ್ವಯ ಸಿದ್ಧಪಡಿಸಲಾಗಿದೆ.

ಹೊಸದಾಗಿ ಹೊರಡಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟವನ್ನು ಪ್ರಾರಂಭಿಕವಾಗಿ ಅಳವಡಿಸಿಕೊಂಡಿರುವ ಅಥವಾ ಇದುವರೆಗೂ ಬಳಕೆಯಲ್ಲಿರುವ ಲೆಕ್ಕನಿರ್ವಹಣೆ ನೀತಿಯಲ್ಲಿ ಬದಲಾವಣೆ ಮಾಡಬೇಕಾಗಿದ್ದ ಹಾಲಿಯಿರುವ ಲೆಕ್ಕನಿರ್ವಹಣೆ ಗುಣಮಟ್ಟಕ್ಕೆ ಪರಿಷ್ಕರಣೆ ಮಾಡಿರುವ ಸಂದರ್ಭಗಳ ಹೊರತಾಗಿ ಉಳಿದಂತೆ ಲೆಕ್ಕ ನಿರ್ವಹಣೆ ನೀತಿಗಳನ್ನು ಸಮಂಜಸವಾಗಿ ಅನ್ವಯಿಸಲಾಗಿದೆ. ಆಡಳಿತ ಮಂಡಳಿಯು ಇತ್ತೀಚೆಗೆ ಹೊರಡಿಸಿದ ಚಲನಾತ್ಮಕ ಆಧಾರದ ಮೇಲೆ ಮೌಲ್ಯಂಕಣ ಮಾಡಿದೆ ಮತ್ತು ಅಳವಡಿಸಿಕೊಂಡಿದೆ.

### ಬಿ. ಅಂದಾಜುಗಳ ಬಳಕೆ :

ಹಣಕಾಸಿನ ಹೇಳಿಕೆಗಳ ದಿನಾಂಕದಲ್ಲಿದ್ದಂತೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲ್ಪಟ್ಟಿರುವ ಶಿಲ್ಕುಗಳ ಮೇಲೆ ಮತ್ತು ಅನುಷಂಗಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಪ್ರಕಟಣೆಗಳ ಮೇಲೆ ಹಾಗೂ ಸದರಿ ಅವಧಿಯಲ್ಲಿನ ಆದಾಯ ಮತ್ತು ಖರ್ಚುಗಳ ತಿಳಿಸಲಾದ ಮೊತ್ತಗಳ ಮೇಲೆ ಪರಿಣಾಮ ಉಂಟು ಮಾಡುವ ಅಂದಾಜುಗಳು ಮತ್ತು ಊಹೆಗಳನ್ನು ಕಂಪನಿಯ ಆಡಳಿತ ಮಂಡಳಿಯು ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ವೇಳೆಯಲ್ಲಿ ಮಾಡಬೇಕಾಗುತ್ತದೆ. ಈ ಅಂದಾಜುಗಳು ಆಡಳಿತ ಮಂಡಳಿಯು ಚಾಲ್ತಿ ಘಟನಾವಳಿಗಳು ಮತ್ತು ಕ್ರಮಗಳ ಬಗ್ಗೆ ಹೊಂದಿರುವ ಪರಿಜ್ಞಾನದ ಮೇಲೆ ಆಧಾರಿತವಾದವುಗಳಾಗಿದ್ದರೂ, ಮುಂದಿನ ಅವಧಿಗಳಲ್ಲಿ ಆಸ್ತಿಗಳು ಅಥವಾ ಹೊಣೆಗಾರಿಕೆಗಳ ವಾಹಕ ಮೊತ್ತಗಳಿಗೆ ವಾಸ್ತವಿಕ ಹೊಂದಾಣಿಕೆ ಮಾಡಬೇಕಾಗಿ ಬಂದ ಸಂದರ್ಭದಲ್ಲಿ ಸದರಿ ಊಹೆಗಳು ಮತ್ತು ಅಂದಾಜುಗಳ ಬಗ್ಗೆ ಅನಿಶ್ಚಿತತೆ ತಲೆದೋರುವುದು.

### ಸಿ. ನಗದು ಹರಿವಿನ ವಿವರ

ನಗದು ಹರಿವಿನ ವಿವರಗಳನ್ನು 'ಐಎನ್‌ಡಿ-ಎಎಸ್7- ನಗದು ಹರಿವಿನ ವಿವರಗಳಲ್ಲಿ' ತಿಳಿಸಿರುವ 'ಪರೋಕ್ಷ ವಿಧಾನ' ದಲ್ಲಿ ಸಿದ್ಧಪಡಿಸಿದೆ ಮತ್ತು ಕಂಪನಿಯ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವನ್ನು ತಿಳಿಸುವುದು. ನಗದು ಹರಿವಿನ ವಿವರಗಳಲ್ಲಿ ತಿಳಿಸಿರುವ ನಗದು ಮತ್ತು ನಗದು ಸಮಾನಗಳು ಕೈಯಲ್ಲಿರುವ ನಗದು ಮತ್ತು ಬ್ಯಾಂಕುಗಳಲ್ಲಿರುವ ಡಿಮ್ಯಾಂಡ್ ಠೇವಣಿಗಳನ್ನು ಒಳಗೊಂಡಿರುವುದು.

### ಡಿ. ಸಂಬಂಧಪಟ್ಟ ವ್ಯಕ್ತಿಯ ಘೋಷಣೆಗಳು

ಕಂಪನಿಯು ಕರ್ನಾಟಕ ಸರ್ಕಾರದ ಸಂಪೂರ್ಣ ಒಡೆತನಕ್ಕೆ ಒಳಪಟ್ಟ ಸಹಾಯಕ ಕಂಪನಿಯಾಗಿರುವುದು. 'ಐಎನ್‌ಡಿ-ಎಎಸ್24- ಸಂಬಂಧಪಟ್ಟ ವ್ಯಕ್ತಿ ಘೋಷಣೆಯು' ವ್ಯವಹಾರಗಳನ್ನು ಪ್ರಕಟಪಡಿಸುವಿಕೆಯಿಂದ ಕಂಪನಿಗೆ ವಿನಾಯ್ತಿ ನೀಡುವುದು, ಹಾಗಾಗಿ ಸರ್ಕಾರದೊಡನೆ ನಡೆಸುವ ವ್ಯವಹಾರಗಳನ್ನು ಪ್ರಕಟಪಡಿಸುವುದಿಲ್ಲ.

# ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದುದು)

| ಸರ್ಕಾರದ ಹೆಸರು | ಕರ್ನಾಟಕ ಸರ್ಕಾರ |
| --- | --- |
| ವ್ಯವಹಾರದ ಸ್ವರೂಪ | ಕಂಪನಿಯ ಈಕ್ವಿಟಿ ಷೇರುಗಳಲ್ಲಿ ರೂ.42,73,47,700/- ಮೊತ್ತದ ಹೂಡಿಕೆ |

**ಎ. ಆದಾಯ ಗುರುತಿಸುವಿಕೆ:**

**I. ಮಾರಾಟ, ಕಮಿಷನ್ ಮತ್ತು ಸೇವಾ ಶುಲ್ಕಗಳು:**

ಎ) ಉತ್ಪನ್ನ ಮಾರಾಟದಿಂದ ಬಂದ ಆದಾಯ ಮತ್ತು ಸರಕುಗಳ ಮಾರಾಟಗಳ ಮೇಲಿನ ಕಮಿಷನ್ ಆದಾಯವನ್ನು ರವಾನೆ ಸಮಯದಲ್ಲಿ ಗುರುತಿಸಲಾಗಿದೆ.

ಬಿ) ಸಂಬಂಧಪಟ್ಟ ಸೇವೆಗಳನ್ನು ಮಾಡಿದಾಗ, ಅಥವಾ ಒಪ್ಪಂದವಾದ ಗುರಿಗಳನ್ನು ಸಾಧಿಸಿದಾಗ ಗ್ರಾಹಕರ ಜೊತೆಗಿನ ಗುತ್ತಿಗೆಗಳ ನಿಯಮಗಳ ಅನ್ವಯ ಸೇವಾ ಆದಾಯವನ್ನು ಮಾನ್ಯ ಮಾಡಿದೆ.

ಸಿ) ಪೋರ್‌ಮನ್ಸ್ ಕಮಿಷನ್, ಪೋರ್‌ಮನ್ಸ್ ಶಾಸನಬದ್ಧ ಟಿಕೆಟ್ ಮೇಲಿನ ಲಾಭಾಂಶದ ಆದಾಯ, ತಪ್ಪಿತಸ್ಥ ಅಮೂಲ್ಯವಲ್ಲದ/ಅಮೂಲ್ಯವಾದ ಚಂದಾದಾರರುಗಳಿಂದ ಬಂದ ಬಡ್ಡಿ, ಚಿಟ್‌ಫಂಡ್ ವ್ಯವಹಾರಗಳ ಅಮೂಲ್ಯ ಚಂದಾದಾರರುಗಳಿಂದ ಬಂದ ದಾಖಲೆಗಳ ಸಿದ್ಧತೆ ಶುಲ್ಕಗಳು ಮತ್ತು ಬಾಡಿಗೆದಾರರುಗಳಿಂದ ಬಂದ ದಂಡ ಇವುಗಳು ವಸೂಲಾಗುವುದು ಅನಿಶ್ಚಿತತೆಯಾಗಿರುವ ಪ್ರಯುಕ್ತ, ಅವುಗಳನ್ನು ನಗದು ಆಧಾರದ ಮೇಲೆ ಗುರುತಿಸಲಾಗಿದೆ.

**II ಇತರೆ ಆದಾಯ:**

ಎ) ಹೈರ್‌ಪರ್ಚೇಸ್ ಮಾರಾಟದ ಮೇಲಿನ ಬಡ್ಡಿ ಆದಾಯವನ್ನು ನಗದು ಆಧಾರದ ಮೇಲೆ ಗುರುತಿಸಲಾಗಿದೆ.

ಬಿ) ಉಚ್ಚ ನ್ಯಾಯಾಲಯದ ನಿರ್ದೇಶನಗಳ ಅನ್ವಯ ದಿನಾಂಕ:01.07.1990 ರಿಂದ 13.02.1997ರ ವರೆಗಿನ ಅವಧಿಗೆ ಮದ್ಯ ತಯಾರಕರುಗಳಿಂದ ಬರಬೇಕಿರುವ ಕಮೀಷನ್ ಆದಾಯವನ್ನು ಆ ಕಮೀಷನ್ ಪಾವತಿಯಾದಾಗ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಸಿ) ಬಡ್ಡಿ ಆದಾಯವನ್ನು ಸಂಚಿತ ಆಧಾರದ ಮೇಲೆ ಗುರುತಿಸಲಾಗಿದೆ.

ಡಿ) ಹೂಡಿಕೆಗಳ ಮೇಲಿನ ಲಾಭಾಂಶ ಆದಾಯ ಮತ್ತು ಸಹಾಯಕ ಕಂಪನಿಗಳಿಂದ ಬಂದ ಲಾಭಾಂಶವನ್ನು ಅವುಗಳ ಪಾವತಿಯ ಸ್ವೀಕರಣೆ ಹಕ್ಕನ್ನು ಪ್ರತಿಪಾದಿಸಿದಾಗ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಇ) ವಿಮಾ ಕ್ಲೇಮ್ ಅನ್ನು, ವಿಮಾ ಕಂಪನಿಯಿಂದ ಹಕ್ಕಿನ ಕೇಳಿಕೆಯನ್ನು ಸ್ಥಿರೀಕರಿಸಿದಾಗ ಆದಾಯವೆಂದು ಗುರುತಿಸಲಾಗಿದೆ.

**ಬಿ. ಸ್ವತ್ತು, ಸ್ಥಾವರ ಮತ್ತು ಉಪಕರಣ**

ಸ್ವಾಧೀನ ಬೆಲೆಯಲ್ಲಿ ತಿಳಿಸಿರುವ ಮುಕ್ತ ಹಿಡುವಳಿ ಜಮೀನಿನ ಹೊರತಾಗಿ ಸ್ವತ್ತು, ಸ್ಥಾವರ ಮತ್ತು ಉಪಕರಣವನ್ನು ಸ್ವಾಧೀನ ಅಥವಾ ನಿರ್ಮಾಣದ ವೆಚ್ಚದಲ್ಲಿ, ಸಂಚಯನವಾದ ಸವಕಳಿ ಮತ್ತು ಸಂಚಯನವಾದ ದುರ್ಬಲತೆ ನಷ್ಟ ಯಾವುದಾರೂ ಇದ್ದಲ್ಲಿ ಅದರ ನಿವ್ವಳ ಮೌಲ್ಯದಲ್ಲಿ ತಿಳಿಸಲಾಗಿದೆ.

ಪಿಪಿಇ ವೆಚ್ಚದಲ್ಲಿ ಸಂಬಂಧಪಟ್ಟ ಆಸ್ತಿಗಳ ಪಡೆಯುವಿಕೆ ಮತ್ತು ಸ್ಥಾಪನೆಗೆ ಖರೀದಿ ಬೆಲೆ, ಹಿಂದಿರುಗಿಸಲಾಗದ ಸುಂಕಗಳು ಮತ್ತು ತೆರಿಗೆಗಳು, ಸಾಗಾಣಿಕೆ ಮತ್ತು ಇತರೆ ಪ್ರಾಸಂಗಿಕ ಖರ್ಚುಗಳೂ ಸೇರಿರುವವು.

ಎ) ಗೋಚರಿತ ಸ್ಥಿರಾಸ್ತಿಗಳ ಬೆಲೆಯನ್ನು ಸೆಸ್, ವ್ಯಾಟ್ ಜಮೆ, ಅನುದಾನಗಳು, ಯಾವುದೇ ಇದ್ದಲ್ಲಿ ಅಂತಹ ಸವಕಳಿ ಮತ್ತು ದುರ್ಬಲತೆ ನಷ್ಟದ ನಿವ್ವಳ ಸೇರಿದಂತೆ ಸ್ವಾಧೀನ ಪಡೆದ ಅಥವಾ ನಿರ್ಮಾಣ ಮಾಡಿದ ಸಮಯದಲ್ಲಿ ಇದ್ದಂತೆ ತಿಳಿಸಿದೆ. ಸದರಿ ಬೆಲೆಯಲ್ಲಿ ಆಸ್ತಿಯನ್ನು ಉಪಯೋಗಕ್ಕೆ ಒಳಪಡಿಸುವವರೆಗೆ ಮಾಡಿದ ಖರ್ಚುಗಳೂ ಸಹ ಒಳಗೊಂಡಿರುವುದು.

ಬಿ) ಗುತ್ತಿಗೆ ಮೇಲೆ ಪಡೆದುಕೊಂಡ ಆಸ್ತಿಗಳನ್ನು ಗುತ್ತಿಗೆ ಅವಧಿಯಲ್ಲಿ ಅಮಾರ್ಟೈಸ್ ಮಾಡಿದೆ.

ಸಿ) ಗುತ್ತಿಗೆ ಹಾಗೂ ಮಾರಾಟದ ಮೇಲೆ ಪಡೆದಿರುವ ಜಮೀನಿನ ಸಂಬಂಧದಲ್ಲಿ, ಹಂಚಿಕೆ ಮೊತ್ತವನ್ನು ಯಾವುದೇ ಇದ್ದಲ್ಲಿ ವಾರ್ಷಿಕ ಗುತ್ತಿಗೆ ಬಾಡಿಗೆಯ ಜೊತೆಗೆ ಬಂಡವಾಳೀಕರಿಸಿದೆ.

ಡಿ) ಪ್ರಗತಿಯಲ್ಲಿರುವ ಬಂಡವಾಳ ಕಾರ್ಯವು ಅಭಿವೃದ್ಧಿಯಲ್ಲಿರುವ ಬಂಡವಾಳ ಯೋಜನೆಗಳ ಸಂಬಂಧ ಮಾಡಿರುವ ಖರ್ಚನ್ನು ಪ್ರತಿನಿಧಿಸುವುದು ಮತ್ತು ಅವುಗಳನ್ನು ಮೂಲ ಬೆಲೆಯಲ್ಲಿ ನಮೂದಿಸಲಾಗಿರುವುದು. ಸದರಿ ಬೆಲೆಯಲ್ಲಿ ಸಂಬಂಧಿಸಿದ ಸ್ವಾಧೀನತೆ ಖರ್ಚುಗಳು, ಅಭಿವೃದ್ಧಿ ವೆಚ್ಚಗಳು, ಸಾಲ ಪಡೆದ ಖರ್ಚುಗಳು (ಅನ್ವಯವಾಗುವಡೆಗಳಲ್ಲಿ) ಮತ್ತು ಇತರೆ ಪ್ರತ್ಯಕ್ಷ ಖರ್ಚುಗಳು ಒಳಗೊಂಡಿರುವುದು.

ಇ) ಗುತ್ತಿಗೆಗೆ ಪಡೆದ ಆಸ್ತಿಗಳಲ್ಲಿ ಕಟ್ಟಡ ನಿರ್ಮಾಣದ ವೆಚ್ಚವನ್ನು ಗುತ್ತಿಗೆ ಅವಧಿಯಲ್ಲಿ ಅಮಾರ್ಟೈಸ್ ಮಾಡಿದೆ.

ಎಫ್) ಉಳಿಕೆ ಮೌಲ್ಯವಾಗಿ 5% ಉಳಿಸಿಕೊಳ್ಳುವ ಮೂಲಕ ಸವಕಳಿ ಮಾಡಿರುವ ಪಾನೀಯ ವಿಭಾಗ ಹೊರತಾಗಿ, ಕಚೇರಿ ಉಪಕರಣಗಳ ವಿಚಾರದಲ್ಲಿ ಹೊರತಾಗಿ, ರೂ.1ರ ಉಳಿಕೆ ಮೌಲ್ಯವಾಗಿ ನಾಮ ಮಾತ್ರದ ಮೌಲ್ಯ ಕಾಪಾಡಿಕೊಂಡು ಸ್ಥಿರಾಸ್ತಿಗಳನ್ನು ಪೂರ್ಣವಾಗಿ ಸವಕಳಿ ಮಾಡಿದೆ ಅಥವಾ ಉಳಿಸಿಕೊಂಡಿದೆ.

**ಅಗೋಚರಿತ ಸ್ಥಿರಾಸ್ತಿಗಳು :**

ಎ) ಅಗೋಚರಿತ ಆಸ್ತಿಗಳನ್ನು ಸಂಚಯನವಾದ ಅಮಾರ್ಟೈಜೇಷನ್ ಕಳಿಕೆ ಮತ್ತು ಸಂಚಯನವಾದ ಸಂಭವನೀಯ ನಷ್ಟದ ನಿವ್ವಳದ ಜೊತೆಗೆ ಸ್ವಾಧೀನತೆಯ ಬೆಲೆಯಲ್ಲಿ ತಿಳಿಸಿದೆ.

ತಂತ್ರಾಂಶ/ತಾಂತ್ರಿಕ/ಪರವಾನಗಿಗಳನ್ನು ಮುಂದಿನ ಆರ್ಥಿಕ ಸೌಲಭ್ಯಗಳನ್ನು ಒದಗಿಸಬೇಕಾಗಿರುವ ಸಂದರ್ಭಗಳಲ್ಲಿ ಬಂಡವಾಳೀಕರಣ ಗೊಳಿಸಲಾಗುವುದು.

## ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದುದು)

**ಸಿ) ಸವಕಳಿ ಮತ್ತು ಆಮಾರ್ಟೈಜೇಷನ್:**

ಎ) ಗೋಚರಿತ ಸ್ಥಿರಾಸ್ತಿಗಳ ಸವಕಳಿಯನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಅವಧಿಯ ಅನುಸಾರ ನೇರ ಮಾರ್ಗದ ವಿಧಾನದಲ್ಲಿ ತಿಳಿಸಿದೆ. ತಾಂತ್ರಿಕ ಸಲಹೆಯ ಆಧಾರದ ಮೇಲೆ ಆಸ್ತಿಗಳ ಜೀವಿತಾವಧಿಯನ್ನು ನಿರ್ಧರಣೆ ಮಾಡಿರುವ ಕೆಲವು ಪ್ರವರ್ಗಗಳ ಆಸ್ತಿಗಳ ಸಂಬಂಧದಲ್ಲಿ ಆಸ್ತಿಗಳ ಸ್ವರೂಪ, ಆಸ್ತಿಯ ಅಂದಾಜು ಮಾಡಿದ ಉಪಯುಕ್ತತೆ, ಆಸ್ತಿಯ ಕಾರ್ಯಾಚರಣೆ ಸ್ಥಿತಿಗಳು, ಬದಲಾವಣೆ ಮತ್ತು ನಿರ್ವಹಣೆ ಬೆಂಬಲದ ಹಿಂದಿನ ಮಾಹಿತಿ ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸವಕಳಿ ಲೆಕ್ಕಾಚಾರಕ್ಕೆ ಪರಿಗಣಿಸಿರುವುದನ್ನು ಈ ಕೆಳಗೆ ನೀಡಲಾಗಿದೆ.

| ಆಸ್ತಿಯ ಪ್ರವರ್ಗ | | ಉಪಯುಕ್ತತೆ ಅವಧಿ |
|---|---|---|
| ಎ. | ಅಗ್ನಿಶಾಮಕ ಉಪಕರಣಗಳು | 20 ವರ್ಷಗಳು |
| ಬಿ. | ಮದ್ಯ ಮಾರಾಟ ಮಳಿಗೆಗಳಲ್ಲಿನ ಪೀಠೋಪಕರಣ ಮತ್ತು ಅಳವಡಿಕೆಗಳು | 5 ವರ್ಷಗಳು |
| ಸಿ. | ಪೀಠೋಪಕರಣ ಮತ್ತು ಅಳವಡಿಕೆಗಳು-ಇತರೆ | 10 ವರ್ಷಗಳು |
| ಡಿ. | ನಿರ್ವಹಣೆ ಉಪಕರಣಗಳು | 14 ವರ್ಷಗಳು |
| ಇ. | ತೂಕದ ಯಂತ್ರಗಳು | 14 ವರ್ಷಗಳು |
| ಎಫ್. | ಕಟ್ಟಡ-ಮುಕ್ತ ಹಿಡುವಳಿ | 60 ವರ್ಷಗಳು |
| ಜಿ. | ಕಂಪ್ಯೂಟರ್-ಗೋಚರಿತ<br>-ಅಗೋಚರಿತ | 3 ವರ್ಷಗಳು<br>6 ವರ್ಷಗಳು |
| ಎಚ್. | ಕಚೇರಿ ಉಪಕರಣಗಳು | 5 ವರ್ಷಗಳು |
| ಐ. | ವಿದ್ಯುತ್ ಉಪಕರಣಗಳು | 10 ವರ್ಷಗಳು |
| ಜೆ. | ವಾಹನಗಳು | 8 ವರ್ಷಗಳು |

ಬಿ. ಗುತ್ತಿಗೆ ಮೇಲಿರುವ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡದ ಸವಕಳಿಯನ್ನು, ಅದನ್ನು ಬಳಕೆಗೆ ಒಳಪಡಿಸಿದ ದಿನಾಂಕದಿಂದ ಪ್ರಾರಂಭಿಸಿ ಗುತ್ತಿಗೆಯ ಉಳಿಕೆ ಅವಧಿಯಲ್ಲಿ ತಿಳಿಸಲಾಗಿದೆ.

ಸಿ. ವರ್ಷದ ಅವಧಿಯಲ್ಲಿ ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ ವಿಸರ್ಜನೆ ಮಾಡಿದ ಸ್ಥಿರಾಸ್ತಿಗಳ ಸವಕಳಿಯನ್ನು ಸೇರ್ಪಡೆ ಮಾಡಿದ/ ವಿಲೇವಾರಿ ಮಾಡಿದ/ವಿಸರ್ಜಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಂಡು ದಮಾಷ ಆಧಾರದ ಮೇಲೆ ತಿಳಿಸಲಾಗಿದೆ.

**ಡಿ. ಸಾಲದ ವೆಚ್ಚಗಳು:**

ಸಾಲದ ವೆಚ್ಚದಲ್ಲಿ, ಸಾಲಗಳನ್ನು ಪಡೆಯುವ ಸಂದರ್ಭದಲ್ಲಿ ಮಾಡಿದ ವ್ಯವಸ್ಥೆಗಳ ಸಂಬಂಧ ಆದ ಬಡ್ಡಿ, ಇತರೆ ವೆಚ್ಚಗಳ ಅಮಾರ್ಟೈಜೇಷನ್ ಮತ್ತು ಬಡ್ಡಿ ವೆಚ್ಚಕ್ಕೆ ಹೊಂದಾಣಿಕೆಯಾಗಿ ಪರಿಗಣಿಸಲಾದ ಪ್ರಮಾಣದವರೆಗೆ ವಿದೇಶಿ ಕರೆನ್ಸಿ ಸಾಲಗಳಿಂದ ಉಂಟಾದ ವಿನಿಮಯ ವ್ಯತ್ಯಾಸಗಳು ಒಳಗೊಂಡಿರುವುದು. ಸಾಲದ ವೆಚ್ಚಗಳನ್ನು ಅವುಗಳು ಮುಂದಿನ ಆರ್ಥಿಕ ಸೌಲಭ್ಯಗಳನ್ನು ನೀಡುವ ಸಾಧ್ಯತೆಗಳುಂಟಾದಾಗ ಅರ್ಹತೆ ಹೊಂದಿದ ಆಸ್ತಿಗಳ ಭಾಗವಾಗಿ ಬಂಡವಾಳೀಕರಿಸಲಾಗುವುದು ಮತ್ತು ವೆಚ್ಚವನ್ನು ವಿಶ್ವಾಸನೀಯವಾಗಿ ಅಳತೆ ಮಾಡಲಾಗುವುದು.

ಇತರೆ ಸಾಲದ ವೆಚ್ಚಗಳನ್ನು ಅವುಗಳು ಉಂಟಾದ ಅವಧಿಯಲ್ಲಿ ಖರ್ಚು ಎಂಬುದಾಗಿ ಗುರುತಿಸಲಾಗಿದೆ ಮತ್ತು ಲಾಭ ಮತ್ತು ನಷ್ಟದ ವಿವರಗಳಿಗೆ ಅದನ್ನು ನಮೂದಿಸಿದೆ.

**ಇ. ಗುತ್ತಿಗೆಗಳು:**

i) **ಕಂಪನಿಯು ಗುತ್ತಿಗೆ ನೀಡಿಕೆದಾರರಾಗಿದ್ದಲ್ಲಿ:**

ಆಸ್ತಿಯ ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಸೌಲಭ್ಯಗಳನ್ನು ಗಣನೀಯವಾಗಿ ಕಂಪನಿ ವರ್ಗಾವಣೆ ಮಾಡಿರುವ ಗುತ್ತಿಗೆಗಳನ್ನು ಹಣಕಾಸಿನ ಗುತ್ತಿಗೆಗಳೆಂದು ವರ್ಗೀಕರಿಸಲಾಗಿದೆ. ಹಣಕಾಸಿನ ಗುತ್ತಿಗೆ ಅಡಿಯಲ್ಲಿ ತಿಳಿಸಿರುವ ಆಸ್ತಿಯನ್ನು ಗುತ್ತಿಗೆಯಲ್ಲಿ ಮಾಡಿರುವ ನಿವ್ವಳ ಹೂಡಿಕೆಗೆ ಸಮನಾದ ಮೊತ್ತದಲ್ಲಿ ಬರಬೇಕಾಗಿರುವುದು ಎಂಬುದಾಗಿ ಗುರುತಿಸಲಾಗಿದೆ. ಪ್ರಾರಂಭಿಕ ಗುರುತಿಸುವಿಕೆಯ ತರುವಾಯ, ಹಣಕಾಸಿನ ಗುತ್ತಿಗೆಯ ಸಂಬಂಧದಲ್ಲಿ ಬಾಕಿ ಉಳಿದಿರುವ ನಿವ್ವಳ ಹೂಡಿಕೆಯ ಮೇಲಿನ ಗಳಿಕೆಯ ಸ್ಥಿರವಾದ ನಿಯತಕಾಲಿಕ ದರವನ್ನು ರೂಪಿಸಲು ಅಸಲು ಮರುಪಾವತಿ ಮತ್ತು ಬಡ್ಡಿ ಆದಾಯದ ನಡುವಿನ ಗುತ್ತಿಗೆ ಬಾಡಿಗೆಗಳನ್ನು ಕಂಪನಿಯು ಹಂಚಿಕೆ ಮಾಡುವುದು. ಬಡ್ಡಿ ಆದಾಯವನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ಮಾನ್ಯ ಮಾಡಿದೆ. ಕಾನೂನು ವೆಚ್ಚಗಳು, ಬ್ರೋಕರೇಜ್ ವೆಚ್ಚಗಳು ಇತ್ಯಾದಿಯಂತಹ ಪ್ರಾರಂಭಿಕ ನೇರ ವೆಚ್ಚವನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ತಕ್ಷಣವೇ ಮಾನ್ಯ ಮಾಡಿದೆ.

ii) **ಕಂಪನಿಯು ಗುತ್ತಿಗೆ ಪಡೆದಿರುವುದಾಗಿದ್ದಲ್ಲಿ :**

ಗುತ್ತಿಗೆಗೆ ನೀಡಿರುವ ಬಾಬ್ತುಗಳ ಮಾಲೀಕತ್ವಕ್ಕೆ ಸಂಬಂಧಿಸಿದ ಎಲ್ಲಾ ಅಪಾಯಗಳು ಮತ್ತು ಸೌಲಭ್ಯಗಳನ್ನು ಕಂಪನಿಗೆ ಪರಿಣಾಮಕಾರಿಯಾಗಿ ಗಣನೀಯವಾಗಿ ವರ್ಗಾವಣೆ ಮಾಡಿದ ಹಣಕಾಸಿನ ಗುತ್ತಿಗೆಗಳನ್ನು ಗುತ್ತಿಗೆ ಅವಧಿಯ ಪ್ರಾರಂಭದಲ್ಲಿ ಗುತ್ತಿಗೆಗೆ ನೀಡಿದ ಸ್ವತ್ತಿನ ನ್ಯಾಯೋಚಿತ ಮೌಲ್ಯದ ಕಡಿಮೆ ದರದಲ್ಲಿ ಮತ್ತು ಕನಿಷ್ಠ ಗುತ್ತಿಗೆ ಪಾವತಿಗಳ ಪ್ರಸಕ್ತದ ಮೌಲ್ಯದಲ್ಲಿ ಬಂಡವಾಳೀಕರಿಸಿದೆ. ಹೊಣೆಗಾರಿಕೆಯ ಉಳಿಕೆ ಬಾಕಿಯ ಮೇಲಿನ ಸ್ಥಿರವಾದ ಬಡ್ಡಿದರ ರೂಪಿಸಲು ಹಣಕಾಸಿನ ಶುಲ್ಕಗಳು ಮತ್ತು ಗುತ್ತಿಗೆ ಹೊಣೆಗಾರಿಕೆ ಇಳಿಕೆ ನಡುವೆ ಗುತ್ತಿಗೆ ಪಾವತಿಗಳನ್ನು ಹಂಚಿಕೆ ಮಾಡಿದೆ. ಹಣಕಾಸಿನ ಶುಲ್ಕಗಳನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ಹಣಕಾಸಿನ ವೆಚ್ಚ ಎಂಬುದಾಗಿ ಮಾನ್ಯ ಮಾಡಿದೆ.

ಗುತ್ತಿಗೆ ನಿರ್ವಹಣೆ ಶುಲ್ಕಗಳು ಕಾನೂನು ಶುಲ್ಕಗಳು, ಮತ್ತು ಗುತ್ತಿಗೆಯ ಇತರೆ ಪ್ರಾರಂಭಿಕ ನೇರ ವೆಚ್ಚಗಳನ್ನು ಬಂಡವಾಳೀಕರಿಸಲಾಗಿದೆ.

ಆಸ್ತಿಯ ಉಪಯುಕ್ತತೆ ಅವಧಿಯಲ್ಲಿ ನೇರ ಮಾರ್ಗದ ಆಧಾರದಲ್ಲಿ ಅಥವಾ ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ತಿಳಿಸಿರುವ ಉಪಯುಕ್ತತೆ ಅವಧಿ ಇದರಲ್ಲಿ ಯಾವುದು ಕಡಿಮೆಯಾಗಿರುವುದೋ ಅದರಂತೆ ಗುತ್ತಿಗೆಗೆ ಪಡೆದಿರುವ ಆಸ್ತಿಯ ಸವಕಳಿ ಮಾಡಿದೆ. ಆದರೂ, ಗುತ್ತಿಗೆ ಅವಧಿಯ ಕೊನೆಯಲ್ಲಿ ಕಂಪನಿಯು ಮಾಲೀಕತ್ವ ಪಡೆಯುವ ಸೂಕ್ತವಾದ ನಿಶ್ಚಿತತೆ ಇಲ್ಲದಿದ್ದಲ್ಲಿ, ಆಸ್ತಿಯ ಅಂದಾಜು ಮಾಡಲಾದ ಉಪಯುಕ್ತತೆ ಅವಧಿ, ಗುತ್ತಿಗೆ ಅವಧಿ ಅಥವಾ ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-II ರಲ್ಲಿ ತಿಳಿಸಿರುವ ಉಪಯುಕ್ತತೆ ಅವಧಿಯಲ್ಲಿ ಯಾವುದು ಕಡಿಮೆಯಾಗಿರುವುದೋ ಅದರ ನೇರ ಮಾರ್ಗದ ಆಧಾರದ ಮೇಲೆ ಬಂಡವಾಳೀಕರಿಸಿದ ಆಸ್ತಿಯ ಸವಕಳಿ ಮಾಡಿದೆ.

ಗುತ್ತಿಗೆ ನೀಡಿರುವವರು, ಗುತ್ತಿಗೆ ನೀಡಿದ ಬಾಬ್ತಿನ ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಸೌಲಭ್ಯಗಳನ್ನು ಗಣನೀಯವಾಗಿ ಪರಿಣಾಮಕಾರಿಯಾಗಿ ಉಳಿಸಿಕೊಂಡಿರುವ ಸಂದರ್ಭಗಳಲ್ಲಿ ಅಂತಹ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಕಾರ್ಯಾಚರಣೆ ಗುತ್ತಿಗೆ ಪಾವತಿಗಳನ್ನು, ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟ 17ರ ಅನುಸಾರ, ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಲಾಭ ಮತ್ತು ನಷ್ಟದ ವಿವರದಲ್ಲಿ ಖರ್ಚು ಎಂಬುದಾಗಿ ಮಾನ್ಯ ಮಾಡಿದೆ.

ರದ್ದುಪಡಿಸಲಾಗದ ಕಾರ್ಯಾಚರಣೆ ಗುತ್ತಿಗೆಗಳ ಸಂಬಂಧ ಕೆಳಕಂಡ ಪ್ರತಿ ಅವಧಿಯ ಮುಂದಿನ ಕನಿಷ್ಠ ಒಟ್ಟು ಗುತ್ತಿಗೆ ಪಾವತಿ ವಿವರ:

| ವಿವರಗಳು | ಮೊತ್ತ ರೂ.ಗಳಲ್ಲಿ |
|---|---|
| 1 ವರ್ಷಕ್ಕಿಂತ ಮೀರಿದ ಅವಧಿಗೆ | 1,38,061/- |
| 1 ವರ್ಷಕ್ಕಿಂತ ಮೇಲ್ಪಟ್ಟು ಮತ್ತು 5 ವರ್ಷಗಳಿಗಿಂತ ಮೀರದ ಅವಧಿಗೆ | 3,46,133/- |
| 5 ವರ್ಷಗಳಿಗಿಂತ ಮೇಲ್ಪಟ್ಟ ಅವಧಿಗೆ | 53,74,523/- |

### ಎಫ್. ವಿದೇಶಿ ಕರೆನ್ಸಿ ವ್ಯವಹಾರ :

ವಿದೇಶಿ ಕರೆನ್ಸಿಯಲ್ಲಿನ ವ್ಯವಹಾರಗಳನ್ನು, ಆಯಾ ವ್ಯವಹಾರಗಳ ದಿನಾಂಕದಂದು ಜಾರಿಯಲ್ಲಿದ್ದ ವಿನಿಮಯ ದರಗಳಲ್ಲಿ ದಾಖಲಿಸಲಾಗಿದೆ. ವರ್ಷಾಂತ್ಯದಲ್ಲಿ ಇತ್ಯರ್ಥವಾಗದೆ ಉಳಿದಿದ್ದ ವಿದೇಶಿ ಕರೆನ್ಸಿ ವ್ಯವಹಾರಗಳಿಗೆ ಸಂಬಂಧಿಸಿದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಮುಂದುವರಿದ ವಿದೇಶಿ ವಿನಿಮಯ ಗುತ್ತಿಗೆಗಳ ಅಡಿಯಲ್ಲಿ ಒಳಪಟ್ಟಾಗ ಒಪ್ಪಂದವಾದ ದರಗಳಲ್ಲಿ ಮತ್ತು ಇತರೆ ಪ್ರಕರಣಗಳಲ್ಲಿ ವರ್ಷಾಂತ್ಯದ ದರಗಳಲ್ಲಿ ತಿಳಿಸಿದೆ.

ವರ್ಷದ ಅವಧಿಯಲ್ಲಿನ ವಿದೇಶಿ ಕರೆನ್ಸಿ ವ್ಯವಹಾರಗಳ ಇತ್ಯರ್ಥದ ಸಂದರ್ಭದಲ್ಲಿ ಕಂಡು ಬರುವ ವಿನಿಮಯ ವ್ಯತ್ಯಾಸಗಳನ್ನು ಆದಾಯ ಅಥವಾ ಖರ್ಚುಗಳು ಎಂಬುದಾಗಿ ಮಾನ್ಯ ಮಾಡಿದೆ ಮತ್ತು ಲಾಭ ಮತ್ತು ನಷ್ಟದ ಲೆಕ್ಕಕ್ಕೆ ಹೊಂದಾಣಿಕೆ ಮಾಡಲಾಗಿದೆ. ಭಾರತೀಯ ರೂಪಾಯಿ (INR) ಕಂಪನಿಯ ವ್ಯವಹಾರದ ಕರೆನ್ಸಿ ಆಗಿರುವುದು. ಕಂಪನಿ ತನ್ನ ಹಣಕಾಸಿನ ವಿವರಗಳನ್ನು ಭಾರತೀಯ ರೂಪಾಯಿಗಳಲ್ಲಿ ನಿರೂಪಿಸುವುದು.

### ಜಿ) ತಪಶೀಲುಗಳು:

ತಪಶೀಲು ಸರಕುಗಳನ್ನು ಈ ಕೆಳಕಂಡಂತೆ ಮೌಲ್ಯಾಂಕಣ ಮಾಡಿದೆ:

ಕಚ್ಚಾ ಸಾಮಗ್ರಿಗಳು, ರವಾನೆಯಲ್ಲಿನ ದಾಸ್ತಾನು, ವ್ಯಾಪಾರಿ ಸರಕುಗಳು ಮತ್ತು ಸಿದ್ಧಪಡಿಸಿದ ಸರಕುಗಳನ್ನು (ಮಾರಾಟ ಮಾಡಬಹುದಾದ ಅಥವಾ ವಿಲೇವಾರಿ ಮಾಡಬಹುದಾದ ಅನುಪಯುಕ್ತ ದಾಸ್ತಾನು ಹೊರತಾಗಿ) ಅದರ ಬೆಲೆಯ ಕಡಿಮೆ ದರದಲ್ಲಿ ಅಥವಾ ನಗದೀಕರಿಸಬಹುದಾದ ನಿವ್ವಳ ಮೌಲ್ಯದಲ್ಲಿ ಮೌಲ್ಯಂಕಣ ಮಾಡಿದೆ. ಮಾರಾಟ ಮಾಡಬಹುದಾದ/ವಿಲೇವಾರಿ ಮಾಡಬಹುದಾದ ಅನುಪಯುಕ್ತ ಸಾಮಗ್ರಿಯ ದಾಸ್ತಾನನ್ನು ಅಂದಾಜು ಮಾಡಿದ ದೊರಕಬಹುದಾದ ನಿವ್ವಳ ಮೌಲ್ಯದಲ್ಲಿ ಮೌಲ್ಯಾಂಕಣ ಮಾಡಿದೆ. ಕಾಗದದ ವಿಭಾಗದ ಸಂಬಂಧದಲ್ಲಿ ದರವನ್ನು ತೂಕದ ಸರಾಸರಿ ಆಧಾರದ ಮೇಲೆ ನಿರ್ಧರಣೆ ಮಾಡಿದೆ. ಪಾನೀಯಗಳು/ಫಾರ್ಮ ವಿಭಾಗದ ಸಂಬಂಧದಲ್ಲಿ ದರವನ್ನು ಮೊದಲ ಆಗಮನ ಮೊದಲ ನಿರ್ಗಮನ (FIFO) ಆಧಾರದ ಮೇಲೆ ನಿರ್ಧರಣೆ ಮಾಡಿದೆ. ಉಪ ಉತ್ಪನ್ನಗಳು ಮತ್ತು ಹಾನಿಗೊಳಗಾಗಿರುವ ದಾಸ್ತಾನು ಸರಕುಗಳನ್ನು ತೂಕದ ಸರಾಸರಿ ಬೆಲೆಯ ಕಡಿಮೆ ದರದಲ್ಲಿ ಅಥವಾ ಅಂದಾಜು ಮಾಡಿದ ಲಭ್ಯವಾಗಬಹುದಾದ ಮೌಲ್ಯದಲ್ಲಿ ಮೌಲ್ಯಾಂಕಣ ಮಾಡಿದೆ. ಪರಿವರ್ತನೆಕಾರರಿಗೆ ನೀಡಿರುವ ಕಚ್ಚಾ ಸಾಮಗ್ರಿಗಳು ಮತ್ತು ಬಳಕೆ ಸಾಮಗ್ರಿಗಳನ್ನು ಪರಿವರ್ತನೆಗಾರರಿಂದ ನೋಟ್ ಪುಸ್ತಕಗಳನ್ನು ಪಡೆದ ಸಮಯದಲ್ಲಿ ಸಿದ್ಧಪಡಿಸಿದ ಸರಕುಗಳು ಎಂಬುದಾಗಿ ಮಾತ್ರ ಪರಿಗಣಿಸಲಾಗಿದೆ. ಮದ್ಯದ ದಾಸ್ತಾನಿನ ಮೌಲ್ಯ ನಿರ್ಣಯಕ್ಕೆ ಸಾಗಾಣಿಕೆ ಆಗಮನ ಸರಕನ್ನು ಪರಿಗಣಿಸಿರುವುದಿಲ್ಲ.

### ಹೆಚ್) ಹೂಡಿಕೆಗಳು:

ಎ. ಚಾಲ್ತಿ ಹೂಡಿಕೆಗಳನ್ನು, ಬೇರೆ ಬೇರೆ ಹೂಡಿಕೆಗಳ ಆಧಾರದ ಮೇಲೆ ಅವುಗಳ ಬೆಲೆಯ ಕಡಿಮೆ ಹಂತದಲ್ಲಿ ಅಥವಾ ನ್ಯಾಯೋಚಿತ ಮೌಲ್ಯದಲ್ಲಿ ನಿರ್ಧರಣೆ ಮಾಡಿದೆ ಮತ್ತು ಅದರಂತೆ ನಿರ್ವಹಣೆ ಮಾಡಿದೆ. ದೀರ್ಘಾವಧಿ ಹೂಡಿಕೆಗಳನ್ನು ಅವುಗಳ ಬೆಲೆಯಲ್ಲಿ ನಿರ್ಧರಣೆ ಮಾಡಿದೆ. ಮೌಲ್ಯದಲ್ಲಿ ಯಾವುದೇ ಖಾಯಂ ಕ್ಷೀಣತೆ ಇದ್ದಲ್ಲಿ, ಅದನ್ನು ಬೇರೆ ಬೇರೆ ಹೂಡಿಕೆಯ ಆಧಾರದ ಮೇಲೆ ತಿಳಿಸಲಾಗಿದೆ. ಯಾವುದೇ ಅಂತಹ ಖಾಯಂ ಕ್ಷೀಣತೆ ಇದ್ದಲ್ಲಿ ಅದನ್ನು ಅದರ ಮಾರುಕಟ್ಟೆ ಮೌಲ್ಯದ ಬಗ್ಗೆ ಗಮನಹರಿಸಿ ತಿಳಿದುಕೊಳ್ಳಲಾಗಿದೆ.

## ಬಿ. ವ್ಯವಸ್ಥೆಯ ಉದ್ದೇಶಕ್ಕಾಗಿ:-

i) ಈಕ್ವಿಟಿ ಷೇರುಗಳಲ್ಲಿ ಮಾಡಿರುವ ಹೂಡಿಕೆಗಳ ಸಂಬಂಧದಲ್ಲಿ, ಚಾಲ್ತಿ ದರಪಟ್ಟಿ ಲಭ್ಯವಿರುವೆಡೆಯಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ನ ವ್ಯಾಪಾರಗಳು/ಬಂದರುಗಳಲ್ಲಿ ವರ್ಷಾಂತ್ಯದಲ್ಲಿ ದೊರೆಯುವ ಮೂಲ ಪತ್ರದ ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಮಾರುಕಟ್ಟೆ ಮೌಲ್ಯದ ಅನ್ವಯ ಮೌಲ್ಯ ನಿರ್ಣಯ ಮಾಡಿದೆ.

ii) ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಚಾಲ್ತಿ ದರಪಟ್ಟಿಗಳು ಲಭ್ಯವಿಲ್ಲದ ಅಥವಾ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಷೇರುಗಳನ್ನು ನಮೂದಿಸಿರದ ಷೇರುಗಳ ಸಂಬಂಧದಲ್ಲಿ, ಮೂಲ ಬೆಲೆಯಲ್ಲಿ ಮೌಲ್ಯ ನಿರ್ಣಯ ಮಾಡಿದ ಸಹಾಯಕ ಕಂಪನಿಗಳಲ್ಲಿ ಮಾಡಿದ ಹೂಡಿಕೆಗಳ ಹೊರತಾಗಿ, ಇತ್ತೀಚಿನ ದೊರೆಯತಕ್ಕ ಸ್ಥಿತಿ ವಿವರಣಾ ಪಟ್ಟಿ ಅನ್ವಯ ವಿಭಜನೆ ಮೌಲ್ಯದಲ್ಲಿ ಅವುಗಳ ಮೌಲ್ಯ ನಿರ್ಣಯ ಮಾಡಿದೆ.

## ಐ. ನೌಕರರ ಸೌಲಭ್ಯಗಳು :

### ಎ) ಅಲ್ಪಾವಧಿ ನೌಕರರ ಸೌಲಭ್ಯಗಳು:

ಸೇವೆ ಸಲ್ಲಿಸಿದ ಹನ್ನೆರಡು ತಿಂಗಳುಗಳ ಒಳಗೆ ಸಮಗ್ರವಾಗಿ ನೀಡಬೇಕಾಗಿ ಬರುವ ಎಲ್ಲಾ ನೌಕರರ ಸೌಲಭ್ಯಗಳನ್ನು ಅಲ್ಪಾವಧಿ ನೌಕರರ ಸೌಲಭ್ಯಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಸಂಬಳಗಳು, ವೇತನಗಳು, ಅಂದಾಜು ಮಾಡಲಾದ ಬೋನಸ್, ಎಕ್ಸ್-ಗ್ರೇಷ ಮತ್ತು ಅಲ್ಪಾವಧಿ ಪರಿಹಾರಿತ ಗೈರುಹಾಜರಿಗಳಂತಹ ಸೌಲಭ್ಯಗಳನ್ನು, ಸಂಬಂಧಿಸಿದ ನೌಕರನು ಸಲ್ಲಿಸಿದ ಸಂಬಂಧಪಟ್ಟ ಸೇವೆಯ ಅವಧಿಯಲ್ಲಿ ಗುರುತಿಸಿದೆ.

### ಬಿ) ಪ್ರತಿಪಾದಿತ ಸೌಲಭ್ಯ ಯೋಜನೆ:

i. **ಗ್ರ್ಯಾಚ್ಯುಟಿ :**

ಗ್ರ್ಯಾಚ್ಯುಟಿ ಸಂಬಂಧಿತ ಹೊಣೆಗಾರಿಕೆಯು ನಿರೂಪಿತ ಸೌಲಭ್ಯ ಯೋಜನೆಯಾಗಿರುವುದು. ಇದನ್ನು ಪ್ರತಿಯೊಂದು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಲ್ಲಿ ವಿಮಾಗಣನ ಮೌಲ್ಯಮಾಪನದಿಂದ ನಿರ್ಧರಣೆ ಮಾಡಲಾಗುತ್ತದೆ. ವಿಮಾಗಣನ ಲಾಭ/ನಷ್ಟಗಳನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ನಮೂದಿಸಲಾಗಿದೆ. ಜೀವ ವಿಮಾ ನಿಗಮ ನಿರ್ವಹಣೆ ಮಾಡುತ್ತಿರುವ ಎಂಎಸ್‌ಐಎಲ್ ನೌಕರರ ಗ್ರ್ಯಾಚ್ಯುಟಿ ನಿಧಿ ಟ್ರಸ್ಟ್‌ಗೆ ಕಂಪನಿ ವಂತಿಕೆ ನೀಡುವುದು.

ii. **ಪರಿಹಾರಿತ ಗೈರು ಹಾಜರಿಗಳು :**

ರಜೆ ಅರ್ಹತೆ ಸೌಲಭ್ಯಗಳ ಬಗ್ಗೆ ಕಂಪನಿಯ ಹೊಣೆಗಾರಿಕೆಯನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ವಿಮಾಗಣನ ವಮೌಲ್ಯಮಾಪನ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ. ವಿಮಾಗಣನ ನಷ್ಟ/ಲಾಭವನ್ನು ಲಾಭ ಮತ್ತು ನಷ್ಟದ ವಿವರಗಳಿಗೆ ಸೇರಿಸಲಾಗಿದೆ.

iii. **ಮರಣ ಪರಿಹಾರ ನಿಧಿ :**

ಮರಣ ಪರಿಹಾರ ನಿಧಿಯ ಬಗ್ಗೆ ಕಂಪನಿ ಹೊಂದಿರುವ ಹೊಣೆಗಾರಿಕೆಯನ್ನು ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿದ್ದಂತೆ ವಿಮಾಗಣನ ಮೌಲ್ಯ ಮಾಪನದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ. ಮೌಲ್ಯಮಾಪನವನ್ನು ಕಂಪನಿಯ ನೀತಿಯ ಆಧಾರದ ಮೇಲೆ ಮಾಡಲಾಗಿದೆ.

### ಸಿ. ನಿರೂಪಿತ ವಂತಿಗೆ ಯೋಜನೆ:

ಕಂಪನಿಯ ನಿರೂಪಿತ ವಂತಿಗೆ ಯೋಜನೆಗಳು-ನೌಕರರ ಭವಿಷ್ಯನಿಧಿ (ನೌಕರರ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಕಾಯ್ದೆ, 1952ರ ವ್ಯವಸ್ಥೆಯ ಅನ್ವಯ) ಮತ್ತು ಇಎಸ್‌ಐ (ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1948ರ ಉಪಬಂಧಗಳ ಅನ್ವಯ) ಆಗಿರುತ್ತವೆ. ಇವುಗಳಿಗೆ ಕಂಪನಿಯ ವಂತಿಗೆಗಳನ್ನು ನೀಡುವುದರ ಹೊರತಾಗಿ ಕಂಪನಿಯು ಯಾವುದೇ ಹೆಚ್ಚಿನ ಹೊಣೆಗಾರಿಕೆಗಳನ್ನು ಹೊಂದಿರುವುದಿಲ್ಲ. ಭವಿಷ್ಯನಿಧಿ ಮತ್ತು ಇಎಸ್‌ಐಗೆ ಕಂಪನಿಯ ವಂತಿಗೆಯನ್ನು ನಿಗದಿಪಡಿಸಿದ ದರಗಳಲ್ಲಿ ಪಾವತಿ ಮಾಡಿದೆ ಮತ್ತು ಅದನ್ನು ಲಾಭ ಮತ್ತು ನಷ್ಟದ ವಿವರಗಳಲ್ಲಿ ತಿಳಿಸಿದೆ.

## ಜೆ. ಸರ್ಕಾರದ ಅನುದಾನಗಳು :

### ಸರ್ಕಾರದ ಅನುದಾಗಳ ಲೆಕ್ಕ ನಿರ್ವಹಣೆ ಮತ್ತು ಪ್ರಕಟಣೆ :

### ಎ) ಬಂಡವಾಳ ಅನುದಾನ:

ಸರ್ಕಾರದ ಅನುದಾನಗಳ ಸಂಬಂಧದ ಸವಕಳಿಯಾಗುವ ಆಸ್ತಿಗಳ ವಿಚಾರದಲ್ಲಿ, ಇದು ಹಣ ನೀಡಿಕೆ ಸಾಧನವನ್ನು ಮಾತ್ರ ಹೊಂದಿದ್ದು ಮರು ಪಾವತಿ ವ್ಯವಸ್ಥೆ ಹೊಂದಿರದ ಪ್ರಯುಕ್ತ ಕಂಪನಿಯು ಬಂಡವಾಳ ಮಾರ್ಗವನ್ನು ಅನುಸರಿಸಿದೆ. ಅನುದಾನವನ್ನು ಲಾಭ ಮತ್ತು ನಷ್ಟದ ಹೊರಗೆ ಗುರುತಿಸಲಾಗಿದೆ. ಪಡೆದ/ಪಡೆಯಬಹುದಾಗಿರುವ ಅನುದಾನದ ಮೊತ್ತವನ್ನು ಗಣನೆ ಮಾಡಿದ್ದು, ಇದು ಸ್ಥಿತಿ ವಿವರಣಾ ಪಟ್ಟಿಯ ಪಿಪಿಇ ಆಸ್ತಿ ಭಾಗದ ಅಂಗವಾಗಿರುವುದು. ಇದರ ಸಮನಾದ ಅನುದಾನದ ಮೊತ್ತವನ್ನು ಸ್ಥಿತಿ ವಿವರಣಾ ಪಟ್ಟಿಯ ಹೊಣೆಗಾರಿಕೆ ಭಾಗದಲ್ಲಿ ಮುಂದೂಡಿದ ಅನುದಾನದ ಮೀಸಲು ಎಂಬುದಾಗಿ ಗುರುತಿಸಲಾಗಿದೆ ಮತ್ತು ಲೆಕ್ಕ ನಿರ್ವಹಣೆ ನೀತಿಯ ಕಲಂ ನಂ.ಜಿ ರಲ್ಲಿ ತಿಳಿಸಿರುವಂತೆ ಆಸ್ತಿಗಳ ಉಪಯುಕ್ತತೆ ಅವಧಿಯಲ್ಲಿ ಅಮಾರ್ಟೈಜ್ ಮಾಡಿದೆ. ಈ ವಿಧಾನವು ಐಎನ್‌ಡಿ ಎಎಸ್ 20 ರ ಅನ್ವಯ ಇರುವುದು.

### ಬಿ) ರೆವಿನ್ಯೂ ಅನುದಾನ:

ಆದಾಯಕ್ಕೆ ಸಂಬಂಧಪಟ್ಟ ಅನುದಾನವನ್ನು, ಅದು ಹಣಕಾಸಿನ ಅಥವಾ ಹಣಕಾಸಿನದಲ್ಲದ ರೂಪದ ಅನುದಾನ ಆಗಿದ್ದರೂ ಅದನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಇತರೆ ಆದಾಯವಾಗಿ ಗುರುತಿಸಲಾಗಿದೆ ಮತ್ತು ಇದಕ್ಕೆ ಸಮನಾದ ಮೊತ್ತವನ್ನು ಖರ್ಚು ಎಂಬುದಾಗಿ ಪರಿಗಣಿಸಲಾಗಿದೆ. ಇಂತಹ ಅನುದಾನಕ್ಕೆ ಸಂಬಂಧಿಸಿದಂತೆ ನಗದಾದ ಮೊತ್ತವನ್ನು ತಾಳೆ

ಮಾಡುವುದಕ್ಕಾಗಿ ಅದನ್ನು ಆದಾಯವೆಂದು ಲೆಕ್ಕ ಮಾಡಿದೆ ಮತ್ತು ಐಎನ್‌ಡಿ ಎಎಸ್20 ರಲ್ಲಿ ತಿಳಿಸಿರುವಂತೆ ಈಕ್ವಿಟಿಗೆ ನೇರವಾಗಿ ಜಮೆ ಮಾಡಿರುವುದಿಲ್ಲ.

**ಕೆ. ಆದಾಯದ ಮೇಲಿನ ತೆರಿಗೆಗಳು :**

ಚಾಲ್ತಿ ತೆರಿಗೆಗಳ ವ್ಯವಸ್ಥೆಯನ್ನು ಆದಾಯ ತೆರಿಗೆ ಕಾಯ್ದೆ, 1961ರ ಉಪಬಂಧಗಳ ಅನುಸಾರ ಮಾಡಿದೆ. ಮುಂದೂಡಿದ ತೆರಿಗೆ ಖರ್ಚು ಅಥವಾ ಲಾಭವನ್ನು ಒಂದು ಅವಧಿಯಲ್ಲಿ ಗೋಚರವಾದ ಮತ್ತು ಮುಂದಿನ ಒಂದು ಅಥವಾ ಹೆಚ್ಚು ಅವಧಿಯಲ್ಲಿ ವ್ಯತಿರಿಕ್ತವಾಗಬಹುದಾದ ತೆರಿಗೆ ವಿಧಿಸಬಹುದಾದ ಆದಾಯ ಮತ್ತು ಲೆಕ್ಕ ಮಾಡಿದ ಆದಾಯದ ನಡುವಿನ ವ್ಯತ್ಯಾಸವನ್ನಾಗಿ ಸಮಯದ ವ್ಯತ್ಯಾಸದಲ್ಲಿ ಮಾನ್ಯ ಮಾಡಿದೆ. ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ರೂಪಿಸಲಾಗಿರುವ ಅಥವಾ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ತದನಂತರ ರೂಪಿಸಿದ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಉಪಯೋಗಿಸಿ ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಮಾಪನ ಮಾಡಲಾಗಿದೆ.

ಮುಂದೂಡಿದ ತೆರಿಗೆ ಆಸ್ತಿಗಳ ವಾಹಕ ಮೊತ್ತವನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ಪುನರ್ ಪರಿಶೀಲನೆ ಮಾಡಲಾಗಿದೆ. ಕಂಪನಿಯು ಮುಂದೂಡಿದ ತೆರಿಗೆ ಆಸ್ತಿಯ ವಾಹಕ ಮೊತ್ತವನ್ನು ಅದು ಸಕಾರಣವಾಗಿ ಅಥವಾ ಸಾಧಾರಣವಾಗಿ ಖಚಿತವಾಗದಿರುವ ಮಟ್ಟಕ್ಕೆ ಅದನ್ನು ದಾಖಲಿಸುತ್ತದೆ. ಮುಂದೂಡಿದ ತೆರಿಗೆ ಆಸ್ತಿಯ ಸಂಬಂಧ ಸಾಕಷ್ಟು ಪ್ರಮಾಣದ ಮುಂದಿನ ತೆರಿಗೆ ವಿಧಿಸಬಹುದಾದ ಆದಾಯ ಲಭ್ಯವಾಗುವವರೆಗೆ ಮತ್ತು ಮುಂದೂಡಿದ ತೆರಿಗೆ ಪಾವತಿಸಲು ಸಾಧ್ಯವಾಗುವವರೆಗೆ ಹಾಗೆಯೇ ಮುಂದುವರಿಸಲಾಗಿದೆ. ಮುಂದೆ ತೆರಿಗೆ ವಿಧಿಸಬಹುದಾದ ಆದಾಯ ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಕ್ಕೆ ಒಳಪಟ್ಟು ಅಂತಹ ಯಾವುದೇ ದಾಖಲಿಸಿರುವಿಕೆಯನ್ನು ಅದು ಸಕಾರಣವಾಗಿ ಖಂಡಿತವಾಗಿರುವಿಕೆ ಅಥವಾ ವಾಸ್ತವಿಕ ಖಂಡಿತವಾಗಿರುವ ಪ್ರಮಾಣದವರೆಗೆ ಪರಿವರ್ತಿಸಲಾಗಿದೆ.

**ಎಲ್. ಷೇರು ಒಂದರ ಗಳಿಕೆಗಳು:**

ಷೇರು ಒಂದರ ಮೂಲ ಗಳಿಕೆಗಳನ್ನು, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಗೆ (ಪ್ರಿಫರೆನ್ಸ್ ಲಾಭಾಂಶಗಳನ್ನು ಮತ್ತು ಯಾವುದೇ ಅನ್ವಯಿಸಬಹುದಾದ ತೆರಿಗೆಗಳನ್ನು ಮುರಿದುಕೊಂಡ ನಂತರ) ನಿವ್ವಳ ಲಾಭ ಅಥವಾ ನಷ್ಟವನ್ನು, ಆ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಭಾಗಿಸಿ ಲೆಕ್ಕಾಚಾರ ಮಾಡಲಾಗಿದೆ. ಭಾಗಶಃ ಪಾವತಿ ಮಾಡಿದ ಈಕ್ವಿಟಿ ಷೇರುಗಳನ್ನು (ಯಾವುದೇ ಇದ್ದಲ್ಲಿ) ವರದಿಗಾರಿಕೆಯ ಅವಧಿಯಲ್ಲಿ ಪೂರ್ಣ ಪಾವತಿ ಮಾಡಿದ ಈಕ್ವಿಟಿ ಷೇರಿಗೆ ಸಂಬಂಧಿಸಿದ ಲಾಭಾಂಶದಲ್ಲಿ ಭಾಗವಹಿಸಲು ಅರ್ಹವಾಗಿರುವ ಪ್ರಮಾಣದವರೆಗೆ ಈಕ್ವಿಟಿ ಷೇರು ಒಂದರ ಭಾಗವೆಂಬುದಾಗಿ ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಬೋನಸ್ ನೀಡಿಕೆಗೆ; ಹಾಲಿಯಿರುವ ಷೇರುದಾರರುಗಳಿಗೆ ಹಕ್ಕುಗಳ ನೀಡಿಕೆಯಲ್ಲಿನ ಬೋನಸ್ ಅಂಶಕ್ಕೆ; ಷೇರು ವಿಭಜನೆಗೆ; ಮತ್ತು ಯಾವುದೇ ಇದ್ದಲ್ಲಿ ಆ ಷೇರುಗಳ ಸಂಯೋಜನೆಗೆ ಹೊಂದಾಣಿಕೆ ಮಾಡಲಾಗಿದೆ.

ಷೇರು ಒಂದರ ಕ್ಷೀಣಿಸಿದ ಗಳಿಕೆಗಳನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಯ ನಿವ್ವಳ ಲಾಭ ಅಥವಾ ನಷ್ಟವನ್ನು ಮತ್ತು ಈ ಅವಧಿಯಲ್ಲಿ ಬಾಕಿಯಿರುವ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಎಲ್ಲಾ ಕ್ಷೀಣಿಸುವ ಈಕ್ವಿಟಿ ಷೇರುಗಳಿಗೆ ಹೊಂದಾಣಿಕೆ ಮಾಡಿದೆ.

**ಎಂ. ಆಸ್ತಿಗಳ ಕುಗ್ಗುವಿಕೆ :**

ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಆಸ್ತಿಗಳ ವಾಹಕ ಮೊತ್ತವನ್ನು, ಆಸ್ತಿಗಳ ಮೌಲ್ಯದಲ್ಲಿನ ಸಾಮರ್ಥ್ಯ ಕುಗ್ಗುವಿಕೆ ನಷ್ಟದ ಯಾವುದೇ ಸೂಚನೆ ಇರುವುದೇ ಎಂಬುದನ್ನು ತಿಳಿಯಲು ಆಸ್ತಿಗಳ ವಾಹಕ ಮೊತ್ತವನ್ನು ನಿರ್ಧರಣೆ ಮಾಡಲಾಗಿದೆ. ಆಸ್ತಿಗಳ ವಾಹಕ ಮೊತ್ತವು ಅದರ ವಸೂಲಾಗುವ ಮೊತ್ತಕ್ಕಿಂತ ಹೆಚ್ಚಿದ್ದಾಗ ಕುಗ್ಗಿಕೆ ನಷ್ಟವನ್ನು ಗುರುತಿಸಿದೆ. ಕುಗ್ಗುವಿಕೆ ನಷ್ಟದ ಹಿಂದಿರುಗಿಸುವಿಕೆಯನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ಆದಾಯ ಎಂಬುದಾಗಿ ತಕ್ಷಣ ಗುರುತಿಸಲಾಗಿದೆ. ಕುಗ್ಗುವಿಕೆ ಗುರುತಿಸಿದ ನಂತರ ಆ ಆಸ್ತಿಯ ಉಪಯುಕ್ತತೆಯ ಉಳಿಕೆ ಅವಧಿಯಲ್ಲಿ ಪರಿಷ್ಕೃತ ವಾಹಕ ಮೊತ್ತದಲ್ಲಿ ಸವಕಳಿ ತಿಳಿಸಿದೆ.

**ಎನ್.ಮುನ್ನೇರ್ಪಾಡುಗಳು/ಸಂಭಾವ್ಯತೆಗಳು :**

ಹಿಂದಿನ ಘಟನಾವಳಿಗಳ ಕಾರಣದಿಂದ ಉಂಟಾಗಿರುವ ಪ್ರಸಕ್ತದ ಹೊಣೆಗಾರಿಕೆಯನ್ನು ಸಂಸ್ಥೆಯೊಂದು ಹೊಂದಿದ್ದಲ್ಲಿ ಆಗ ಮುನ್ನೇರ್ಪಾಡುಗಳನ್ನು ಮಾನ್ಯ ಮಾಡಿದೆ. ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ಹೊರಹರಿಯುವಿಕೆ ಅಗತ್ಯವಾಗಿರುತ್ತದೆ. ಈ ಸಂಬಂಧದಲ್ಲಿ ವಿಶ್ವಾಸನೀಯ ಅಂದಾಜು ಮಾಡಬಹುದು. ಎಎಸ್ 29ರ ಅನ್ವಯ ಮಾಡಿರುವ ಮುನ್ನೇರ್ಪಾಡುಗಳನ್ನು ಅದರ ಪ್ರಸಕ್ತ ಮೌಲ್ಯಕ್ಕೆ ಕಡಿಮೆ ಮಾಡಿರುವುದಿಲ್ಲ ಮತ್ತು ಸ್ಥಿತಿ ವಿವರಣಾ ಪಟ್ಟಿ ದಿನಾಂಕದಂದು ಇದ್ದ ಹೊಣೆಗಾರಿಕೆ ಇತ್ಯರ್ಥಪಡಿಸಲು ಅಗತ್ಯವಾದ ಉತ್ತಮ ಅಂದಾಜಿನ ಮೇಲೆ ಮುನ್ನೇರ್ಪಾಡುಗಳನ್ನು ನಿರ್ಧರಣೆ ಮಾಡಲಾಗಿದೆ. ಇವುಗಳನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ಮರು ಪರಿಶೀಲನೆ ಮಾಡಿದೆ ಮತ್ತು ಚಾಲ್ತಿ ಅತ್ಯುತ್ತಮ ಅಂದಾಜುಗಳನ್ನು ಪಡೆಯಲು ಹೊಂದಾಣಿಕೆ ಮಾಡಲಾಗಿದೆ.

ಸಂಪನ್ಮೂಲಗಳ ಹೊರಹರಿವಿನ ಸಾಧ್ಯತೆಯಿರುವ, ಆದರೆ ಹಾಗೆ ಆಗದಿರುವ ಸಾಧ್ಯತೆಯ ಹೊಣೆಗಾರಿಕೆ ಅಥವಾ ಪ್ರಸಕ್ತದ ಹೊಣೆಗಾರಿಕೆ

ಇದ್ದ ಪಕ್ಷದಲ್ಲಿ, ಅವುಗಳ ಬಗ್ಗೆ ಸಂಭಾವ್ಯ ಹೊಣೆಗಾರಿಕೆ ರೂಪದಲ್ಲಿ ಮಾಹಿತಿ ನೀಡಲಾಗಿದೆ. ಸಂಭಾವ್ಯ ಸ್ವತ್ತುಗಳನ್ನು ಹಣಕಾಸಿನ ಹೇಳಿಕೆಯಲ್ಲಿ ಮಾನ್ಯ ಮಾಡಿರುವುದಿಲ್ಲ.

### ಒ. ಐಎನ್‌ಡಿ-ಎಎಸ್‌ಗೆ ಬದಲಾವಣೆ

### ಐಎನ್‌ಡಿ-ಎಎಸ್‌ನ ಮೊದಲ ಬಾರಿಯ ಅಳವಡಿಕೆ :

ಕಂಪನಿಯ ಈ ಹಣಕಾಸಿನ ವಿವರಗಳನ್ನು ಐಎನ್‌ಡಿ ಎಎಸ್ ಅನುಸಾರ ಸಿದ್ಧಪಡಿಸಲಾಗಿದೆ. ಐಎನ್‌ಡಿ ಎಎಸ್‌ಗೆ ಬದಲಾವಣೆಯಾಗುವ ಉದ್ದೇಶಕ್ಕಾಗಿ, ಕಂಪನಿಯು ಐಎನ್‌ಡಿ-ಎಎಸ್ 101-ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಮೊದಲಬಾರಿಯ ಅಳವಡಿಕೆಯಲ್ಲಿ ನಿಗದಿಪಡಿಸಿರುವ ಮಾರ್ಗದರ್ಶನವನ್ನು ಕಂಪನಿ ಅನುಸರಿಸಿದೆ. 1ನೇ ಏಪ್ರಿಲ್ 2015 ಬದಲಾವಣೆ ದಿನಾಂಕವಾಗಿದೆ.

## ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು

### ಟಿಪ್ಪಣಿ-2

### ಸ್ವತ್ತು, ಸ್ಥಾವರ ಮತ್ತು ಉಪಕರಣ ಹಾಗೂ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ

**35.** ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್ (ಬಿಎಸಿಸಿ) ಸಮೀಪ ಹಂಚಿಕೆಯಾಗಿರುವ ಜಮೀನಿನ ಸಂಬಂಧ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಜೊತೆ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರ ಬರೆದುಕೊಡುವುದು ಹಾಗೆಯೇ ಉಳಿದಿದ್ದು, ಕೆಐಎಡಿಬಿ ನೀಡಿದ ಸ್ವಾಧೀನ ಪ್ರಮಾಣಪತ್ರದ ಆಧಾರದ ಮೇಲೆ ರೂ.52,11,063/- (ರೂ.52,11,063/-)ರ ಮೊತ್ತದ ಗುತ್ತಿಗೆ ಹಿಡುವಳಿ ಜಮೀನಿನ ಬಗ್ಗೆ ಮಾಡಿರುವ ಪಾವತಿಗಳನ್ನು ಕಂಪನಿ ಬಂಡವಾಳೀಕರಿಸಿದೆ.

**36.** ನವಿ ಮುಂಬಯಿಯಲ್ಲಿರುವ 2520 ಚದರ ಮೀಟರುಗಳ ವಿಸ್ತೀರ್ಣದ ಜಮೀನಿನ ನಿವೇಶನದ ಸಂಬಂಧದಲ್ಲಿ ಪರವಾನಗಿದಾರರು (ಜಿಒಕೆ) ರಾಜ್ಯ ಅತಿಥಿ ಗೃಹ ನಿರ್ಮಾಣ ಮಾಡಬೇಕು ಎಂಬ ನಿಬಂಧನೆ ಮೇಲೆ ಸದರಿ ಜಮೀನಿಗೆ ಪ್ರವೇಶಿಸಲು ಮತ್ತು ಅದನ್ನು ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಸರ್ಕಾರದ (ಜಿಒಕೆ) ಜೊತೆ ಸಿಟಿ ಅಂಡ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಆಫ್ ಮಹಾರಾಷ್ಟ್ರ (ಸಿಐಡಿಸಿಒ) ಇವರು 'ಗುತ್ತಿಗೆ ಕರಾರು ಪತ್ರವನ್ನು' ಮಾಡಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಒಪ್ಪಂದ ಪತ್ರದಲ್ಲಿ ನಿಗದಿಪಡಿಸಿರುವ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಕಟ್ಟಡ ಪೂರ್ಣಗೊಂಡ ದಿನಾಂಕದಿಂದ 30 ವರ್ಷಗಳ ಅವಧಿಗೆ (ಪರಸ್ಪರ ಒಪ್ಪಿಗೆ ಮೇರೆಗೆ ವಿಸ್ತರಿಸಬಹುದಾಗಿದೆ) ನಿರ್ಮಾಣ ಮಾಲೀಕತ್ವ, ಕಾರ್ಯಾಚರಣೆ ವರ್ಗಾವಣೆ (ಬೂಟ್) ಆಧಾರದ ಮೇಲೆ ಕರ್ನಾಟಕ ಭವನ ನಿರ್ಮಾಣಕ್ಕೆ ಎಂಎಸ್‌ಐಎಲ್ ಜೊತೆ 01.10.2008ರಂದು ಒಪ್ಪಂದ ಮಾಡಿಕೊಂಡಿದೆ.

ದಿನಾಂಕ:31ನೇ ಮಾರ್ಚ್ 2018ರಿಂದ ಅನ್ವಯವಾಗುವಂತೆ ಕೆಲಸ ಪೂರ್ಣಗೊಳಿಸಿರುವಿಕೆ ಪ್ರಮಾಣ ಪತ್ರವನ್ನು ಮೆ|| ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವೀಸ್ ಇವರಿಂದ ಪಡೆದಿರುವುದರ ಆಧಾರದ ಮೇಲೆ ನವಿ ಮುಂಬಯಿಯಲ್ಲಿ ಕರ್ನಾಟಕ ಭವನ ನಿರ್ಮಾಣಕ್ಕೆ ಮಾಡಿರುವ ರೂ.34,10,24,920/- ರ ವೆಚ್ಚದ ಮೊತ್ತವನ್ನು ಬಂಡವಾಳೀಕರಿಸಲಾಗಿದೆ.

**37.** ಸ್ಥಿರಾಸ್ತಿಗಳಲ್ಲಿ ಕ್ಲೆನ್ ಅಂಡ್ ಮಾರ್ಷಲ್ ಮ್ಯಾನುಫ್ಯಾಕ್ಚರರ್ಸ್ ಅಂಡ್ ಎಕ್ಸ್‌ಪೋರ್ಟರ್ಸ್ ಲಿಮಿಟೆಡ್‌ರವರಿಗೆ ಗುತ್ತಿಗೆ ನೀಡಲಾಗಿರುವ 86 ಕೆಪಾಸಿಟರ್ ಬ್ಯಾಂಕುಗಳು ಸೇರಿದ್ದು, ಇವುಗಳ ಮೌಲ್ಯ ಈ ಅವಧಿಯಲ್ಲಿ ಸವಕಳಿಯಾಗಿದ್ದು, ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಲಿಖಿತ ಮೌಲ್ಯ ರೂ.86/- (ರೂ.86/-) ಆಗಿದೆ. ಗುತ್ತಿಗೆದಾರರು ನಿಗದಿಪಡಿಸಿದ ಗುತ್ತಿಗೆ ಬಾಡಿಗೆಯನ್ನು ಪಾವತಿ ಮಾಡಿಲ್ಲ ಮತ್ತು ಸಂಸ್ಥೆಯು ಈ ವಿಷಯವನ್ನು ಆರ್ಬಿಟ್ರೇಷನ್‌ಗೆ ವಹಿಸಿ ರೂ.8,09,63,895/- ಬಾಕಿ ಇರುವ ಗುತ್ತಿಗೆ ಬಾಡಿಗೆ ಮತ್ತು ಅದರ ಮೇಲೆ ತಗಲುವ ಬಡ್ಡಿಗೆ ಕೋರಿಕೆ ಮಂಡಿಸಿದೆ. ಏಕಮಾತ್ರ ಆರ್ಬಿಟ್ರೇಟರ್ 2009ರ ಅಕ್ಟೋಬರ್ 2ರಂದು ಸಂಸ್ಥೆಯ ಕೋರಿಕೆಯನ್ನು ಅಂಗೀಕರಿಸಿ ಏಕಪಕ್ಷೀಯ ತೀರ್ಪು ನೀಡಿ, ರೂ.35,05,60,211/- ಅನ್ನು ಗುತ್ತಿಗೆ ಬಾಡಿಗೆ ಮತ್ತು ಅದರ ಮೇಲಿನ ಬಡ್ಡಿಯ ಮೊತ್ತ ಬಾಕಿ ಪಾವತಿಸುವಂತೆ ಮಾಡಿದ ಕೋರಿಕೆ ಪರವಾಗಿ ತೀರ್ಪು ನೀಡಿರುತ್ತಾರೆ.

ಗುತ್ತಿಗೆದಾರರಾದ ಕ್ಲೆನ್ ಅಂಡ್ ಮಾರ್ಷಲ್ ಕಂಪನಿಯು, ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದಲ್ಲಿ ಕಣ್ಮರೆಯಾದ ಸಂಸ್ಥೆಗಳ ಪಟ್ಟಿಯಲ್ಲಿದ್ದು ಹಾಗೂ ಸದರಿ ಗುತ್ತಿಗೆದಾರರು ಬೇರೆ ಹಣಕಾಸಿನ ಸಂಸ್ಥೆಗಳಿಂದ ವಿವಿಧ ರೀತಿಯ ಸಾಲ ಪಡೆದಿರುವುದು ತಿಳಿದು ಬಂದಿದೆ. ಸಂಸ್ಥೆಯ ಅಭಿಪ್ರಾಯದ ಮೇರೆಗೆ, ಈ ಮೊತ್ತದ ವಸೂಲಿ ಸಾಧ್ಯತೆ ಇಲ್ಲದಿರುವುದರಿಂದ 2005-06ರಿಂದ ಈ ಗುತ್ತಿಗೆ ವಿಷಯದಲ್ಲಿ ಗುತ್ತಿಗೆ ಬಾಡಿಗೆಯನ್ನು ಪರಿಗಣಿಸಿರುವುದಿಲ್ಲ ಮತ್ತು 2004-05ರವರೆಗಿನ ರೂ.8,09,63,895/- (ರೂ.8,09,63,895/-) ಬಾಕಿಯಿರುವ ಗುತ್ತಿಗೆ ಬಾಡಿಗೆಯನ್ನು ಪುಸ್ತಕದಲ್ಲಿ ಸಂಪೂರ್ಣವಾಗಿ ರದ್ದು ಮಾಡಲಾಗಿದೆ. ಸಂಸ್ಥೆಯು ತೀರ್ಪು ನೀಡಿದ ಮೊತ್ತದ ಖಚಿತವಿಲ್ಲದೆ ಇರುವುದರಿಂದ ಇದನ್ನು ಪರಿಗಣಿಸಿಲ್ಲ. ಆದಾಗ್ಯೂ ಸಂಸ್ಥೆಯು ಸಂಬಂಧಪಟ್ಟ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ನಿವೃತ್ತ ಅಧಿಕಾರಿಗಳು/ನೌಕರರ ವಿರುದ್ಧ ಕ್ರಿಮಿನಲ್ ದೂರು ಸಲ್ಲಿಸಿದೆ ಮತ್ತು ಕರ್ನಾಟಕ ವಿಧಾನಸಭೆಯ ಸಾರ್ವಜನಿಕ ಉದ್ಯಮಗಳ ಸಮಿತಿಯ ಆದೇಶದಂತೆ ಈ ವಿಷಯವನ್ನು ಸಿಒಡಿಗೆ ಒಪ್ಪಿಸಲಾಗಿದೆ. ಎಲ್ಲಾ ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಿದ್ಧಪಡಿಸಲಾಗಿದೆ. ಇದಕ್ಕೆ ತಮ್ಮ ಮೇಲಾಧಿಕಾರಿಗಳು ಅನುಮೋದನೆ ನೀಡಿದ್ದಾರೆ ಎಂದು ಮತ್ತು ಈ ಆರೋಪ ಪಟ್ಟಿಯನ್ನು ಸಕ್ಷಮ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ಸಿಐಡಿ ನಮಗೆ ತಿಳಿಸಿದೆ. ಸಿಐಡಿ ಆರೋಪಪಟ್ಟಿ ಸಲ್ಲಿಸಿದ ನಂತರ ಮುಂದಿನ ಸ್ಥಿತಿಗತಿ ತಿಳಿಸಲಾಗುವುದು.

**38. ಜಂಟಿ ಕಾರ್ಯಾಚರಣೆ ಒಪ್ಪಂದಗಳು :**

ಎಚ್‌ಎಎಲ್ ಮತ್ತು ಕಾನ್‌ಕಾರ್ಡ್ ಕಂಪನಿಗಳೊಂದಿಗೆ ಏರ್ ಕಾರ್ಗೋ ವ್ಯವಹಾರದ ಬಗ್ಗೆ ಕಂಪನಿಯು ಜಂಟಿ ಕಾರ್ಯಾಚರಣೆ ಒಪ್ಪಂದಗಳನ್ನು ಮಾಡಿ ಕೊಂಡಿತ್ತು. ಎಂಎಸ್‌ಐಎಲ್ ಮತ್ತು ಕಾನ್‌ಕಾರ್ಡ್ ಕಂಪನಿಗಳು ಜೆ ಡಬ್ಲ್ಯೂ ಎ ಯಿಂದ ಅನುಕ್ರಮವಾಗಿ ದಿನಾಂಕ : 31.03.2014 ಮತ್ತು 15.01.2011ರ ಅವಧಿಯಿಂದ ಈ ಒಪ್ಪಂದವನ್ನು ಹಿಂಪಡೆಯಲಾಗಿದೆ.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

ಗೃಹಬಳಕೆಯೇತರ ವಲಯಕ್ಕೆ ಸೋಲಾರ್ ವಾಟರ್ ಹೀಟರ್ ಭೋಗ್ಯಕ್ಕೆ ನೀಡಲು ಇಎಸ್‌ಎಸ್‌ಪಿಎಲ್ ಕಂಪನಿಯ ಜೊತೆ ಜಂಟಿ ಸಹಯೋಗ ಒಪ್ಪಂದ ಮಾಡಿಕೊಂಡಿದೆ.

ಮೇಲೆ ತಿಳಿಸಿರುವ ಜಂಟಿ ಕಾರ್ಯಾಚರಣೆ/ಜಂಟಿ ಸಹಭಾಗಿತ್ವದ ಒಪ್ಪಂದದ ಅನ್ವಯ ತನ್ನ ವ್ಯವಹಾರ ಚಟುವಟಿಕೆ ನಡೆಸಲು ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾಗಿದೆ ಮತ್ತು ಆಸ್ತಿಯ ಮಾಲೀಕತ್ವವು ಸಂಬಂಧಪಟ್ಟ ವ್ಯಕ್ತಿಗಳಿಗೆ ಸೇರಿರುವುದು.

ಜಂಟಿ ಕಾರ್ಯಾಚರಣೆ ಒಪ್ಪಂದದಿಂದ ಪ್ರಸಕ್ತ ಸಾಲಿನಲ್ಲಿನ ಆದಾಯ/(–)ನಷ್ಟಗಳ ಬಾಬ್ತು ಪಾಲು ಹೀಗಿದೆ :

| ವಿವರಗಳು | 2017-2018 | 2016-2017 |
|---|---|---|
| ಇಎಸ್‌ಎಸ್‌ಪಿಎಲ್ | ರೂ.27,276/- | ರೂ.31,751/- |

**39.** ಐಎನ್‌ಡಿ ಅಕೌಂಟಿಂಗ್ ಸ್ಟ್ಯಾಂಡರ್ಡ್ 19–''ನೌಕರರ ಸವಲತ್ತುಗಳು'': ಐಎನ್‌ಡಿ ಅಕೌಂಟಿಂಗ್ ಸ್ಟ್ಯಾಂಡರ್ಡ್‌ನಲ್ಲಿ ವಿವರಿಸಲಾದ ನೌಕರರ ಸೌಲಭ್ಯಗಳು ಕೆಳಕಂಡಂತಿವೆ :

### (ಎ) ಗ್ರ್ಯಾಚ್ಯುಯಿಟಿ

ಸಂಸ್ಥೆಯಲ್ಲಿ ನಿರೂಪಿತ ಸೌಲಭ್ಯ ಗ್ರ್ಯಾಚ್ಯುಯಿಟಿ ಯೋಜನೆ ಜಾರಿಯಲ್ಲಿದೆ. ಯೋಜನೆಗೆ ಸಂಸ್ಥೆಯು ಹಣಕಾಸು ಒದಗಿಸುತ್ತಿದ್ದು, ಪ್ರತ್ಯೇಕ ಟ್ರಸ್ಟ್ ನಿರ್ವಹಿಸುತ್ತಿದೆ. ಇದರ ಹೊಣೆಗಾರಿಕೆಯನ್ನು ವಿಮಾಗಣನ ಮೌಲ್ಯಗಳ ಆಧಾರದ ಮೇಲೆ ಗುರುತಿಸಲಾಗಿದೆ. ಕಂಪನಿಯು ಗ್ರ್ಯಾಚ್ಯುಟಿ ಸೌಲಭ್ಯವನ್ನು ಜೀವ ವಿಮಾ ನಿಗಮ ನಿರ್ವಹಿಸುತ್ತಿರುವ ನಿಧಿಗೆ ವಾರ್ಷಿಕ ವಂತಿಗೆ ನೀಡುವ ಮೂಲಕ ಒದಗಿಸಿದೆ. ಈ ಕೆಳಕಂಡ ತಃಖ್ತೆಯು ಕಂಪನಿಯ ಗ್ರ್ಯಾಚ್ಯುಟಿ ಯೋಜನೆಯ ಸ್ಥಿತಿಗತಿಯನ್ನು ತಿಳಿಸುತ್ತದೆ ಮತ್ತು ಮೊತ್ತವನ್ನು ಸ್ಥಿತಿ ವಿವರಣಾ ಪಟ್ಟಿ ಮತ್ತು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

(ಮೊತ್ತ ರೂ.ಗಳಲ್ಲಿ)

| | 2017-2018 | 2016-2017 |
|---|---|---|
| **ಎ) ಲಾಭ ಮತ್ತು ನಷ್ಟ ವಿವರದಲ್ಲಿ ಗುರುತಿಸಿದ ಖರ್ಚುಗಳು :** | | |
| i) ಚಾಲ್ತಿ ಸೇವಾ ವೆಚ್ಚ | 22,86,303/- | 25,82,955/- |
| ii) ಬಡ್ಡಿ ವೆಚ್ಚ | 1,04,73,439/- | 1,03,02,847/- |
| iii) ನಿರೀಕ್ಷಿತ ಗಳಿಕೆ ಯೋಜನೆ ಆಸ್ತಿಗಳು | (94,42,902/-) | (1,03,48,615/-) |
| iv) ವರ್ಷದಲ್ಲಿ ಗುರುತಿಸಲಾದ ವಿಮಾಗಣನ (ಲಾಭ)/ನಷ್ಟ | 1,77,69,604/- | 2,72,716/- |
| **ಒಟ್ಟು (i ರಿಂದ iv)** | **2,10,86,444/-** | **28,09,903/-** |
| **ಬಿ) ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಲಾದ ಮೊತ್ತ:** | | |
| ವರ್ಷಾಂತ್ಯದಲ್ಲಿನ ಹೊಣೆಗಾರಿಕೆಗಳ ಇಂದಿನ ಮೌಲ್ಯ (i) | 13,94,22,538/- | 13,09,17,987/- |
| ವರ್ಷಾಂತ್ಯದಲ್ಲಿನ ಯೋಜನಾ ಆಸ್ತಿಯ ಸೂಕ್ತ ಮೌಲ್ಯ (ii) | 13,34,74,440/- | 13,24,28,155/- |
| ನಿಧಿಯ ಸ್ಥಿತಿ (i) – (ii) | (59,48,098/-) | 15,10,168/- |
| ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಿದ ನಿವ್ವಳ ಆಸ್ತಿ/(ಹೊಣೆಗಾರಿಕೆ) | (59,48,098/-) | 15,10,168/- |
| **ಸಿ) ವಿವರಿಸಲಾದ ಸೌಲಭ್ಯ ಬಾಧ್ಯತೆಗಳ ಪ್ರಸಕ್ತ ಮೌಲ್ಯಗಳಲ್ಲಿನ ಬದಲಾವಣೆಗಳು:** | | |
| 01.04.2017ರಲ್ಲಿದ್ದಂತೆ ಬಾಧ್ಯತೆಗಳ ಇಂದಿನ ಮೌಲ್ಯ | 13,09,17,987/- | 12,87,85,591/- |
| ಚಾಲ್ತಿ ಸೇವಾ ವೆಚ್ಚ | 22,86,303/- | 25,82,955/- |
| ಬಡ್ಡಿ ವೆಚ್ಚ | 1,04,73,439/- | 1,03,02,847/- |
| ಪಾವತಿಸಿದ ಸೌಲಭ್ಯಗಳು | (2,20,24,795/-) | (1,10,26,122/-) |
| ಬಾಧ್ಯತೆಗಳ ವಿಮಾಗಣನ ಲೆಕ್ಕಾಚಾರಗಳು (ಲಾಭ)/ನಷ್ಟ | 1,77,69,604/- | 2,72,716/- |
| 31.3.2018ರಲ್ಲಿದ್ದಂತೆ ಬಾಧ್ಯತೆಯ ಪ್ರಸಕ್ತ ಮೌಲ್ಯ | 13,94,22,538/- | 13,09,17,987/- |

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

| ಡಿ) **ಯೋಜನಾ ಆಸ್ತಿಗಳ ಸೂಕ್ತ ಮೌಲ್ಯದಲ್ಲಿನ ಬದಲಾವಣೆ:** | | |
|---|---|---|
| 01.04.2017ರಲ್ಲಿದ್ದಂತೆ ಯೋಜನಾ ಆಸ್ತಿಯ ಸೂಕ್ತ ಮೌಲ್ಯ | 13,24,28,155/- | 12,83,64,083/- |
| ಯೋಜಿತ ಆಸ್ತಿಗಳ ನಿರೀಕ್ಷಿತ ಆದಾಯ | 94,42,902/- | 1,03,48,615/- |
| ಕೊಡುಗೆಗಳು | 1,36,28,178/- | 47,41,579/- |
| ನೀಡಿದ ಸೌಲಭ್ಯ | (2,20,24,795) | (1,10,26,122/-) |
| ಯೋಜನಾ ಆಸ್ತಿಗಳ ಮೇಲಿನ ವಿಮಾಗಣನ ಲೆಕ್ಕಾಚಾರಗಳ ಲಾಭ/ನಷ್ಟ | ಇಲ್ಲ | ಇಲ್ಲ |
| 31.03.2018ರಲ್ಲಿದ್ದಂತೆ ಯೋಜನಾ ಆಸ್ತಿಗಳ ಸೂಕ್ತ ಮೌಲ್ಯ | 13,34,74,440/- | 13,24,28,155/- |

ಇ) **ವಿಮಾಗಣನ ಊಹೆಗಳು:**

| ವಿಮಾಗಣನ ಮೌಲ್ಯಮಾಪನಗಳಿಗೆ ಬಳಸಿದ ಪ್ರಮುಖ ಊಹೆಗಳು : | | |
|---|---|---|
| i) ಮರಣ ಪ್ರಮಾಣ | ಎಲ್‌ಐಸಿ (94-96) | ಅಂತಿಮ ಮರಣ ಸೂಚಿ ತಃಖ್ತೆ |
| ii) ರಿಯಾಯ್ತಿ ದರ | 7.50% | 8% |
| iii) ವೇತನ ಏರಿಳಿತ | 7% | 7% |

(ಬಿ) **ಪರಿಹಾರಿಕ ಗೈರುಹಾಜರಿಯ ನಗದೀಕರಣ:**

| ಗೈರುಹಾಜರಿ ಪರಿಹಾರ ನಗದೀಕರಣದ ವಿಮಾಗಣನ ಮೌಲ್ಯಮಾಪನದ ಆಧಾರ: ಹೊಣೆಗಾರಿಕೆ 31.03.2018ರಲ್ಲಿದ್ದಂತೆ | | |
|---|---|---|
| ನಿವೃತ್ತಿ ವಯಸ್ಸು | 60 | 60 |
| ಜೀವಿತಾವಧಿ | ಭಾರತೀಯರ ಖಚಿತ ಜೀವಿತಾವಧಿ (2006-08) | ಅಂತಿಮ ಮರಣಸೂಚಿ ತಃಖ್ತೆ |
| ಬಡ್ಡಿ ದರ | ವಾರ್ಷಿಕ 7.31% | ವಾರ್ಷಿಕ 7.31% |
| ವೇತನ ಹೆಚ್ಚಳ | ವಾರ್ಷಿಕ 7% | ವಾರ್ಷಿಕ 7% |
| ತ್ಯಜಿಸುವ ದರ | ವಾರ್ಷಿಕ 1% | ವಾರ್ಷಿಕ 1% |
| ಪಾವತಿಸಬೇಕಾದ ಸೌಲಭ್ಯಗಳು | ಕಂಪನಿ ನಿಯಮದಂತೆ | |

(ಸಿ) **ಮರಣ ಪರಿಹಾರ ನಿಧಿ:**

ಗೈರು ಹಾಜರಿಯ ನಗದೀಕರಣದ ಪರಿಹಾರಕ್ಕೆ ವಿಮಾಗಣನ ಮೌಲ್ಯದ ಆಧಾರ : 31.03.2018ರಂತೆ ಹೊಣೆಗಾರಿಕೆ.

| **ವಿವರಗಳು** | **2017-18** |
|---|---|
| ಬಡ್ಡಿ ದರ | 7.31% |
| ಆಟ್ರೀಷನ್ ದರ | 1% |
| ನಿವೃತ್ತಿ ವಯಸ್ಸು | 60 ವರ್ಷಗಳು |
| ಕೊಡಬೇಕಾದ ಸೌಲಭ್ಯಗಳು | ಕಂಪನಿ ನೀತಿಯನುಸಾರ |

**40.** ಗ್ರಾಹಕ ವಸ್ತುಗಳು ಮತ್ತು ವಾಹನಗಳ ಸರಬರಾಜಿಗೆ ಕಂಪನಿಯು ''ಕಂತು-ಖರೀದಿ'' ಒಪ್ಪಂದವನ್ನು ಸರ್ಕಾರಿ ನೌಕರರ (ಗ್ರಾಹಕರ) ಜತೆ ಮಾಡಿಕೊಂಡಿತ್ತು. ಗ್ರಾಹಕರಿಂದ ಪಾವತಿಯಾಗದ ಬಡ್ಡಿಯು ಸೇರಿದಂತೆ ಬಾಕಿಯಿರುವ ಕಂತಿನ ಮೊತ್ತವನ್ನು ''ಗ್ರಾಹಕರ ಬಳಿಯ ದಾಸ್ತಾನು'' ಎಂದು ತೋರಿಸಲಾಗಿದೆ. ಜುಲೈ 2008ರಿಂದ ಈ 'ಕಂತು-ಖರೀದಿ' ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ.

**41.** ಬರಬೇಕಾಗಿರುವ ಮತ್ತು ಪಾವತಿ ಮಾಡಬೇಕಾಗಿರುವ ಎಲ್ಲಾ ಲೆಕ್ಕಗಳನ್ನು ಸ್ಥಿರೀಕರಣ ಪತ್ರಗಳನ್ನು ಕಂಪನಿ ಕಳುಹಿಸಿದೆ. ವ್ಯಕ್ತಿಗಳಿಂದ ಬಂದಿರುವ ಸ್ಥಿರೀಕರಣೆಗಳನ್ನು ಪುಸ್ತಕದಲ್ಲಿನ ಬಾಕಿಯ ಜೊತೆ ಪರಿಶೀಲನೆ ಮಾಡಿದೆ ಮತ್ತು ಕಂಡು ಬಂದಿರುವ ವ್ಯತ್ಯಾಸಗಳನ್ನು ಕ್ರಮವಾಗಿ ಸಮನ್ವಯ ಮಾಡಲಾಗಿದೆ. ತಿಳಿಸಿರುವ ದಿನಾಂಕದ ಒಳಗೆ ಲಿಖಿತ ರೂಪದಲ್ಲಿ ಸ್ಥಿರೀಕರಣ ಮಾಡಿರದ ವ್ಯಕ್ತಿಗಳಿಗೆ ಸಂಬಂಧಿಸಿದ ಬಾಕಿಗಳನ್ನು ಆ ಬಗ್ಗೆ ಸ್ಥಿರೀಕರಿಸಲ್ಪಟ್ಟಿದೆ ಎಂದು ಪರಿಗಣಿಸಲಾಗಿದೆ.

**42.** ಮೂಲದಲ್ಲಿ ತೆರಿಗೆ ಕಡಿತ ಮಾಡದೆ ಇರುವ ರೂ.30,23,31,283/- (ರೂ.30,23,31,283/-) ಮತ್ತು ಅದರ ಮೇಲೆ ಬಡ್ಡಿ ರೂ.30,67,65,640/- (ರೂ.30,67,65,640/-)ಗೆ ಕಂಪನಿಗೆ ಆದಾಯ ತೆರಿಗೆ ಇಲಾಖೆ ಡಿಮಾಂಡ್ ಸೂಚನೆಗಳನ್ನು ಈ ಹಿಂದೆ ನೀಡಿದೆ. ಕಂಪನಿಯು ರೂ.24,05,81,902/- (ರೂ.24,05,81,902/-) ಅನ್ನು ಪಾವತಿಸಿ ಜೊತೆಗೆ ರೂ.36,17,49,381/- (ರೂ.36,17,49,381/-) ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ನೀಡಿದೆ. ಹಣಕಾಸು ವರ್ಷ 2006-07ರಲ್ಲಿ ಬಾಕಿಯಿದ್ದ ರೂ.42,40,233/-ಗಳನ್ನು ಆದಾಯ ತೆರಿಗೆ ಮರು ಪಾವತಿಗೆ ಹೊಂದಿಸಿದೆ. ಈ ವಿಷಯವು ಸದ್ಯ ಸರ್ವೋಚ್ಚ ನ್ಯಾಯಾಲಯದಲ್ಲಿದೆ.

**43.** ಟಿಪ್ಪಣಿ 17ರಲ್ಲಿನ ಅಲ್ಪಾವಧಿ ಸಾಲ ಮತ್ತು ಮುಂಗಡಗಳಲ್ಲಿ ಕೆಳಕಂಡವು ಸೇರಿವೆ :

ಸೇವಾ ತೆರಿಗೆ ಇಲಾಖೆಯಿಂದ ವಾಪಸ್ ಬರಬೇಕಾದ ಸೇವಾ ತೆರಿಗೆ ಮೊತ್ತ ರೂ.77,23,849/- (ರೂ.77,23,849/-). 16.08.2002ರಿಂದ 30.06.2008ರ ಅವಧಿಗೆ ಬ್ಯಾಗೇಜ್ ಮತ್ತು ರಫ್ತು ಸರಕಿನ ಮೇಲೆ ಆಮದು ಮತ್ತು ರಫ್ತು ಸರಕು, ಗಮ್ಯ ತಲುಪುವ ವೆಚ್ಚ ಮತ್ತು ಸರಕು ಹಸ್ತಾಂತರ ವೆಚ್ಚಗಳನ್ನು ಪಡೆದ ಕಂಪನಿಯಿಂದ ಇಲಾಖೆಯು ರೂ.1,47,99,829/- (ರೂ.1,47,99,829/-)ಅನ್ನು ಪಾವತಿಸಲು ಕೇಳಿತು. ಮೇಲ್ಕಾಣಿಸಿದ ಕ್ಲೇಮಿನ ವಿರುದ್ಧ ಕಂಪನಿಯು ಕಮಿಷನರ್ (ಮೇಲ್ಮನವಿ) ಕೇಂದ್ರ ಅಬಕಾರಿ, ಬೆಂಗಳೂರು ಅವರ ಮುಂದೆ, ಮನವಿ ಸಲ್ಲಿಸಿದ್ದು, ಅವರು ರೂ.6,18,363/-ರಷ್ಟು ಪರಿಹಾರವನ್ನು ನೀಡಿದ್ದಾರೆ. ಕಂಪನಿಯು ರೂ.77,23,849/- ಮೊತ್ತವನ್ನು ಪಾವತಿಸಿದೆ. ಇಲಾಖೆ ಸಹಿತ ಅಬಕಾರಿ ಸುಂಕ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ (ಸಿಇಎಸ್‌ಟಿಎಟಿ)ರವರ ಮುಂದೆ ಕಮಿಷನರ್ (ಮೇಲ್ಮನವಿ) ಅವರ ರೂ.6,18,363/- ಪರಿಹಾರದ ವಿರುದ್ಧ ಮನವಿ ದಾಖಲಿಸಿದ್ದು, ಸಿಇಎಸ್‌ಟಿಎಟಿಯು ಕಮಿಷನರ್ (ಮೇಲ್ಮನವಿ)ಯವರು ತಿರಸ್ಕರಿಸಿದ ಮೂರು ಕೇಸ್‌ಗಳನ್ನು ಇಲಾಖೆಗೆ ವಾಪಸ್ ಕಳುಹಿಸಿದೆ. ಜುಲೈ 2012ರಲ್ಲಿ ಎಂ.ಎಸ್.ಐ.ಎಲ್., ಸಿ.ಇ.ಎಸ್.ಟಿ.ಎ.ಟಿ. ಮುಂದೆ ಮತ್ತೆ ಮನವಿಗಳನ್ನು ದಾಖಲಿಸಿದೆ. ಹೊಸ ಆದೇಶ ಹಾಗೂ ತಗಾದೆಗಾಗಿ ಕಾಯಲಾಗುತ್ತಿದೆ. ಸಿ.ಇ.ಎಸ್.ಟಿ.ಎ.ಟಿ. ಮುಂದೆ ಸಲ್ಲಿಸಿರುವ 2005-06ರಿಂದ 2008-09 ಅವಧಿಯ ಮನವಿಗಳು ಇನ್ನೂ ಬಾಕಿ ಇವೆ. ಬಡ್ಡಿ, ದಂಡ ಇತ್ಯಾದಿಗಳಿಲ್ಲದ ಒಟ್ಟು ಬೇಡಿಕೆಯ ಮೊತ್ತ 31.3.2009ರ ವೇಳೆಗೆ ರೂ.1,47,99,829/- (ರೂ.1,47,99,829/-) ಅನ್ನು ಪುಸ್ತಕಗಳಲ್ಲಿ ಒದಗಿಸಿಲ್ಲ.

**45.** ಶೇ.52 ಎಫ್‌ಇ ಅಂಶಗಳಿರುವ 50,000 ಎಂ.ಟಿ.ಯಷ್ಟು ಕಬ್ಬಿಣದ ಅದಿರನ್ನು ಸಂಗ್ರಹಿಸಲು ಒಂದು ಎಂ.ಟಿಗೆ ರೂ.1000/-ರಂತೆ ಚೀನಾಗೆ ರಫ್ತು ಮಾಡಲು ಮೆ॥ ಮಲ್ಲಪ್ಪ ಮಿನರಲ್ಸ್ ಇಂಡಸ್ಟ್ರಿ (MMI) ನೊಂದಿಗೆ ನವೆಂಬರ್ 13, 2009ರಂದು ಕಂಪನಿ ಒಂದು ಒಡಂಬಡಿಕೆ ಮಾಡಿಕೊಂಡಿತ್ತು. ಜೊತೆಗೆ ವಿದೇಶಿ ಖರೀದಿದಾರರಾದ ಫ್ರೇಮರಿ ಹೋಲ್ಡಿಂಗ್ಸ್ ಲಿಮಿಟೆಡ್ ಕಂಪನಿಯೊಂದಿಗೆ ಎಫ್.ಓ.ಬಿ. (F.O.B) ಗೋವಾ ಅನ್ನು ಪ್ರತಿ ಎಂ.ಟಿಗೆ US$ 28 (ರೂ.1,288/-) ಲೆಕ್ಕದಲ್ಲಿ ಸರಬರಾಜು ಮಾಡುವ ಒಪ್ಪಂದವನ್ನು ಮಾಡಿಕೊಂಡಿತ್ತು. ನೀಡಬಹುದಾದ ದರ ಪ್ರತಿ ಎಂ.ಟಿ.ಗೆ ರೂ.200/- ಸೇವಾ ಶುಲ್ಕ ಕಡಿತಗೊಳಿಸಿದ ನಂತರ ಕಂಪನಿಯು ಪ್ರತಿ ಎಂ.ಟಿ.ಗೆ. ರೂ.88/-ರಷ್ಟು ಲಾಭ ತೋರಿಸಿದೆ.

ಶೇ.52ರಷ್ಟು ಕಬ್ಬಿಣಾಂಶವಿರುವ ಅದಿರನ್ನು ಡಿಸೆಂಬರ್ 15, 2009ರ ಒಳಗೆ ರಫ್ತು ಮಾಡುವ ಮತ್ತು ನವೆಂಬರ್ 25-30ರ ನಡುವೆ ಲೇ-ಕ್ಯಾನ್ ಅವಧಿಯಲ್ಲಿ ಒಡಂಬಡಿಕೆ ಕಾರ್ಯಗತವಾಗುವುದನ್ನು ವಿದೇಶಿ ಖರೀದಿದಾರರ ಜೊತೆಗಿನ ಒಪ್ಪಂದ ಅನುವು ಮಾಡಿಕೊಟ್ಟಿತು. ಒಡಂಬಡಿಕೆಯಲ್ಲಿ ಯಾವುದೇ ತಗಾದೆಗಳಿದ್ದರೆ ಅದನ್ನು ಹಾಂಗ್-ಕಾಂಗ್‌ನಲ್ಲಿಯೇ ಪರಿಹರಿಸಿಕೊಳ್ಳಬೇಕೆಂಬುದು ನಿರ್ಬಂಧನೆಗಳಲ್ಲಿ ಒಂದಾಗಿತ್ತು.

ಎಂ.ಎಂ.ಐ. ಪರವಾಗಿ ರೂ.5 ಕೋಟಿಗೆ ಹಿಂಪಡೆಯಲಾಗದ ಸಾಲಪತ್ರವನ್ನು ಊರ್ಜಿತಗೊಳಿಸಲಾಗಿದೆ. ಅದಿರನ್ನು ಪಡೆಯಲು ಬೇಕಾದ ಮೊತ್ತವನ್ನು ಕ್ರೋಡೀಕರಿಸಲು 'ಸರಬರಾಜುದಾರರು' ವಿಫಲರಾದ್ದರಿಂದ ಎಂ.ಎಸ್.ಐ.ಎಲ್.ನಿಂದ ಮುಂಗಡಕ್ಕೆ ಬೇಡಿಕೆ ಇರಿಸಿದ್ದರು. ಸರಕಿನ ಹಡಗು ಬಂದರಿಗೆ ಡಿಸೆಂಬರ್ 10, 2009ರಂದು ಬಂದು ನಿಂತುಬಿಟ್ಟಿದ್ದರಿಂದ 'ಡೆಮರೇಜ್' ಸುಸ್ತಿ ಸುಂಕವನ್ನು ತಪ್ಪಿಸಲು ಕಂಪನಿಯು ರೂ.2.15 ಕೋಟಿಯ ಮುಂಗಡವನ್ನು ಮುಂಚಿತವಾಗಿ ದಿನಾಂಕ ಬರೆದ ಚೆಕ್‌ಗಳ ಸ್ವೀಕರಣೆ ಮೇಲೆ ನೀಡಿತು ಮತ್ತು ಸ್ವತ್ತುಗಳ ಮೇಲೆ ಸಮದರ್ಶಿಯಾದ ಆಧಾರ ಒದಗಿಸುವ ಬದ್ಧತೆಯನ್ನು ಸಂಸ್ಥೆಯು ಪೂರ್ಣಗೊಳಿಸಲಾಗಲಿಲ್ಲ. ಅದಿರನ್ನು ಸರಬರಾಜು ಮಾಡಲು ಸತತವಾಗಿ ವಿಫಲವಾದ ಕಾರಣದಿಂದ ಕಂಪನಿಯು ಚೆಕ್‌ಗಳನ್ನು ಬ್ಯಾಂಕ್‌ನಲ್ಲಿ ನಗದೀಕರಣಕ್ಕೆ ನೀಡಿತು. ಆದರೆ ಅವು ಬ್ಯಾಂಕ್‌ನಿಂದ ತಿರಸ್ಕರಿಸಲಾಯಿತು. ಹೀಗಾಗಿ ನೆಗೋಷಿಯೆಬಲ್ ಇನ್ಸ್‌ಟ್ರುಮೆಂಟ್ಸ್ ಆಕ್ಟ್ 1881ರಡಿ 25.02.2010ರಂದು ಕ್ರಿಮಿನಲ್ ಮೊಕದ್ದಮೆ ಹೂಡಿತು ಮತ್ತು ಈಗ ದಾವೆಯು ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಲಯದಲ್ಲಿ ಉಳಿದಿದ್ದು, 'ಪುರಾವೆ' ಹಂತದಲ್ಲಿದೆ.

ಎಂ.ಎಂ.ಐ.ನವರಿಂದ ಅದಿರು ಸರಬರಾಜು ವಿಫಲವಾದ್ದರಿಂದ ಕಂಪನಿ ಇನ್ನೊಂದು ಸರಬರಾಜುದಾರರಾದ ಸರಮ್ ಎಕ್ಸ್‌ಪೋರ್ಟ್ಸ್ ಜೊತೆ ಅದಿರು ಸರಬರಾಜಿಗೆ ಅದೇ ನೀತಿ ನಿಯಮಗಳಿಗೆ ಅನ್ವಯವಾಗುವಂತಹ ಒಪ್ಪಂದ ಮಾಡಿಕೊಂಡಿತು. ಎಂ.ಎಸ್.ಐ.ಎಲ್. ನೂತನ ಸರಬರಾಜುದಾರರಿಗೆ ರೂ.4.5 ಕೋಟಿ ಮುಂಗಡ ನೀಡಿತು. 29 ದಿನಗಳ ವಿಳಂಬದ ನಂತರ 46,846.48 ಎಂ.ಟಿ.ಯಷ್ಟು ಅದಿರು ಹೊತ್ತ ಹಡಗು ಜನವರಿ 14, 2010ರಂದು ಪ್ರಯಾಣ ಬೆಳೆಸಿತು. ಭಾರತ ಸರ್ಕಾರ ಸುಂಕದ ದರ ಹೆಚ್ಚಿಸಿದ್ದರಿಂದ ಎಂ.ಎಸ್.ಐ.ಎಲ್. ಸೀಮಾ ಸುಂಕಕ್ಕೆ ರೂ.32,22,680/- ಅನ್ನು ಹೆಚ್ಚುವರಿಯಾಗಿ ತೆರಬೇಕಾಯಿತು. ಪರೀಕ್ಷಾ ವರದಿಗೆ ಕಾಯದೆ ಸಮಯಾವಧಿ ಮುಗಿದಿದ್ದರಿಂದ ಸರಮ್ ಎಕ್ಸ್‌ಪೋರ್ಟ್ಸ್‌ನ ಸರಬರಾಜನ್ನು ತುರ್ತಾಗಿ ಹಡಗಿಗೆ ತುಂಬಿಸಿ ಕಳುಹಿಸಲಾಯಿತು. ಆದರೆ ನಂತರ ಬಂದ ಪರೀಕ್ಷಾ ವರದಿಯಲ್ಲಿ ಕಬ್ಬಿಣಾಂಶ ಶೇ.49.37ರಷ್ಟು ಮಾತ್ರವಿದೆ ಎಂದು ಹೇಳಿತು.

''ಖರೀದಿದಾರರ'' ಹೆಸರಿನಲ್ಲಿ ಕಂಪನಿಯು ಇನ್‌ವಾಯ್ಸ್ ಅನ್ನು ತಯಾರಿಸಿ, ಎಲ್‌ಸಿ ಮೂಲಕ ಪತ್ರವ್ಯವಹಾರ ಕುದುರಿಸಲು ಪ್ರಯತ್ನಿಸಲಾಯಿತು. ಆದರೆ ಅವಧಿ ಮುಗಿದಿದ್ದರಿಂದ ಅದು ಸಾಧ್ಯವಾಗಲಿಲ್ಲ. ಹಾಂಗ್‌ಕಾಂಗ್ ಬಂದರನ್ನು ತಲುಪಿದ ಸರಕನ್ನು ಚೈನಾ ಗುಣಮಟ್ಟ ತನಿಖಾ ವರದಿಯಲ್ಲಿ 'ಖರೀದಿದಾರ' ಸರಕಿನಲ್ಲಿ 45.9% ಕಬ್ಬಿಣಾಂಶ ಇದೆ ಎಂಬ ಕಾರಣದಿಂದ ಕಳಪೆ ಎಂದು ತಿರಸ್ಕರಿಸಿದರು. ಆನಂತರ 'ಖರೀದಿದಾರ'ರಿಗೆ ಆ ಸರಕನ್ನು ಮಾರಿ ಬರುವ ಆದಾಯವನ್ನು ಪಡೆದುಕೊಳ್ಳಲು ಅಧಿಕಾರ ನೀಡಲಾಯಿತು. ಸಿಎಫ್‌ಆರ್ ಆಧಾರದ ಮೇಲೆ ಪ್ರತಿ ಎಂ.ಟಿ.ಗೆ ಅಮೆರಿಕ ಡಾಲರ್ 35ರಂತೆ ಅದಿರನ್ನು 23 ಮಾರ್ಚ್ 2010ರ ಇನ್‌ವಾಯ್ಸ್ ರೀತ್ಯ ಅಮೆರಿಕಾ ಡಾಲರ್ 16,39,626.80 ಪಡೆಯಲಾಯಿತು. ಈ ಹಣವನ್ನು ತನಗೆ ಭರ್ತಿ ಮಾಡಬೇಕೆಂದು ಎಂ.ಎಸ್.ಐ.ಎಲ್. ವಿದೇಶಿ ಖರೀದಿದಾರಲ್ಲಿ ಮನವಿ ಮಾಡಿತು. ಆದರೆ ಆ 'ಖರೀದಿದಾರ' 24,25,051.88 ಅಮೆರಿಕಾ ಡಾಲರ್ ಹಣವನ್ನು ತನ್ನ ಪಾಲೆಂಬ ಹಕ್ಕನ್ನು ಸಾಧಿಸಿತು. ಕಂಪನಿ ಅದನ್ನು ತಿರಸ್ಕರಿಸಿತು.

ಮೇಲ್ಕಾಣಿಸಿದ ಅಂಶಗಳನ್ನು ಪರಿಗಣಿಸಿ ವಿನಿಮಯ ದರ ಅಮೆರಿಕಾ ಡಾಲರ್ ಒಂದಕ್ಕೆ ರೂ.46 ದರದಂತೆ ಅಳವಡಿಸಿಕೊಂಡಿದೆ ಮತ್ತು ಗೋವಾದಿಂದ ಚೀನಾಗೆ ಸಾಗಾಣೆ ಶುಲ್ಕ ಅಮೆರಿಕಾ ಡಾಲರ್ 24ರಂತೆ ಕಂಪನಿ ನಿಷ್ಕರ್ಷಿಸಿ ಅದರಂತೆ ಮಾರಾಟ, ಮಾರಾಟದ ವೆಚ್ಚ, ಒಡಂಬಡಿಕೆಯ ಹಕ್ಕು ಮತ್ತು ಮಾರ್ಚ್ 31, 2010ರ ಅಂತ್ಯಕ್ಕೆ ಪುಸ್ತಕದಲ್ಲಿ ಮುನ್ನೇರ್ಪಾಡನ್ನು ಮಾಡಿತು. ಈ ಹಂತದಲ್ಲಿ 'ಖರೀದಿದಾರರಿಗೆ' ಚೀನಾದಲ್ಲಾದ ವೆಚ್ಚ ಮತ್ತು FEMA ಅಡಿ ಹೊಣೆಗಾರಿಕೆ ವೆಚ್ಚವನ್ನು ಪರಿಗಣಿಸಿಲ್ಲ. ಕಬ್ಬಿಣದ ಅದಿರು ಮಾರಾಟದ ಮೂಲಕ ಯುಎಸ್ ಡಾಲರ್ 5,02,071ರಷ್ಟನ್ನು ಸರಿಹೊಂದಿಸಿದ ನಂತರ ಫ್ರೇಮರಿ ಹೋಲ್ಡಿಂಗ್ಸ್ ನಿಯಮಿತವು ಅಮೆರಿಕ ಡಾಲರ್ ರೂಪದಲ್ಲಿ 19,74,545ರಷ್ಟು ಮೊತ್ತವನ್ನು ಕ್ಲೇಮು ಮಾಡಿದೆ (ರೂ.59.76 ಯುಎಸ್ ಡಾಲರ್ ವಿನಿಮಯ ದರದಲ್ಲಿ ರೂ.11,79,98,809/- ಪರಿಗಣಿಸುತ್ತಿದೆ. ಆರ್ಬಿಟ್ರೇಷನ್ ಅವಾರ್ಡ್‌ನಂತೆ ಎಂಎಸ್ಐಎಲ್ ಫ್ರೇಮರಿ ಹೋಲ್ಡಿಂಗ್ಸ್ ಲಿಮಿಟೆಡ್ 18,80,851 ಡಾಲರ್ (ರೂ.12,46,72,209/-) ಮತ್ತು ರೂ.2,77,72,466/-ಕ್ಕೆ ಬಡ್ಡಿ ಮೊತ್ತವನ್ನು ಪಾವತಿಸಲು ಬದ್ಧವಾಗಿದೆ.

ಕಂಪನಿಯು ಮಾರಾಟ ಮೊತ್ತ ಯುಎಸ್ ಡಾಲರ್ 17,07,100ರಿಂದ ಯುಎಸ್ ಡಾಲರ್ 16,39,627ಗೆ ಕಡಿತಗೊಳಿಸಿದ ನಂತರ ಯುಎಸ್ ಡಾಲರ್ 67,473 (ರೂ.44,72,429/-) ಹೊಣೆಗಾರಿಕೆಯನ್ನು ಅಂಗೀಕರಿಸಿದೆ (ಡಮೆರ್ರೇಜ್ ಮತ್ತು ಫ್ರೈಟ್‌ಗೆ ಸಂಬಂಧಿಸಿದ ಮೊತ್ತ ರೂ.10,68,47,359/-). ಯುಎಸ್ ಡಾಲರ್ 18,13,378ರ (ರೂ.66,285 ಯುಎಸ್ ಡಾಲರ್ ವಿನಿಮಯ ದರದಲ್ಲಿ ರೂ.12,01,99,779/-ಗಳನ್ನು ಪರಿಗಣಿಸಲಾಯಿತು). ಬಾಕಿ ಮೊತ್ತವು ಕಂಪನಿಯಿಂದ ವಿವಾದಿತವಾಗಿದ್ದು, ಸಾದಿಲ್ವಾರು ಹೊಣೆಗಾರಿಕೆಯಡಿ ತಿಳಿಸಿದೆ. ಕಂಪನಿಯು ಆರ್ಬಿಟ್ರೇಷನ್ ತೀರ್ಪನ್ನು ರದ್ದುಪಡಿಸುವಂತೆ ಇಂಡಿಯನ್ ಆರ್ಬಿಟ್ರೇಷನ್ ಆಕ್ಟ್‌ನ ಸೆಕ್ಷನ್ 34ರನ್ವಯ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಅದು ವಿಚಾರಣೆ ಹಂತದಲ್ಲಿದೆ. ಮೇಲ್ಕಂಡ ವ್ಯವಹರಣೆಗಳ ಸಂಬಂಧ ಕರ್ನಾಟಕ ವಿಧಾನಸಭೆಯ ಸಾರ್ವಜನಿಕ ಉದ್ಯಮಗಳ ಮೇಲಿನ ಸಮಿತಿಯು ಅವ್ಯವಹಾರಗಳ ಬಗ್ಗೆ ವರದಿ ಸಲ್ಲಿಸಿದೆ. ಕಂಪನಿಯು ವ್ಯಾಪ್ತಿಯ ಪೊಲೀಸ್ ಠಾಣೆಗೆ ಕ್ರಿಮಿನಲ್ ಮೊಕದ್ದಮೆ ಸಲ್ಲಿಸಿದೆ ಮತ್ತು ಪೊಲೀಸರು ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಈ ಕ್ರಿಮಿನಲ್ ದೂರಿನ ಸಂಬಂಧ ಪೊಲೀಸರು ಆರೋಪ ಪಟ್ಟಿ ಸಿದ್ಧಪಡಿಸಿದ್ದು, ಎಸಿಎಂಎಂ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ.

ಕಬ್ಬನ್‌ಪಾರ್ಕ್ ಪೊಲೀಸರು ಶ್ರೀ ಅಶೋಕ್ ಉಡುಪಿ (ಎ1), ಶ್ರೀ ದೀಪಕ್ ಅಗರ್‌ವಾಲ್ (ಎ2), ಮೆ॥ ಫ್ರೇಮರಿ ಹೋಲ್ಡಿಂಗ್ಸ್ ಲಿಮಿಟೆಡ್ ಹಾಂಗ್‌ಕಾಂಗ್ (ಎ3) ಎಂಎಸ್ಐಎಲ್ ಅಧಿಕಾರಿಗಳಾದ ಶ್ರೀ ರಮಾಕಾಂತ್ ಹೆಬ್ಬಳ್ಳಿ (ಎ4) ಮತ್ತು ಶ್ರೀ ಪುರುಷೋತ್ತಮ್ ಸಿಂಹ (ಎ5), ಇವರುಗಳ ವಿರುದ್ಧ ಐಪಿಸಿ 420 ರಡಿ ಸಕ್ಷಮ ನ್ಯಾಯಾಲಯದಲ್ಲಿ ಕ್ರಿಮಿನಲ್ ದಾವೆ ಹೂಡಿದ್ದಾರೆ. ಸದರಿ ವಿಚಾರವು ಎಸಿಎಂಎಂ ನ್ಯಾಯಾಲಯದಲ್ಲಿ ಅನೇಕ ಸಮಯದಲ್ಲಿ ಪಟ್ಟಿ ಮಾಡಲಾಗಿದ್ದು, ಅದೇ ವೇಳೆಯಲ್ಲಿ ಮುಂದೂಡಲಾಗಿದೆ. ಈ ಮಧ್ಯೆ ಎ4 ಮತ್ತು ಎ5 ರವರು ನ್ಯಾಯಾಲಯದಿಂದ ಜಾಮೀನು ಪಡೆದಿದ್ದಾರೆ. ಎ1 ರವರ ಸಂಬಂಧದಲ್ಲಿ ಅವರು ಮರಣ ಹೊಂದಿರುವುದರಿಂದ, ಎ2 ರಿಂದ ಎ5ರವರೆಗಿನವರ ವಿರುದ್ಧ ಈಗ ವಿಚಾರಣೆ ನಡೆಸಲಾಗುವುದು.

ಮೆ॥ ಮಲ್ಲಪ್ಪ ಮಿನರಲ್ ಇಂಡಸ್ಟ್ರೀಸ್‌ನ ಶ್ರೀ ಮಾಲ್ತೇಶ್‌ರವರಿಂದ ರೂ.9 ಕೋಟಿ ವಸೂಲಿಗಾಗಿ, ಇವರ ವಿರುದ್ಧ ಅಪರ ಮ್ಯಾಜಿಸ್ಟ್ರೇಟ್‌ರವರ ನ್ಯಾಯಾಲಯದಲ್ಲಿ ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಆ್ಯಕ್ಟ್‌ನ ಸೆಕ್ಷನ್ 138ರ ಅನ್ವಯ ಚೆಕ್‌ಬೌನ್ಸ್ ಪ್ರಕರಣ ಹೂಡಲಾಗಿದೆ. ಕಂಪನಿ ಸಾಕ್ಷಿಯ ಪಾಟಿಸವಾಲು ಬಹುಪಾಲು ಪೂರ್ಣಗೊಂಡಿದೆ. ಆದರೆ, ಶ್ರೀ ಮಾಲ್ತೇಶ್ ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಮುಂದಿನ ನಡಾವಳಿಗೆ ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆ ತೆರವಾದರೆ ಮುಂದಿನ ವಿಚಾರಣೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಮುಂದುವರಿಯಲಿದೆ.

**45.** ಕಂಪನಿಯು 1997-98ರಲ್ಲಿ ಕರ್ನಾಟಕ ಸರ್ಕಾರದಿಂದ ರೂ.5,00,00,000/- (ರೂ.5,00,00,000/-) ಮೊತ್ತದ ಸಾಲ ಪಡೆದಿತ್ತು. ಅದಕ್ಕೆ ಕಂಪನಿಯು 31.03.2004ರವರೆಗೆ ರೂ.5,27,42,466/- ಮೊತ್ತದ ಬಡ್ಡಿ ಪಾವತಿಸಿದೆ.

ಮೇಲ್ಕಾಣಿಸಿದ ಮೊತ್ತ ರೂ.15,09,48,779/-ಅನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಬೇಕೆಂದು ಕಂಪನಿ 2004-05ರ ಹಣಕಾಸು ವರ್ಷದಲ್ಲೇ ಕರ್ನಾಟಕ ಸರ್ಕಾರಕ್ಕೆ ಕೇಳಿಕೊಂಡಿತ್ತು. 17.09.2004ರಲ್ಲಿ ಸರ್ಕಾರದ ಹಣಕಾಸು ಇಲಾಖೆ ಈ ಪ್ರಸ್ತಾವನೆಗೆ ಹಸಿರು ನಿಶಾನೆ ನೀಡಿತ್ತು. ಪಿಂಚಣಿ, ಸಣ್ಣ ಉಳಿತಾಯ ಸ್ವತ್ತುಗಳ ನಿರ್ವಹಣೆ ನಿರ್ದೇಶನಾಲಯ ಇಲಾಖೆ ದಿನಾಂಕ: 20.07.2012ರ ತನ್ನ ಪತ್ರದಲ್ಲಿ ಕಂಪನಿಯ ಪ್ರಸ್ತಾವನೆಯನ್ನು ಅನುಮೋದಿಸಿತ್ತು. ಈ ಮೊತ್ತವನ್ನು ಹಣಕಾಸಿನ ವರ್ಷ 2017-18ರ ಅವಧಿಯಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ರೂ.22,55,81,700/-ರ (ಷೇರು ಒಂದಕ್ಕೆ ರೂ.100/-ರ 2255817 ಸಂಖ್ಯೆ ಷೇರುಗಳು) ಮೌಲ್ಯದ ಷೇರು ಬಂಡವಾಳಕ್ಕೆ ಷೇರು ಅರ್ಜಿ ಹಣದಿಂದ ವರ್ಗಾಯಿಸಲಾಗಿದೆ.

**46.** ಇತರೆ ಹೊಣೆಗಾರಿಕೆಯಲ್ಲಿ ಸರ್ಕಾರದ ಹಲವು ಇಲಾಖೆಗಳಿಗೆ ಆಮದಾದ ಸಿಮೆಂಟ್ ಸರಬರಾಜು ಗುತ್ತಿಗೆ ಸಂಬಂಧ ಸ್ವೀಕರಿಸಿರುವ ಮುಂಗಡದ ಮೊತ್ತ ರೂ.2,10,46,347/- (ರೂ.2,10,46,347/-) ಸೇರಿದೆ.

**47ಎ.** ಐದು ಮದ್ಯ ತಯಾರಕರು ಮಾಡುವ ಮದ್ಯ ಮಾರಾಟದಲ್ಲಿ ಕಮಿಷನ್‌ಗೆ ಎಂಎಸ್ಐಎಲ್ ಅರ್ಹ ಎಂದು 13.02.2003ರಂದು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದೆ. ಕರ್ನಾಟಕದ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಅಂತಿಮಗೊಳಿಸುವ ಅಧಿಕಾರಿಯನ್ನು ನೇಮಕ ಮಾಡಿದೆ ಮತ್ತು ಇದನ್ನು ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿದೆ. ಅವರು ಸ್ಕೋಲ್ ಬ್ರೆವರೀಸ್ ನಿಯಮಿತ (ಹಿಂದಿನ ಮೈಸೂರು ಬ್ರೆವರೀಸ್ ನಿಯಮಿತ) ಅವರಿಂದ ರೂ.25.18 ಕೋಟಿ ಬಾಕಿ ಕಮಿಷನ್ ಪಡೆಯಲು ಅರ್ಹವಾಗಿದ್ದು, ಟಿಪ್ಪಣಿ 2-ಡಿ (ii) (ಬಿ) ರಲ್ಲಿನ ನಮೂದಿಸಿರುವ ಲೆಕ್ಕಪತ್ರದ ನೀತಿ ಅನುಸಾರ ಹಣ ಒದಗುವುದರ ಬಗ್ಗೆ ಖಚಿತವಿಲ್ಲದೆ ಇರುವುದರಿಂದ ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 13ನೇ ಫೆಬ್ರವರಿ 2003ರ ಆದೇಶದ ಅನ್ವಯ, ಒಂದು ವೇಳೆ ಮೇಲ್ಮನವಿದಾರರು ಕಮಿಷನ್ ಪಡೆದುಕೊಂಡಿದ್ದರೆ ಮತ್ತು ಈ ರೀತಿ ಪಡೆದುಕೊಂಡಿರುವ ಕಮಿಷನ್ ಅನ್ನು ಎಂಎಸ್ಐಎಲ್‌ಗೆ ಪಾವತಿ ಮಾಡಿರದಿದ್ದರೆ, ಮೇಲ್ಮನವಿದಾರರ ಲೆಕ್ಕದ

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

ಪುಸ್ತಕಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆ ರೀತಿ ಪಡೆದುಕೊಂಡಿರುವ ಕಮಿಷನ್ ಹಣವನ್ನು ಮೇಲ್ಮನವಿದಾರರಾದ ಮೆ॥ ಮೈಸೂರ್ ಬ್ರಿವರೀಸ್ ಲಿ.ನಿಂದ ವಸೂಲಿ ಮಾಡಿಕೊಳ್ಳತಕ್ಕದೆಂದು ನಿರ್ದೇಶಿಸಿತ್ತು. ಮುಂದುವರಿದು, ಎರಡೂ ಪಕ್ಷಗಳ ನಡುವೆ ಇರುವ ವಿವಾದ ಪರಿಹಾರವಾಗದಿದ್ದ ಪಕ್ಷದಲ್ಲಿ, ವಿವಾದವನ್ನು ಪರಿಹರಿಸಲು ಅಧಿಕಾರಿಗೆ ಅಧಿಕಾರ ನೀಡಿರುವುದರಿಂದ, ಪ್ರಧಾನ ಕಾರ್ಯದರ್ಶಿಯವರಿಗಿಂತ ಕೆಳಗಿನ ದರ್ಜೆಯಲ್ಲಿರದ, ಕರ್ನಾಟಕ ಸರ್ಕಾರ ನೇಮಕ ಮಾಡಲ್ಪಡುವ ಅಧಿಕೃತ ಅಧಿಕಾರಿಯವರಿಗೆ ಈ ವಿಚಾರವನ್ನು ತಿಳಿಸತಕ್ಕದೆಂದು ಸಹ ನ್ಯಾಯಾಲಯ ಆದೇಶ ಮಾಡಿತ್ತು.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನಗಳ ಅನ್ವಯ ಸಾಕಷ್ಟು ಅವಕಾಶ ನೀಡಲು ಕಾರ್ಯಕಲಾಪಗಳನ್ನು ನಡೆಸಿದ್ದ ಎಂಎಸ್ಐಎಲ್‌ನ ಅಧಿಕೃತ ಅಧಿಕಾರಿಯವರು, ಮೆ॥ ಸ್ಕೋಲ್ ಬ್ರಿವರೀಸ್ ರೂ.25.18 ಕೋಟಿಗಳ ಕಮಿಷನ್ ಅನ್ನು ಎಂಎಸ್ಐಎಲ್‌ಗೆ ಪಾವತಿ ಮಾಡಬೇಕೆಂದು ಮಾಡಿದ ತೀರ್ಪಿನ ಬಗ್ಗೆ ಮೆ॥ ಸ್ಕೂಲ್ ಬ್ರಿವರೀಸ್ (ಹಿಂದಿನ ಮೆ॥ ಮೈಸೂರ್ ಬ್ರಿವರೀಸ್ ಲಿ) ವಿವಾದ ಎತ್ತಿತು. ಅಧಿಕೃತ ಅಧಿಕಾರಿಯವರು ಮಾಡಿದ ಆದೇಶದ ಬಗ್ಗೆ ಸ್ಕೋಲ್ ಬ್ರಿವರೀಸ್ ವಿವಾದ ಎತ್ತಿದ ಕಾರಣ, ಸದರಿ ಕಮಿಷನ್ ಹಣ ವಸೂಲಿಗಾಗಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ಅರ್ಜಿ ಸಲ್ಲಿಸಲಾಗಿತ್ತು. ಕಂಪನಿ ಪರವಾಗಿ ಪಿಡಬ್ಲ್ಯೂಡಿ ಪಾಟಿ ಸವಾಲು ಪೂರ್ಣಗೊಂಡಿದೆ ಮತ್ತು ದಿನಾಂಕ 15ನೇ ನವೆಂಬರ್ 2018 ಅನ್ನು ಮುಂದಿನ ವಿಚಾರಣೆ ದಿನವನ್ನಾಗಿ ನಿಗದಿಪಡಿಸಿತ್ತು. ಈ ದಿನದಂದು ಎಂಎಸ್ಐಎಲ್ ನ ಪರವಾಗಿರುವ ಪಿಡಬ್ಲ್ಯೂ2ರನ್ನು ಸ್ಕೋಲ್ ಬ್ರಿವರೀಸ್ ಪಾಟಿ ಸವಾಲು ಮಾಡುವುದಿತ್ತು.

ಬಿ) ಹಿಂದಿನ ವರ್ಷದಲ್ಲಿ ಮೆ॥ ವೆಸ್ಕೇರ್ (ಇಂಡಿಯಾ) ಲಿಮಿಟೆಡ್ ಮಾಡಿದ ಹಕ್ಕು ಕೇಳಿಕೆಯನ್ನು ರೂ.1,19,23,000/-ರ ಮೊತ್ತದ ಸಂಭಾವ್ಯ ಹೊಣೆಗಾರಿಕೆ ಅನ್ವಯ ಕಂಪನಿ ಪ್ರಕಟಿಸಿದೆ. ಕಂಪನಿಯು 2015-16ರ ಅವಧಿಯಲ್ಲಿ ವೆಸ್ಕೇರ್ ವಿರುದ್ಧ ಮಧ್ಯಸ್ಥಿಕೆ ತೀರ್ಪಿಗಾಗಿ ದಾವೆ ಹೂಡಿತ್ತು. ಮಧ್ಯಸ್ಥಿಕೆದಾರರು 27.04.2016ರಂದು ಮಧ್ಯಸ್ಥಿಕೆ ತೀರ್ಪನ್ನು ವಿಲೇವಾರಿ ಮಾಡಿರುವರು. ಮಧ್ಯಸ್ಥಿಕೆದಾರರು 31.03.2009ರವರೆಗೆ ರೂ.155.59 ಲಕ್ಷಗಳ ಮೊತ್ತದ ಬಡ್ಡಿ ಜೊತೆಗೆ ಗುತ್ತಿಗೆ ಬಾಡಿಗೆಯ ಬಗ್ಗೆ ಕಂಪನಿ ಮಾಡಿರುವ ಕಂಪನಿಯ ಹಕ್ಕು ಕೇಳಿಕೆಯನ್ನು ಅಂಗೀಕರಿಸಿದೆ ಮತ್ತು ರೂ.239.37ಲಕ್ಷಗಳ ಉಳಿಕೆ ಹಕ್ಕನ್ನು ತಿರಸ್ಕರಿಸಿದೆ. (ಸಂಭಾವ್ಯ ಹೊಣೆಗಾರಿಕೆಯಲ್ಲಿನ ಟಿಪ್ಪಣಿ ನಂ.52 ಕ್ರ.ಸಂ.10 ನೋಡಿ)

ತೀರ್ಪು ನೀಡುವಾಗ ಮಧ್ಯಸ್ಥಿಕೆದಾರರು ವಿಂಡ್‌ಮಿಲ್ ಟರ್ಬೈನ್ಸ್‌ನ ವಿಲೇವಾರಿಯನ್ನು ಪರಿಗಣಿಸದಿದ್ದರೂ ಗುತ್ತಿಗೆಯ ಒಪ್ಪಂದದ ಅನುಸಾರ ಇಲ್ಲದ ಭದ್ರತಾ ಠೇವಣಿಯಿಂದ ಎಂಎಸ್ಐಎಲ್‌ನ ಹಾಗೂ ಮೆ॥ ವಾತಾ ಸ್ಮಾರ್ಟ್ ಲಿಮಿಟೆಡ್‌ನ ಬಾಕಿಗಳಿಗೆ ಹೊಂದಾಣಿಕೆ ಮಾಡುವಂತೆ ತೀರ್ಪು ನೀಡಿದೆ. ಇದು ಗುತ್ತಿಗೆ ಒಪ್ಪಂದದ ಅನುಸಾರ ಇರುವುದಿಲ್ಲ.

ಕಂಪನಿ ವಕೀಲರ ಅಭಿಪ್ರಾಯದ ಮೇರೆಗೆ, ಮಧ್ಯಸ್ಥಿಕೆದಾರರ ತೀರ್ಪನ್ನು ಪ್ರಶ್ನಿಸಿ ಕಂಪನಿಯು ಮದ್ರಾಸ್ ಹೈಕೋರ್ಟ್‌ನಲ್ಲಿ ದಿನಾಂಕ:27.04.2016ರಂದು ಮೂಲ ಮೊಕದ್ದಮೆ ಅರ್ಜಿ ಸಲ್ಲಿಸಿತ್ತು. ಸದರಿ ವಿಚಾರವು ಮದ್ರಾಸ್ ಹೈಕೋರ್ಟ್‌ನಲ್ಲಿ ವಿಚಾರಣೆಯಲ್ಲಿದೆ. ಕಳಚಿ ಹಾಕಿರುವ ವಿಂಡ್‌ಮಿಲ್ ಟರ್ಬೈನ್ಸ್‌ನ ತಪಶೀಲು ಪಡೆಯಲು ಏಕಪಕ್ಷೀಯವಾಗಿ ವೆಸ್ಕೇರ್‌ಗೆ ಹೈಕೋರ್ಟ್ ಅನುಮತಿ ಕೊಟ್ಟಿರುವ ಮತ್ತೊಂದು ಸಂಬಂಧಪಟ್ಟ ವಿಚಾರದಲ್ಲಿ ಕೋರ್ಟ್ ಹೊರಡಿಸಿರುವ ಆದೇಶಗಳನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿದೆ. ವಿಚಾರಣೆಯ ಮುಂದಿನ ದಿನಾಂಕವನ್ನು ಇನ್ನೂ ತಿಳಿಸಿರುವುದಿಲ್ಲ. ಮದ್ರಾಸ್ ಹೈಕೋರ್ಟ್‌ನಲ್ಲಿ ಹೂಡಿರುವ ಮೊಕದ್ದಮೆಯ ತೀರ್ಪಿನ ಖಚಿತತೆಯಿಲ್ಲದ್ದರಿಂದ ಕಂಪನಿಯು ಹಕ್ಕುಗಳನ್ನು ಪುಸ್ತಕಗಳಲ್ಲಿ ದಾಖಲಿಸಿರುವುದಿಲ್ಲ. ಈ ವಿಚಾರದ ಬಗ್ಗೆ ಮಾನ್ಯ ಮದ್ರಾಸ್ ಉಚ್ಚ ನ್ಯಾಯಾಲಯ ಕೆಲವು ಸಂದರ್ಭಗಳಲ್ಲಿ ವಿಚಾರಣೆ ನಡೆಸಿತ್ತು ಮತ್ತು ಈ ವಿಚಾರದ ಬಗ್ಗೆ ಮುಂದಿನ ವಿಚಾರಣೆಯನ್ನು ಡಿಸೆಂಬರ್ 2018ರಲ್ಲಿ ನಡೆಸಲು ನಿಗದಿ ಮಾಡಿದೆ.

**48.** ಟಿಪ್ಪಣಿ 11ರಲ್ಲಿಯ ಹೂಡಿಕೆಯಲ್ಲಿ ಫುಡ್ ಕರ್ನಾಟಕ ಲಿಮಿಟೆಡ್ ಹೊಂದಿರುವ ರೂ.10ರ ಬೆಲೆಯ 50,000 ಷೇರುಗಳು ಸೇರಿವೆ. ಕರ್ನಾಟಕ ಸರ್ಕಾರ ದಿನಾಂಕ : 05.03.2011ರಂದು ನೀಡಿದ ತನ್ನ ಆದೇಶ ನಂ. AHD 172 AFT 2010 ರೀತ್ಯ ಷೇರುಗಳನ್ನು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣಾ ಮತ್ತು ರಫ್ತು ನಿಗಮಕ್ಕೆ ವರ್ಗಾಯಿಸಲು ಆದೇಶಿಸಿದೆ. ಇದನ್ನು ಕಂಪನಿಯ 30.06.2011ರ ಮಂಡಳಿ ಸಭೆಯಲ್ಲೂ ಅನುಮೋದಿಸಲಾಗಿದೆ. ವರ್ಗಾವಣೆ ದರದ ನಿಷ್ಕರ್ಷೆಯಾಗಿರದ ಕಾರಣ ವರ್ಗಾವಣೆ ತಡೆಯಾಗಿದೆ.

**49.** ಇತರೆ ಚಾಲ್ತಿ ಹೊಣೆಗಾರಿಕೆಯಲ್ಲಿ ಎಂಎಸ್ಐಎಲ್ ಮತ್ತು ನೌಕರರಿಂದ ಮರಣ ಪರಿಹಾರ ನಿಧಿಗೆ ಅನುಕ್ರಮವಾಗಿ ನೀಡಿರುವ ರೂ.63,88,736/- (ರೂ.76,40,692/-) ಮತ್ತು (ರೂ.31,47,810/-) (ರೂ.27,51,855/-) ಸೇರಿದೆ. ಈ ಯೋಜನೆಯಂತೆ ನೌಕರನು ತನ್ನ ಸೇವಾ ಕಾಲದಲ್ಲಿ ಮೃತನಾದರೆ ಮೃತನ ವಾರಸುದಾರರು ರೂ.3,00,000/-ಪಡೆಯಲು ಅರ್ಹರಾಗಿರುತ್ತಾರೆ. ಅದೇ ರೀತಿ ನೌಕರನು ನಿವೃತ್ತನಾದಲ್ಲಿ ಅಥವಾ ರಾಜೀನಾಮೆ ನೀಡಿ ಕಂಪನಿಯನ್ನು ತ್ಯಜಿಸಿದಲ್ಲಿ ಆತನು ತಾನು ನೀಡಿರುವ ಪಾಲನ್ನು ಮಾತ್ರವಲ್ಲದೆ ಈ ಯೋಜನೆಯ ಕಂಪನಿಯ ಪಾಲನ್ನು ಪಡೆಯಲು ಅರ್ಹನಾಗಿರುತ್ತಾನೆ.

**50.** ಹಣಕಾಸು ವರ್ಷದ ಕೊನೆಯ ದಿನದಲ್ಲಿದ್ದಂತೆ ರೂ.1,96,008/- (ರೂ.45,307/-) ಮೌಲ್ಯದ ರವಾನೆದಾರರಿಗೆ ರವಾನೆಯಾಗಬೇಕಾದ ಸರಕನ್ನು ಕಂಪನಿ ಹೊಂದಿದೆ.

**51.** ನಿರೂಪಿತ ವಂತಿಗೆ ಯೋಜನೆಗಳು

ಕಂಪನಿಯು ಅರ್ಹತೆಯುಳ್ಳ ನೌಕರರಿಗಾಗಿ ನಿರೂಪಿತ ವಂತಿಗೆ ಯೋಜನೆಗೆ ಹಣವನ್ನು ಒದಗಿಸುವುದು. ಈ ಯೋಜನೆ ಅನ್ವಯ ಕಂಪನಿಯು ಹಣದ ಸೌಲಭ್ಯಗಳಿಗಾಗಿ ಪೇರೋಲ್ ಬೆಲೆಯ ನಿಗದಿತ ಶೇಕಡ ಪ್ರಮಾಣವನ್ನು ನೀಡಬೇಕಾಗಿರುತ್ತದೆ. ಕಂಪನಿಯು ಕೆಳಗೆ ತಿಳಿಸಿರುವ ಲಾಭ ಮತ್ತು ನಷ್ಟದ ವಿವರಗಳನ್ನು ಮಾನ್ಯ ಮಾಡಿದೆ. ಸದರಿ ಯೋಜನೆಗಳಿಗೆ ಕಂಪನಿ ಪಾವತಿ ಮಾಡಬೇಕಾಗಿರುವ ವಂತಿಗೆಯು ಯೋಜನೆಯ ನಿಯಮಗಳಲ್ಲಿ ತಿಳಿಸಿರುವ ದರದಲ್ಲಿರುವುದು:

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

i) ಮರಣ ಪರಿಹಾರ ನಿಧಿ ರೂ.7,22,610/- (ರೂ.3,19,618/-)

ii) ಗ್ರ್ಯಾಚ್ಯುಟಿ ರೂ.1,84,69,973/- (ರೂ.5,30,824/-)

iii) ವಯೋ ನಿವೃತ್ತಿ ರೂ.1,02,95,411/- (ರೂ.28,46,730/-)

iv) ಭವಿಷ್ಯನಿಧಿಗೆ ಕಂಪನಿಯ ವಂತಿಗೆ ರೂ.1,49,86,178/- (ರೂ.1,05,48,540/-)

**52.** 2ನೇ ಅಕ್ಟೋಬರ್ 2006ರಲ್ಲಿ ಜಾರಿಗೆ ಬಂದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆ ಅಭಿವೃದ್ಧಿ (ಎಂಎಸ್‌ಎಂಇಡಿ) ಕಾಯ್ದೆ 2006ರ ಅನ್ವಯ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಬಗ್ಗೆ ಕೆಲವೊಂದು ಪ್ರಕಟಣೆಗಳನ್ನು ಮಾಡಬೇಕಿತ್ತು. 2017-18ನೇ ಹಣಕಾಸು ವರ್ಷದಲ್ಲಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆ ಅಭಿವೃದ್ಧಿ ಕಾಯ್ದೆ 2006ರ ಪ್ರಕರಣ 22ರಂತೆ ಕಂಪನಿಯು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಗುರುತಿಸಿದೆ.

**ವರ್ಷಾಂತ್ಯದಲ್ಲಿದ್ದಂತೆ ಯಾವುದೇ ಸರಬರಾಜುದಾರರಿಗೆ ಪಾವತಿಯಾಗದೆ ಉಳಿದಿರುವ ಅಸಲು ಮೊತ್ತ ಮತ್ತು ಬಡ್ಡಿ**

| ವಿವರಗಳು | 31.03.2018 ರಲ್ಲಿದ್ದಂತೆ | 31.03.2017 ರಲ್ಲಿದ್ದಂತೆ |
|---|---|---|
| ★ ಅಸಲು ಮೊತ್ತ | ರೂ. | ರೂ. |
| ★ ಎಂಎಸ್‌ಎಂಇಡಿ ಕಾಯಿದೆ, 2006ರಡಿ ಪಾವತಿಸಬೇಕಾದ ಬಡ್ಡಿ | ರೂ.12,066/- | ರೂ.15,920/- |
| ★ ಒಟ್ಟು | ರೂ.12,066/- | ರೂ.15,920/- |
| 2018ರ ಮಾರ್ಚ್ 31ಕ್ಕೆ ಕೊನೆಗೊಂಡ ಲೆಕ್ಕಪತ್ರದ ವರ್ಷದಲ್ಲಿ ಯಾವುದೇ ಸರಬರಾಜುದಾರರಿಗೆ ನಿಗದಿತ ದಿನದ ನಂತರ ಮಾಡಿದ ಪಾವತಿ ಮೊತ್ತದೊಂದಿಗೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯಿದೆ, 2006ರ ಸೆಕ್ಷನ್ 16ರ ನಿಯಮಗಳನ್ವಯ ಕಂಪನಿಯು ಪಾವತಿಸಿರುವ ಬಡ್ಡಿ ಮೊತ್ತ | ಇಲ್ಲ | ಇಲ್ಲ |
| ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯಿದೆ 2006ರಡಿ ಸೂಚಿಸಲ್ಪಟ್ಟ ಬಡ್ಡಿ ಸೇರಿಸದೇ ಪಾವತಿ ಮಾಡುವಲ್ಲಿ ವಿಳಂಬ ಆದ ಅವಧಿಗೆ ಪಾವತಿಸಬೇಕಾದ ಬಡ್ಡಿ ಮೊತ್ತ (ವರ್ಷದಲ್ಲಿ ನೇಮಕವಾದ ದಿನದ ನಂತರ ಪಾವತಿಸಲ್ಪಟ್ಟಿದ್ದರೆ) * | ರೂ.12,066/- | ರೂ.15,920/- |
| ಲೆಕ್ಕಪತ್ರ ವರ್ಷ - ಮಾರ್ಚ್ 2018ರ ಅಂತ್ಯಕ್ಕೆ ಸಂಚಯನಗೊಂಡ ಬಡ್ಡಿ ಮತ್ತು ಪಾವತಿಸದೆ ಬಾಕಿಯಿರುವ ಮೊತ್ತ * | ರೂ.12,066/- | ರೂ.15,920/- |
| ಇನ್ನೂ ಪಾವತಿಗೆ ಬಾಕಿಯಿರುವ ಮತ್ತು ಮುಂದಿನ ವರ್ಷಗಳಲ್ಲಿ ಮೇಲಿನಂತೆ ಪಾವತಿ ಮಾಡಬೇಕಿರುವ ದಿನಾಂಕದವರೆಗೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ 2006*ರ ಪ್ರಕರಣ 23ರ ಅನ್ವಯ ಕಳೆದುಕೊಳ್ಳಬೇಕಾದ ಖರ್ಚು ಆಗಿ ಅಂಗೀಕರಿಸದ ಉದ್ದೇಶಕ್ಕಾಗಿ ಸಣ್ಣ ಉದ್ಯಮಕ್ಕೆ ವಾಸ್ತವವಾಗಿ ಪಾವತಿಸಿದ ಮೊತ್ತ | ರೂ.12,066/- | ರೂ.15,920/- |

* ಮೇಲಿನ ಮಾಹಿತಿಯನ್ನು ಕಂಪನಿಯು ಎಂಎಸ್‌ಎಂಇ ಎಂದು ಗುರುತಿಸಿರುವ ವ್ಯಕ್ತಿಗಳಿಗೆ ಆ ಪ್ರಮಾಣದವರೆಗೆ ಸಲ್ಲಿಸಿದೆ. ಇದು ವ್ಯವಹಾರ ಕ್ರಮದ ಭಾಗವಾಗಿ ನಿವ್ವಳ ರಿಯಾಯಿತಿ/ಮನ್ನಾ ಆಗಿರುವುದು. ಅದನ್ನು ಲೆಕ್ಕಪರಿಶೋಧಕರು ಪರಿಗಣಿಸಿರುವರು.

**53.** ರೂ.20,11,291/- (ರೂ.34,02,40,465/-) ರ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಲ್ಲಿ ಈ ಕೆಳಕಂಡವು ಒಳಗೊಂಡಿರುವವು:

i) ನವಿ ಮುಂಬೈನಲ್ಲಿ ಬಿಲ್ಡ್ ಓನ್ ಆಪರೇಟ್ ಟ್ರಾನ್ಸ್‌ಫರ್ (BOOT) ಅಡಿ ರೂ.ಇಲ್ಲ. (ರೂ.33,82,29,174/- )

ii) ಕಲಬುರಗಿಯಲ್ಲಿ ಉಗ್ರಾಣ ನಿರ್ಮಾಣ ರೂ.13,39,496/- (ರೂ.13,39,496/-,)

iii) ಧಾರವಾಡದಲ್ಲಿ ಉಗ್ರಾಣ ನಿರ್ಮಾಣ ರೂ.4,65,672/- (ರೂ.4,65,672/-)

iv) ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿ ಕಚೇರಿ ನಿರ್ಮಾಣ ರೂ.2,06,123/- (ರೂ.2,06,123/-)

**54.** ಮೌಲ್ಯ ನಿಖರಗೊಳಿಸದ 16 ಸಂಖ್ಯೆಯ (16 ಸಂಖ್ಯೆಯ) ವರ್ಣ ಚಿತ್ರಗಳನ್ನು ಕಂಪನಿ ಹೊಂದಿದೆ.

# ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

**55.** ಈ ಕೆಳಕಂಡವುಗಳನ್ನು ಒಳಗೊಂಡ ಸಂಭಾವ್ಯ ಹೊಣೆಗಾರಿಕೆಗಳು: **(ಮೊತ್ತ ರೂ.ಗಳಲ್ಲಿ)**

| ಕ್ರ.ಸಂ. | ಸಂಭಾವ್ಯ ಹೊಣೆಗಾರಿಕೆಗಳು | 2017-2018 | 2016-2017 |
|---|---|---|---|
| 1 | ಕೆಐಎಡಿಬಿ ದಂಡ | 1,20,000 | 1,20,000 |
| 2 | ಆರ್ಥಿಕ ವರ್ಷ 2001-02ರಿಂದ 2003-04ರವರೆಗೆ ಟಿಸಿಎಸ್ ಬಡ್ಡಿ | 17,86,95,404 | 16,27,00,399 |
| 3 | ಕಂಪನಿಯಿಂದ ಬ್ಯಾಂಕ್‌ಗಳಿಗೆ ನೀಡಿದ ಗ್ಯಾರಂಟಿಗಳು/ಪ್ರತಿ ಗ್ಯಾರಂಟಿಗಳು | 38,55,44,381 | 36,49,68,381 |
| 4 | ಅಗ್ನಿ ಅನಾಹುತ ಪಾಲಿಸಿಯ ವಿಮಾ ಹಕ್ಕು - ಬಾಕಿ ಇರುವ ಕೇಸ್‌ಗಳು-ಕೆಳಗಿನ ಟಿಪ್ಪಣಿ (i) | 2,07,73,297 | 2,07,73,297 |
| 5 | ಅಗ್ನಿ ಅನಾಹುತ ಪಾಲಿಸಿಯ ವಿಮಾ ಹಕ್ಕು - ಇತ್ಯರ್ಥವಾಗಿರುವ ಕೇಸ್‌ಗಳು-ಕೆಳಗಿನ ಟಿಪ್ಪಣಿ (i) | 4,88,70,362 | 4,88,70,362 |
| 6 | ವಿಮಾ ಹಕ್ಕುಗಳ ಮೇಲೆ ಬಡ್ಡಿ -ಕೆಳಗಿನ ಟಿಪ್ಪಣಿ (i) | 4,87,58,984 | 4,49,09,522 |
| 7 | ಬಿಎಸಿಸಿ ಬಳಿಯ ಕೆಐಎಡಿಬಿ ಭೂಮಿಯ ಮೇಲಿನ ಹಕ್ಕು - ಭೂ ಬಳಕೆದಾರರಿಂದ | 30,19,863 | 30,19,863 |
| 8 | ಕಬ್ಬಿಣದ ಅದಿರು ರಫ್ತು ವ್ಯವಹಾರದಲ್ಲಿ ವ್ಯಕ್ತಿಯಿಂದ ಹಕ್ಕು ಕೇಳಿಕೆ (ಬಡ್ಡಿ ಸೇರಿದಂತೆ) | 14,78,53,074 | 14,63,83,432 |
| 9 | ಪಿಂಚಣಿ, ಸಣ್ಣ ಉಳಿತಾಯಗಳು ಆಸ್ತಿ ಮೇಲ್ವಿಚಾರಣೆ ನಿರ್ದೇಶನಾಲಯ ಮಾಡಿರುವ ಕ್ಲೇಮು | 46,09,86,366 | 46,09,86,366 |
| 10 | ವೆಸ್ಕೇರ್ (ಇಂಡಿಯಾ) ಲಿಮಿಟೆಡ್‌ನಿಂದ ಗಾಳಿಯಂತ್ರದ ಗುತ್ತಿಗೆ ಹಕ್ಕು | 1,19,23,000 | 1,19,23,000 |

i) 2000-01ರಲ್ಲಿ ಬೆಂಗಳೂರಿನ ಕಂಪನಿ ಸ್ವತ್ತಾದ ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್‌ನಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ನಷ್ಟವಾದ ಗ್ರಾಹಕರ ಕ್ಲೇಮುಗಳನ್ನು ಸಂಬಂಧಿಸಿದ ಕೆಲವು ವಿಮಾ ಕಂಪನಿಗಳು ಇತ್ಯರ್ಥಗೊಳಿಸಿದ್ದರೂ, ಅವರು ಕಂಪನಿ ವಿರುದ್ಧ PRINCIPLES OF SUBROGATION ನಡಿ ಅವರ ಕ್ಲೇಮುಗಳ ವಸೂಲಿಗೆ ಅನೇಕ ದಾವೆ ಸಲ್ಲಿಸಿದ್ದಾರೆ. ನಗರ ಸಿವಿಲ್ ಕೋರ್ಟ್‌ನಲ್ಲಿ ಕಂಪನಿಯು ಈ ಕ್ಲೇಮುಗಳ ವಿರುದ್ಧ ತನ್ನ ತಗಾದೆ ಸಲ್ಲಿಸಿದೆ. ಸಿವಿಲ್ ಕೋರ್ಟ್‌ಗಳ ತೀರ್ಪಿನಿಂದ ಅಸಮಾಧಾನಗೊಂಡ ಕಂಪನಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಿದೆ. ಗೌರವಾನ್ವಿತ ಹೈಕೋರ್ಟ್ 09.03.2009ರ ತನ್ನ ಆದೇಶದಲ್ಲಿ ಎಂಎಸ್‌ಐಎಲ್ ಮತ್ತು ಸೀಮಾ ಸುಂಕ ಇಲಾಖೆಯವರು ಜಂಟಿಯಾಗಿ ಹೊಣೆಯಾಗಿದ್ದು, ಹಕ್ಕುದಾರರಿಗೆ ಈ ಹಣವನ್ನು ಪಾವತಿ ಮಾಡಬೇಕೆಂದು ತಿಳಿಸಿದೆ. ಉಚ್ಚ ನ್ಯಾಯಾಲಯದ ಆದೇಶದಿಂದ ಅಸಮಧಾನಗೊಂಡ ಕಂಪನಿ, ಸೀಮಾ ಸುಂಕ ಇಲಾಖೆಯ ಜೊತೆಗೂಡಿ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು 06.11.2009ರ ತನ್ನ ಆರ್ಡರ್‌ನಲ್ಲಿ ಎರಡೂ ಕಡೆಯ ವಾದವನ್ನು ಆಲಿಸಿ, ಸಂಬಂಧಿಸಿದ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳಾಗಿದ್ದು ಪರಸ್ಪರರು ಮಾತನಾಡಿ ವ್ಯಾಜ್ಯವನ್ನು ಸೂಕ್ತವಾಗಿ ಪರಿಹರಿಸಿಕೊಳ್ಳಬೇಕೆಂದು ತಿಳಿಸಿದೆ. ಇದೇ ರೀತಿಯ ವಿಚಾರದ ಕೆಲವು ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯಗಳು ಉಚ್ಚ ನ್ಯಾಯಾಲಯದ ಇದೇ ತಾರ್ಕಿಕ ಆಧಾರಗಳನ್ನು ಅನ್ವಯಿಸಿವೆ ಮತ್ತು ಎಂಎಸ್‌ಐಎಲ್ ಮತ್ತು ಸೀಮಾ ಸುಂಕ ಇಲಾಖೆ ಜಂಟಿಯಾಗಿ ವಿಮಾ ಹಕ್ಕನ್ನು ಇತ್ಯರ್ಥಪಡಿಸಲು ಹೊಣೆಯಾಗಿರುವರು ಎಂದು ತೀರ್ಪು ನೀಡಿದೆ. ಪುಸ್ತಕಗಳಲ್ಲಿನ ಶೇ.6ರಷ್ಟು ಬಡ್ಡಿ ಬಂಡವಾಳ ಸೇರಿ ರೂ.3,25,43,115/-ರ (3,12,59,962/-) ಹೊಣೆಗಾರಿಕೆಯ ನಾಲ್ಕನೇ ಒಂದು ಭಾಗವನ್ನು ಕಂಪನಿಯು ಒದಗಿಸಿದೆ ಮತ್ತು ರೂ.9,76,29,346/- (ರೂ.9,37,79,884/-) ಗಳ ಬಾಕಿ ಮೊತ್ತವನ್ನು ಸಂಭಾವ್ಯ ಹೊಣೆಗಾರಿಕೆಯಲ್ಲಿ ತೋರಿಸಲಾಗಿದೆ. ಕಂಪನಿಯ ವಿಮಾದಾರರು ಮತ್ತು ಸೀಮಾ ಸುಂಕ ಇಲಾಖೆಯಿಂದ ವಸೂಲಾತಿಗೆ ಯಾವುದೇ ಕ್ಲೇಮುಗಳು ನಿರ್ಧರಣೆಯಾಗಿಲ್ಲ. ಬಿಎಸಿಸಿ ಉಗ್ರಾಣದಲ್ಲಿ ಇರಿಸಲಾಗಿರುವ ಸರಕುಗಳಿಗೆ ಕಂಪನಿಯು ತನ್ನ ವಿಮಾ ಕಂಪನಿಯ ಮೂಲಕ ಸೀಮಾ ಸುಂಕ ನಿಯಮಾವಳಿಯ ವ್ಯಾಪಾರಿ ಸುತ್ತೋಲೆಯಂತೆ ಕೆ.ಜಿ.ಯೊಂದಕ್ಕೆ 20 ಡಾಲರ್‌ನಂತೆ ವಿಮೆ ಮಾಡಿಸಿದೆ.

ii) ಕಂಪನಿಯು ನಿರ್ಧರಣೆ ವರ್ಷ 2010-11 ಮತ್ತು 2012-13, 2014-15 ಮತ್ತು 2015-16ಕ್ಕೆ ಆದಾಯ ತೆರಿಗೆ ಮರು ಪಾವತಿ ಕೇಳಿದೆ. ಆದಾಯ ತೆರಿಗೆ ಇಲಾಖೆ ಆದೇಶದಂತೆ ತೆರಿಗೆ ಬೇಡಿಕೆಗಳು ಕೆಳಕಂಡಂತಿವೆ :

| ವರ್ಷ | ಮೊತ್ತ (ರೂ.ಗಳಲ್ಲಿ) |
|---|---|
| 2010-11 | 3,42,45,480/- |
| 2012-13 | 26,18,238/- |
| 2014-15 | 1,08,45,920/- |
| 2015-16 | 18,65,460/- |

ಈ ಮೇಲಿನ ಬೇಡಿಕೆಗಾಗಿ ಕಂಪನಿಯು ಮೇಲ್ಮನವಿ ಸಲ್ಲಿಸಿರುವುದರಿಂದ ಅದನ್ನು ಪುಸ್ತಕಗಳಲ್ಲಿ ಪರಿಗಣಿಸಲಾಗಿಲ್ಲ. ಆ ಕಾರಣದಿಂದಾಗಿ ನಿರ್ಧರಣೆ ಆದೇಶದ ದಿನಾಂಕದಿಂದ ಮಾರ್ಚ್ 31, 2018ರವರೆಗೂ ಮೇಲಿನ ಅಂಕಿ ಅಂಶಗಳಲ್ಲಿ ಬಡ್ಡಿ ಸೇರಿರುವುದಿಲ್ಲ.

**56.** ಐಎನ್‌ಡಿ ಎಎಸ್-17"ಗುತ್ತಿಗೆಯ ಲೆಕ್ಕ"ದ ಅನ್ವಯ ಮಾಡಬೇಕಾದ ಪ್ರಕಟಣೆ ಈ ಕೆಳಗಿನ ರೀತಿ ಇದೆ :

ಎಂವಿ ಸೋಲಾರ್ ಸಿಸ್ಟಂ ಪ್ರೈವೇಟ್ ಲಿಮಿಟೆಡ್ ಜೊತೆ ಜಂಟಿ ಸಹಯೋಗದಲ್ಲಿ ಸೋಲಾರ್ ವಾಟರ್ ಹೀಟರ್‌ನ್ನು ಗೃಹೇತರ ಗ್ರಾಹಕರಿಗೆ ಗುತ್ತಿಗೆ ನೀಡಲು ಕಂಪನಿ ಕಾರ್ಯಾಚರಣೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿದೆ.

| ಒಟ್ಟಾರೆ ಗುತ್ತಿಗೆ ಪಾವತಿ | **31.3.2018ರಲ್ಲಿದ್ದಂತೆ** | **31.3.2017ರಲ್ಲಿದ್ದಂತೆ** |
|---|---|---|
| 1. ಒಂದು ವರ್ಷಕ್ಕೆ ಮೀರದಂತೆ | ಇಲ್ಲ | ಇಲ್ಲ |
| 2. ಒಂದು ವರ್ಷ ಮೀರಿ 5 ವರ್ಷದೊಳಗೆ | ರೂ.43,770/- | ರೂ.43,770/- |
| 3. ಐದು ವರ್ಷ ಮೀರಿ | ಇಲ್ಲ | ಇಲ್ಲ |

**57.** ಐಎನ್‌ಡಿ ಎಎಸ್-24 ರೀತ್ಯ ಸಂಬಂಧಪಟ್ಟ ವ್ಯಕ್ತಿಯ ಪ್ರಕಟಣೆ ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಅಂದರೆ ಈ ಕೆಳಕಂಡಂತೆ ತಿಳಿಸಿರುವ ನಿರ್ದೇಶಕರ ಕುರಿತಂತೆ ಪ್ರಕಟಣೆ :

ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ಸಂಭಾವನೆ

| ವಿವರ | **2017-18** | **2016-17** |
|---|---|---|
| ವೇತನ ಮತ್ತು ಭತ್ಯೆಗಳು | ರೂ.31,85,273/- | ರೂ.16,22,939/- |
| ವೈದ್ಯಕೀಯ ವೆಚ್ಚಗಳು | ರೂ.7,94,642/- | ರೂ.3,85,633/- |

ಹಣಕಾಸಿನ ವರ್ಷ 2017-18ರಲ್ಲಿ ಸಂಬಂಧಪಟ್ಟ ವ್ಯಕ್ತಿಗಳ ಪ್ರಕಟಣೆ ವಿವರ:

| **ವಿವರ** | **ಹೂಡಿಕೆ ಮೊತ್ತ** | **ಸೇವೆಗಳು/ಮಾರಾಟ ವ್ಯವಹಾರ-2017-18** | | **ಪಡೆದಿರುವ ಲಾಭಾಂಶ** | **31.03.2018ರಲ್ಲಿದ್ದಂತೆ ಶಿಲ್ಕು** | |
|---|---|---|---|---|---|---|
| | | **ಆದಾಯ** | **ಖರ್ಚು** | | **ಬರಬೇಕಾಗಿರುವುದು** | **ಪಾವತಿಸಬೇಕಾಗಿರುವುದು** |
| ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | 59738400 | 458060 | 12347414 | 3572520 | - | 4265805 |
| ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿ. | 5000 | - | - | - | - | - |
| ಫುಡ್ ಕರ್ನಾಟಕ ಲಿ. | 500000 | - | - | - | - | - |
| ಕರ್ನಾಟಕ ಸರ್ಕಾರ | 427347700 | - | - | - | - | - |

58. ಎ) 31.03.2018ಕ್ಕೆ ಕೊನೆಗೊಂಡ ವರ್ಷಕ್ಕೆ ವಿಭಾಗದ ಮಾಹಿತಿ ಬಗ್ಗೆ ಐಎನ್‌ಡಿ ಎಎಸ್-108ರ ಅನುಸಾರ ಘೋಷಣೆಗಳನ್ನು ಸೇರಿಸಿದೆ. ವಿಭಾಗಗಳಿಗೆ ನೇರವಾಗಿ ಅನ್ವಯಿಸತಕ್ಕ ಆದಾಯ ಮತ್ತು ಖರ್ಚುಗಳನ್ನು ಪ್ರತಿಯೊಂದು ವರದಿ ಮಾಡಬಹುದಾದ ವಿಭಾಗದ ಅಡಿಯಲ್ಲಿ ತಿಳಿಸಿದೆ. ಪ್ರತಿಯೊಂದು ವರದಿ ಮಾಡುವ ವಿಭಾಗಕ್ಕೆ ನೇರವಾಗಿ ಅನ್ವಯಿಸಲಾಗದ ಖರ್ಚುಗಳನ್ನು ವಿಭಾಗದ ಒಳಪಟ್ಟ ಆದಾಯಗಳು ಮತ್ತು ಮಾನವ ಶಕ್ತಿ ಪರಿಶ್ರಮದ ಆಧಾರದ ಮೇಲೆ ಹಂಚಿಕೆ ಮಾಡಿದೆ. ವಿಭಾಗಗಳಿಗೆ ಅನ್ವಯಿಸಲಾಗದ ಅಥವಾ ಹಂಚಿಕೆ ಮಾಡಲಾಗದ ಇತರೆ ಎಲ್ಲಾ ಖರ್ಚುಗಳನ್ನು 'ಇತರೆ' ಶೀರ್ಷಿಕೆ ಅಡಿ ತಿಳಿಸಲಾಗಿದೆ.

ವಿಭಾಗಗಳಿಗೆ ನೇರವಾಗಿ ಅನ್ವಯಿಸಬಹುದಾದ ಅಥವಾ ಹಂಚಿಕೆ ಮಾಡಬಹುದಾದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಪ್ರತಿಯೊಂದು ತಿಳಿಸಲ್ಪಡುವ ವಿಭಾಗದ ಅಡಿಯಲ್ಲಿ ವಿವರಿಸಿದೆ.ಇನ್ನುಳಿದ ಎಲ್ಲಾ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು 'ಇತರೆ' ಶೀರ್ಷಿಕೆ ಅಡಿ ತಿಳಿಸಲಾಗಿದೆ.

ಬಿ) ಐಎನ್‌ಡಿ ಎಎಸ್ ಹಣಕಾಸುಗಳ ಕ್ರೋಡೀಕರಣಕ್ಕಾಗಿ 3 ಸಹಾಯಕ ಕಂಪನಿಗಳ ಐಎನ್‌ಡಿ ಎಎಸ್ ಹಣಕಾಸುಗಳಿಂದ ಅಂಕಿಅಂಶಗಳನ್ನು ನಾವು ಪರಿಗಣಿಸಿದ್ದೇವೆ. ಸಹಾಯಕ ಕಂಪನಿ ಫುಡ್ ಕರ್ನಾಟಕ ಲಿ. ಯಿಂದ ಒದಗಿಸಿರುವ ಐಎನ್‌ಡಿ ಎಎಸ್ ಹಣಕಾಸಿನ ಬಗ್ಗೆ ಅವರ ಮಂಡಳಿಯಿಂದ ಅನುಮೋದನೆ ಆಗಬೇಕಾಗಿ ಉಳಿದುಕೊಂಡಿದೆ.

**59. ತೆರಿಗೆ ಖರ್ಚು**

ಐಎನ್‌ಡಿ ಎಎಸ್ 12 ರ ಅನ್ವಯ ಅಗತ್ಯವಾದಂತೆ ತೆರಿಗೆ ಖರ್ಚುಗಳ ಸಮನ್ವಯತೆಯನ್ನು ಕೆಳಕಂಡ ತಃಖ್ತೆಯಲ್ಲಿ ಒದಗಿಸಿದೆ:

| ವಿವರಗಳು | 31ನೇ ಮಾರ್ಚ್ 2018 | 31ನೇ ಮಾರ್ಚ್ 2017 |
|---|---|---|
| ವರ್ಷದ ತೆರಿಗೆ ವ್ಯವಸ್ಥೆ ಮುನ್ನ ಲೆಕ್ಕಾಚಾರ ಮಾಡಿದ ಲಾಭ | - | - |
| **ಲೆಕ್ಕಾಚಾರ ಮಾಡಿದ ಲಾಭದ ಮೇಲಿನ ತೆರಿಗೆ** | **235559393** | **568091483** |
| 34.608% ದರದಲ್ಲಿ (31ನೇ ಮಾರ್ಚ್ 2017: 34.608%) | 93773075 | 197773538 |
| ತೆರಿಗೆ ವಿನಾಯಿತಿ ಪಡೆದ ಆದಾಯ: ಲಾಭಾಂಶ ಆದಾಯ | 4442894 | 3504295 |
| ಬಂಡವಾಳ ಗಳಿಕೆಗಳ ಮೇಲೆ ಕಡಿಮೆ ತೆರಿಗೆ ವಿಧಿಸುವಿಕೆ | 0 | 0 |
| **ತೆರಿಗೆ ಉದ್ದೇಶಗಳಿಗಾಗಿ ಮುರಿದುಕೊಳ್ಳಲಾಗದ ಖರ್ಚುಗಳು** | | |
| ನೌಕರರ ಆನುಷಂಗಿಕ ಸೌಲಭ್ಯಗಳ ಮೇಲಿನ ಆದಾಯ ತೆರಿಗೆ | 0 | 0 |
| ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ | 54079716 | 20000000 |
| **ತಾತ್ಕಾಲಿಕ ವ್ಯತ್ಯಾಸಗಳು** | | |
| ಸವಕಳಿ | 23457212 | 5945962 |
| ಹೂಡಿಕೆಗಳ ನ್ಯಾಯೋಚಿತ ಮೌಲ್ಯದಲ್ಲಿ ಬದಲಾವಣೆ | 0 | 0 |
| ಮುಂದುವರಿಯುತ್ತಿರುವ ಗುತ್ತಿಗೆಗಳ ನ್ಯಾಯೋಚಿತ ಮೌಲ್ಯದಲ್ಲಿ ಬದಲಾವಣೆ | 0 | 0 |
| ಗ್ರ್ಯಾಚ್ಯುಟಿ ಖರ್ಚು | 0 | 0 |
| ರಜೆ ನಗದೀಕರಣ | 23763049 | 7676473 |
| ಇತರೆ | 0 | 0 |
| **ತೆರಿಗೆ ಉದ್ದೇಶಗಳಿಗಾಗಿ ಲೆಕ್ಕಾಚಾರ ಮಾಡಿರುವ ಲಾಭದ ಮೇಲಿನ ತೆರಿಗೆ (ನಿರ್ಧರಿಸಿರುವುದು)** | **270957800** | **571467690** |
| ಅನ್ವಯವಾದ ಆದಾಯ ತೆರಿಗೆ ದರ (%ರಲ್ಲಿ) | 34.608 | 34.608 |
| **ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸಿರುವ ಆದಾಯ ತೆರಿಗೆ ಖರ್ಚು** | **93773075** | **197773538** |

ಟಿಪ್ಪಣಿ 1 ರಿಂದ 59ಕ್ಕೆ ಸಹಿ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

| ಸಹಿ/- | ಸಹಿ/- | ಸಹಿ/- | ಸಹಿ/- | ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ |
|---|---|---|---|---|
| **ಕೆ.ಜೆ.ಜಾರ್ಜ್** | **ಡಾ. ಜಿ.ಸಿ. ಪ್ರಕಾಶ್** | **ಶ್ರೀದೇವಿ ಬಿ.ಎನ್.** | **ಸುಬ್ರಮಣ್ಯ** | **ಪಿ. ಚಂದ್ರಶೇಖರ್ ಎಲ್‌ಎಲ್‌ಪಿ** |
| ಅಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು | ಕಂಪನಿ ಕಾರ್ಯದರ್ಶಿ | ಮುಖ್ಯ ಹಣಕಾಸು ಅಧಿಕಾರಿ | ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ |

ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066

ಸಹಿ/-

**ಡಿ. ಮಣಿಕುಮಾರ್**

ಪಾಲುದಾರರು

ಸದಸ್ಯತ್ವ ಸಂಖ್ಯೆ: 212544

ದಿನಾಂಕ : 16.11.2018

ಸ್ಥಳ : ಬೆಂಗಳೂರು

MSIL

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

## 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಲೆಕ್ಕಪತ್ರಗಳು

# ಸ್ವತಂತ್ರ ಲೆಕ್ಕಪರಿಶೋಧಕರ ಪರಿಷ್ಕೃತ ವರದಿ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳಿಗೆ**

**ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ ಮೇಲಿನ ವರದಿ**

ನಾವು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ 31ನೇ ಮಾರ್ಚ್ 2018ರಂದು ಇದ್ದಂತಹ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ (ಇತರೆ ಸಮಗ್ರ ಆದಾಯ ಒಳಗೊಂಡಂತೆ) ವಿವರ, ಈ ಅವಧಿಗೆ ಕೊನೆಗೊಂಡ ವರ್ಷದ ನಗದು ಹರಿವಿನ ವಿವರ ಮತ್ತು ಸದರಿ ದಿನಾಂಕದಂದು ಇದ್ದಂತೆ ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡ ಇದರೊಡನೆ ಸೇರಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಸ್ವತಂತ್ರ ಹಣಕಾಸು ಹೇಳಿಕೆಗಳ ಲೆಕ್ಕ ಪರೀಶೋಧನೆ ಮಾಡಿದ್ದೇವೆ ಮತ್ತು ದಿನಾಂಕ:16ನೇ ನವೆಂಬರ್ 2018ರಂದು ನಮ್ಮ ವರದಿ ಸಲ್ಲಿಸಿದ್ದೇವು. ತದನಂತರ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅಭಿಪ್ರಾಯದ ಹಿನ್ನೆಲೆಯಲ್ಲಿ ಲೆಕ್ಕ ಪರಿಶೋಧನಾ ವರದಿಯನ್ನು ಪರಿಷ್ಕರಿಸಲಾಗಿದೆ. ಹಾಗಾಗಿ ಸದರಿ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯು ನಮ್ಮ ಈ ಮೊದಲಿನ ದಿನಾಂಕ 16ನೇ ನವೆಂಬರ್ 2018ರ ವರದಿಯನ್ನು ರದ್ದುಗೊಳಿಸಿದೆ.

**ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿ ಹೊಂದಿರುವ ಜವಾಬ್ದಾರಿ:**

ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2015ರ ನಿಯಮ-7 ಓದಿಕೊಂಡಂತೆ, ಕಾಯ್ದೆಯ ಪ್ರಕರಣ 133ರ ಅನ್ವಯ ನಿಗದಿಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು (Ind AS) ಸೇರಿದಂತೆ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಹಣಕಾಸಿನ ಸ್ಥಿತಿ, ಹಣಕಾಸಿನ ಕಾರ್ಯಕ್ಷಮತೆ, ನಗದು ಹರಿವಿನ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಸದರಿ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವ ಸಂಬಂಧ ಕಂಪನಿಗಳ ಕಾಯ್ದೆ, 2013ರ ಪ್ರಕರಣ 134(5)ರಲ್ಲಿ (ಕಾಯ್ದೆ) ತಿಳಿಸಿರುವ ವಿಚಾರಗಳಿಗೆ ಕಂಪನಿಯ ನಿರ್ದೇಶಕರ ಮಂಡಳಿಯು ಜವಾಬ್ದಾರಿಯಾಗಿರುವುದು. ಕಂಪನಿಯ ಆಸ್ತಿಗಳನ್ನು ಸುರಕ್ಷತೆ ಮಾಡಲು ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಪ್ರಮಾಣದಲ್ಲಿ ಲೆಕ್ಕ ನಿರ್ವಹಣೆ ದಾಖಲೆಗಳನ್ನು ನಿರ್ವಹಣೆ ಮಾಡಲು, ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು; ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡಲು ಮತ್ತು ಅವುಗಳನ್ನು ಅನ್ವಯಿಸಲು, ಸೂಕ್ತವಾದ ಮತ್ತು ನ್ಯಾಯಸಮ್ಮತವಾದ ತೀರ್ಮಾನಗಳನ್ನು ಮತ್ತು ಅಂದಾಜುಗಳನ್ನು ಮಾಡಲು; ಮತ್ತು ವಂಚನೆ ಅಥವಾ ತಪ್ಪಿನಿಂದಾಗಿ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವ ಮತ್ತು ನೈಜ ಮತ್ತು ನ್ಯಾಯಸಮ್ಮತ ಚಿತ್ರಣ ನೀಡುವ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸಲು ಮತ್ತು ನಿರೂಪಣೆ ಮಾಡಲು ಸಮ್ಮತವಾದ ಲೆಕ್ಕ ನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಬಗ್ಗೆ ಖಾತರಿಪಡಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುವ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಈ ಜವಾಬ್ದಾರಿಯಲ್ಲಿ ಸೇರಿರುವುದು.

**ಲೆಕ್ಕ ಪರಿಶೋಧಕರ ಜವಾಬ್ದಾರಿ:**

ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಸದರಿ ಸ್ವತಂತ್ರ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯ ಒಂದನ್ನು ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ನಮ್ಮ ಲೆಕ್ಕ ಪರಿಶೋಧನೆ ನಡೆಸಲು ನಾವು ಕಾಯ್ದೆಯ ಉಪಬಂಧಗಳು, ಲೆಕ್ಕ ನಿರ್ವಹಣೆ ಮತ್ತು ಲೆಕ್ಕ ಪರಿಶೋಧನೆ ಗುಣಮಟ್ಟಗಳು ಮತ್ತು ಕಾಯ್ದೆಯ ಉಪಬಂಧಗಳು ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳ ಅನ್ವಯ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕಾದ ವಿಚಾರಗಳನ್ನು ನಾವು ಗಣನೆಗೆ ತೆಗೆದುಕೊಂಡಿದ್ದೇವೆ.

ನಾವು Ind AS ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನಾ ಕಾರ್ಯವನ್ನು ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 143(10) ರ ಅಡಿಯಲ್ಲಿ ನಿಗದಿಪಡಿಸಿರುವ ಲೆಕ್ಕಪರಿಶೋಧನೆಯ ಗುಣಮಟ್ಟಗಳ ಅನುಸಾರ ನಡೆಸಿದ್ದೇವೆ. ಈ ಗುಣಮಟ್ಟದ ಅನುಸಾರ ನಾವು ಸ್ವತಂತ್ರ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟದ ಹಣಕಾಸಿನ ಹೇಳಿಕೆಗಳು ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ನೈಜವಾಗಿರುವುವು ಎಂಬುದರ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಬೇಕಾಗುವುದು ಮತ್ತು ಲೆಕ್ಕಪರಿಶೋಧನೆ ನಡೆಸುವ ಬಗ್ಗೆ ಯೋಜನೆ ಮಾಡಬೇಕು ಹಾಗೂ ಲೆಕ್ಕಪರಿಶೋಧನೆ ನಡೆಸಬೇಕಾಗುವುದು.

ಸ್ವತಂತ್ರ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳಲ್ಲಿನ ಮೊತ್ತಗಳು ಮತ್ತು ಪ್ರಕಟಣೆಗಳ ಬಗ್ಗೆ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ನಡೆಸುವ ಕಾರ್ಯವು ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ವಂಚನೆ ಅಥವಾ ತಪ್ಪಿನಿಂದಾಗಿ Ind AS ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಯ ಅಪಾಯಗಳನ್ನು ನಿರ್ಧರಣೆ ಮಾಡುವುದೂ ಸೇರಿದಂತೆ, ಲೆಕ್ಕಪರಿಶೋಧಕರ ತೀರ್ಮಾನದ ಆಧಾರದ ಮೇಲೆ ಕ್ರಮಾವಳಿಗಳನ್ನು ಆಯ್ಕೆ ಮಾಡಲಾಗಿದೆ. ಅಂತಹ ಅಪಾಯಗಳ ನಿರ್ಧರಣೆ ಮಾಡುವಲ್ಲಿ ಆ ಸಂದರ್ಭಗಳಲ್ಲಿ ಸೂಕ್ತವಾದ ಲೆಕ್ಕಪರಿಶೋಧನಾ ಕ್ರಮಾವಳಿಗಳನ್ನು ವಿನ್ಯಾಸ ಮಾಡಲು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳನ್ನು ಕಂಪನಿಯು ಸಿದ್ಧಪಡಿಸಲು ಮತ್ತು ಅವುಗಳನ್ನು ನ್ಯಾಯೋಚಿತವಾಗಿ

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

ನಿರೂಪಣೆ ಮಾಡಲು ಅನುರೂಪವಾದ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಲೆಕ್ಕಪರಿಶೋಧಕರು ಪರಿಗಣಿಸುವರು. ಅನುಸರಿಸಿರುವ ಲೆಕ್ಕ ನಿರ್ವಹಣೆ ನೀತಿಗಳ ಸೂಕ್ತಾಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದು ಮತ್ತು ಆಡಳಿತ ವರ್ಗ ಮಾಡಿರುವ ಲೆಕ್ಕ ನಿರ್ವಹಣೆ ಅಂದಾಜುಗಳ ಸೂಕ್ತತೆ ಬಗ್ಗೆ ಮೌಲ್ಯ ಮಾಪನ ಮಾಡುವುದು ಹಾಗೂ ಭಾರತೀಯ ಹಣಕಾಸು ನಿರ್ವಹಣೆ ಮಾನದಂಡದ ಹಣಕಾಸಿನ ಹೇಳಿಕೆಗಳ ಸಮಗ್ರ ನಿರೂಪಣೆಯ ಮೌಲ್ಯಮಾಪನ ಮಾಡುವುದು ಲೆಕ್ಕ ಪರಿಶೋಧನಾ ಕಾರ್ಯದಲ್ಲಿ ಒಳಗೊಂಡಿರುವುದು.

ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟು ಪ್ರಮಾಣದ್ದಾಗಿರುವುದು ಮತ್ತು ಸೂಕ್ತವಾಗಿರುವುದು ಎಂಬುದಾಗಿ ನಾವು ನಂಬಿದ್ದೇವೆ.

**ಅರ್ಹತಾ ಅಭಿಪ್ರಾಯ ತಿಳಿಸಲು ಇರುವ ಆಧಾರ**

ಕೆಳಗೆ ತಿಳಿಸಿರುವುದು ಹೊರತುಪಡಿಸಿ, ಕಾಯ್ದೆಯ ಪ್ರಕರಣ 133 ಅನ್ವಯ, ಇದರ ಅಡಿಯಲ್ಲಿ ನಿಗದಿಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ (Ind AS) ರ ಅನುಸಾರ ಕಂಪನಿ ಸಿದ್ದಪಡಿಸಿರುವಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳು–

ಎ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 1 ''ಹಣಕಾಸು ಹೇಳಿಕೆಗಳ ನಿರೂಪಣೆ'' – ಇತರೆ ಈಕ್ವಿಟಿಯಲ್ಲಿನ ಬದಲಾವಣೆಗಳ ವಿವರಗಳ ಪ್ರಕಟಣೆ, ಕಂಪನಿಯಿಂದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 1ರ ಮೇಲೆ ತಿಳಿಸಿರುವ ನಿಬಂಧನೆಗಳ ಅನ್ವಯ ಕಂಪನಿಯಿಂದ ಸಿದ್ಧಪಡಿಸಬೇಕಾಗಿದ್ದ ಹಣಕಾಸಿನ ಹೇಳಿಕೆಗಳಲ್ಲಿ ಒಂದನ್ನು ಕಂಪನಿ ಸಿದ್ದಪಡಿಸಿರುವುದಿಲ್ಲ.

ಬಿ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 8– ''ಲೆಕ್ಕ ನಿರ್ವಹಣೆ ನೀತಿಗಳು, ಲೆಕ್ಕ ನಿರ್ವಹಣೆ ಅಂದಾಜುಗಳಲ್ಲಿ ಬದಲಾವಣೆಗಳು ಮತ್ತು ತಪ್ಪುಗಳು'' – ಹೊರಡಿಸಿರುವ ಆದರೆ ಇನ್ನೂ ಜಾರಿಗೊಳಿಸದಿರುವ ಹೊಸ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 115ರ ಬಗ್ಗೆ ಮತ್ತು ಮೊದಲಬಾರಿಗೆ ಅನ್ವಯವಾಗಿರುವುದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಅದರಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸುವಿಕೆ ಅಗತ್ಯತೆಯನ್ನು ಪಾಲಿಸಿರುವುದಿಲ್ಲ.

ಸಿ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 37 ''ಅವಕಾಶಗಳು, ಅನುಷಂಗಿಕ ಹೊಣೆಗಾರಿಕೆಗಳು ಮತ್ತು ಅನುಷಂಗಿಕ ಆಸ್ತಿ ಪ್ರಕಟಣೆಯು'' ಅಗತ್ಯತೆ ಅನುಸಾರ ಇರುವುದಿಲ್ಲ.

ಡಿ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 101 ''ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಮೊದಲಬಾರಿಗೆ ಅಳವಡಿಕೆಯು'' ಕೆಳಕಂಡವುಗಳು ಸೇರಿದಂತೆ ಅನುಸರಣೆ ಪ್ರಕಾರವಿರುವುದಿಲ್ಲ–

i) ಹಿಂದಿನ ಜಿಎಎಪಿ ಮತ್ತು ಅಧಿಸೂಚಿತ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅನುಸಾರ ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟಕ್ಕೆ ವರ್ಗಾವಣೆಯಾದ ದಿನಾಂಕದಂದು ಮತ್ತು ಹಿಂದಿನ ಜಿಎಎಪಿ ಅನುಸಾರ ನಿರೂಪಿಸಿದ ಹಿಂದಿನ ಅವಧಿಯಲ್ಲಿ ಈಕ್ವಿಟಿಯ ಸಮಂಜಸತೆ ಸಿದ್ದಪಡಿಸಿರುವಿಕೆ.

ii) ಸ್ವತ್ತು, ಸ್ಥಾವರ ಮತ್ತು ಉಪಕರಣದ ಐಟಂಗೆ, ಹಣ ಹೂಡಿಕೆ ಸ್ವತ್ತಿಗೆ ಅಥವಾ ಅಗೋಚರಿತ ಆಸ್ತಿಗೆ ಪರಿಭಾವಿತ ಬೆಲೆಯಾಗಿ ಕಂಪನಿಯು ಐತಿಹಾಸಿಕ ಬೆಲೆಯನ್ನು ಅಳವಡಿಸಿಕೊಂಡಿದೆ. ಆದರೆ ಕಂಪನಿಯು ಅಗತ್ಯತೆ ಅನುಸಾರ ಅಳವಡಿಸಿಕೊಂಡಿರುವ ವಿಧಾನವನ್ನು ತಿಳಿಸಿರುವುದಿಲ್ಲ.

ಇ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 107 ''ಹಣಕಾಸಿನ ದಾಖಲೆಗಳ ಪ್ರಕಟಣೆ'' –ಹಣಕಾಸಿನ ದಾಖಲೆಗಳ ವರ್ಗೀಕರಣದ ಪ್ರಕಟಣೆಯು ಅಗತ್ಯತೆಗಳ ಅನ್ವಯ ಪರಿಪಾಲಿಸಬೇಕಾಗಿದ್ದ ರೀತಿಯಲ್ಲಿರುವುದಿಲ್ಲ.

ಎಫ್. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 108 ''ವರದಿ ಮಾಡಬೇಕಾಗಿರುವ ಪ್ರತಿ ವಿಭಾಗದ ಲಾಭ ಮತ್ತು ನಷ್ಟ/ಆಸ್ತಿ ಮತ್ತು ಹೊಣೆಗಾರಿಕೆಗಳ ವಿಭಾಗದ ವರದಿಗಾರಿಕೆ'' ಪ್ರಕಟಣೆ, ಭೌಗೋಳಿಕ ಮಾಹಿತಿ ಪ್ರಕಟಣೆ ಅಗತ್ಯತೆ ಅನುಸಾರ ಇರುವುದಿಲ್ಲ.

ಜಿ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 109 ''ಹಣಕಾಸಿನ ದಾಖಲೆಗಳು''–ಹಣಕಾಸಿನ ಸಾಧನಗಳ ಮಾನ್ಯ ಮಾಡುವಿಕೆ, ಅಳತೆ ಮಾಡುವಿಕೆ ಮತ್ತು ದುರ್ಬಲತೆ ಗಣನೆಯು ಅಗತ್ಯತೆ ಅನುಸಾರ ಇರುವುದಿಲ್ಲ.

ಎಚ್. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 7 ''ನಗದು ಹರಿವಿನ ಹೇಳಿಕೆಯ ಪ್ರಕಟಣೆಯು ಅಗತ್ಯತೆ ಅನುಸಾರ ಇರುವುದಿಲ್ಲ. ತೆರಿಗೆ ಪಾವತಿಗೆ ಮುನ್ನ ಲಾಭವು ರೂ.23,71,92,473/– ಇರುವುದಕ್ಕೆ ಎದುರಾಗಿ ನಗದು ಹರಿಯುವಿಕೆ ಹೇಳಿಕೆಯಲ್ಲಿ ಸದರಿ ವರ್ಷದ ಲಾಭವನ್ನು ರೂ.23,66,03,292/– ಅನ್ನು ಕಂಪನಿ ಮಾನ್ಯ ಮಾಡಿದೆ, ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಿರುವ ರೂ.5,89,181/–ರ ವ್ಯತ್ಯಾಸವನ್ನು ಗುರುತಿಸಿರುವುದಿಲ್ಲ.

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

ಐ. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ 1''ಹಣಕಾಸಿನ ಹೇಳಿಕೆಯ ನಿರೂಪಣೆಯು'' ಕೆಳಕಂಡವುಗಳೂ ಸೇರಿದಂತೆ ಅನುಸರಣೆಯ ಅನುಸಾರ ಇರುವುದಿಲ್ಲ;

1. ಸ್ವರೂಪ ಮತ್ತು ಕಾರ್ಯದ ಆಧಾರದ ಖರ್ಚುಗಳ ವರ್ಗೀಕರಣ
2. ಐಟಂಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರ ಎಂಬುದಾಗಿ ವರ್ಗೀಕರಣ
3. ಮರು ವರ್ಗೀಕರಣ ಐಟಂಗಳ ಪ್ರಕಟಣೆ
4. ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ ಅನುಸರಣೆ ಬಗ್ಗೆ ಸಮಾಪ್ತಿ ಮತ್ತು ಮೀಸಲು ರಹಿತ ಹೇಳಿಕೆ.

ಜೆ. ಮೇಲಿನ ವಿಚಾರಗಳು ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಮೇಲೆ ಉಂಟು ಮಾಡುವ ತತ್ವರಿಣಾಮ ಏನು ಎಂಬುದು ಕಂಡುಬರುವುದಿಲ್ಲ.

ಕೆ. 31ನೇ ಮಾರ್ಚ್ 2018ರ ಕೊನೆಯಲ್ಲಿದ್ದಂತೆ ಇತರೆ ಸಮಗ್ರ ಆದಾಯದಲ್ಲಿನ ರೂ.1.77 ಕೋಟಿಗಳ ವಿಮಾಗಣನ ನಷ್ಟದ ಮಾನ್ಯ ಮಾಡದಿರುವ ಪ್ರಮಾಣದವರೆಗೆ ಗ್ರ್ಯಾಚ್ಯುಟಿಯ ವಿಮಾಗಣನ ಮೌಲ್ಯ ಐಎನ್‌ಡಿ ಎಎಸ್ 19ಕ್ಕೆ ಅನುಗುಣವಾಗಿರುವುದಿಲ್ಲ. ಇದರಿಂದ ನೌಕರರ ಸೌಲಭ್ಯ ಖರ್ಚುಗಳನ್ನು ರೂ.1.77 ಕೋಟಿಗಳಷ್ಟು ಅಧಿಕವಾಗಿ ಮತ್ತು ಇತರೆ ಸಮಗ್ರ ಆದಾಯವನ್ನು ಕಡಿಮೆಯಾಗಿ ತೋರಿಸಲು ಕಾರಣವಾಗಿದೆ. ಮುಂದುವರಿದು ಪರಿಷ್ಕೃತ ಗ್ರ್ಯಾಚ್ಯುಟಿ ಮಿತಿಯಲ್ಲಿ ಹೆಚ್ಚಳವಾಗಿರುವ ಕಾರಣ ಎಲ್‌ಐಸಿ ರೂ.4.08 ಕೋಟಿಗಳ ಪಾವತಿ ಮಾಡಬೇಕೆಂದು ಬೇಡಿಕೆ ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ ಗ್ರ್ಯಾಚ್ಯುಟಿಗೆ ವ್ಯವಸ್ಥೆಯನ್ನು ರೂ.4.08 ಕೋಟಿಯಷ್ಟು ಕಡಿಮೆಯಾಗಿ ಮತ್ತು ವರ್ಷದ ಲಾಭವನ್ನು ಹೆಚ್ಚಾಗಿ ತಿಳಿಸಿದೆ.

ಎಲ್. ಕೆಲವು ವ್ಯಾಪಾರಗಳ ಸಂಬಂಧ ಪಾವತಿ ಮಾಡಬೇಕಾಗಿರುವುದು, ಇತರೆ ಚಾಲ್ತಿ ಹೊಣೆಗಾರಿಕೆಗಳು, ವ್ಯಾಪಾರದಿಂದ ಬರಬೇಕಾಗಿರುವುದು ಮತ್ತು ಎಲ್ಲಾ ವಿಭಾಗಗಳಿಗೆ ಸಂಬಂಧಿಸಿದ ಮುಂಗಡಗಳು/ವ್ಯಾಪಾರ ಠೇವಣಿಗಳ ಸಂಬಂಧ ಶಿಲ್ಕುಗಳನ್ನು ದೃಢಪಡಿಸದಿರುವ ಪ್ರಯುಕ್ತ ಇವುಗಳ ಯಾವುದೇ ಸಮನ್ವಯತೆಗಳ ಬಗ್ಗೆ, ಲಾಭ/ನಷ್ಟ ಮತ್ತು ಆಸ್ತಿಗಳು/ಹೊಣೆಗಾರಿಕೆಗಳ ಮೇಲೆ ಉಂಟಾಗುವ ಪರಿಣಾಮವನ್ನು ತಿಳಿಯಲಾಗಿಲ್ಲ.

ಎಂ. ಒಪ್ಪಂದದ ಅನ್ವಯ ಯೋಜನೆಯ (ಕರ್ನಾಟಕ ಭವನ, ನವಿ ಮುಂಬಯಿ) ಕಾರ್ಯಾಚರಣೆಯಲ್ಲಿ ವಿಳಂಬವಾದುದಕ್ಕೆ ದಂಡ ವಿಧಿಸಿರುವುದಿಲ್ಲ. ತತ್ವರಿಣಾಮದಿಂದಾಗಿ, ಇತರೆ ಆದಾಯ, ಲಾಭ, ತೆರಿಗೆಗೆ ವ್ಯವಸ್ಥೆ ಮತ್ತು ಚಾಲ್ತಿಯೇತರ ಆಸ್ತಿಯನ್ನು ಸಿಡಬ್ಲ್ಯೂಐಪಿ ಅನ್ನು ಅಧಿಕವಾಗಿ ತಿಳಿಸಿದೆ ಮತ್ತು ಇತರೆ ಚಾಲ್ತಿ ಆಸ್ತಿಗಳನ್ನು ಕಡಿಮೆಯಾಗಿ ತಿಳಿಸಲಾಗಿದೆ. ಆದರೂ, ಇದರಿಂದ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಪರಿಣಾಮವನ್ನು ಗಣನೆ ಮಾಡಲು ನಮಗೆ ಸಾಧ್ಯವಾಗಿಲ್ಲ.

ಎನ್. ರಜೆ ನಗದೀಕರಣ ವ್ಯವಸ್ಥೆಯನ್ನು ವಿಮಾಗಣನ ಮೌಲ್ಯ ಮಾಪನದ ಅನುಸಾರ ಚಾಲ್ತಿ ಮತ್ತು ಚಾಲ್ತಿಯೇತರ ವ್ಯವಸ್ಥೆಗಳ ಅನ್ವಯ ಸರಿಯಾಗಿ ವರ್ಗೀಕರಣ ಮಾಡಿರುವುದಿಲ್ಲ. ತತ್ವರಿಣಾಮವಾಗಿ ಚಾಲ್ತಿ/ ಚಾಲ್ತಿಯೇತರ ವ್ಯವಸ್ಥೆಗಳನ್ನು ಕಡಿಮೆಯಾಗಿ/ಅಧಿಕವಾಗಿ ತಿಳಿಸಲು ಕಾರಣವಾಗಿದೆ.

ಒ. ಮರಣ ಪರಿಹಾರ ನಿಧಿಯ ವ್ಯವಸ್ಥೆಯನ್ನು ವಿಮಾಗಣನ ಮೌಲ್ಯಮಾಪನ ವರದಿಯ ಅನುಸಾರ ಚಾಲ್ತಿ ಮತ್ತು ಚಾಲ್ತಿಯೇತರ ವ್ಯವಸ್ಥೆಗಳ ಅನ್ವಯ ಸರಿಯಾಗಿ ವರ್ಗೀಕರಿಸಿರುವುದಿಲ್ಲ. ಆದ ಪ್ರಯುಕ್ತ ಚಾಲ್ತಿ/ಚಾಲ್ತಿಯೇತರ ವ್ಯವಸ್ಥೆಯಲ್ಲಿ ಕಡಿಮೆಯಾಗಿ/ಅಧಿಕವಾಗಿ ತೋರಿಸಲ್ಪಟ್ಟಿದೆ. ಮುಂದುವರಿದು, ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿನ ಇತರೆ ಸಮಗ್ರ ಆದಾಯದ ಅಡಿಯಲ್ಲಿ ರೂ.40.13 ಲಕ್ಷ ಮೊತ್ತವನ್ನು ತೋರಿಸಿರುವುದಿಲ್ಲ. ಇದರಿಂದಾಗಿ ಇತರೆ ಸಮಗ್ರ ಆದಾಯ ಮತ್ತು ಒಟ್ಟು ಸಮಗ್ರ ಆದಾಯವನ್ನು ರೂ.40.13 ಲಕ್ಷಗಳಷ್ಟು ಕಡಿಮೆಯಾಗಿ ತೋರಿಸಲು ಕಾರಣವಾಗಿದೆ.

ಪಿ. ಸ್ಥಿತಿ ವಿವರಣಾ ಪಟ್ಟಿಯಲ್ಲಿ ತಪಶೀಲು ಮತ್ತು ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವ ಒಟ್ಟು ಮೊತ್ತವನ್ನು ರೂ.8.44 ಕೋಟಿಗಳಷ್ಟು ಅಧಿಕವಾಗಿ ತಿಳಿಸಲಾಗಿದೆ. ಟಿಪ್ಪಣಿ ಸಂಖ್ಯೆ:9ರ ಅಡಿ ಬರಹದಲ್ಲಿ ತಿಳಿಸಿರುವ ಮಾಹಿತಿಯು ಆ ಪ್ರಮಾಣದವರೆಗೆ ಸರಿಯಾಗಿರುವುದಿಲ್ಲ.

ಕ್ಯು. ಕಂಪನಿಯು ಲಾಭ ಮತ್ತು ನಷ್ಟದ ಹೇಳಿಕೆಯ ಭಾಗದಲ್ಲಿ ಸದರಿ ವರ್ಷದ ಒಟ್ಟು ಸಮಗ್ರ ಆದಾಯವನ್ನು ರೂ.14,16,49,817/-ಕ್ಕೆ ಬದಲಾಗಿ ರೂ.14,37,37,591/- ಎಂಬುದಾಗಿ ತಿಳಿಸಿದೆ. ಕಾರ್ಯಾಚರಣೆ ಸ್ಥಗಿತವಾದ ಕಾರಣದಿಂದ ಉಂಟಾದ ರೂ.20,87,774/- ನಷ್ಟದ ವ್ಯತ್ಯಾಸದ ಮೊತ್ತವನ್ನು ತಪ್ಪಾಗಿ ಮುಂದುವರಿದ ಕಾರ್ಯಾಚರಣೆಯಿಂದ ಸದರಿ ವರ್ಷದಲ್ಲಿ ಬಂದ ಲಾಭಕ್ಕೆ ಸೇರಿಸಲಾಗಿದೆ.

ಆರ್. ಮೇಲೆ ತಿಳಿಸಿರುವ ತಪ್ಪುಗಳ ಪ್ರಯುಕ್ತ (ಪ್ಯಾರಾ ಕೆ ಮತ್ತು ಒ) ಉಂಟಾಗಿರುವ ಪರಿಣಾಮ ಇಂತಿರುವುದು.

(i) ವರ್ಷದ ಒಟ್ಟು ಸಮಗ್ರ ಆದಾಯವನ್ನು ರೂ.3.68 ಕೋಟಿಗಳ ಪ್ರಮಾಣದವರೆಗೆ ಅಧಿಕವಾಗಿ ತಿಳಿಸಿದೆ ಮತ್ತು

(ii) ತಪಶೀಲು ಮತ್ತು ವ್ಯಾಪಾರದ ಸಂಬಂಧ ಮಾಡಬೇಕಾಗಿರುವ ಪಾವತಿಯನ್ನು ರೂ.8.44 ಕೋಟಿಗಳಷ್ಟು ಅಧಿಕವಾಗಿ ತಿಳಿಸಿದೆ.

**ಅರ್ಹತೆ ಹೊಂದಿದ ಅಭಿಪ್ರಾಯ:**

ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ದೊರೆತಿರುವ ಮಾಹಿತಿಯಂತೆ ಮೇಲೆ ತಿಳಿಸಿರುವ ಅರ್ಹತೆ ಹೊಂದಿದ ಅಭಿಪ್ರಾಯದ ಪ್ಯಾರಾಗ್ರಾಫ್‌ಗಳಿಗೆ

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

ಆಧಾರವೆಂದು ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ಮೇಲೆ ತಿಳಿಸಿರುವ ಸ್ವತಂತ್ರ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳು ದಿನಾಂಕ: 31ನೇ ಮಾರ್ಚ್ 2018 ರಂದು ಇದ್ದಂತೆ ಕಂಪನಿಯ ವ್ಯವಹಾರಗಳ (ಹಣಕಾಸಿನ ಸ್ಥಿತಿಗತಿ) ಮತ್ತು ಲಾಭ (ಇತರೆ ಸಮಗ್ರ ಆದಾಯ ಸೇರಿದಂತೆ ಹಣಕಾಸಿನ ಕಾರ್ಯಕ್ಷಮತೆ) ಮತ್ತು ಸದರಿ ದಿನಾಂಕಕ್ಕೆ ಕೊನೆಗೊಂಡ ವರ್ಷದ ಅದರ ನಗದು ಹರಿವಿನ ಬಗ್ಗೆ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿ ಮೇಲೆ ತಿಳಿಸಿದ ಸ್ವತಂತ್ರ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳು ಅಗತ್ಯತೆ ರೀತಿಯಲ್ಲಿ ಕಾಯ್ದೆಯಲ್ಲಿ ಅಗತ್ಯವೆಂದು ತಿಳಿಸಿದ ಮಾಹಿತಿಯನ್ನು ಒದಗಿಸುವುದು ಹಾಗೂ ನೈಜ ಮತ್ತು ನ್ಯಾಯೋಚಿತ ಚಿತ್ರಣವನ್ನು ನೀಡುವುದು.

**ಮಹತ್ವವಾದ ವಿಷಯ:**

**ಹಣಕಾಸಿನ ಹೇಳಿಕೆಗಳ ಟಿಪ್ಪಣಿಗಳಲ್ಲಿನ ಈ ಕೆಳಕಂಡ ವಿಚಾರಗಳ ಬಗ್ಗೆ ನಾವು ಗಮನಸೆಳೆಯುವೆವು:**

- ನಿರ್ದೇಶಕರು, ಪಿಂಚಣಿ ನಿರ್ದೇಶನಾಲಯ, ಸಣ್ಣ ಉಳಿತಾಯಗಳು ಆಸ್ತಿ ಮೇಲ್ವಿಚಾರಣೆ ಇವರು ದಿನಾಂಕ:08.03.2017ರ ತಮ್ಮ ಪತ್ರದ ಅನುಸಾರ, ಮಾರಾಟದ ವತಿಯಿಂದ ಬಂದ ಹಣವನ್ನು ಕಡಿಮೆಯಾಗಿ ಸಂದಾಯ ಮಾಡಿರುವ ಬಗ್ಗೆ ಮತ್ತು ವಿಳಂಬವಾಗಿ ಹಣ ಪಾವತಿ ಮಾಡಿದ ಕಾರಣಕ್ಕಾಗಿ ರೂ.46,09,86,366/-ರ ಮೊತ್ತದ ಬಡ್ಡಿ ಪಾವತಿಸುವಂತೆ ಮಾಡಿರುವ ಹಕ್ಕು ಕೇಳಿಕೆಯು ಸೇರಿದಂತೆ ಟಿಪ್ಪಣಿ ಸಂ.61 ಅನುಷಂಗಿಕ ಹೊಣೆಗಾರಿಕೆ ಬಗ್ಗೆ ಗಮನ ಸೆಳೆಯುತ್ತೇವೆ. ಕಂಪನಿಯು ಪೂರ್ಣ ಮತ್ತು ಅಂತಿಮ ಪಾವತಿಯ ಇತ್ಯರ್ಥ ಮಾಡಿರುವುದರಿಂದ ಮತ್ತು ದಿನಾಂಕ 18.10.2016ರ ಪತ್ರದ ಅನುಸಾರ ಕಂಪನಿ ಈ ಬಗ್ಗೆ ತಿಳಿಸಿರುವುದರಿಂದ ಹಾಗೂ ಪೂರ್ಣ ಮತ್ತು ಅಂತಿಮ ಪಾವತಿ ಇತ್ಯರ್ಥದ ಬಗ್ಗೆ ರೂ.3,52,60,961/- ರ ಮೊತ್ತ ಪಾವತಿ ಮಾಡಿರುವುದಾಗಿ ಮತ್ತು ಮೇಲಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಕಂಪನಿಯಿಂದ ಪಾವತಿ ಮಾಡಬೇಕಾಗಿರುವ ಯಾವುದೇ ಹಕ್ಕುಗಳು ಇರುವುದಿಲ್ಲವೆಂದು ಪತ್ರದಲ್ಲಿ ಕಂಪನಿ ಸ್ಪಷ್ಟವಾಗಿ ತಿಳಿಸಿದೆ. ಸದರಿ ಪತ್ರ ಸ್ವೀಕರಿಸಿರುವ ಬಗ್ಗೆ ಮರು ಸ್ವೀಕೃತಿ ಪಡೆದಿದೆ. ವರ್ಷದ ಅವಧಿಯಲ್ಲಿ ಒದಗಿಸಿರುವ ಮಾಹಿತಿಯ ಅನುಸಾರ ಯಾವುದೇ ಮುಂದಿನ ಬೆಳವಣಿಗೆಗಳು ಸಂಭವಿಸಿರುವುದಿಲ್ಲ.
- ನಾವು ಟಿಪ್ಪಣಿ ಸಂ.61(1) ರ ಬಗ್ಗೆ ಗಮನ ಸೆಳೆಯುವುದೇನೆಂದರೆ, ಕೇಳಿರುವ ಒಟ್ಟು ಮೊತ್ತದ 25% ಆಗಿ ವಿಮಾ ಕಂಪನಿಯ ಪರವಾಗಿ ತೀರ್ಪು ನೀಡಿದ್ದ ರೂ.13.02 ಕೋಟಿ (ವಾರ್ಷಿಕ 6% ದರದಲ್ಲಿ 31.03.2018ರವರೆಗೆ ಬಡ್ಡಿ ಸೇರಿ) ಸಂಬಂಧ ಕಂಪನಿ ರೂ.3.25ಕೋಟಿ ಪಾವತಿಗೆ ಅವಕಾಶ ಮಾಡಿದೆ. ಸದರಿ ವ್ಯವಹಾರಕ್ಕೆ ವಿಮಾ ಕಂಪನಿಗಳು ಮತ್ತು ಸೀಮಾ ಸುಂಕ ಇಲಾಖೆಯು ಸಹ ಬಾಬ್ತುದಾರರಾಗಿರುವುದರಿಂದ ಕಂಪನಿಯು ಹೊಣೆಗಾರಿಕೆಯ 1/4ನೇ ಭಾಗಕ್ಕೆ ಮಾತ್ರ ಬಾಧ್ಯವಾಗಿರುವುದೆಂದು ಭಾವಿಸಿದೆ.
- ಕಂಪನಿಯಿಂದ/ಕಂಪನಿ ವಿರುದ್ಧ ಮಾಡಿರುವ ಹಕ್ಕು ಹೇಳಿಕೆಗಳು/ಮಧ್ಯಸ್ಥಿಕೆ ನಡಾವಳಿಗಳು ಮತ್ತು ಹೂಡಿರುವ ಕಾನೂನು ದಾವೆಗಳ ಫಲಿತಾಂಶಗಳಿಗೆ ಸಂಬಂಧಿಸಿದಂತೆ ಅನಿಶ್ಚಿತತೆಯನ್ನು ವ್ಯಕ್ತಪಡಿಸಿರುವ ಹಣಕಾಸಿನ ಹೇಳಿಕೆಗಳು, ಅನುಷಂಗಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಟಿಪ್ಪಣಿ ಸಂ.61 ರಲ್ಲಿನ (ಕ್ರ.ಸಂ.4 ಹೊರತಾಗಿ) ಐಟಂಗಳು
- ಈಕ್ವಿಟಿ ಷೇರುಗಳ ಹಕ್ಕಿನ ನೀಡಿಕೆಯನ್ನು ಫೆಬ್ರವರಿ 2018ರ ಅವಧಿಯಲ್ಲಿ ಕರ್ನಾಟಕ ಸರ್ಕಾರಕ್ಕೆ ಹಂಚಿಕೆ ಮಾಡಿರುವ ಮತ್ತು ಇದರ ಮಾಲೀಕತ್ವ ಮತ್ತು ನಿಯಂತ್ರಣ ಕೆಎಸ್‌ಎಸ್‌ಐಡಿಸಿಯಿಂದ ಕರ್ನಾಟಕ ಸರ್ಕಾರಕ್ಕೆ ಸ್ಥಳಾಂತರವಾಗಿರುವ ವಿಚಾರ ಒಳಗೊಂಡ ಟಿಪ್ಪಣಿ ಸಂ.15.2ರ ಬಗ್ಗೆ ನಾವು ಗಮನ ಸೆಳೆಯುವೆವು.

ಈ ವಿಚಾರಗಳ ಬಗ್ಗೆ ನಮ್ಮ ಅಭಿಪ್ರಾಯ ಅನ್ವಯವಾಗದು.

**ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಮೇಲಿನ ವರದಿ**

1. ಕಾಯ್ದೆಯ ಪ್ರಕರಣ 143ರ ಉಪ ಪ್ರಕರಣ 11ರ ಅನ್ವಯ ಕೇಂದ್ರ ಸರ್ಕಾರ ಹೊರಡಿಸಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016 ('ಆದೇಶ')ರ ಅನ್ವಯ ಅಗತ್ಯವಾದಂತೆ ನಾವು ಅನುಬಂಧ-ಎ ನಲ್ಲಿ ಅನ್ವಯವಾಗುವ ಪ್ರಮಾಣದವರೆಗೆ, ಆದೇಶ ಪ್ಯಾರಾಗ್ರಾಫ್ 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಿರುವ ವಿಚಾರಗಳ ವಿವರವನ್ನು ನಾವು ನೀಡಿದ್ದೇವೆ.
2. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(5)ರ ಉಪಬಂಧಗಳ ಅನ್ವಯ ಅಗತ್ಯವಾದಂತೆ, ಕಂಪನಿಯ ದಾಖಲೆಗಳನ್ನು ಪರಿಶೀಲಿಸಿದ ಆಧಾರದ ಮೇಲೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಆಧಾರದ ಮೇಲೆ, ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಮೇಲೆ ತಿಳಿಸಿರುವ ಪ್ರಕರಣದ ಅನ್ವಯ ಹೊರಡಿಸಿರುವ ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳಂತೆ ನಿರ್ದೇಶನಗಳ ಮೇಲಿನ ವರದಿಯನ್ನು ಅನುಬಂಧ-ಸಿ ನಲ್ಲಿ ನಾವು ನೀಡಿದ್ದೇವೆ.
3. ಕಾಯ್ದೆಯ ಪ್ರಕರಣ 143(3)ರನ್ವಯ ಅಗತ್ಯವಾದಂತೆ, ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ನಾವು ಅನ್ವಯವಾಗುವ

ಪ್ರಮಾಣದವರೆಗೆ ವರದಿ ಮಾಡುವುದೇನೆಂದರೆ:

ಎ. ಮೇಲೆ ತಿಳಿಸಿರುವ ಅರ್ಹತಾ ಅಭಿಪ್ರಾಯಕ್ಕೆ ಆಧಾರದಲ್ಲಿ ವಿವರಿಸಿರುವ ವಿಚಾರದ ಪರಿಣಾಮಗಳು/ಸಾಧ್ಯವಿರುವ ಪರಿಣಾಮಗಳ ಹೊರತಾಗಿ ಉಳಿದ ವಿಚಾರಗಳ ಬಗ್ಗೆ ನಾವು ಮಾಹಿತಿ ಕೇಳಿದ್ದು, ಅದರಂತೆ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ಲೆಕ್ಕಪರಿಶೋಧನೆ ನಡೆಸುವ ಉದ್ದೇಶಕ್ಕಾಗಿ ಅಗತ್ಯವೆಂದು ತಿಳಿದಿರುವ ಮತ್ತು ನಂಬಿರುವ ಎಲ್ಲಾ ಮಾಹಿತಿಗಳನ್ನು ಮತ್ತು ವಿವರಣೆಗಳನ್ನು ನಾವು ಪಡೆದುಕೊಂಡಿದ್ದೇವೆ.

ಬಿ. ಮೇಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್‌ನಲ್ಲಿ ವಿವರಿಸಿರುವ ಪರಿಣಾಮಗಳು/ಸಾಧ್ಯವಿರುವ ಪರಿಣಾಮಗಳ ಹೊರತಾಗಿ, ಪುಸ್ತಕಗಳನ್ನು ನಾವು ಪರಿಶೀಲಿಸಿದಾಗ ಕಂಡುಬಂದಿರುವ ಮಟ್ಟಿಗೆ ಕಂಪನಿ ಕಾನೂನಿನ ಅನ್ವಯ ಅಗತ್ಯವಾದಂತೆ ಸೂಕ್ತವಾದ ಲೆಕ್ಕದ ಪುಸ್ತಕಗಳನ್ನು ಇಟ್ಟಿದೆ.

ಸಿ. ಮೇಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್‌ನಲ್ಲಿ ವಿವರಿಸಿರುವ ವಿಚಾರಗಳ ಪರಿಣಾಮಗಳು/ಸಾಧ್ಯವಿರುವ ಪರಿಣಾಮಗಳ ಹೊರತಾಗಿ ಸದರಿ ವರದಿಯಲ್ಲಿ ಒಳಗೊಂಡಿರುವ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ವಿವರ, ಇತರೆ ಈಕ್ವಿಟಿಯಲ್ಲಿನ ಬದಲಾವಣೆಗಳು ಮತ್ತು ನಗದು ಹರಿವಿನ ವಿವರವು ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ವಿವರಗಳನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ನಿರ್ವಹಣೆ ಮಾಡಿರುವ ಸಂಬಂಧಪಟ್ಟ ಲೆಕ್ಕದ ಪುಸ್ತಕಗಳ ಅನುಸಾರ ಇರುವುದು.

ಡಿ. ನಿರ್ದೇಶಕರ ಮಂಡಳಿಯು ದಾಖಲೆಗೆ ತೆಗೆದುಕೊಂಡಿರುವ, 31ನೇ ಮಾರ್ಚ್, 2018ರಂದು ಇದ್ದಂತೆ ನಿರ್ದೇಶಕರುಗಳಿಂದ ಬಂದಿರುವ ಲಿಖಿತ ಮನವಿಯ ಆಧಾರದ ಮೇಲೆ ಕಾಯ್ದೆಯ ಪ್ರಕರಣ 164(2)ರ ಅನ್ವಯ ನಿರ್ದೇಶಕರಾಗಿ ನೇಮಕವಾಗಿರುವುದರಿಂದ, 31ನೇ ಮಾರ್ಚ್ 2018ರಂದು ಇದ್ದಂತೆ ಯಾವುದೇ ನಿರ್ದೇಶಕರು ಅನರ್ಹ ಗೊಂಡಿರುವುದಿಲ್ಲ.

ಇ. ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿರುವಿಕೆ ಬಗ್ಗೆ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಕ್ಕೆ ಅನುಬಂಧ-ಬಿ ನಲ್ಲಿನ ನಮ್ಮ ಪ್ರತ್ಯೇಕ ವರದಿಯನ್ನು ನೋಡಿ ಮತ್ತು

ಎಫ್. ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರೀಶೋಧಕರು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿರುವ ಇತರೆ ವಿಚಾರಗಳ ಸಂಬಂಧದಲ್ಲಿ, ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ದೊರೆತಿರುವ ಮಾಹಿತಿಯಂತೆ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ ತಿಳಿಸುವುದೇನೆಂದರೆ;

i. ಇತ್ಯರ್ಥವಾಗದೆ ಉಳಿದಿರುವ ವ್ಯಾಜ್ಯಗಳಿಂದ ತನ್ನ ಹಣಕಾಸಿನ ಪರಿಸ್ಥಿತಿಯ ಮೇಲೆ ಉಂಟಾಗುವ ಪರಿಣಾಮವನ್ನು ಕಂಪನಿಯು ತನ್ನ ಐಎನ್‌ಡಿ ಎಎಸ್ ಹಣಕಾಸಿನ ವಿವರಗಳಲ್ಲಿ ತಿಳಿಸಿದೆ- ಹಣಕಾಸಿನ ವಿವರಗಳ ಟಿಪ್ಪಣಿ 43, 49 ಮತ್ತು 61 ಅನ್ನು ನೋಡಿ;

ii. ಯಾವುದೇ ವಾಸ್ತವಿಕ ಮುಂಗಾಣ್ಕೆಯ ನಷ್ಟಗಳಿಗೆ ದಾರಿಯಾಗುವ ಬೇರೆಯಾದ ಗುತ್ತಿಗೆಗಳೂ ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಕಂಪನಿ ಹೊಂದಿರುವುದಿಲ್ಲ; ಮತ್ತು

iii. ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ಕಂಪನಿಯಿಂದ ವರ್ಗಾವಣೆ ಮಾಡಬೇಕಾಗಿದ್ದ ಹಣದ ವರ್ಗಾವಣೆಯಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ.

**ಮೆ|| ಪಿ.ಚಂದ್ರಶೇಖರ್ ಎಲ್‌ಎಲ್‌ಪಿ**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.000580ಎಸ್/ಎಸ್ 200066**
**ಸಹಿ/-**
**ಮಣಿಕುಮಾರ್ ಡಿ.**
**ಪಾಲುದಾರರು**
**ಸದಸ್ಯತ್ವ ಸಂ.212544**

ಸ್ಥಳ: ಬೆಂಗಳೂರು
ದಿನಾಂಕ:11.12.2018

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

**ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ವಿವರಗಳ ಬಗ್ಗೆ ಸಮ ದಿನಾಂಕದ ಪರಿಷ್ಕೃತ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ 'ಅನುಬಂಧ-ಎ'**

**(ಸಮ ದಿನಾಂಕದ ನಮ್ಮ ವರದಿಯ ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಬಗ್ಗೆಗಿನ ವರದಿ ಶೀರ್ಷಿಕೆಯ ಅಡಿಯಲ್ಲಿನ ಪ್ಯಾರಾಗ್ರಾಫ್-1 ನೋಡಿ)**

i. **ಸ್ಥಿರಾಸ್ತಿಗಳ ವಿಚಾರದಲ್ಲಿ:**

ಎ) ಸ್ಥಿರಾಸ್ತಿಗಳ ಗುಣಾತ್ಮಕ ವಿವರಗಳು ಮತ್ತು ಸ್ಥಿತಿ ಒಳಗೊಂಡಂತೆ ಪೂರ್ಣ ವಿವರಗಳನ್ನು ತಿಳಿಸುವ ಸೂಕ್ತ ದಾಖಲೆಗಳನ್ನು ಕಂಪನಿ ನಿರ್ವಹಣೆ ಮಾಡಿದೆ.

ಬಿ) ನಮಗೆ ಸಮಜಾಯಿಷಿ ನೀಡಿರುವಂತೆ ಆಡಳಿತ ಮಂಡಳಿಯು ಈ ವರ್ಷದಲ್ಲಿ ಸ್ಥಿರಾಸ್ತಿಗಳನ್ನು ಭೌತಿಕವಾಗಿ ಪರಿಶೀಲನೆ ಮಾಡಿದೆ.

ಸಿ) ಸ್ಥಿರಾಸ್ತಿಗಳ ಹಕ್ಕು ಪತ್ರಗಳು ಕಂಪನಿಯ ಹೆಸರಿನಲ್ಲಿರುವುದು.

ii. **ತಪಶೀಲು ಪಟ್ಟಿ ವಿಚಾರದಲ್ಲಿ:**

ಎ) ಆಡಳಿತ ಮಂಡಳಿಯು ಸದರಿ ವರ್ಷದಲ್ಲಿ ಸೂಕ್ತವಾದ ಅಂತರಗಳಲ್ಲಿ ತಪಶೀಲು ಪಟ್ಟಿಯನ್ನು ಭೌತಿಕವಾಗಿ ಪರಿಶೀಲಿಸಿದೆ. ನಮ್ಮ ಅಭಿಪ್ರಾಯದಲ್ಲಿ ಆ ಪರಿಶೀಲನೆ ಅಂತರ ಸೂಕ್ತವಾಗಿದೆ.

ಬಿ) ನಮ್ಮ ಅಭಿಪ್ರಾಯದಲ್ಲಿ ಆಡಳಿತ ಮಂಡಳಿ ತಪಶೀಲು ಪಟ್ಟಿಗಳ ಭೌತಿಕ ಪರಿಶೀಲನೆಗೆ ಅನುಸರಿಸಿರುವ ಕ್ರಮಾವಳಿಗಳು ಕಂಪನಿಯ ಗಾತ್ರ ಮತ್ತು ಇದರ ವ್ಯವಹಾರದ ಸ್ವರೂಪಕ್ಕೆ ಸಂಬಂಧಿಸಿದಂತೆ ಸೂಕ್ತವಾಗಿರುವುದು ಮತ್ತು ಸಾಕಷ್ಟಿರುವುದು.

ಸಿ) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಕಂಪನಿಯು ತನ್ನ ತಪಶೀಲು ಪಟ್ಟಿಗಳ ಸೂಕ್ತವಾದ ದಾಖಲೆಗಳನ್ನು ನಿರ್ವಹಣೆ ಮಾಡಿದೆ ಮತ್ತು ಭೌತಿಕ ಪರಿಶೀಲನೆ ನಡೆಸಿದ ಸಮಯದಲ್ಲಿ ಯಾವುದೇ ವಾಸ್ತವಿಕ ವ್ಯತ್ಯಾಸಗಳು ಕಂಡುಬಂದಿರುವುದಿಲ್ಲ.

iii. (ಎ) ನಮಗೆ ವಿವರಿಸಿರುವಂತೆ ಕಂಪನಿಗಳ ಕಾಯ್ದೆಯ ಪ್ರಕರಣ 189ರ ಅನ್ವಯ ನಿರ್ವಹಿಸಿರುವ ರಿಜಿಸ್ಟರ್‌ನಲ್ಲಿ ಒಳಪಟ್ಟಿರುವ ಕಂಪನಿಗಳು, ಸಂಸ್ಥೆಗಳು ಅಥವಾ ಇತರೆ ವ್ಯಕ್ತಿಗಳಿಗೆ ಕಂಪನಿಯು ಭದ್ರತೆಯುಳ್ಳ ಅಥವಾ ಭದ್ರತೆಯಿಲ್ಲದ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ, ಆದ್ದರಿಂದ ಸಿಎಆರ್‌ಒ 2016ರ ಪ್ಯಾರಾಗ್ರಾಫ್-3 ರ ಕಲಂ (iii) ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

ಬಿ) ಸಾಲಗಳು, ಹೂಡಿಕೆಗಳು, ಜಾಮೀನುಗಳು ಮತ್ತು ಭದ್ರತೆ ಸಂಬಂಧದಲ್ಲಿ ಕಂಪನಿಗಳ ಕಾಯ್ದೆ 2013ರ ಪ್ರಕರಣ 185 ಮತ್ತು 186ರ ಉಪಬಂಧಗಳನ್ನು ಪರಿಪಾಲಿಸಿದೆ.

iv. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ, ಆದ್ದರಿಂದಾಗಿ ಸಿಎಆರ್‌ಒ 2016ರ ಪ್ಯಾರಾಗ್ರಾಫ್-3ರ ಕಲಂ (v)ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

v. ಕೇಂದ್ರ ಸರ್ಕಾರ ಕಂಪನಿಗಳ ಕಾಯ್ದೆ 2013ರ ಪ್ರಕರಣ 148(1)ರ ಅನ್ವಯ ವೆಚ್ಚದ ದಾಖಲೆ ನಿರ್ವಹಣೆ ಮಾಡುವಂತೆ ನಿಗದಿಪಡಿಸಿರುವುದಿಲ್ಲ.

vi. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಶಾಸನಬದ್ಧ ಬಾಕಿಗಳ ಸಂಬಂಧ ತಿಳಿಸುವುದೇನೆಂದರೆ:

ಎ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆ ಅನುಸಾರ ಮತ್ತು ನಾವು ಲೆಕ್ಕದ ಪುಸ್ತಕಗಳನ್ನು ಪರಿಶೀಲಿಸಿದ ಪ್ರಕಾರ ಕಂಪನಿಯು ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಸೆಸ್ ಮತ್ತು ಯಾವುದೇ ಇತರೆ ಶಾಸನಬದ್ಧ ಬಾಕಿಗಳು ಸೇರಿದಂತೆ ವಿವಾದರಹಿತ ಶಾಸನಬದ್ಧ ಬಾಕಿಗಳನ್ನು ಸಕ್ಷಮ ಅಧಿಕಾರಿಗಳಿಗೆ ಸಾಮಾನ್ಯವಾಗಿ ನಿಯಮಿತವಾಗಿ ಸಂದಾಯ ಮಾಡುತ್ತಿದೆ.

ಬಿ) ಪಾವತಿ ಮಾಡಬೇಕಿರುವ ದಿನಾಂಕದಿಂದ ಆರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ, 31ನೇ ಮಾರ್ಚ್ 2018ರಂದು ಇದ್ದಂತೆ ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ಮಾರಾಟ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಸೆಸ್ ಮತ್ತು ಇತರೆ ಶಾಸನಬದ್ಧ ಬಾಕಿಗಳನ್ನು ಪಾವತಿ ಮಾಡಬೇಕಿರುವ ಯಾವುದೇ ವಿವಾದರಹಿತ ಮೊತ್ತಗಳಿರುವುದಿಲ್ಲ.

ಸಿ) ವಿವಾದವಿರುವ ಪ್ರಯುಕ್ತ 31ನೇ ಮಾರ್ಚ್ 2018ರಂದು ಇದ್ದಂತೆ ಸಂದಾಯ ಮಾಡಿರದ ಸೇವಾ ತೆರಿಗೆ ಮತ್ತು ಆದಾಯ ತೆರಿಗೆ ಬಾಕಿಗಳ ವಿವರಗಳನ್ನು ಈ ಕೆಳಗೆ ನೀಡಿದೆ:

| ಕ್ರಮ ಸಂಖ್ಯೆ | ಕಾಯ್ದೆಯ ಹೆಸರು | ಬಾಕಿಯ ಸ್ವರೂಪ | ವಿವಾದವು ಇತ್ಯರ್ಥವಾಗದೆ ಉಳಿದಿರುವ ಸಂಬಂಧಿತ ನ್ಯಾಯ ಸ್ಥಾನ | ಯಾವ ಅವಧಿಗೆ ಈ ಮೊತ್ತ ಸಂಬಂಧಿಸಿದೆ | ಮೊತ್ತ ರೂ. ಕೋಟಿಗಳಲ್ಲಿ | ಪಾವತಿಸಿದ ಮೊತ್ತ ರೂ.ಕೋಟಿಗಳಲ್ಲಿ★ | ಬಾಕಿ ರೂ.ಕೋಟಿಗಳಲ್ಲಿ |
|---|---|---|---|---|---|---|---|
| 1. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2005-06 ಮತ್ತು 2006-07 | 0.48 | 0.10 | 0.38 |
| 2. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2002-03 ಮತ್ತು 2003-04 | 0.26 | 0.20 | 0.06 |
| 3. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2003-04 ರಿಂದ 2005-2006 | 0.37 | 0.37 | 0.00 |
| 4. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಆಯುಕ್ತರು (ಎಲ್‌ಟಿಯು) | ಜೂನ್ 2007 ರಿಂದ ಮಾರ್ಚ್ 2011 | 0.13 | 0.00 | 0.13 |
| 5. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2007-08 ಮತ್ತು 2008-09 | 0.36 | 0.10 | 0.26 |
| 6. | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ - ಮೂಲದಲ್ಲೇ ತೆರಿಗೆ ಸಂಗ್ರಹ | ಸುಪ್ರೀಂ ಕೋರ್ಟ್ | 1995-96ರಿಂದ 2000-01 | 20.05 | 20.05 | 0.00 |
| | | ಆದಾಯ ತೆರಿಗೆ - ಮೂಲದಲ್ಲೇ ತೆರಿಗೆ ಸಂಗ್ರಹ | ಹೈಕೋರ್ಟ್, ಬೆಂಗಳೂರು | 2001-02ರಿಂದ 2003-04 | 10.17 | 4.00 | 6.17 |
| | | ಆದಾಯ ತೆರಿಗೆ - ಮೂಲದಲ್ಲೇ ಸಂಗ್ರಹಿಸಿದ ತೆರಿಗೆ ಮೇಲೆ ಬಡ್ಡಿ | ಸುಪ್ರೀಂ ಕೋರ್ಟ್ | 1994-95ರಿಂದ 1999-2000 | 30.67 | 0.00 | 30.67 |
| 7. | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2010-11 | 3.42 | 0.00 | 3.42 |
| | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2012-13 | 0.26 | 0.00 | 0.26 |
| | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2014-15 | 1.08 | 0.00 | 1.08 |
| | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2015-16 | 0.19 | 0.00 | 0.19 |

★ ಬಡ್ಡಿ ಹೊರತುಪಡಿಸಿ

(vii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಮತ್ತು ನಾವು ಪರಿಶೀಲಿಸಿದ ದಾಖಲೆಗಳ ಆಧಾರದ ಮೇಲೆ ನಾವು ತಿಳಿಸುವುದೇನೆಂದರೆ ಕಂಪನಿಯು ಹಣಕಾಸು ಸಂಸ್ಥೆ, ಬ್ಯಾಂಕು ಅಥವಾ ಸರ್ಕಾರದಿಂದ ಪಡೆದಿರುವ ಸಾಲಗಳ ಮರು ಪಾವತಿ ಮಾಡುವುದರಲ್ಲಿ ತಪ್ಪಿತಸ್ಥರಾಗಿರುವುದಿಲ್ಲ.

(viii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಮತ್ತು ನಾವು ಪರಿಶೀಲಿಸಿದ ದಾಖಲೆಯ ಆಧಾರದ ಮೇಲೆ ಸದರಿ ವರ್ಷಾವಧಿಯಲ್ಲಿ ಕಂಪನಿಯು ಪ್ರಾರಂಭಿಕ ಸಾರ್ವಜನಿಕರ ಕೊಡುಗೆ ಅಥವಾ ಮುಂದುವರಿದ ಸಾರ್ವಜನಿಕ ಕೊಡುಗೆ ರೂಪದಲ್ಲಿ (ಸಾಲ ಪತ್ರಗಳು ಸೇರಿದಂತೆ) ಮತ್ತು ಅವಧಿ ಸಾಲಗಳ ರೂಪದಲ್ಲಿ ಹಣವನ್ನು ಪಡೆದಿರುವುದಿಲ್ಲ.

(ix) ನಮ್ಮ ಅಭಿಪ್ರಾಯದಲ್ಲಿ, ನಮಗೆ ಒದಗಿಸಿರುವ ಮಾಹಿತಿ ಅನುಸಾರ, ನಮ್ಮ ಲೆಕ್ಕಪರಿಶೋಧನೆ ನಡೆಸಿದ ಆಧಾರದ ಮೇಲೆ ಹಾಗೂ ಕಂಪನಿಯ ಪುಸ್ತಕಗಳು ಮತ್ತು ದಾಖಲೆ ಪತ್ರಗಳ ಸಮಗ್ರ ಪರಿಶೀಲನೆ ನಡೆಸಿದ ಮೇರೆಗೆ ಸದರಿ ವರ್ಷದ ಅವಧಿಯಲ್ಲಿ ಕಂಪನಿಯಿಂದಾಗಲಿ ಅಥವಾ ಕಂಪನಿಗಾಗಲಿ ಯಾವುದೇ ವಂಚನೆ ಮಾಡಿರುವುದಾಗಲಿ ಅಥವಾ ಆಗಿರುವುದಾಗಲಿ ಕಂಡು ಬಂದಿರುವುದಿಲ್ಲ ಅಥವಾ ವರದಿಯಾಗಿರುವುದಿಲ್ಲ.

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

(x) ಕಂಪನಿಗಳ ಕಾಯ್ದೆಯ ಪರಿಶಿಷ್ಟ-V ಒದಿಕೊಂಡಂತೆ ಪ್ರಕರಣ 197ರ ಉಪಬಂಧಗಳ ಅನ್ವಯ ಕಡ್ಡಾಯಗೊಳಿಸಿರುವ ಅಗತ್ಯ ಅನುಮೋದನೆಗಳ ಅನುಸಾರ ವ್ಯವಸ್ಥಾಪನಾ ಸಂಭಾವನೆಯನ್ನು ಪಾವತಿ ಮಾಡಲಾಗಿದೆ ಅಥವಾ ಏರ್ಪಾಡು ಮಾಡಲಾಗಿದೆ.

(xi) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ದೊರೆತಿರುವ ಮಾಹಿತಿ ಅನುಸಾರ ಮತ್ತು ನಮಗೆ ನೀಡಿರುವ ವಿವರಗಳ ಅನುಸಾರ ಚಿಟ್ ಫಂಡ್ ವ್ಯವಹಾರಕ್ಕೆ ಅನ್ವಯವಾಗುವ ವಿಶೇಷ ಶಾಸನದ ಉಪಬಂಧಗಳನ್ನು ಚಿಟ್‌ಫಂಡ್ ವ್ಯವಹಾರದ ಸಂಬಂಧದಲ್ಲಿ ಕಂಪನಿಯು ಪರಿಪಾಲಿಸಿದೆ. ಮುಂದುವರಿದು, ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದ್ದರಿಂದಾಗಿ ಸಿಎಆರ್‌ಒ 2016ರ ಪ್ಯಾರಾಗ್ರಾಫ್ 3 ರ ಕಲಂ (xii)ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದ ಪ್ರಯುಕ್ತ ಸಿಎಆರ್‌ಒ 2016ರ ಕಂಡಿಕೆ 3 ರ ಕಲಂ (xii) ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

(xii) ಸಂಬಂಧಪಟ್ಟ ವ್ಯಕ್ತಿಗಳ ಜೊತೆಗಿನ ವ್ಯವಹಾರವು ಕಂಪನಿಗಳ ಕಾಯ್ದೆ 2013ರ ಪ್ರಕರಣ 177 ಮತ್ತು 188ರ ಅನುಸಾರ ಇರುವುದು ಮತ್ತು ಅನ್ವಯವಾಗುವ ಲೆಕ್ಕಪತ್ರದ ಗುಣಮಟ್ಟದನ್ವಯ ಅಗತ್ಯವಾದಂತೆ ಹಣಕಾಸಿನ ಹೇಳಿಕೆಯಲ್ಲಿ ವಿವರಗಳನ್ನು ತಿಳಿಸಲಾಗಿದೆ.

(xiii) ಕಂಪನಿಯು ಪರಾಮರ್ಶನೆಯಲ್ಲಿರುವ ವರ್ಷದಲ್ಲಿ ಯಾವುದೇ ಷೇರುಗಳ ಆದ್ಯತಾ ಹಂಚಿಕೆಯನ್ನಾಗಲಿ ಅಥವಾ ಖಾಸಗಿಯವರಿಗೆ ನೀಡುವುದನ್ನಾಗಲಿ ಅಥವಾ ಪೂರ್ಣವಾಗಿ ಅಥವಾ ಭಾಗಶಃವಾಗಿ ಪರಿವರ್ತಿಸಬಹುದಾದ ಡಿಬೆಂಚರುಗಳನ್ನಾಗಲಿ ಹಂಚಿಕೆ ಮಾಡಿರುವುದಿಲ್ಲ.

(xiv) ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಯು ನಿರ್ದೇಶಕರುಗಳ ಜೊತೆ ಅಥವಾ ಇವರಿಗೆ ಸಂಬಂಧಿಸಿರುವ ವ್ಯಕ್ತಿಗಳ ಜೊತೆಯಾಗಲಿ ಯಾವುದೇ ನಗದೇತರ ವ್ಯವಹಾರ ಮಾಡಿಕೊಂಡಿರುವುದಿಲ್ಲ.

(xv) ಕಂಪನಿಯು ಬ್ಯಾಂಕಿಂಗೇತರ ಹಣಕಾಸು ಕಂಪನಿಯಾಗಿರುವುದಿಲ್ಲ. ಆದ ಪ್ರಯುಕ್ತ ಸಿಎಆರ್‌ಒ 2016ರ ಕಂಡಿಕೆ 3ರ ಕಲಂ (xvi) ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

**ಮೆ॥ ಪಿ. ಚಂದ್ರಶೇಖರ್, ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066

ಸಹಿ/-
**ಮಣಿಕುಮಾರ್.ಡಿ**
ಪಾಲುದಾರರು
ಸದಸ್ಯತ್ವ ಸಂಖ್ಯೆ. 212544

ಸ್ಥಳ : ಬೆಂಗಳೂರು
ದಿನಾಂಕ : 11.12.2018

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸ್ವತಂತ್ರ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸು ಹೇಳಿಕೆಗಳ ಬಗ್ಗೆಗಿನ ಸಮ ದಿನಾಂಕದ ಪರಿಷ್ಕೃತ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ''ಅನುಬಂಧ-ಬಿ''

**ಕಂಪನಿಗಳ ಕಾಯ್ದೆ, 2013ರ ('ಕಾಯ್ದೆ') ಪ್ರಕರಣ 143ರ ಉಪ ಪ್ರಕರಣ 3 ರ ಕಲಂ(ಎಫ್)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿ**

31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಸ್ವತಂತ್ರ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆ ಜೊತೆಗೆ ಸದರಿ ದಿನಾಂಕದಂದು ಇದ್ದಂತೆ ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ (''ಕಂಪನಿ'') ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕ ಪರಿಶೋಧನೆಯನ್ನು ನಾವು ಮಾಡಿದ್ದೇವೆ.

**ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ:**

ಕಂಪನಿಯ ನಿರ್ದೇಶಕರ ಮಂಡಳಿಯು, 'ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಯ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣ' ದ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸುವ ಮತ್ತು ನಿರ್ವಹಣೆ ಮಾಡುವ ಜವಾಬ್ದಾರಿ ಹೊಂದಿರುವುದು. ಈ ಜವಾಬ್ದಾರಿಗಳಲ್ಲಿ ಕಂಪನಿಗಳ ಕಾಯ್ದೆ, 2013ರ ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಅನುಸರಣೆ, ತನ್ನ ಆಸ್ತಿಗಳ ಸಂರಕ್ಷಣೆ ಮಾಡುವಿಕೆ, ವಂಚನೆಗಳು ಮತ್ತು ತಪ್ಪುಗಳ ತಡೆಯುವಿಕೆ ಮತ್ತು ಪತ್ತೆ ಹಚ್ಚುವಿಕೆ, ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ, ಮತ್ತು ವಿಶ್ವಾಸನೀಯವಾದ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವಿಕೆಯೂ ಒಳಗೊಂಡಂತೆ, ತನ್ನ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸಪಡಿಸುವುದು, ಅನುಷ್ಠಾನ ಮಾಡುವುದು ಮತ್ತು ನಿರ್ವಹಣೆ ಮಾಡುವುದು ಒಳಗೊಂಡಿರುವುದು.

**ಲೆಕ್ಕ ಪರಿಶೋಧಕರ ಜವಾಬ್ದಾರಿ:**

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(10)ರ ಅನ್ವಯ ನಿಗದಿಪಡಿಸಲಾಗಿರುವುದು ಎಂಬುದಾಗಿ ಭಾವಿಸಲಾದ ಮತ್ತು ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ(ಐಸಿಎಐ) ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿ ('ಮಾರ್ಗದರ್ಶಿ ಟಿಪ್ಪಣಿ') ಮತ್ತು ಲೆಕ್ಕಪರಿಶೋಧನೆಯ ಗುಣಮಟ್ಟಗಳ ಅನುಸಾರ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ನಾವು ನಮ್ಮ ಲೆಕ್ಕಪರಿಶೋಧನೆ ಕಾರ್ಯವನ್ನು ನಡೆಸಿದ್ದೇವೆ. ಈ ಎರಡೂ ಮಾರ್ಗದರ್ಶನಗಳನ್ನು ಐಸಿಎಐ ಹೊರಡಿಸಿದ್ದು, ಇವೆರಡೂ ಮಾರ್ಗದರ್ಶನಗಳು ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಅನ್ವಯವಾಗುವುವು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿರುವುದೇ ಮತ್ತು ನಿರ್ವಹಣೆ ಮಾಡಲಾಗಿರುವುದೇ ಹಾಗೂ ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವುವೇ ಎಂಬ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಿ ಲೆಕ್ಕಪರಿಶೋಧನೆ ನಡೆಸಲು ಯೋಜನೆ ಮಾಡಬೇಕು ಮತ್ತು ಲೆಕ್ಕ ಪರಿಶೋಧನೆ ನಡೆಸಬೇಕೆಂದು ಸದರಿ ಗುಣಮಟ್ಟಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳು ತಿಳಿಸುತ್ತವೆ.

ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆಯು ಸಾಕಷ್ಟು ಪ್ರಮಾಣದಲ್ಲಿರುವುದೇ ಎಂಬುದರ ಬಗ್ಗೆ ಮತ್ತು ಅವುಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ಅನುಸರಿಸುವ ಕಾರ್ಯವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥವಂತಿಕೆ ಪಡೆಯುವುದು, ಇರುವ ವಾಸ್ತವಿಕ ದೌರ್ಬಲ್ಯದ ಅಪಾಯ ನಿರ್ಧರಣೆ ಮಾಡುವುದು, ನಿರ್ಧರಣೆ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆ ಪರಿಣಾಮವನ್ನು ಪರೀಕ್ಷಿಸುವುದು ಮತ್ತು ಮೌಲ್ಯ ಮಾಪನವೂ ಸಹ ಒಳಗೊಂಡಿರುವುದು. ಆಯ್ಕೆ ಮಾಡಿದ ಕ್ರಮಾವಳಿಗಳು, ವಂಚನೆ ಅಥವಾ ತಪ್ಪಿನ ಪ್ರಯುಕ್ತ ಹಣಕಾಸಿನ ಹೇಳಿಕೆಗಳಲ್ಲಿ ಉಂಟಾಗುವ ವಾಸ್ತವಿಕ ತಪ್ಪು ಹೇಳಿಕೆಯ ಅಪಾಯದ ನಿರ್ಧರಣೆ ಸೇರಿದಂತೆ ಲೆಕ್ಕಪರಿಶೋಧಕರು ಮಾಡುವ ತೀರ್ಮಾನಗಳ ಮೇಲೆ ಅವಲಂಬಿತವಾಗಿರುತ್ತದೆ.

ನಾವು ಪಡೆದಿರುವ ಲೆಕ್ಕಪರಿಶೋಧನೆ ಪುರಾವೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು.

**ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥ:**

ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕ ನಿರ್ವಹಣೆ

ನೀತಿಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದು ಮತ್ತು ಹಣಕಾಸಿನ ವರದಿಯ ವಿಶ್ವಾಸಾರ್ಹತೆ ಬಗ್ಗೆ ಸೂಕ್ತವಾದ ಆಶ್ವಾಸನೆ ಒದಗಿಸಲು ರೂಪಿಸಿರುವ ಒಂದು ಪ್ರಕ್ರಿಯೆ ಆಗಿದೆ. ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಒಳಪಡುವ ನೀತಿಗಳು ಮತ್ತು ಕ್ರಮಾವಳಿಗಳು ಈ ಕೆಳಕಂಡಂತಿರುವವು:

1) ಕಂಪನಿಯ ವ್ಯವಹಾರಗಳನ್ನು ಮತ್ತು ಆಸ್ತಿಗಳ ಸ್ಥಾನಮಾನವನ್ನು ಸೂಕ್ತವಾದ ವಿವರಣೆಗಳೊಡನೆ ನಿಖರವಾಗಿ ಮತ್ತು ಅತ್ಯುತ್ತಮವಾಗಿ ನಿರೂಪಿಸುವ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ;

2) ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾದಂತೆ ವ್ಯವಹಾರವನ್ನು ದಾಖಲು ಮಾಡಲಾಗಿದೆ, ಮತ್ತು ಕಂಪನಿಯ ಸ್ವೀಕರಣೆ ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರು ನೀಡಿರುವ ಅಧಿಕಾರಿಗಳ ಅನುಸಾರ ಮಾತ್ರ ಮಾಡಲಾಗುತ್ತಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ನೀಡಿಕೆ; ಮತ್ತು

3) ಹಣಕಾಸಿನ ಹೇಳಿಕೆಗಳ ಮೇಲೆ ವಾಸ್ತವಿಕವಾಗಿ ಪರಿಣಾಮ ಬೀರಬಹುದಾದ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನತೆ, ಉಪಯೋಗ ಅಥವಾ ವ್ಯವಸ್ಥೆಯ ತಡೆ ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವಿಕೆ ಬಗ್ಗೆ ಸೂಕ್ತ ಭರವಸೆ ಒದಗಿಸುವುದು.

**ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅಂತರ್ಗತ ಮಿತಿಗಳು:**

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಅಂತರ್ಗತ ಮಿತಿಗಳಿಂದಾಗಿ ಮೋಸ ಅಥವಾ ಅಸಮರ್ಪಕ ಆಡಳಿತವು ನಿಯಂತ್ರಣಗಳನ್ನು ದಾಟಿ ಹೋಗುವ ತಪ್ಪು ಅಥವಾ ವಂಚನೆಯ ಪ್ರಯುಕ್ತ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ಸಾಧ್ಯತೆಗಳಿರುತ್ತವೆ. ಇವುಗಳನ್ನು ಪತ್ತೆ ಹಚ್ಚುವುದು ಸಾಧ್ಯವಾಗುವುದಿಲ್ಲ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಮುಂದಿನ ಅವಧಿಗಳಿಗೆ ಅನ್ವಯಿಸಿದರೆ ಅದು ಪರಿಸ್ಥಿತಿಯ ಬದಲಾವಣೆಗಳ ಪ್ರಯುಕ್ತ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಕೊರತೆಯಾಗುವ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ನೀತಿಗಳು ಅಥವಾ ಕ್ರಮಾವಳಿಗಳ ಅನುಸರಣೆ ಪ್ರಮಾಣ ಕ್ಷೀಣಿಸಬಹುದಾಗಿರುತ್ತದೆ.

**ಅಭಿಪ್ರಾಯ:**

ನಮ್ಮ ಅಭಿಪ್ರಾಯದಂತೆ ಕಂಪನಿಯು ಎಲ್ಲ ವಾಸ್ತವಿಕ ವಿಚಾರಗಳ ಸಂಬಂಧದಲ್ಲಿ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿದೆ. ಹಣಕಾಸಿನ ವರದಿಯ ಮೇಲಿನ ಈ ಆಂತರಿಕ ಹಣಕಾಸು ನಿಯಂತ್ರಣಗಳು ದಿನಾಂಕ 31ನೇ ಮಾರ್ಚ್ 2018ರಂದು ಇದ್ದಂತೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಯಾಗುತ್ತಿವೆ; ಭಾರತದ ಲೆಕ್ಕಪರಿಶೋಧಕರ ಸಂಸ್ಥೆಯು ಹೊರಡಿಸಿರುವ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ರೂಪಿಸಿರುವ ಹಣಕಾಸಿನ ವರದಿಯ ಮೇಲಿನ ಆಂತರಿಕ ನಿಯಂತ್ರಣಗಳ ಅರ್ಹತೆಯ ಮೇಲೆ ಇವು ಆಧಾರಿತವಾಗಿವೆ.

**ಮೆ॥ ಪಿ. ಚಂದ್ರಶೇಖರ್ ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066

ಸಹಿ/-
**ಮಣಿಕುಮಾರ್.ಡಿ**
ಪಾಲುದಾರರು
ಸದಸ್ಯತ್ವ ಸಂಖ್ಯೆ 212544

ಸ್ಥಳ : ಬೆಂಗಳೂರು
ದಿನಾಂಕ : 11.12.2018

## ಪರಿಷ್ಕೃತ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ''ಅನುಬಂಧ-ಸಿ''

(31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಸ್ವತಂತ್ರ ಐಎನ್ ಡಿ ಎಎಸ್ ಹಣಕಾಸಿನ ವಿವರಗಳ ಮೇಲಿನ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ನ ಸದಸ್ಯರುಗಳಿಗೆ ನೀಡಿರುವ ಸಮ ದಿನಾಂಕದ ನಮ್ಮ ವರದಿಯ ''ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆ ಬಗ್ಗೆಗಿನ ವರದಿಯ'' ಶೀರ್ಷಿಕೆಯಡಿಯ ಪ್ಯಾರಾಗ್ರಾಫ್-2 ನೋಡಿ)

ಕಂಪನಿಗಳ ಕಾಯ್ದೆ 2013ರ ಪ್ರಕರಣ 143ರ ಉಪ ಪ್ರಕರಣ 6ರ ಅನ್ವಯ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ಹೊರಡಿಸಿರುವ ನಿರ್ದೇಶನಗಳ ಅನ್ವಯ, ಕಂಪನಿಯ ದಾಖಲೆಗಳನ್ನು ಪರಿಶೀಲಿಸಿದರ ಮೇರೆಗೆ ಮತ್ತು ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಗಳ ಅನುಸಾರ ನಾವು ವರದಿ ಮಾಡುವುದೇನೆಂದರೆ:

| ಕ್ರ. ಸಂ. | ನಿರ್ದೇಶನಗಳು | ಲೆಕ್ಕಪರಿಶೋಧಕರ ಉತ್ತರ | ಐಎನ್ ಡಿ ಎಎಸ್ ಹಣಕಾಸಿನ ವಿವರಗಳ ಮೇಲೆ ಉಂಟಾಗುವ ಪರಿಣಾಮ |
|---|---|---|---|
| 1 | ಅನುಕ್ರಮವಾಗಿ ಮುಕ್ತ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿ ಜಮೀನಿನ ಸ್ಪಷ್ಟವಾದ ಹಕ್ಕುಪತ್ರಗಳು/ಗುತ್ತಿಗೆ ಪತ್ರವನ್ನು ಕಂಪನಿಯು ಹೊಂದಿರುವುದೇ' ಇಲ್ಲದಿದ್ದರೆ ಹಕ್ಕು ಪತ್ರ/ ಗುತ್ತಿಗೆ ಪತ್ರಗಳು ಲಭ್ಯವಿರದ ಮುಕ್ತ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿ ಜಮೀನಿನ ವಿಸ್ತೀರ್ಣ ತಿಳಿಸಿ | ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಗಳು ಮತ್ತು ನಮ್ಮ ಪರಿಶೀಲನೆಗೆ ಸಲ್ಲಿಸಿದ ಅಗತ್ಯ ದಾಖಲೆಗಳ ಅನ್ವಯ ಕಂಪನಿಯು ಅನುಕ್ರಮವಾಗಿ ಎಲ್ಲಾ ಮುಕ್ತ ಹಾಗೂ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿ ಜಮೀನುಗಳ ಸಂಬಂಧ ಸ್ಪಷ್ಟವಾದ ಹಕ್ಕುಪತ್ರ/ಗುತ್ತಿಗೆ ಪತ್ರಗಳನ್ನು ಹೊಂದಿರುವುದು | ಇಲ್ಲ |
| 2 | ಋಣಗಳು/ಸಾಲಗಳು/ಬಡ್ಡಿ ಇತ್ಯಾದಿಯನ್ನು ಮನ್ನಾ/ವಜಾ ಮಾಡಿರುವ ಯಾವುದೇ ಪ್ರಕರಣಗಳಿರುವವೇ' ಹೌದಾದಲ್ಲಿ ಅದಕ್ಕೆ ಕಾರಣಗಳನ್ನು ಮತ್ತು ಅದರಲ್ಲಿ ಒಳಗೊಂಡಿರುವ ಮೊತ್ತವನ್ನು ತಿಳಿಸಿ | ಕಾಗದ ವಿಭಾಗ ಗ್ರಾಹಕರುಗಳಿಂದ ಮತ್ತು ಚಿಟ್ ಫಂಡ್ ವಿಭಾಗದ ಚಂದಾದಾರರುಗಳಿಂದ ಬರಬೇಕಾಗಿದ್ದ ರೂ.71.75 ಲಕ್ಷಗಳ ಪ್ರಮಾಣದ ಮೊತ್ತವನ್ನು ವಸೂಲಾಗದ ಸಾಲಗಳು ಎಂಬುದಾಗಿ 2017-18ರ ಸಾಲಿನಲ್ಲಿ ವಜಾ ಮಾಡಿದೆ. ಹಳೆಯ ಬಾಕಿಯಿರುವ ಮೊತ್ತಗಳು ವಸೂಲಾಗದ ಪ್ರಯುಕ್ತ ವಸೂಲಾಗದ ಸಾಲಗಳೆಂದು ವಜಾ ಮಾಡಿದೆ | ರೂ.71.75 ಲಕ್ಷಗಳು |
| 3 | ಮೂರನೆ ವ್ಯಕ್ತಿಗಳಲ್ಲಿ ಇರುವ ತಪಶೀಲುಗಳ ಬಗ್ಗೆ ಮತ್ತು ಸರ್ಕಾರ ಅಥವಾ ಇತರೆ ಪ್ರಾಧಿಕಾರಿಗಳಿಂದ ಉಡುಗೊರೆ/ಅನುದಾನ(ಗಳು) ಆಗಿ ಪಡೆದಿರುವ ಆಸ್ತಿಗಳ ಬಗ್ಗೆ ಸೂಕ್ತವಾದ ದಾಖಲೆಗಳನ್ನು ನಿರ್ವಹಣೆ ಮಾಡಲಾಗಿದೆಯೇ | ಹೌದು, ಕಾಗದ ವಿಭಾಗವು ಕಾಗದದ ರೂಪದಲ್ಲಿ ಕಚ್ಚಾ ಸಾಮಗ್ರಿಯನ್ನು ನಿರ್ವಹಣೆ ಮಾಡುತ್ತಿದೆ ಮತ್ತು ಪರಿವರ್ತಕರಲ್ಲಿರುವ ಇತರೆ ಸಾಮಗ್ರಿಯನ್ನು ನಿರ್ವಹಣೆ ಮಾಡುತ್ತಿದೆ. ಇದಕ್ಕಾಗಿ ಕಂಪನಿಯು ಸೂಕ್ತವಾದ ದಾಖಲೆಗಳನ್ನು ನಿರ್ವಹಿಸುತ್ತಿದೆ. ಈ ವರ್ಷದ ಅವಧಿಯಲ್ಲಿ ಕಂಪನಿ ಫಾರ್ಮಾ ವಿಭಾಗವು ಇಂಡಿಯಾ ಬಿಪಿಪಿಐನ ಬ್ಯೂರೋ ಆಫ್ ಫಾರ್ಮ ಪಿಎಸ್‌ಯು ದಿಂದ ತಪಶೀಲಿನ ರೂಪದಲ್ಲಿ 62 ಜನೌಷಧಿಗಳಿಗೆ ರೂ.62 ಲಕ್ಷ ಮೊತ್ತದ ಹಣಕಾಸೇತರ ಅನುದಾನ ಪಡೆದಿದೆ ಮತ್ತು 69 ಮಾರಾಟ ಮಳಿಗೆಗಳ ಸಂಬಂಧ ಜನೌಷಧಿಗಾಗಿ ರೂ.92.61 ಲಕ್ಷಗಳ ಮೊತ್ತದ ಬಂಡವಾಳ ಆಸ್ತಿಗಳ ಸಂಬಂಧ ಅನುದಾನ ಬರಬೇಕಿದ್ದು, ಇದಕ್ಕೆ ಕಂಪನಿ ಸೂಕ್ತ ದಾಖಲೆಗಳನ್ನು ನಿರ್ವಹಿಸುತ್ತಿದೆ. | ಇಲ್ಲ |

FMSIL

## ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳು:

| ಕ್ರ. ಸಂ. | ನಿರ್ದೇಶನಗಳು | ಲೆಕ್ಕಪರಿಶೋಧಕರ ಉತ್ತರ | ಐಎನ್‌ಡಿ ಎಎಸ್ ಹಣಕಾಸಿನ ವಿವರಗಳ ಮೇಲೆ ಉಂಟಾಗುವ ಪರಿಣಾಮ |
|---|---|---|---|
| ಎ | ಗಣಕೀಕೃತ ಪರಿಸರದಲ್ಲಿ ಮೇಲ್ವಿಚಾರಣೆ ವ್ಯವಸ್ಥೆ ಮತ್ತು ದಾಸ್ತಾನಿನ ಭೌತಿಕ ಪರಿಶೀಲನೆ ಪ್ರಕ್ರಿಯೆಯ ಪರಿಣಾಮದ ಬಗ್ಗೆ ಟೀಕೆ ಟಿಪ್ಪಣಿ | ಮದ್ಯದ ವಿಭಾಗದಲ್ಲಿ ರಶೀದಿ, ಮದ್ಯದ ದಾಸ್ತಾನಿನ ಮಾರಾಟವನ್ನು ಗಣಕೀಕೃತ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. ತಪಶೀಲಿನ ಭೌತಿಕ ಪರಿಶೀಲನೆ ಮಾಡಿದ ಅವಧಿಯಲ್ಲಿ ಗಮನಕ್ಕೆ ಬಂದಿರುವ ವ್ಯತ್ಯಾಸಗಳಿಗೆ ಕಾರಣಗಳೇನು ಎಂಬುದನ್ನು ಪುನರ್ ಪರಿಶೀಲಿಸಲು ಮತ್ತು ಅದರ ಅನುಸರಣೆ ಮಾಡುವಂತೆ ಶಿಫಾರಸು ಮಾಡಿದೆ. ಕಾಗದದ ವಿಭಾಗದಲ್ಲಿ, ತಪಶೀಲನ್ನು ಗಣಕೀಕೃತ ವ್ಯವಸ್ಥೆಯಲ್ಲಿ ಮೇಲ್ವಿಚಾರಣೆ ಮಾಡಲಾಗಿದೆ. ಇಲ್ಲಿ ತಪಶೀಲಿನ ಬಗ್ಗೆ ಪರಿಣಾಮಕಾರಿಯಾದ ಮತ್ತು ತೃಪ್ತಿಕರವಾದ ನಿಯಂತ್ರಣವಿರುವುದು. ಫಾರ್ಮ ವಿಭಾಗದ ವಿಚಾರದಲ್ಲಿ, ತಪಶೀಲನ್ನು ಗಣಕೀಕೃತ ವ್ಯವಸ್ಥೆಯಲ್ಲಿ ನಿಗಾವಹಿಸಲಾಗಿದೆ. ಬೃಹತ್ ಸಂಖ್ಯೆಯ ಫಾರ್ಮ ದಾಸ್ತಾನುಗಳನ್ನು ಪರಿಗಣಿಸಿ, ದಾಸ್ತಾನಿನ ಪರಿಶೀಲನೆ ಅವಧಿಯ ಅಂತರವನ್ನು ಸುಧಾರಿಸುವಂತೆ ಶಿಫಾರಸು ಮಾಡಿದೆ. ಆಮದು, ರಫ್ತು ವಿಭಾಗದಲ್ಲಿ ಆಮದು ಮಾಡಿಕೊಂಡ ಮರಳನ್ನು ಬಂದರಿನಲ್ಲಿ ನಿರ್ವಹಣೆ ಮಾಡಿದೆ. ಇದಕ್ಕೆ ಕಂಪನಿ ಇನ್‌ವೆಂಟರಿ ಹೋಲ್ಡಿಂಗ್ ಸರ್ಟಿಫಿಕೇಟ್ ಅನ್ನು ಕಂಪನಿ ಪಡೆದುಕೊಂಡಿದೆ. ಕಂಪನಿಯು ದಾಸ್ತಾನಿನ ಭೌತಿಕ ಪರಿಶೀಲನೆ ನಡೆಸುವುದಿಲ್ಲ. | ತಿಳಿದುಬಂದಿಲ್ಲ |
| ಬಿ | ಕಂಪನಿಯು ತನ್ನ ಮಾರಾಟ ಚಟುವಟಿಕೆಗಳ ಸಂಬಂಧ ಬಾಕಿಗಳ ವಸೂಲಿಗೆ ಪರಿಣಾಮಕಾರಿಯಾದ ವ್ಯವಸ್ಥೆಯನ್ನು ಹೊಂದಿರುವುದೇ ಮತ್ತು ಬರಬೇಕಾಗಿರುವ ಬಾಕಿ ಮತ್ತು ಈ ಸಂಬಂಧ ಮಾಡಿರುವ ವಸೂಲಿಗಳನ್ನು ಲೆಕ್ಕಗಳ ಪುಸ್ತಕಗಳಲ್ಲಿ ಸೂಕ್ತವಾಗಿ ದಾಖಲು ಮಾಡಲಾಗಿದೆಯೇ? | ನಿಯತಕಾಲಿಕ ಬಾಕಿಗಳ ದೃಢೀಕರಣೆಯನ್ನು ಪಡೆದಿರುವುದಿಲ್ಲ, ಇದನ್ನು ನಮ್ಮ ಅರ್ಹತಾ ಅಭಿಪ್ರಾಯಕ್ಕೆ ಆಧಾರದಲ್ಲಿ ಪ್ರಸ್ತಾಪಿಸಿದೆ. ಆದರೂ, ಕಂಪನಿಯು ಬಾಕಿಗಳ ವಸೂಲಿಗಾಗಿ ಪರಿಣಾಮಕಾರಿಯಾದ ವ್ಯವಸ್ಥೆಯನ್ನು ಹೊಂದಿದೆ ಮತ್ತು ಗಣಕೀಕೃತ ವ್ಯವಸ್ಥೆಯಲ್ಲಿ ದಾಖಲೆಗಳನ್ನು ನಿರ್ವಹಣೆ ಮಾಡಿದೆ. | ತಿಳಿದುಬರುವುದಿಲ್ಲ. |

| | | | |
|---|---|---|---|
| ಸಿ | ಕಂಪನಿಯು ದಾಸ್ತಾನಿನ ಭೌತಿಕ ಪರಿಶೀಲನೆ, ಮೌಲ್ಯಮಾಪನ, ಮಾರಾಟವಾಗುತ್ತಿಲ್ಲದ ಬಾಬ್ತುಗಳ ಗಣನೆಗೆ ಪರಿಣಾಮಕಾರಿ ವ್ಯವಸ್ಥೆ ಹೊಂದಿರುವುದೇ ಮತ್ತು ಭೌತಿಕ ಪರಿಶೀಲನೆಯ ಸಮಯದಲ್ಲಿ ಕಂಡು ಬಂದ ಕೊರತೆ/ಹೆಚ್ಚುವರಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವುದೇ | ಕಂಪನಿಯು ಮಧ್ಯ ವಿಭಾಗದಲ್ಲಿನ ಮಾರಾಟ ಮಳಿಗೆ ತಪಶೀಲಿನ ಭೌತಿಕ ಪರಿಶೀಲನೆಗೆ ಪರಿಣಾಮಕಾರಿ ವ್ಯವಸ್ಥೆಯನ್ನು ಆಂತರಿಕ ಲೆಕ್ಕಪರಿಶೋಧಕರ ಮೂಲಕ ಮಾಡಿದ್ದರೂ, ಭೌತಿಕ ಪರಿಶೀಲನೆ ಅವಧಿಯಲ್ಲಿ ಕಂಡು ಬಂದಿರುವ ಪ್ರಮಾಣದ ಕೊರತೆ ಮತ್ತು ಹೆಚ್ಚುವರಿಯನ್ನು ವಿಶ್ಲೇಷಣೆ ಮಾಡಬೇಕಾಗಿದೆ ಮತ್ತು ಅಂತಹ ವ್ಯತ್ಯಾಸಗಳಿಗೆ ಕಾರಣವನ್ನು ಕಂಡುಕೊಂಡು ಸಿಸ್ಟಮ್‌ನಲ್ಲಿ ತಕ್ಷಣ ಸರಿಪಡಿಸುವಿಕೆ ಕ್ರಮ ಕೈಗೊಳ್ಳಬೇಕಾಗಿದೆ. ಕೊರತೆ/ಹೆಚ್ಚುವರಿ ಆಗಿರುವುದಕ್ಕೆ ಲೆಕ್ಕಾಚಾರದ ಗಣನೆಯನ್ನು ಪುಸ್ತಕಗಳಲ್ಲಿ ಸೂಕ್ತವಾಗಿ ಮಾಡಿದೆ. | ತಿಳಿದುಬರುವುದಿಲ್ಲ |
| ಡಿ | ಐಆರ್‌ಆರ್ ಮತ್ತು ಮರುಪಾವತಿ ಅವಧಿ ಒಳಗೊಂಡಂತೆ ಪ್ರಮುಖ ಬಂಡವಾಳ ಖರ್ಚು/ವಿಸ್ತರಣೆಯ ವೆಚ್ಚ ಸೌಲಭ್ಯ ವಿಶ್ಲೇಷಣೆ ಪರಿಶೀಲಿಸಲಾಗಿದೆಯೇ | ಈ ವರ್ಷದ ಅವಧಿಯಲ್ಲಿ ಪುಸ್ತಕಗಳಲ್ಲಿ ಮಾನ್ಯ ಮಾಡಿರುವ ಪ್ರಮುಖ ಬಂಡವಾಳ ಖರ್ಚು, ನವಿ ಮುಂಬಯಿಯಲ್ಲಿ ಗುತ್ತಿಗೆ ಹಿಡುವಳಿ ಜಮೀನಿನಲ್ಲಿ ಕರ್ನಾಟಕ ಭವನ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಖರ್ಚುಗಳು ಆಗಿರುವುದು. ಸದರಿ ಕಟ್ಟಡದ ನಿರ್ಮಾಣ ಪೂರ್ಣಗೊಳಿಸಲು ಆಗಿರುವ ಒಟ್ಟು ವೆಚ್ಚ ರೂ.34.10 ಕೋಟಿಗಳು. ಈ ಸ್ವತ್ತನ್ನು ಪೂರ್ಣಗೊಂಡಿರುವ ಪ್ರಮಾಣಪತ್ರದ ಅನ್ವಯ ವರ್ಷದ ಕಡೆಯ ದಿನದಂದು ಪುಸ್ತಕಗಳಲ್ಲಿ ಬಂಡವಾಳೀಕರಿಸಿದೆ. ಈ ಕಟ್ಟಡವನ್ನು ಬಾಡಿಗೆಗೆ ನೀಡಲು ಆಡಳಿತ ವರ್ಗ ಇ-ಟೆಂಡರ್ ಕರೆಯುವ ಪ್ರಕ್ರಿಯೆಯಲ್ಲಿರುವುದಾಗಿ ನಮಗೆ ಮಾಹಿತಿ ನೀಡಿದೆ. ಈ ಪರಿಸ್ಥಿತಿಯಲ್ಲಿ ಕಟ್ಟಡದ ಬಗ್ಗೆ ಮಾಡಿರುವ ಈ ಬಂಡವಾಳ ಖರ್ಚಿನ ವೆಚ್ಚದ ಸೌಲಭ್ಯ ತಿಳಿಯಲು ಮತ್ತು ವಿಶ್ಲೇಷಿಸಲು ನಮಗೆ ಸಾಧ್ಯವಾಗಿರುವುದಿಲ್ಲ. | ತಿಳಿದುಬಂದಿರುವುದಿಲ್ಲ |
| ಇ | ಲೆಕ್ಕಪರಿಶೋಧನೆ ಮಾಡಲ್ಪಟ್ಟಿರುವ ಸಂಸ್ಥೆಯು ತನ್ನ ಕಾರ್ಯಾಚರಣೆಗಳನ್ನು ಅಥವಾ ಅದರ ಒಂದು ಭಾಗವನ್ನು ಗಣಕೀಕರಣಗೊಳಿಸಿದ್ದ ಪಕ್ಷದಲ್ಲಿ ಕಂಪನಿಯಲ್ಲಿ ಎಷ್ಟು ಅಂಕಿ ಅಂಶ ಎಲೆಕ್ಟ್ರಾನಿಕ್ ನಮೂನೆಯಲ್ಲಿರುವುದು, ಲೆಕ್ಕ ನಿರ್ವಹಣೆ, ಮಾರಾಟ ಸಿಬ್ಬಂದಿ ಮಾಹಿತಿ, ಪೇ ರೋಲ್, ತಪಶೀಲು ಇತ್ಯಾದಿಯಲ್ಲಿ ಯಾವುದನ್ನು ಗಣಕೀಕರಣಗೊಳಿಸಿದೆ ಮತ್ತು ಅಂಕಿ ಅಂಶ/ತಂತ್ರಾಂಶ/ಹಾರ್ಡ್‌ವೇರ್ ಬಗ್ಗೆ ಕಂಪನಿ ಸೂಕ್ತವಾದ ಭದ್ರತಾ ನೀತಿ ರೂಪಿಸಿರುವುದೇ ಎಂಬುದರ ಬಗ್ಗೆ ನಿರ್ಧರಣೆ ಮಾಡಿ ಮತ್ತು ವರದಿ ಮಾಡಿ. | ಮಾರಾಟ ಸಿಬ್ಬಂದಿ ಮಾಹಿತಿ ಹೊರತಾಗಿ, ಲೆಕ್ಕನಿರ್ವಹಣೆ, ತಪಶೀಲು, ಪೇ ರೋಲ್‌ನಂತಹ ಪ್ರಮುಖ ಚಟುವಟಿಕೆಗಳನ್ನು ಗಣಕೀಕರಿಸಲಾಗಿದೆ ಮತ್ತು ಕಂಪನಿಯು ವಿಭಾಗವಾರು ಬಾಹ್ಯ ಬ್ಯಾಕ್‌ಅಪ್ ಇಡುವ ಮೂಲಕ ಅಂಕಿ ಅಂಶ/ತಂತ್ರಾಂಶಕ್ಕಾಗಿ ಸೂಕ್ತ ಭದ್ರತಾ ನೀತಿ ರೂಪಿಸಿದೆ. ಕಡಿಮೆಯಾದ ಅಂತರಗಳಲ್ಲಿ, ಅಗತ್ಯತೆ ಆಧಾರದ ಮೇಲೆ ತಂತ್ರಾಂಶಗಳಿಗೆ ಕಂಪನಿ ಎಎಂಸಿ ಸರ್ವೀಸ್‌ಗಳನ್ನು ಮಾಡಿಸುತ್ತಿದೆ. ಹಾರ್ಡ್‌ವೇರ್ ತಪಶೀಲುಗಳ ಬಗ್ಗೆ ನಿಯಂತ್ರಣಗಳು ಹಾಲಿಯಿರುವವು. ಈ ವರ್ಷದ ಅವಧಿಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಿರುವುದಿಲ್ಲ. | ಇಲ್ಲ |

**ಮೆ॥ ಪಿ. ಚಂದ್ರಶೇಖರ್ ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
**ಮಣಿಕುಮಾರ್.ಡಿ**
ಪಾಲುದಾರರು,
ಸದಸ್ಯತ್ವ ಸಂಖ್ಯೆ 212544

ಸ್ಥಳ : ಬೆಂಗಳೂರು
ದಿನಾಂಕ : 11.12.2018

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2018ರಂದು ಇದ್ದಂತೆ ಕ್ರೋಡೀಕೃತ ಸ್ಥಿತಿ ವಿವರಣಾ ಪಟ್ಟಿ

(ರೂ.ಗಳಲ್ಲಿ)

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|---|---|
| ಎ. | ಆಸ್ತಿಗಳು | | | | |
| | **ಚಾಲ್ತಿಯೇತರ ಆಸ್ತಿಗಳು** | | | | |
| | (ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ | 2 | 695,471,620 | 282,260,286 | 249,452,616 |
| | (ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | 2 | 2,011,291 | 340,240,465 | 313,172,589 |
| | (ಸಿ) ಹೂಡಿಕೆ ಸ್ವತ್ತು | 3 | - | - | - |
| | (ಡಿ) ಇತರೆ ಅಗೋಚರ ಆಸ್ತಿಗಳು | 4 | - | - | - |
| | (ಇ) ಹಣಕಾಸಿನ ಆಸ್ತಿಗಳು | | | | |
| | (i) ಹೂಡಿಕೆಗಳು | | | | |
| | (ಎ) ಇತರೆ ಹೂಡಿಕೆಗಳು | 5 | 134,597,831 | 134,600,831 | 133,650,831 |
| | (ಬಿ) ಸಹವರ್ತಿ ಕಂಪನಿಗಳಲ್ಲಿ ಹೂಡಿಕೆ | | | | |
| | (ii) ಇತರೆ ಹಣಕಾಸಿನ ಆಸ್ತಿಗಳು | 6 | - | - | - |
| | (ಎಫ್) ಮುಂದೂಡಿದ ತೆರಿಗೆ ಆಸ್ತಿಗಳು | 7 | 109,524,915 | 101,870,057 | 103,046,488 |
| | (ಜಿ) ಇತರೆ ಚಾಲ್ತಿಯೇತರ ಆಸ್ತಿಗಳು | 8 | 912,836,871 | 780,408,280 | 845,516,167 |
| | **ಒಟ್ಟು ಚಾಲ್ತಿಯೇತರ ಆಸ್ತಿಗಳು** | | **1,854,442,528** | **1,639,379,919** | **1,644,838,691** |
| | **ಚಾಲ್ತಿ ಆಸ್ತಿಗಳು** | | | | |
| | (ಎ) ತಪಶೀಲುಗಳು | 9 | 1,196,200,950 | 901,280,863 | 745,168,549 |
| | (ಬಿ) ಹಣಕಾಸಿನ ಆಸ್ತಿಗಳು | | | | |
| | (i) ತಪಶೀಲು | 10 | - | - | - |
| | (ii) ವ್ಯಾಪಾರದಿಂದ ಬರಬೇಕಾಗಿರುವುದು | 11 | 216,627,525 | 141,620,843 | 34,004,814 |
| | (iii) ನಗದು ಮತ್ತು ನಗದ ಸಮಾನಗಳು | 12 | 1,316,254,627 | 1,361,275,407 | 971,588,921 |
| | (iv) ಮೇಲಿನ (iii) ಹೊರತಾಗಿ ಬ್ಯಾಂಕ್ ಶಿಲ್ಕುಗಳು | 13 | 773,750,228 | 748,114,714 | 659,015,606 |
| | (v) ಇತರೆ ಹಣಕಾಸಿನ ಆಸ್ತಿಗಳು | 6 | - | - | - |
| | (ಸಿ) ಚಾಲ್ತಿ ತೆರಿಗೆ ಆಸ್ತಿಗಳು (ನಿವ್ವಳ) | 14 | - | - | - |
| | (ಡಿ) ಇತರೆ ಚಾಲ್ತಿ ಆಸ್ತಿಗಳು | 8 | 1,497,346,149 | 1,352,994,015 | 1,542,774,175 |
| | **ಒಟ್ಟು ಚಾಲ್ತಿ ಆಸ್ತಿಗಳು** | | **5,000,179,479** | **4,505,285,842** | **3,952,552,065** |
| | **ಒಟ್ಟು ಆಸ್ತಿಗಳು** | | **6,854,622,007** | **6,144,665,761** | **5,597,390,756** |

| | | | | | |
|---|---|---|---|---|---|
| ಬಿ | **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | | |
| | **ಈಕ್ವಿಟಿ** | | | | |
| | (ಎ) ಈಕ್ವಿಟಿ ಷೇರು ಬಂಡವಾಳ | 15 | 427,347,700 | 201,766,000 | 201,766,000 |
| | (ಬಿ) ಇತರೆ ಈಕ್ವಿಟಿ | 16 | 2,847,699,783 | 2,931,631,652 | 2,588,779,141 |
| | **ಒಟ್ಟು ಈಕ್ವಿಟಿ** | | **3,275,047,483** | **3,133,397,652** | **2,790,545,141** |
| | **ಹೊಣೆಗಾರಿಕೆಗಳು** | | | | |
| | **ಚಾಲ್ತಿಯೇತರ ಹೊಣೆಗಾರಿಕೆಗಳು** | | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | | |
| | (i) ಸಾಲಗಳು | 17 | - | - | - |
| | (ii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 18 | - | - | - |
| | (ಬಿ) ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು | 7 | 12,411,605 | 4,234,961 | 1,663,730 |
| | (ಸಿ) ವ್ಯವಸ್ಥೆಗಳು | 19 | 94,063,934 | 103,263,658 | 98,729,345 |
| | (ಡಿ) ಇತರೆ ಚಾಲ್ತಿಯೇತರ ಹೊಣೆಗಾರಿಕೆಗಳು | 20 | 800,893,671 | 805,583,312 | 779,843,149 |
| | **ಒಟ್ಟು ಚಾಲ್ತಿಯೇತರ ಹೊಣೆಗಾರಿಕೆಗಳು** | | **907,369,210** | **913,081,931** | **880,236,224** |
| | **ಚಾಲ್ತಿ ಹೊಣೆಗಾರಿಕೆಗಳು** | | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | | |
| | (i) ಸಾಲಗಳು | 21 | - | - | - |
| | (ii) ವ್ಯಾಪಾರದ ಸಂಬಂಧ ಮಾಡಬೇಕಾದ ಪಾವತಿಗಳು | 22 | 1,816,767,702 | 1,113,960,906 | 1,114,986,890 |
| | (iii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 18 | - | - | - |
| | (ಬಿ) ವ್ಯವಸ್ಥೆಗಳು | 19 | 508,376,369 | 590,963,856 | 587,687,669 |
| | (ಸಿ) ಇತರೆ ಚಾಲ್ತಿ ಹೊಣೆಗಾರಿಕೆಗಳು | 20 | 347,061,244 | 393,261,416 | 223,934,833 |
| | **ಒಟ್ಟು ಚಾಲ್ತಿ ಹೊಣೆಗಾರಿಕೆಗಳು** | | **2,672,205,315** | **2,098,186,178** | **1,926,609,392** |
| | **ಒಟ್ಟು ಹೊಣೆಗಾರಿಕೆಗಳು** | | **3,579,574,525** | **3,011,268,109** | **2,806,845,616** |
| | **ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | **6,854,622,007** | **6,144,665,761** | **5,597,390,756** |

ಇದರೊಡನೆ ಸೇರಿಸಿರುವ ಟಿಪ್ಪಣಿಗಳು ಈ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವುದು.

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

| ಸಹಿ/- | ಸಹಿ/- | ಸಹಿ/- | ಸಹಿ/- | ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ |
|---|---|---|---|---|
| **ಕೆ.ಜೆ.ಜಾರ್ಜ್** | **ಡಾ. ಜಿ.ಸಿ. ಪ್ರಕಾಶ್** | **ಶ್ರೀದೇವಿ ಬಿ.ಎನ್.** | **ಸುಬ್ರಮಣ್ಯ** | **ಪಿ. ಚಂದ್ರಶೇಖರ್ ಎಲ್‌ಎಲ್‌ಪಿ** |
| ಅಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು | ಕಂಪನಿ ಕಾರ್ಯದರ್ಶಿ | ಮುಖ್ಯ ಹಣಕಾಸು ಅಧಿಕಾರಿ | ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ |

ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066

ಸಹಿ/-

ದಿನಾಂಕ : 16.11.2018

ಸ್ಥಳ : ಬೆಂಗಳೂರು

**ಡಿ. ಮಣಿಕುಮಾರ್**

ಪಾಲುದಾರರು

(ಸದಸ್ಯತ್ವ ಸಂಖ್ಯೆ. 212544)

MSIL

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ವಿವರ

(ರೂ.ಗಳಲ್ಲಿ)

| ಕ್ರ. ಸಂ. | ವಿವರಗಳು | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಕ್ಕೆ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷಕ್ಕೆ |
|---|---|---|---|---|
| I. | ಕಾರ್ಯಾಚರಣೆಗಳಿಂದ ಬಂದ ಆದಾಯ | 23 | 15,675,116,322 | 13,892,846,269 |
| II. | ಇತರೆ ಆದಾಯ | 24 | 186,993,700 | 185,515,629 |
| III. | **ಒಟ್ಟು ಆದಾಯ (I+II)** | | **15,862,110,022** | **14,078,361,898** |
| IV. | **ಖರ್ಚುಗಳು:** | | | |
| | ಬಳಸಿರುವ ಸಾಮಗ್ರಿಗಳ ಬೆಲೆ | 25 | 74,548,319 | 104,530,364 |
| | ವ್ಯಾಪಾರದ ಸರಕಿನ ಖರೀದಿ | | 14,202,139,609 | 12,508,660,759 |
| | ಸಿದ್ಧಪಡಿಸಿದ ಸರಕುಗಳ ತಪಶೀಲಿನಲ್ಲಿ ಬದಲಾವಣೆಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ವ್ಯಾಪಾರಿ ಸರಕು | 26 | -219,211,554 | -188,935,417 |
| | ನೌಕರರ ಸೌಲಭ್ಯ ವೆಚ್ಚಗಳು | 27 | 283,240,578 | 230,845,036 |
| | ಹಣಕಾಸಿನ ವೆಚ್ಚಗಳು | 28 | 10,442,675 | 5,330,871 |
| | ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು | 29 | 34,185,195 | 28,521,468 |
| | ಇತರೆ ಖರ್ಚುಗಳು | 30 | 1,238,289,574 | 818,447,377 |
| | **ಒಟ್ಟು ಖರ್ಚುಗಳು (IV)** | | **15,623,634,396** | **13,507,400,458** |
| V. | ಅಸಾಧಾರಣ ಐಟಂಗಳು ಮತ್ತು ತೆರಿಗೆ ಮುನ್ನ ಲಾಭ (III-IV) | | 238,475,626 | 570,961,440 |
| VI. | ಅಸಾಧಾರಣ ಐಟಂಗಳು | 31 | 1,283,154 | 3,071,816 |
| VII. | ತೆರಿಗೆ ಮುನ್ನ ಲಾಭ (V-VI) | | 237,192,473 | 567,889,624 |
| VIII. | ತೆರಿಗೆ ಖರ್ಚುಗಳು: | | | |
| | (1) ಚಾಲ್ತಿ ತೆರಿಗೆ | | 93,976,982 | 197,773,538 |
| | (2) ಹಿಂದಿನ ಅವಧಿ ತೆರಿಗೆ | | - | - |
| | (3) ಮುಂದೂಡಿದ ತೆರಿಗೆ | | 521,787 | 3,747,661 |
| | **ಒಟ್ಟು ತೆರಿಗೆ ಖರ್ಚುಗಳು** | | **94,498,769** | **201,521,199** |
| IX. | ವರ್ಷದ ಲಾಭ ಮುಂದುವರಿದ ಕಾರ್ಯಾಚರಣೆಗಳಿಂದ (VII-VIII) | | 142,693,704 | 366,368,425 |
| | ಸ್ಥಗಿತವಾದ ಕಾರ್ಯಾಚರಣೆಗಳು | | | |
| | ಸ್ಥಗಿತವಾದ ಕಾರ್ಯಾಚರಣೆಗಳಿಂದ ಬಂದ ವರ್ಷದ ತೆರಿಗೆ ಪಾವತಿಗೆ ಮುನ್ನಿನ ಲಾಭ /(ನಷ್ಟ) | | -1,043,887 | 201,859 |
| | ಸ್ಥಗಿತಗೊಂಡ ಕಾರ್ಯಾಚರಣೆಗಳ ತೆರಿಗೆ ಆದಾಯ (ಖರ್ಚು) | | - | - |
| | ಸ್ಥಗಿತಗೊಂಡ ಕಾರ್ಯಾಚರಣೆಗಳ ವರ್ಷದಲ್ಲಿ ಆದ ಲಾಭ/(ನಷ್ಟ) | | **-1,043,887** | **201,859** |

| | | | | |
|---|---|---|---|---|
| | **ಇತರೆ ಸಮಗ್ರ ಆದಾಯ** | | | |
| ಎ. | i. ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳು | | – | – |
| | ii. ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ | | – | – |
| X. | **ಒಟ್ಟು ಇತರೆ ಸಮಗ್ರ ಆದಾಯ (ಎ(i-ii)+ (ಬಿ(i-ii)** | | – | – |
| XI. | **ವರ್ಷದ ಒಟ್ಟು ಸಮಗ್ರ ಆದಾಯ** | | **141,649,817** | **366,570,284** |
| XII. | **ಈಕ್ವಿಟಿ ಷೇರು ಒಂದರ ಗಳಿಕೆ** | | | |
| | ನಿರಂತರ ಕಾರ್ಯಾಚರಣೆಯ ಷೇರು ಒಂದರ ಗಳಿಕೆಗಳು | | | |
| | ಈಕ್ವಿಟಿ ಧಾರಕರುಗಳಿಗೆ ಅನ್ವಯ ಮಾಡಬಹುದಾದ ಮುಂದುವರಿದ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕ ಹಾಕಿದ ಮೂಲ ಮೊತ್ತ | | 68.01 | 181.58 |
| | ಈಕ್ವಿಟಿ ಧಾರಕರುಗಳಿಗೆ ಅನ್ವಯ ಮಾಡಬಹುದಾದ ಮುಂದುವರಿದ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕ ಹಾಕಿದ ದ್ರವೀಕೃತ ಮೊತ್ತ | | 68.01 | 181.58 |
| | **ಸ್ಥಗಿತಗೊಂಡ ಕಾರ್ಯಾಚರಣೆ ಬಗ್ಗೆ ಷೇರು ಒಂದರ ಗಳಿಕೆ** | | | |
| | ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ಮೂಲ ಮೊತ್ತ | | −0.50 | 0.10 |
| | ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಬಂದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ದ್ರವೀಕೃತ ಮೊತ್ತ | | −0.50 | 0.10 |
| | **ಮುಂದುವರಿದ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಷೇರು ಒಂದರ ಗಳಿಕೆಗಳು** | | | |
| | (ಎ) ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ಮೂಲ ಮೊತ್ತ | 32 | 67.52 | 181.68 |
| | (ಬಿ) ಈಕ್ವಿಟಿ ಧಾರಕರುಗಳಿಗೆ ಅನ್ವಯಿಸಬಹುದಾದ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ದ್ರವೀಕೃತ ಮೊತ್ತ | 32 | 67.52 | 181.68 |

ಇದರೊಡನೆ ಸೇರಿಸಿರುವ ಟಿಪ್ಪಣಿಗಳು ಈ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವುದು.

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

| ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|
| **ಕೆ.ಜೆ.ಜಾರ್ಜ್** | **ಡಾ. ಜಿ.ಸಿ. ಪ್ರಕಾಶ್** | **ಶ್ರೀದೇವಿ ಬಿ.ಎಸ್.** | **ಸುಬ್ರಮಣ್ಯ** |
| ಅಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು | ಕಂಪನಿ ಕಾರ್ಯದರ್ಶಿ | ಮುಖ್ಯ ಹಣಕಾಸು ಅಧಿಕಾರಿ |

ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ
**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
**ಡಿ. ಮಣಿಕುಮಾರ್**
ಪಾಲುದಾರರು
ಸದಸ್ಯತ್ವ ಸಂಖ್ಯೆ:212544

ದಿನಾಂಕ : 16.11.2018
ಸ್ಥಳ : ಬೆಂಗಳೂರು

FMSIL

## 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ನಗದು ಹರಿಯುವಿಕೆ ವಿವರ

(ಮೊತ್ತ ರೂ.ಗಳಲ್ಲಿ)

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| **ಎ. ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಹರಿಯುವಿಕೆ** | | |
| ತೆರಿಗೆಗೆ ಮುನ್ನ ಲಾಭ | 236,603,292 | 567,889,626 |
| ಕೆಳಕಂಡವುಗಳಿಗೆ ಹೊಂದಾಣಿಕೆ: | | |
| ಸವಕಳಿ ಮತ್ತು ಅಮಾರ್ಟೈಜೇಷನ್ | 34,185,195 | 28,521,468 |
| ಹಣಕಾಸಿನ ವೆಚ್ಚ (ನಿವ್ವಳ) | 10,442,675 | 10,442,675 |
| ಸರ್ಕಾರದ ಸಾಲಗಳ ಮೇಲೆ ನೀಡಿದ ಬಡ್ಡಿ ಅನುದಾನ | - | - |
| ಉಂಟಾದ ನಿವ್ವಳ (ಲಾಭ)/ನಷ್ಟ | - | |
| ನೌಕರರ ಸೌಲಭ್ಯ ಯೋಜನೆಯ ಪುನರ್‌ಮಾಪನ | - | - |
| ಲಾಭಾಂಶದ ಆದಾಯ | - | - |
| ಸ್ಥಿರಾಸ್ತಿಗಳ ಮಾರಾಟದ ಮೇಲಿನ ಲಾಭ (ನಿವ್ವಳ) | -161,962 | 20,590 |
| ಬಡ್ಡಿ ಆದಾಯ | -115,309,207 | 132,275,772 |
| ವಸೂಲಾಗದ ಸಾಲ | 7,175,104 | - |
| ಹಿಂದಿರುಗಿಸುವ ಅಗತ್ಯವಾಗಿರದ ಹೊಣೆಗಾರಿಕೆ | -11,989,552 | -4,783,712 |
| ಹೂಡಿಕೆಗಳ ಮೌಲ್ಯದಲ್ಲಿ ವೃದ್ಧಿ | - | - |
| ನೌಕರರ ಸೌಲಭ್ಯಗಳಿಗೆ ವ್ಯವಸ್ಥೆ | - | - |
| ಹಿಂದಿನ ಅವಧಿಯ ಆದಾಯ | - | - |
| ನಗದಾಗಿರದ ವಿನಿಮಯ (ಗಳಿಕೆ)/ನಷ್ಟ | - | - |
| ಹೂಡಿಕೆಗಳ ಮಾರಾಟದಿಂದ ಆದ ನಷ್ಟ/(ಗಳಿಕೆ) | - | - |
| ದುಡಿಮೆ ಬಂಡವಾಳದಲ್ಲಿ ಬದಲಾವಣೆಗೆ ಮುನ್ನ ಕಾರ್ಯಾಚರಣೆ ಲಾಭ | 160,945,545 | 734,366,419 |
| ಹೆಚ್ಚಳ / (ಇಳಿಕೆ) ಗೆ ಹೊಂದಾಣಿಕೆಗಳು | - | - |
| ವ್ಯಾಪಾರ ಮತ್ತು ಇತರೆ ಸ್ವೀಕಾರಗಳು | -82,181,786 | -107,616,029 |
| ತಪಶೀಲುಗಳು | -293,741,701 | -156,112,314 |
| ನಗದು ಮತ್ತು ನಗದಿಗೆ ಸಮಾನವಾದವುಗಳು ಹೊರತಾಗಿ ಬ್ಯಾಂಕ್ ಶಿಲ್ಕುಗಳು | - | - |
| ಇತರೆ ಆಸ್ತಿಗಳು | -256,314,539 | 134,136,877 |
| ಇತರೆ ಹಣಕಾಸಿನ ಆಸ್ತಿಗಳು | -29,490,000 | 19,429,641 |
| ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದ್ದು | 702,217,603 | -1,025,984 |
| ಇತರೆ ಹೊಣೆಗಾರಿಕೆಗಳು | -26,784,084 | 178,385,254 |
| ಇತರೆ ಹಣಕಾಸಿನ ಹೊಣೆಗಾರಿಕೆಗಳು | - | - |
| ಕಾರ್ಯಾಚರಣೆಯಿಂದ ಉತ್ಪತ್ತಿಯಾದ ನಗದು | 174,651,038 | 801,563,864 |
| ಪಾವತಿ ಮಾಡಿದ ತೆರಿಗೆ | -214,492,070 | -179,993,186 |
| **ಕಾರ್ಯಾಚರಣೆ ಚಟುವಟಿಕೆಗಳಿಂದ ಉತ್ಪತ್ತಿಯಾದ ನಿವ್ವಳ ನಗದು** | **-39,841,032** | **621,570,678** |

| | | |
|---|---|---|
| **ಬಿ. ಹೂಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| ಬಂಡವಾಳ ಮುಂಗಡಗಳು ಸೇರಿದಂತೆ ಸ್ಥಿರಾಸ್ತಿಗಳ ಖರೀದಿ | -109,005,393 | -88,417,604 |
| ಸ್ಥಿರಾಸ್ತಿಗಳ ಮಾರಾಟದಿಂದ ಬಂದ ಹಣ | - | - |
| ಹೂಡಿಕೆಗಳ (ಖರೀದಿ)/ಮಾರಾಟ | 3,000 | 107,578,749 |
| ಹೂಡಿಕೆ ಆದಾಯ | - | - |
| ಪಡೆದಿರುವ ಬಡ್ಡಿ | 115,309,207 | -132,275,772 |
| ಪಡೆದಿರುವ ಲಾಭಾಂಶ | - | - |
| **ಹೂಡಿಕೆ ಚಟುವಟಿಕೆಗಳಲ್ಲಿ ಬಳಸಿರುವ ನಿವ್ವಳ ನಗದು** | **6,306,814** | **-221,643,376** |
| **ಸಿ. ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| ಷೇರು ಬಂಡವಾಳ ನೀಡಿಕೆಯಿಂದ ಬಂದ ಹಣ | -1,043,887 | 201,859 |
| ಅಲ್ಪಾವಧಿ ಸಾಲಗಳಿಂದ ಬಂದ ಹಣ | - | - |
| ದೀರ್ಘಾವಧಿ ಸಾಲಗಳ ಮರುಪಾವತಿ | - | - |
| ಹಣಕಾಸಿನ ವೆಚ್ಚ | -10,442,675 | -10,442,675 |
| ಪಾವತಿ ಮಾಡಿದ ಲಾಭಾಂಶ | - | - |
| ಪಾವತಿ ಮಾಡಿದ ಲಾಭಾಂಶ ವಿತರಣೆ ತೆರಿಗೆ | - | - |
| ಹಣಕಾಸು ನೀಡಿಕೆ ಚಟುವಟಿಕೆಗಳಿಗೆ ಬಳಸಿದ ನಿವ್ವಳ ನಗದು | -11,486,562 | -10,240,816 |
| **ನಗದು ಮತ್ತು ನಗದಿಗೆ ಸಮಾನದಲ್ಲಿನ ನಿವ್ವಳ (ಇಳಿಕೆ)/ಹೆಚ್ಚಳ (ಎ+ಬಿ+ಸಿ)** | **-45,020,780** | **389,686,486** |
| ಸಮಂಜಸತೆ | | |
| ವರ್ಷದ ಆರಂಭದಲ್ಲಿದ್ದಂತೆ ನಗದು ಮತ್ತು ನಗದು ಸಮಾನಗಳು | 1,361,275,407 | 971,588,921 |
| ವರ್ಷಾಂತ್ಯದಲ್ಲಿದ್ದ ನಗದು ಮತ್ತು ನಗದು ಸಮಾನಗಳು | 1,316,254,627 | 1,361,275,407 |
| **ನಗದು ಮತ್ತು ನಗದು ಸಮಾನಗಳಲ್ಲಿನ ನಿವ್ವಳ (ಹೆಚ್ಚಳ)/ಇಳಿಕೆ** | **-45,020,780** | **-389,686,486** |

ಇದರೊಡನೆ ಸೇರಿಸಿರುವ ಟಿಪ್ಪಣಿಗಳು ಈ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವುದು.

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

ಸಹಿ/-
**ಕೆ.ಜೆ.ಜಾರ್ಜ್**
ಅಧ್ಯಕ್ಷರು

ಸಹಿ/-
**ಡಾ. ಜಿ.ಸಿ. ಪ್ರಕಾಶ್**
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
**ಶ್ರೀದೇವಿ ಬಿ.ಎಸ್.**
ಕಂಪನಿ ಕಾರ್ಯದರ್ಶಿ

ಸಹಿ/-
**ಸುಬ್ರಮಣ್ಯ**
ಮುಖ್ಯ ಹಣಕಾಸು ಅಧಿಕಾರಿ

ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ
**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
**ಡಿ. ಮಣಿಕುಮಾರ್**
ಪಾಲುದಾರರು
ಸದಸ್ಯತ್ವ ಸಂಖ್ಯೆ:212544

ದಿನಾಂಕ : 16.11.2018
ಸ್ಥಳ : ಬೆಂಗಳೂರು

## 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು

### 1. ಕಂಪನಿ ಕುರಿತ ಮಾಹಿತಿ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿಯು ಕರ್ನಾಟಕ ಸರ್ಕಾರದ ಒಂದು ಪ್ರಮುಖ ಉದ್ಯಮವಾಗಿರುವುದು. ಇದು ವಿವಿಧ ಉತ್ಪನ್ನಗಳು ಮತ್ತು ಸೇವೆಗಳ ವ್ಯವಹಾರ ನಡೆಸುತ್ತಿರುವುದು. ಇದು ಒಂದು ವ್ಯಾಪಾರ ಸಂಸ್ಥೆಯಾಗಿ 1966ರಲ್ಲಿ ಪ್ರಾರಂಭವಾಗಿದೆ. ಈ ಕಂಪನಿಯು ಪ್ರಾರಂಭವಾದ ಸಮಯದಿಂದ ಪ್ರಮುಖ ಮಾರಾಟ ಶಕ್ತಿಯಾಗಿ ರಾಷ್ಟ್ರಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿದೆ. ಇದು ಕರ್ನಾಟಕದಾದ್ಯಂತ ಕಚೇರಿಗಳ ವ್ಯಾಪಕ ಜಾಲಬಂಧ ಹೊಂದಿರುವುದರ ಜೊತೆಗೆ, ದೇಶದಲ್ಲಿನ ಕೆಲವು ಪ್ರಮುಖ ಸ್ಥಳಗಳಲ್ಲಿಯೂ ಕಚೇರಿಗಳನ್ನು ಹೊಂದಿದೆ. ಭಾರತದಲ್ಲಿ ತಯಾರಾದ ವಿದೇಶಿ ಮದ್ಯದ ವ್ಯಾಪಾರ ವ್ಯವಹಾರ, ಚಿಟ್ ಫಂಡ್‌ಗಳನ್ನು ನಡೆಸುವುದು, ಕಾಗದದ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ಮತ್ತು ಆಮದಾದ ಮರಳಿನ ವ್ಯಾಪಾರ/ಮಾರಾಟ, ಫಾರ್ಮಸ್ಯೂಟಿಕಲ್, ಕೈಗಾರಿಕೆ ಮತ್ತು ಗ್ರಾಹಕರ ಉತ್ಪನ್ನಗಳ ಮಾರಾಟ ವ್ಯವಹಾರವನ್ನು ನಡೆಸುತ್ತಿರುವುದು.

### 2. ಮಹತ್ತರವಾದ ಲೆಕ್ಕ ನಿರ್ವಹಣೆ ನೀತಿಗಳು :

#### ಎ. ಸಿದ್ಧತೆಗೆ ಮೂಲಾಧಾರ:

ಕಂಪನಿಯ ಹಣಕಾಸಿನ ಹೇಳಿಕೆಗಳನ್ನು ಅನ್ವಯವಾಗುವ ರೀತಿಯಲ್ಲಿ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು (Ind AS) ಮತ್ತು ಕಂಪನಿಗಳ ಕಾಯ್ದೆ 2013ರ ('ಕಾಯ್ದೆ') ಸಂಬಂಧಪಟ್ಟ ಉಪಬಂಧಗಳ ಅನುಸಾರ ಸಿದ್ಧಪಡಿಸಲಾಗಿದೆ ಮತ್ತು ಮಂಡಿಸಲಾಗಿದೆ. ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ) ನಿಯಮಗಳು, 2015ರ ನಿಯಮ 3 ಓದಿಕೊಂಡಂತೆ, ಕಾಯ್ದೆಯ ಪ್ರಕರಣ 133ರ ಅನ್ವಯ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳನ್ನು ನಿಗದಿಪಡಿಸಲಾಗಿದೆ.

31ನೇ ಮಾರ್ಚ್ 2018ರವರೆಗೆ ಮತ್ತು ಈ ಅವಧಿಗೆ ಮುಕ್ತಾಯಗೊಂಡ ವರ್ಷವೂ ಸೇರಿದಂತೆ ಎಲ್ಲಾ ಅವಧಿಗೆ ಅನ್ವಯವಾಗುವಂತೆ ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014 (ಭಾರತೀಯ ಜಿಎಎಪಿ)ರ ಪ್ಯಾರಾಗ್ರಾಫ್ 7ರ ಜೊತೆಗೆ ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 133ರ ಅನ್ವಯ ಪ್ರಕಟಪಡಿಸಿರುವಂತೆ ಲೆಕ್ಕನಿರ್ವಹಣೆ ಗುಣಮಟ್ಟಗಳ ಅನುಸಾರ ಕಂಪನಿಯು ತನ್ನ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿದೆ. 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಈ ಹಣಕಾಸಿನ ಹೇಳಿಕೆಗಳು ಕಂಪನಿಯು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ (Ind AS) ಅನುಸಾರ ಸಿದ್ಧಪಡಿಸಿರುವ ಹಣಕಾಸಿನ ಹೇಳಿಕೆಯ ಪ್ರಥಮ ಸೆಟ್ ಆಗಿರುವುದು.

ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟವನ್ನು (Ind AS) ಐಎನ್‌ಡಿ ಎಎಸ್ 101ರ ಅನುಸಾರ ಅಳವಡಿಸಿಕೊಳ್ಳಲಾಗಿದೆ. - ಇದು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಮೊದಲ ಬಾರಿಯ ಅಳವಡಿಕೆಯಾಗಿರುವುದು. ಹಿಂದಿನ ಜಿಎಎಪಿ ಆಗಿದ್ದ ಭಾರತೀಯ ಜಿಎಎಪಿಯಿಂದ ಬದಲಾವಣೆಯನ್ನು ಮಾಡಲಾಗಿದೆ.

ನ್ಯಾಯೋಚಿತ ಮೌಲ್ಯಗಳಲ್ಲಿ ಮಾಪನ ಮಾಡಿರುವ ಕೆಲವು ಹಣಕಾಸಿನ ಸಾಧನಗಳ ಹೊರತಾಗಿ, ಹಣಕಾಸಿನ ಹೇಳಿಕೆಗಳನ್ನು ಸಂಚಯನ ಆಧಾರದ ಮೇಲೆ ಐತಿಹಾಸಿಕ ವೆಚ್ಚ ಒಪ್ಪಂದ ಅನ್ವಯ ಸಿದ್ಧಪಡಿಸಲಾಗಿದೆ.

ಹೊಸದಾಗಿ ಹೊರಡಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟವನ್ನು ಪ್ರಾರಂಭಿಕವಾಗಿ ಅಳವಡಿಸಿಕೊಂಡಿರುವ ಅಥವಾ ಇದುವರೆಗೂ ಬಳಕೆಯಲ್ಲಿರುವ ಲೆಕ್ಕನಿರ್ವಹಣೆ ನೀತಿಯಲ್ಲಿ ಬದಲಾವಣೆ ಮಾಡಬೇಕಾಗಿದ್ದ ಹಾಲಿಯಿರುವ ಲೆಕ್ಕನಿರ್ವಹಣೆ ಗುಣಮಟ್ಟಕ್ಕೆ ಪರಿಷ್ಕರಣೆ ಮಾಡಿರುವ ಸಂದರ್ಭಗಳ ಹೊರತಾಗಿ ಉಳಿದಂತೆ ಲೆಕ್ಕ ನಿರ್ವಹಣೆ ನೀತಿಗಳನ್ನು ಸಮಂಜಸವಾಗಿ ಅನ್ವಯಿಸಲಾಗಿದೆ. ಆಡಳಿತ ಮಂಡಳಿಯು ಇತ್ತೀಚೆಗೆ ಹೊರಡಿಸಿದ ಅಥವಾ ಪರಿಷ್ಕರಣೆ ಮಾಡಿದ ಲೆಕ್ಕ ನಿರ್ವಹಣೆ ಗುಣಮಟ್ಟಗಳನ್ನು ಚಲನಾತ್ಮಕ ಆಧಾರದ ಮೇಲೆ ಮೌಲ್ಯಂಕಣ ಮಾಡಿದೆ ಮತ್ತು ಅಳವಡಿಸಿಕೊಂಡಿದೆ.

#### ಬಿ. ಅಂದಾಜುಗಳ ಬಳಕೆ :

ಹಣಕಾಸಿನ ಹೇಳಿಕೆಗಳ ದಿನಾಂಕದಲ್ಲಿದ್ದಂತೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲ್ಪಟ್ಟಿರುವ ಶಿಲ್ಕುಗಳ ಮೇಲೆ ಮತ್ತು ಆನುಷಂಗಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಪ್ರಕಟಣೆಗಳ ಮೇಲೆ ಹಾಗೂ ಸದರಿ ಅವಧಿಯಲ್ಲಿನ ಆದಾಯ ಮತ್ತು ಖರ್ಚುಗಳ ತಿಳಿಸಲಾದ ಮೊತ್ತಗಳ ಮೇಲೆ ಪರಿಣಾಮ ಉಂಟು ಮಾಡುವ ಅಂದಾಜುಗಳು ಮತ್ತು ಊಹೆಗಳನ್ನು ಕಂಪನಿಯ ಆಡಳಿತ ಮಂಡಳಿಯು ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ವೇಳೆಯಲ್ಲಿ ಮಾಡಬೇಕಾಗುತ್ತದೆ. ಈ ಅಂದಾಜುಗಳು ಆಡಳಿತ ಮಂಡಳಿಯು ಚಾಲ್ತಿ ಘಟನಾವಳಿಗಳು ಮತ್ತು ಕ್ರಮಗಳ ಬಗ್ಗೆ ಹೊಂದಿರುವ ಪರಿಜ್ಞಾನದ ಮೇಲೆ ಆಧಾರಿತವಾದವುಗಳಾಗಿದ್ದರೂ, ಮುಂದಿನ ಅವಧಿಗಳಲ್ಲಿ ಆಸ್ತಿಗಳು ಅಥವಾ ಹೊಣೆಗಾರಿಕೆಗಳ ವಾಹಕ ಮೊತ್ತಗಳಿಗೆ ವಾಸ್ತವಿಕ ಹೊಂದಾಣಿಕೆ ಮಾಡಬೇಕಾಗಿ ಬಂದ ಸಂದರ್ಭದಲ್ಲಿ ಸದರಿ ಊಹೆಗಳು ಮತ್ತು ಅಂದಾಜುಗಳ ಬಗ್ಗೆ ಅನಿಶ್ಚಿತತೆ ತಲೆದೋರುವುದು.

#### ಸಿ. ನಗದು ಹರಿವಿನ ವಿವರ

ನಗದು ಹರಿವಿನ ವಿವರಗಳನ್ನು 'ಐಎನ್‌ಡಿ-ಎಎಸ್7- ನಗದು ಹರಿವಿನ ವಿವರಗಳಲ್ಲಿ' ತಿಳಿಸಿರುವ 'ಪರೋಕ್ಷ ವಿಧಾನ' ದಲ್ಲಿ ಸಿದ್ಧಪಡಿಸಿದೆ ಮತ್ತು ಕಂಪನಿಯ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವನ್ನು ತಿಳಿಸುವುದು. ನಗದು ಹರಿವಿನ ವಿವರಗಳಲ್ಲಿ ತಿಳಿಸಿರುವ ನಗದು ಮತ್ತು ನಗದು ಸಮಾನಗಳು ಕೈಯಲ್ಲಿರುವ ನಗದು ಮತ್ತು ಬ್ಯಾಂಕುಗಳಲ್ಲಿರುವ ಡಿಮ್ಯಾಂಡ್ ಠೇವಣಿಗಳನ್ನು ಒಳಗೊಂಡಿರುವುದು.

#### ಡಿ. ಸಂಬಂಧಪಟ್ಟ ವ್ಯಕ್ತಿಯ ಘೋಷಣೆಗಳು

ಕಂಪನಿಯು ಕರ್ನಾಟಕ ಸರ್ಕಾರದ ಸಂಪೂರ್ಣ ಒಡೆತನಕ್ಕೆ ಒಳಪಟ್ಟ ಸಹಾಯಕ ಕಂಪನಿಯಾಗಿರುವುದು. 'ಐಎನ್‌ಡಿ-ಎಎಸ್24- ಸಂಬಂಧಪಟ್ಟ ವ್ಯಕ್ತಿ ಘೋಷಣೆಯು' ವ್ಯವಹಾರಗಳನ್ನು ಪ್ರಕಟಪಡಿಸುವಿಕೆಯಿಂದ ಕಂಪನಿಗೆ ವಿನಾಯ್ತಿ ನೀಡುವುದು, ಹಾಗಾಗಿ ಸರ್ಕಾರದೊಡನೆ ನಡೆಸುವ ವ್ಯವಹಾರಗಳನ್ನು ಪ್ರಕಟಪಡಿಸುವುದಿಲ್ಲ.

## ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದುದು)

| ಸರ್ಕಾರದ ಹೆಸರು | ಕರ್ನಾಟಕ ಸರ್ಕಾರ |
|---|---|
| ವ್ಯವಹಾರದ ಸ್ವರೂಪ | ಕಂಪನಿಯ ಈಕ್ವಿಟಿ ಷೇರುಗಳಲ್ಲಿ ರೂ.42,73,47,700/- ಮೊತ್ತದ ಹೂಡಿಕೆ |

**ಎ. ಆದಾಯ ಗುರುತಿಸುವಿಕೆ:**

**I. ಮಾರಾಟ, ಕಮಿಷನ್ ಮತ್ತು ಸೇವಾ ಶುಲ್ಕಗಳು:**

ಎ) ಉತ್ಪನ್ನ ಮಾರಾಟದಿಂದ ಬಂದ ಆದಾಯ ಮತ್ತು ಸರಕುಗಳ ಮಾರಾಟಗಳ ಮೇಲಿನ ಕಮಿಷನ್ ಆದಾಯವನ್ನು ರವಾನೆ ಸಮಯದಲ್ಲಿ ಗುರುತಿಸಲಾಗಿದೆ.

ಬಿ) ಸಂಬಂಧಪಟ್ಟ ಸೇವೆಗಳನ್ನು ಮಾಡಿದಾಗ, ಅಥವಾ ಒಪ್ಪಂದವಾದ ಗುರಿಗಳನ್ನು ಸಾಧಿಸಿದಾಗ ಗ್ರಾಹಕರ ಜೊತೆಗಿನ ಗುತ್ತಿಗೆಗಳ ನಿಯಮಗಳ ಅನ್ವಯ ಸೇವಾ ಆದಾಯವನ್ನು ಮಾನ್ಯ ಮಾಡಿದೆ.

ಸಿ) ಫೋರ್‌ಮನ್ಸ್ ಕಮಿಷನ್, ಫೋರ್‌ಮನ್ಸ್ ಶಾಸನಬದ್ಧ ಟಿಕೆಟ್ ಮೇಲಿನ ಲಾಭಾಂಶದ ಆದಾಯ, ತಪ್ಪಿತಸ್ಥ ಅಮೂಲ್ಯವಲ್ಲದ/ಅಮೂಲ್ಯವಾದ ಚಂದಾದಾರರುಗಳಿಂದ ಬಂದ ಬಡ್ಡಿ, ಚಿಟ್‌ಫಂಡ್ ವ್ಯವಹಾರಗಳ ಅಮೂಲ್ಯ ಚಂದಾದಾರರುಗಳಿಂದ ಬಂದ ದಾಖಲೆಗಳ ಸಿದ್ಧತೆ ಶುಲ್ಕಗಳು ಮತ್ತು ಬಾಡಿಗೆದಾರರುಗಳಿಂದ ಬಂದ ದಂಡ ಇವುಗಳು ವಸೂಲಾಗುವುದು ಅನಿಶ್ಚಿತತೆಯಾಗಿರುವ ಪ್ರಯುಕ್ತ, ಅವುಗಳನ್ನು ನಗದು ಆಧಾರದ ಮೇಲೆ ಗುರುತಿಸಲಾಗಿದೆ.

**II ಇತರೆ ಆದಾಯ:**

ಎ) ಹೈರ್‌ಪರ್ಚೇಸ್ ಮಾರಾಟದ ಮೇಲಿನ ಬಡ್ಡಿ ಆದಾಯವನ್ನು ನಗದು ಆಧಾರದ ಮೇಲೆ ಗುರುತಿಸಲಾಗಿದೆ.

ಬಿ) ಉಚ್ಚ ನ್ಯಾಯಾಲಯದ ನಿರ್ದೇಶನಗಳ ಅನ್ವಯ ದಿನಾಂಕ:01.07.1990 ರಿಂದ 13.02.1997ರ ವರೆಗಿನ ಅವಧಿಗೆ ಮದ್ಯ ತಯಾರಕರುಗಳಿಂದ ಬರಬೇಕಿರುವ ಕಮೀಷನ್ ಆದಾಯವನ್ನು ಆ ಕಮೀಷನ್ ಪಾವತಿಯಾದಾಗ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಸಿ) ಬಡ್ಡಿ ಆದಾಯವನ್ನು ಸಂಚಿತ ಆಧಾರದ ಮೇಲೆ ಗುರುತಿಸಲಾಗಿದೆ.

ಡಿ) ಹೂಡಿಕೆಗಳ ಮೇಲಿನ ಲಾಭಾಂಶ ಆದಾಯ ಮತ್ತು ಸಹಾಯಕ ಕಂಪನಿಗಳಿಂದ ಬಂದ ಲಾಭಾಂಶವನ್ನು ಅವುಗಳ ಪಾವತಿಯ ಸ್ವೀಕರಣೆ ಹಕ್ಕನ್ನು ಪ್ರತಿಪಾದಿಸಿದಾಗ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಇ) ವಿಮಾ ಕ್ಲೇಮ್ ಅನ್ನು, ವಿಮಾ ಕಂಪನಿಯಿಂದ ಹಕ್ಕಿನ ಕೇಳಿಕೆಯನ್ನು ಸ್ಥಿರೀಕರಿಸಿದಾಗ ಆದಾಯವೆಂದು ಗುರುತಿಸಲಾಗಿದೆ.

**ಬಿ. ಸ್ವತ್ತು, ಸ್ಥಾವರ ಮತ್ತು ಉಪಕರಣ**

ಸ್ವಾಧೀನ ಬೆಲೆಯಲ್ಲಿ ತಿಳಿಸಿರುವ ಮುಕ್ತ ಹಿಡುವಳಿ ಜಮೀನಿನ ಹೊರತಾಗಿ ಸ್ವತ್ತು, ಸ್ಥಾವರ ಮತ್ತು ಉಪಕರಣವನ್ನು ಸ್ವಾಧೀನ ಅಥವಾ ನಿರ್ಮಾಣದ ವೆಚ್ಚದಲ್ಲಿ, ಸಂಚಯನವಾದ ಸವಕಳಿ ಮತ್ತು ಸಂಚಯನವಾದ ದುರ್ಬಲತೆ ನಷ್ಟ ಯಾವುದಾರೂ ಇದ್ದಲ್ಲಿ ಅದರ ನಿವ್ವಳ ಮೌಲ್ಯದಲ್ಲಿ ತಿಳಿಸಲಾಗಿದೆ.

ಪಿಪಿಇ ವೆಚ್ಚದಲ್ಲಿ ಸಂಬಂಧಪಟ್ಟ ಆಸ್ತಿಗಳ ಪಡೆಯುವಿಕೆ ಮತ್ತು ಸ್ಥಾಪನೆಗೆ ಖರೀದಿ ಬೆಲೆ, ಹಿಂದಿರುಗಿಸಲಾಗದ ಸುಂಕಗಳು ಮತ್ತು ತೆರಿಗೆಗಳು, ಸಾಗಾಣಿಕೆ ಮತ್ತು ಇತರೆ ಪ್ರಾಸಂಗಿಕ ಖರ್ಚುಗಳೂ ಸೇರಿರುವವು.

ಎ) ಗೋಚರಿತ ಸ್ಥಿರಾಸ್ತಿಗಳ ಬೆಲೆಯನ್ನು ಸೆಸ್, ವ್ಯಾಟ್ ಜಮೆ, ಅನುದಾನಗಳು, ಯಾವುದೇ ಇದ್ದಲ್ಲಿ ಅಂತಹ ಸವಕಳಿ ಮತ್ತು ದುರ್ಬಲತೆ ನಷ್ಟದ ನಿವ್ವಳ ಸೇರಿದಂತೆ ಸ್ವಾಧೀನ ಪಡೆದ ಅಥವಾ ನಿರ್ಮಾಣ ಮಾಡಿದ ಸಮಯದಲ್ಲಿ ಇದ್ದಂತೆ ತಿಳಿಸಿದೆ. ಸದರಿ ಬೆಲೆಯಲ್ಲಿ ಆಸ್ತಿಯನ್ನು ಉಪಯೋಗಕ್ಕೆ ಒಳಪಡಿಸುವವರೆಗೆ ಮಾಡಿದ ಖರ್ಚುಗಳೂ ಸಹ ಒಳಗೊಂಡಿರುವುದು.

ಬಿ) ಗುತ್ತಿಗೆ ಮೇಲೆ ಪಡೆದುಕೊಂಡ ಆಸ್ತಿಗಳನ್ನು ಗುತ್ತಿಗೆ ಅವಧಿಯಲ್ಲಿ ಅಮಾರ್ಟೈಸ್ ಮಾಡಿದೆ.

ಸಿ) ಗುತ್ತಿಗೆ ಹಾಗೂ ಮಾರಾಟದ ಮೇಲೆ ಪಡೆದಿರುವ ಜಮೀನಿನ ಸಂಬಂಧದಲ್ಲಿ, ಹಂಚಿಕೆ ಮೊತ್ತವನ್ನು ಯಾವುದೇ ಇದ್ದಲ್ಲಿ ವಾರ್ಷಿಕ ಗುತ್ತಿಗೆ ಬಾಡಿಗೆಯ ಜೊತೆಗೆ ಬಂಡವಾಳೀಕರಿಸಿದೆ.

ಡಿ) ಪ್ರಗತಿಯಲ್ಲಿರುವ ಬಂಡವಾಳ ಕಾರ್ಯವು ಅಭಿವೃದ್ಧಿಯಲ್ಲಿರುವ ಬಂಡವಾಳ ಯೋಜನೆಗಳ ಸಂಬಂಧ ಮಾಡಿರುವ ಖರ್ಚನ್ನು ಪ್ರತಿನಿಧಿಸುವುದು ಮತ್ತು ಅವುಗಳನ್ನು ಮೂಲ ಬೆಲೆಯಲ್ಲಿ ನಮೂದಿಸಲಾಗಿರುವುದು. ಸದರಿ ಬೆಲೆಯಲ್ಲಿ ಸಂಬಂಧಿಸಿದ ಸ್ವಾಧೀನತೆ ಖರ್ಚುಗಳು, ಅಭಿವೃದ್ಧಿ ವೆಚ್ಚಗಳು, ಸಾಲ ಪಡೆದ ಖರ್ಚುಗಳು (ಅನ್ವಯವಾಗುವಡೆಗಳಲ್ಲಿ) ಮತ್ತು ಇತರೆ ಪ್ರತ್ಯಕ್ಷ ಖರ್ಚುಗಳು ಒಳಗೊಂಡಿರುವುದು.

ಇ) ಗುತ್ತಿಗೆಗೆ ಪಡೆದ ಆಸ್ತಿಗಳಲ್ಲಿ ಕಟ್ಟಡ ನಿರ್ಮಾಣದ ವೆಚ್ಚವನ್ನು ಗುತ್ತಿಗೆ ಅವಧಿಯಲ್ಲಿ ಅಮಾರ್ಟೈಸ್ ಮಾಡಿದೆ.

ಎಫ್) ಉಳಿಕೆ ಮೌಲ್ಯವಾಗಿ 5% ಉಳಿಸಿಕೊಳ್ಳುವ ಮೂಲಕ ಸವಕಳಿ ಮಾಡಿರುವ ಪಾನೀಯ ವಿಭಾಗ ಹೊರತಾಗಿ, ಕಚೇರಿ ಉಪಕರಣಗಳ ವಿಚಾರದಲ್ಲಿ ಹೊರತಾಗಿ, ರೂ.1ರ ಉಳಿಕೆ ಮೌಲ್ಯವಾಗಿ ನಾಮ ಮಾತ್ರದ ಮೌಲ್ಯ ಕಾಪಾಡಿಕೊಂಡು ಸ್ಥಿರಾಸ್ತಿಗಳನ್ನು ಪೂರ್ಣವಾಗಿ ಸವಕಳಿ ಮಾಡಿದೆ ಅಥವಾ ಉಳಿಸಿಕೊಂಡಿದೆ.

**ಅಗೋಚರಿತ ಸ್ಥಿರಾಸ್ತಿಗಳು :**

ಎ) ಅಗೋಚರಿತ ಆಸ್ತಿಗಳನ್ನು ಸಂಚಯನವಾದ ಅಮಾರ್ಟೈಜೇಷನ್ ಮತ್ತು ಸಂಚಯನವಾದ ಸಂಭವನೀಯ ನಷ್ಟದ ನಿವ್ವಳದ ಜೊತೆಗೆ ಸ್ವಾಧೀನತೆಯ ಬೆಲೆಯಲ್ಲಿ ತಿಳಿಸಿದೆ.

ತಂತ್ರಾಂಶ/ತಾಂತ್ರಿಕ/ಪರವಾನಗಿಗಳನ್ನು ಮುಂದಿನ ಆರ್ಥಿಕ ಸೌಲಭ್ಯಗಳನ್ನು ಒದಗಿಸಬೇಕಾಗಿರುವ ಸಂದರ್ಭಗಳಲ್ಲಿ ಬಂಡವಾಳೀಕರಣ ಗೊಳಿಸಲಾಗುವುದು.

## ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದುದು)

**ಸಿ) ಸವಕಳಿ ಮತ್ತು ಆಮಾರ್ಟೈಜೇಷನ್:**

ಎ) ಗೋಚರಿತ ಸ್ಥಿರಾಸ್ತಿಗಳ ಸವಕಳಿಯನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಅವಧಿಯ ಅನುಸಾರ ನೇರ ಮಾರ್ಗದ ವಿಧಾನದಲ್ಲಿ ತಿಳಿಸಿದೆ. ತಾಂತ್ರಿಕ ಸಲಹೆಯ ಆಧಾರದ ಮೇಲೆ ಆಸ್ತಿಗಳ ಜೀವಿತಾವಧಿಯನ್ನು ನಿರ್ಧರಣೆ ಮಾಡಿರುವ ಕೆಲವು ಪ್ರವರ್ಗಗಳ ಆಸ್ತಿಗಳ ಸಂಬಂಧದಲ್ಲಿ ಆಸ್ತಿಗಳ ಸ್ವರೂಪ, ಆಸ್ತಿಯ ಅಂದಾಜು ಮಾಡಿದ ಉಪಯುಕ್ತತೆ, ಆಸ್ತಿಯ ಕಾರ್ಯಾಚರಣೆ ಸ್ಥಿತಿಗಳು, ಬದಲಾವಣೆ ಮತ್ತು ನಿರ್ವಹಣೆ ಬೆಂಬಲದ ಹಿಂದಿನ ಮಾಹಿತಿ ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸವಕಳಿ ಲೆಕ್ಕಾಚಾರಕ್ಕೆ ಪರಿಗಣಿಸಿರುವುದನ್ನು ಈ ಕೆಳಗೆ ನೀಡಲಾಗಿದೆ.

| | ಆಸ್ತಿಯ ಪ್ರವರ್ಗ | ಉಪಯುಕ್ತತೆ ಅವಧಿ |
|---|---|---|
| ಎ. | ಅಗ್ನಿಶಾಮಕ ಉಪಕರಣಗಳು | 20 ವರ್ಷಗಳು |
| ಬಿ. | ಮದ್ಯ ಮಾರಾಟ ಮಳಿಗೆಗಳಲ್ಲಿನ ಪೀಠೋಪಕರಣ ಮತ್ತು ಅಳವಡಿಕೆಗಳು | 5 ವರ್ಷಗಳು |
| ಸಿ. | ಪೀಠೋಪಕರಣ ಮತ್ತು ಅಳವಡಿಕೆಗಳು-ಇತರೆ | 10 ವರ್ಷಗಳು |
| ಡಿ. | ನಿರ್ವಹಣೆ ಉಪಕರಣಗಳು | 14 ವರ್ಷಗಳು |
| ಇ. | ತೂಕದ ಯಂತ್ರಗಳು | 14 ವರ್ಷಗಳು |
| ಎಫ್. | ಕಟ್ಟಡ-ಮುಕ್ತ ಹಿಡುವಳಿ | 60 ವರ್ಷಗಳು |
| ಜಿ. | ಕಂಪ್ಯೂಟರ್-ಗೋಚರಿತ<br>-ಅಗೋಚರಿತ | 3 ವರ್ಷಗಳು<br>6 ವರ್ಷಗಳು |
| ಎಚ್. | ಕಚೇರಿ ಉಪಕರಣಗಳು | 5 ವರ್ಷಗಳು |
| ಐ. | ವಿದ್ಯುತ್ ಉಪಕರಣಗಳು | 10 ವರ್ಷಗಳು |
| ಜೆ. | ವಾಹನಗಳು | 8 ವರ್ಷಗಳು |

ಬಿ. ಗುತ್ತಿಗೆ ಮೇಲಿರುವ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡದ ಸವಕಳಿಯನ್ನು, ಅದನ್ನು ಬಳಕೆಗೆ ಒಳಪಡಿಸಿದ ದಿನಾಂಕದಿಂದ ಪ್ರಾರಂಭಿಸಿ ಗುತ್ತಿಗೆಯ ಉಳಿಕೆ ಅವಧಿಯಲ್ಲಿ ತಿಳಿಸಲಾಗಿದೆ.

ಸಿ. ವರ್ಷದ ಅವಧಿಯಲ್ಲಿ ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ ವಿಸರ್ಜನೆ ಮಾಡಿದ ಸ್ಥಿರಾಸ್ತಿಗಳ ಸವಕಳಿಯನ್ನು ಸೇರ್ಪಡೆ ಮಾಡಿದ/ ವಿಲೇವಾರಿ ಮಾಡಿದ/ವಿಸರ್ಜಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಂಡು ದಮಾಷ ಆಧಾರದ ಮೇಲೆ ತಿಳಿಸಲಾಗಿದೆ.

**ಡಿ. ಸಾಲದ ವೆಚ್ಚಗಳು:**

ಸಾಲದ ವೆಚ್ಚದಲ್ಲಿ, ಸಾಲಗಳನ್ನು ಪಡೆಯುವ ಸಂದರ್ಭದಲ್ಲಿ ಮಾಡಿದ ವ್ಯವಸ್ಥೆಗಳ ಸಂಬಂಧ ಆದ ಬಡ್ಡಿ, ಇತರ ವೆಚ್ಚಗಳ ಅಮಾರ್ಟೈಜೇಷನ್ ಮತ್ತು ಬಡ್ಡಿ ವೆಚ್ಚಕ್ಕೆ ಹೊಂದಾಣಿಕೆಯಾಗಿ ಪರಿಗಣಿಸಲಾದ ಪ್ರಮಾಣದವರೆಗೆ ವಿದೇಶಿ ಕರೆನ್ಸಿ ಸಾಲಗಳಿಂದ ಉಂಟಾದ ವಿನಿಮಯ ವ್ಯತ್ಯಾಸಗಳು ಒಳಗೊಂಡಿರುವುದು. ಸಾಲದ ವೆಚ್ಚಗಳನ್ನು ಅವುಗಳು ಮುಂದಿನ ಆರ್ಥಿಕ ಸೌಲಭ್ಯಗಳನ್ನು ನೀಡುವ ಸಾಧ್ಯತೆಗಳುಂಟಾದಾಗ ಅರ್ಹತೆ ಹೊಂದಿದ ಆಸ್ತಿಗಳ ಭಾಗವಾಗಿ ಬಂಡವಾಳೀಕರಿಸಲಾಗುವುದು ಮತ್ತು ವೆಚ್ಚವನ್ನು ವಿಶ್ವಾಸನೀಯವಾಗಿ ಅಳತೆ ಮಾಡಲಾಗುವುದು.

ಇತರೆ ಸಾಲದ ವೆಚ್ಚಗಳನ್ನು ಅವುಗಳು ಉಂಟಾದ ಅವಧಿಯಲ್ಲಿ ಖರ್ಚು ಎಂಬುದಾಗಿ ಗುರುತಿಸಲಾಗಿದೆ ಮತ್ತು ಲಾಭ ಮತ್ತು ನಷ್ಟದ ವಿವರಗಳಿಗೆ ಅದನ್ನು ನಮೂದಿಸಿದೆ.

**ಇ. ಗುತ್ತಿಗೆಗಳು:**

i) **ಕಂಪನಿಯು ಗುತ್ತಿಗೆ ನೀಡಿಕೆದಾರರಾಗಿದ್ದಲ್ಲಿ:**

ಆಸ್ತಿಯ ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಸೌಲಭ್ಯಗಳನ್ನು ಗಣನೀಯವಾಗಿ ಕಂಪನಿ ವರ್ಗಾವಣೆ ಮಾಡಿರುವ ಗುತ್ತಿಗೆಗಳನ್ನು ಹಣಕಾಸಿನ ಗುತ್ತಿಗೆಗಳೆಂದು ವರ್ಗೀಕರಿಸಲಾಗಿದೆ. ಹಣಕಾಸಿನ ಗುತ್ತಿಗೆ ಅಡಿಯಲ್ಲಿ ತಿಳಿಸಿರುವ ಆಸ್ತಿಯನ್ನು ಗುತ್ತಿಗೆಯಲ್ಲಿ ಮಾಡಿರುವ ನಿವ್ವಳ ಹೂಡಿಕೆಗೆ ಸಮನಾದ ಮೊತ್ತದಲ್ಲಿ ಬರಬೇಕಾಗಿರುವುದು ಎಂಬುದಾಗಿ ಗುರುತಿಸಲಾಗಿದೆ. ಪ್ರಾರಂಭಿಕ ಗುರುತಿಸುವಿಕೆಯ ತರುವಾಯ, ಹಣಕಾಸಿನ ಗುತ್ತಿಗೆಯ ಸಂಬಂಧದಲ್ಲಿ ಬಾಕಿ ಉಳಿದಿರುವ ನಿವ್ವಳ ಹೂಡಿಕೆಯ ಮೇಲಿನ ಗಳಿಕೆಯ ಸ್ಥಿರವಾದ ನಿಯತಕಾಲಿಕ ದರವನ್ನು ರೂಪಿಸಲು ಅಸಲು ಮರುಪಾವತಿ ಮತ್ತು ಬಡ್ಡಿ ಆದಾಯದ ನಡುವಿನ ಗುತ್ತಿಗೆ ಬಾಡಿಗೆಗಳನ್ನು ಕಂಪನಿಯು ಹಂಚಿಕೆ ಮಾಡುವುದು. ಬಡ್ಡಿ ಆದಾಯವನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ಮಾನ್ಯ ಮಾಡಿದೆ. ಕಾನೂನು ವೆಚ್ಚಗಳು, ಬ್ರೋಕರೇಜ್ ವೆಚ್ಚಗಳು ಇತ್ಯಾದಿಯಂತಹ ಪ್ರಾರಂಭಿಕ ನೇರ ವೆಚ್ಚವನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ತಕ್ಷಣವೇ ಮಾನ್ಯ ಮಾಡಿದೆ.

ಆಸ್ತಿಯ ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಸೌಲಭ್ಯಗಳನ್ನು ಗಣನೀಯವಾಗಿ ಕಂಪನಿ ವರ್ಗಾವಣೆ ಮಾಡಿರದ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಿದೆ. ಕಾರ್ಯಾಚರಣೆ ಗುತ್ತಿಗೆಗೆ ಒಳಪಟ್ಟ ಆಸ್ತಿಯನ್ನು ಸ್ಥಿರಾಸ್ತಿಗಳಲ್ಲಿ ಸೇರಿಸಲಾಗಿದೆ. ಕಾರ್ಯಾಚರಣೆ ಮೇಲಿನ ಗುತ್ತಿಗೆಯಿಂದ ಬಂದ ಗುತ್ತಿಗೆ ಆದಾಯವನ್ನು ಒಪ್ಪಂದದ ನಿಯಮಗಳ ಅನುಸಾರ ಲಾಭ ಮತ್ತು ನಷ್ಟದ ವಿವರದಲ್ಲಿ ಮಾನ್ಯ ಮಾಡಿದೆ. ಸವಕಳಿ ಸೇರಿದಂತೆ ವೆಚ್ಚಗಳನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ಖರ್ಚು ಎಂಬುದಾಗಿ ಮಾನ್ಯ ಮಾಡಿದೆ. ಪ್ರಾರಂಭಿಕ ನೇರ ವೆಚ್ಚಗಳಾದ ಕಾನೂನು ವೆಚ್ಚಗಳು, ಬ್ರೋಕರೇಜ್ ವೆಚ್ಚಗಳು, ಇತ್ಯಾದಿಯನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ತಕ್ಷಣ ಗುರುತಿಸಲಾಗಿದೆ.

## ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದುದು)

ii) **ಕಂಪನಿಯು ಗುತ್ತಿಗೆ ಪಡೆದಿರುವುದಾಗಿದ್ದಲ್ಲಿ :**

ಗುತ್ತಿಗೆಗೆ ನೀಡಿರುವ ಬಾಬ್ತುಗಳ ಮಾಲೀಕತ್ವಕ್ಕೆ ಸಂಬಂಧಿಸಿದ ಎಲ್ಲಾ ಅಪಾಯಗಳು ಮತ್ತು ಸೌಲಭ್ಯಗಳನ್ನು ಕಂಪನಿಗೆ ಪರಿಣಾಮಕಾರಿಯಾಗಿ ಗಣನೀಯವಾಗಿ ವರ್ಗಾವಣೆ ಮಾಡಿದ ಹಣಕಾಸಿನ ಗುತ್ತಿಗೆಗಳನ್ನು ಗುತ್ತಿಗೆ ಅವಧಿಯ ಪ್ರಾರಂಭದಲ್ಲಿ ಗುತ್ತಿಗೆಗೆ ನೀಡಿದ ಸ್ವತ್ತಿನ ನ್ಯಾಯೋಚಿತ ಮೌಲ್ಯದ ಕಡಿಮೆ ದರದಲ್ಲಿ ಮತ್ತು ಕನಿಷ್ಠ ಗುತ್ತಿಗೆ ಪಾವತಿಗಳ ಪ್ರಸಕ್ತದ ಮೌಲ್ಯದಲ್ಲಿ ಬಂಡವಾಳೀಕರಿಸಿದೆ. ಹೊಣೆಗಾರಿಕೆಯ ಉಳಿಕೆ ಬಾಕಿಯ ಮೇಲಿನ ಸ್ಥಿರವಾದ ಬಡ್ಡಿದರ ರೂಪಿಸಲು ಹಣಕಾಸಿನ ಶುಲ್ಕಗಳು ಮತ್ತು ಗುತ್ತಿಗೆ ಹೊಣೆಗಾರಿಕೆ ಇಳಿಕೆ ನಡುವೆ ಗುತ್ತಿಗೆ ಪಾವತಿಗಳನ್ನು ಹಂಚಿಕೆ ಮಾಡಿದೆ. ಹಣಕಾಸಿನ ಶುಲ್ಕಗಳನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ಹಣಕಾಸಿನ ವೆಚ್ಚ ಎಂಬುದಾಗಿ ಮಾನ್ಯ ಮಾಡಿದೆ. ಗುತ್ತಿಗೆ ನಿರ್ವಹಣೆ ಶುಲ್ಕಗಳು ಕಾನೂನು ಶುಲ್ಕಗಳು, ಮತ್ತು ಗುತ್ತಿಗೆಯ ಇತರೆ ಪ್ರಾರಂಭಿಕ ನೇರ ವೆಚ್ಚಗಳನ್ನು ಬಂಡವಾಳೀಕರಿಸಲಾಗಿದೆ.

ಆಸ್ತಿಯ ಉಪಯುಕ್ತತೆ ಅವಧಿಯಲ್ಲಿ ನೇರ ಮಾರ್ಗದ ಆಧಾರದಲ್ಲಿ ಅಥವಾ ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ತಿಳಿಸಿರುವ ಉಪಯುಕ್ತತೆ ಅವಧಿ ಇದರಲ್ಲಿ ಯಾವುದು ಕಡಿಮೆಯಾಗಿರುವುದೋ ಅದರಂತೆ ಗುತ್ತಿಗೆಗೆ ಪಡೆದಿರುವ ಆಸ್ತಿಯ ಸವಕಳಿ ಮಾಡಿದೆ. ಆದರೂ, ಗುತ್ತಿಗೆ ಅವಧಿಯ ಕೊನೆಯಲ್ಲಿ ಕಂಪನಿಯು ಮಾಲೀಕತ್ವ ಪಡೆಯುವ ಸೂಕ್ತವಾದ ನಿಶ್ಚಿತತೆ ಇಲ್ಲದಿದ್ದಲ್ಲಿ, ಆಸ್ತಿಯ ಅಂದಾಜು ಮಾಡಲಾದ ಉಪಯುಕ್ತತೆ ಅವಧಿ, ಗುತ್ತಿಗೆ ಅವಧಿ ಅಥವಾ ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-II ರಲ್ಲಿ ತಿಳಿಸಿರುವ ಉಪಯುಕ್ತತೆ ಅವಧಿಯಲ್ಲಿ ಯಾವುದು ಕಡಿಮೆಯಾಗಿರುವುದೋ ಅದರ ನೇರ ಮಾರ್ಗದ ಆಧಾರದ ಮೇಲೆ ಬಂಡವಾಳೀಕರಿಸಿದ ಆಸ್ತಿಯ ಸವಕಳಿ ಮಾಡಿದೆ.

ಗುತ್ತಿಗೆ ನೀಡಿರುವವರು, ಗುತ್ತಿಗೆ ನೀಡಿದ ಬಾಬ್ತಿನ ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಸೌಲಭ್ಯಗಳನ್ನು ಗಣನೀಯವಾಗಿ ಪರಿಣಾಮಕಾರಿಯಾಗಿ ಉಳಿಸಿಕೊಂಡಿರುವ ಸಂದರ್ಭಗಳಲ್ಲಿ ಅಂತಹ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಕಾರ್ಯಾಚರಣೆ ಗುತ್ತಿಗೆ ಪಾವತಿಗಳನ್ನು, ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟ 17ರ ಅನುಸಾರ, ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಲಾಭ ಮತ್ತು ನಷ್ಟದ ವಿವರದಲ್ಲಿ ಖರ್ಚು ಎಂಬುದಾಗಿ ಮಾನ್ಯ ಮಾಡಿದೆ.

ರದ್ದುಪಡಿಸಲಾಗದ ಕಾರ್ಯಾಚರಣೆ ಗುತ್ತಿಗೆಗಳ ಸಂಬಂಧ ಕೆಳಕಂಡ ಪ್ರತಿ ಅವಧಿಯ ಮುಂದಿನ ಕನಿಷ್ಠ ಒಟ್ಟು ಗುತ್ತಿಗೆ ಪಾವತಿ ವಿವರ:

| ವಿವರಗಳು | ಮೊತ್ತ ರೂ.ಗಳಲ್ಲಿ |
|---|---|
| 1 ವರ್ಷಕ್ಕಿಂತ ಮೀರದ ಅವಧಿಗೆ | 1,38,061/- |
| 1 ವರ್ಷಕ್ಕಿಂತ ಮೇಲ್ಪಟ್ಟು ಮತ್ತು 5 ವರ್ಷಗಳಿಗಿಂತ ಮೀರದ ಅವಧಿಗೆ | 3,46,133/- |
| 5 ವರ್ಷಗಳಿಗಿಂತ ಮೇಲ್ಪಟ್ಟ ಅವಧಿಗೆ | 53,74,523/- |

**ಎಫ್. ವಿದೇಶಿ ಕರೆನ್ಸಿ ವ್ಯವಹಾರ :**

ವಿದೇಶಿ ಕರೆನ್ಸಿಯಲ್ಲಿನ ವ್ಯವಹಾರಗಳನ್ನು, ಆಯಾ ವ್ಯವಹಾರಗಳ ದಿನಾಂಕದಂದು ಜಾರಿಯಲ್ಲಿದ್ದ ವಿನಿಮಯ ದರಗಳಲ್ಲಿ ದಾಖಲಿಸಲಾಗಿದೆ. ವರ್ಷಾಂತ್ಯದಲ್ಲಿ ಇತ್ಯರ್ಥವಾಗದೆ ಉಳಿದಿದ್ದ ವಿದೇಶಿ ಕರೆನ್ಸಿ ವ್ಯವಹಾರಗಳಿಗೆ ಸಂಬಂಧಿಸಿದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಮುಂದುವರಿದ ವಿದೇಶಿ ವಿನಿಮಯ ಗುತ್ತಿಗೆಗಳ ಅಡಿಯಲ್ಲಿ ಒಳಪಟ್ಟಾಗ ಒಪ್ಪಂದವಾದ ದರಗಳಲ್ಲಿ ಮತ್ತು ಇತರೆ ಪ್ರಕರಣಗಳಲ್ಲಿ ವರ್ಷಾಂತ್ಯದ ದರಗಳಲ್ಲಿ ತಿಳಿಸಿದೆ.

ವರ್ಷದ ಅವಧಿಯಲ್ಲಿನ ವಿದೇಶಿ ಕರೆನ್ಸಿ ವ್ಯವಹಾರಗಳ ಇತ್ಯರ್ಥದ ಸಂದರ್ಭದಲ್ಲಿ ಕಂಡು ಬರುವ ವಿನಿಮಯ ವ್ಯತ್ಯಾಸಗಳನ್ನು ಆದಾಯ ಅಥವಾ ಖರ್ಚುಗಳು ಎಂಬುದಾಗಿ ಮಾನ್ಯ ಮಾಡಿದೆ ಮತ್ತು ಲಾಭ ಮತ್ತು ನಷ್ಟದ ಲೆಕ್ಕಕ್ಕೆ ಹೊಂದಾಣಿಕೆ ಮಾಡಲಾಗಿದೆ.

ಭಾರತೀಯ ರೂಪಾಯಿ (INR) ಕಂಪನಿಯ ವ್ಯವಹಾರದ ಕರೆನ್ಸಿ ಆಗಿರುವುದು. ಕಂಪನಿ ತನ್ನ ಹಣಕಾಸಿನ ವಿವರಗಳನ್ನು ಭಾರತೀಯ ರೂಪಾಯಿಗಳಲ್ಲಿ ನಿರೂಪಿಸುವುದು.

**ಜಿ) ತಪಶೀಲುಗಳು:**

ತಪಶೀಲು ಸರಕುಗಳನ್ನು ಈ ಕೆಳಕಂಡಂತೆ ಮೌಲ್ಯಾಂಕಣ ಮಾಡಿದೆ:

ಕಚ್ಚಾ ಸಾಮಗ್ರಿಗಳು, ರವಾನೆಯಲ್ಲಿನ ದಾಸ್ತಾನು, ವ್ಯಾಪಾರಿ ಸರಕುಗಳು ಮತ್ತು ಸಿದ್ಧಪಡಿಸಿದ ಸರಕುಗಳನ್ನು (ಮಾರಾಟ ಮಾಡಬಹುದಾದ ಅಥವಾ ವಿಲೇವಾರಿ ಮಾಡಬಹುದಾದ ಅನುಪಯುಕ್ತ ದಾಸ್ತಾನು ಹೊರತಾಗಿ) ಅದರ ಬೆಲೆಯ ಕಡಿಮೆ ದರದಲ್ಲಿ ಅಥವಾ ನಗದೀಕರಿಸಬಹುದಾದ ನಿವ್ವಳ ಮೌಲ್ಯದಲ್ಲಿ ಮೌಲ್ಯಂಕಣ ಮಾಡಿದೆ. ಮಾರಾಟ ಮಾಡಬಹುದಾದ/ವಿಲೇವಾರಿ ಮಾಡಬಹುದಾದ ಅನುಪಯುಕ್ತ ಸಾಮಗ್ರಿಯ ದಾಸ್ತಾನನ್ನು ಅಂದಾಜು ಮಾಡಿದ ದೊರಕಬಹುದಾದ ನಿವ್ವಳ ಮೌಲ್ಯದಲ್ಲಿ ಮೌಲ್ಯಾಂಕಣ ಮಾಡಿದೆ. ಕಾಗದದ ವಿಭಾಗದ ಸಂಬಂಧದಲ್ಲಿ ದರವನ್ನು ತೂಕದ ಸರಾಸರಿ ಆಧಾರದ ಮೇಲೆ ನಿರ್ಧರಣೆ ಮಾಡಿದೆ. ಪಾನೀಯಗಳು/ಫಾರ್ಮ ವಿಭಾಗದ ಸಂಬಂಧದಲ್ಲಿ ದರವನ್ನು ಮೊದಲ ಆಗಮನ ಮೊದಲ ನಿರ್ಗಮನ (FIFO) ಆಧಾರದ ಮೇಲೆ ನಿರ್ಧರಣೆ ಮಾಡಿದೆ. ಉಪ ಉತ್ಪನ್ನಗಳು ಮತ್ತು ಹಾನಿಗೊಳಗಾಗಿರುವ ದಾಸ್ತಾನು ಸರಕುಗಳನ್ನು ತೂಕದ ಸರಾಸರಿ ಬೆಲೆಯ ಕಡಿಮೆ ದರದಲ್ಲಿ ಅಥವಾ ಅಂದಾಜು ಮಾಡಿದ ಲಭ್ಯವಾಗಬಹುದಾದ ಮೌಲ್ಯದಲ್ಲಿ ಮೌಲ್ಯಾಂಕಣ ಮಾಡಿದೆ.

ಪರಿವರ್ತನೆಕಾರರಿಗೆ ನೀಡಿರುವ ಕಚ್ಚಾ ಸಾಮಗ್ರಿಗಳು ಮತ್ತು ಬಳಕೆ ಸಾಮಗ್ರಿಗಳನ್ನು ಪರಿವರ್ತನೆಗಾರರಿಂದ ನೋಟ್ ಪುಸ್ತಕಗಳನ್ನು ಪಡೆದ ಸಮಯದಲ್ಲಿ ಸಿದ್ಧಪಡಿಸಿದ ಸರಕುಗಳು ಎಂಬುದಾಗಿ ಮಾತ್ರ ಪರಿಗಣಿಸಲಾಗಿದೆ. ಮದ್ಯದ ದಾಸ್ತಾನಿನ ಮೌಲ್ಯ ನಿರ್ಣಯಕ್ಕೆ ಸಾಗಾಣಿಕೆ ಆಗಮನ ಸರಕನ್ನು ಪರಿಗಣಿಸಿರುವುದಿಲ್ಲ.

**ಹೆಚ್) ಹೂಡಿಕೆಗಳು:**

ಎ. ಚಾಲ್ತಿ ಹೂಡಿಕೆಗಳನ್ನು, ಬೇರೆ ಬೇರೆ ಹೂಡಿಕೆಗಳ ಆಧಾರದ ಮೇಲೆ ಅವುಗಳ ಬೆಲೆಯ ಕಡಿಮೆ ಹಂತದಲ್ಲಿ ಅಥವಾ ನ್ಯಾಯೋಚಿತ ಮೌಲ್ಯದಲ್ಲಿ ನಿರ್ಧರಣೆ ಮಾಡಿದೆ ಮತ್ತು ಅದರಂತೆ ನಿರ್ವಹಣೆ ಮಾಡಿದೆ. ದೀರ್ಘಾವಧಿ ಹೂಡಿಕೆಗಳನ್ನು ಅವುಗಳ ಬೆಲೆಯಲ್ಲಿ ನಿರ್ಧರಣೆ ಮಾಡಿದೆ. ಮೌಲ್ಯದಲ್ಲಿ ಯಾವುದೇ ಖಾಯಂ ಕ್ಷೀಣತೆ ಇದ್ದಲ್ಲಿ, ಅದನ್ನು ಬೇರೆ ಬೇರೆ ಹೂಡಿಕೆಯ ಆಧಾರದ ಮೇಲೆ ತಿಳಿಸಲಾಗಿದೆ. ಯಾವುದೇ ಅಂತಹ ಖಾಯಂ ಕ್ಷೀಣತೆ ಇದ್ದಲ್ಲಿ ಅದನ್ನು ಅದರ ಮಾರುಕಟ್ಟೆ ಮೌಲ್ಯದ ಬಗ್ಗೆ ಗಮನಹರಿಸಿ ತಿಳಿದುಕೊಳ್ಳಲಾಗಿದೆ.

**ಬಿ. ವ್ಯವಸ್ಥೆಯ ಉದ್ದೇಶಕ್ಕಾಗಿ:-**

i) ಈಕ್ವಿಟಿ ಷೇರುಗಳಲ್ಲಿ ಮಾಡಿರುವ ಹೂಡಿಕೆಗಳ ಸಂಬಂಧದಲ್ಲಿ, ಚಾಲ್ತಿ ದರಪಟ್ಟಿ ಲಭ್ಯವಿರುವೆಡೆಯಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ನ ವ್ಯಾಪಾರಗಳು/ಬಂದರುಗಳಲ್ಲಿ ವರ್ಷಾಂತ್ಯದಲ್ಲಿ ದೊರೆಯುವ ಮೂಲ ಪತ್ರದ ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಮಾರುಕಟ್ಟೆ ಮೌಲ್ಯದ ಅನ್ವಯ ಮೌಲ್ಯ ನಿರ್ಣಯ ಮಾಡಿದೆ.

ii) ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಚಾಲ್ತಿ ದರಪಟ್ಟಿಗಳು ಲಭ್ಯವಿಲ್ಲದ ಅಥವಾ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಷೇರುಗಳನ್ನು ನಮೂದಿಸಿರದ ಷೇರುಗಳ ಸಂಬಂಧದಲ್ಲಿ, ಮೂಲ ಬೆಲೆಯಲ್ಲಿ ಮೌಲ್ಯ ನಿರ್ಣಯ ಮಾಡಿದ ಸಹಾಯಕ ಕಂಪನಿಗಳಲ್ಲಿ ಮಾಡಿದ ಹೂಡಿಕೆಗಳ ಹೊರತಾಗಿ, ಇತ್ತೀಚಿನ ದೊರೆಯತಕ್ಕ ಸ್ಥಿತಿ ವಿವರಣಾ ಪಟ್ಟಿ ಅನ್ವಯ ವಿಭಜನೆ ಮೌಲ್ಯದಲ್ಲಿ ಅವುಗಳ ಮೌಲ್ಯ ನಿರ್ಣಯ ಮಾಡಿದೆ.

**ಐ. ನೌಕರರ ಸೌಲಭ್ಯಗಳು :**

**ಎ) ಅಲ್ಪಾವಧಿ ನೌಕರರ ಸೌಲಭ್ಯಗಳು:**

ಸೇವೆ ಸಲ್ಲಿಸಿದ ಹನ್ನೆರಡು ತಿಂಗಳುಗಳ ಒಳಗೆ ಸಮಗ್ರವಾಗಿ ನೀಡಬೇಕಾಗಿ ಬರುವ ಎಲ್ಲಾ ನೌಕರರ ಸೌಲಭ್ಯಗಳನ್ನು ಅಲ್ಪಾವಧಿ ನೌಕರರ ಸೌಲಭ್ಯಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಸಂಬಳಗಳು, ವೇತನಗಳು, ಅಂದಾಜು ಮಾಡಲಾದ ಬೋನಸ್, ಎಕ್ಸ್-ಗ್ರೇಷ ಮತ್ತು ಅಲ್ಪಾವಧಿ ಪರಿಹಾರಿತ ಗೈರುಹಾಜರಿಗಳಂತಹ ಸೌಲಭ್ಯಗಳನ್ನು, ಸಂಬಂಧಿಸಿದ ನೌಕರನು ಸಲ್ಲಿಸಿದ ಸಂಬಂಧಪಟ್ಟ ಸೇವೆಯ ಅವಧಿಯಲ್ಲಿ ಗುರುತಿಸಿದೆ.

**ಬಿ) ಪ್ರತಿಪಾದಿತ ಸೌಲಭ್ಯ ಯೋಜನೆ:**

i. **ಗ್ರ್ಯಾಚ್ಯುಟಿ :**

ಗ್ರ್ಯಾಚ್ಯುಟಿ ಸಂಬಂಧಿತ ಹೊಣೆಗಾರಿಕೆಯು ನಿರೂಪಿತ ಸೌಲಭ್ಯ ಯೋಜನೆಯಾಗಿರುವುದು. ಇದನ್ನು ಪ್ರತಿಯೊಂದು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಲ್ಲಿ ವಿಮಾಗಣನ ಮೌಲ್ಯಮಾಪನದಿಂದ ನಿರ್ಧರಣೆ ಮಾಡಲಾಗುತ್ತದೆ. ವಿಮಾಗಣನ ಲಾಭ/ನಷ್ಟಗಳನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ನಮೂದಿಸಲಾಗಿದೆ. ಜೀವ ವಿಮಾ ನಿಗಮ ನಿರ್ವಹಣೆ ಮಾಡುತ್ತಿರುವ ಎಂಎಸ್ಐಎಲ್ ನೌಕರರ ಗ್ರ್ಯಾಚ್ಯುಟಿ ನಿಧಿ ಟ್ರಸ್ಟ್‌ಗೆ ಕಂಪನಿ ವಂತಿಕೆ ನೀಡುವುದು.

ii. **ಪರಿಹಾರಿತ ಗೈರು ಹಾಜರಿಗಳು :**

ರಜೆ ಅರ್ಹತೆ ಸೌಲಭ್ಯಗಳ ಬಗ್ಗೆ ಕಂಪನಿಯ ಹೊಣೆಗಾರಿಕೆಯನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ವಿಮಾಗಣನ ಮೌಲ್ಯಮಾಪನ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ. ವಿಮಾಗಣನ ನಷ್ಟ/ಲಾಭವನ್ನು ಲಾಭ ಮತ್ತು ನಷ್ಟದ ವಿವರಗಳಿಗೆ ಸೇರಿಸಲಾಗಿದೆ.

iii. **ಮರಣ ಪರಿಹಾರ ನಿಧಿ :**

ಮರಣ ಪರಿಹಾರ ನಿಧಿಯ ಬಗ್ಗೆ ಕಂಪನಿ ಹೊಂದಿರುವ ಹೊಣೆಗಾರಿಕೆಯನ್ನು ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿದ್ದಂತೆ ವಿಮಾಗಣನ ಮೌಲ್ಯ ಮಾಪನದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ. ಮೌಲ್ಯಮಾಪನವನ್ನು ಕಂಪನಿಯ ನೀತಿಯ ಆಧಾರದ ಮೇಲೆ ಮಾಡಲಾಗಿದೆ.

**ಸಿ. ನಿರೂಪಿತ ವಂತಿಗೆ ಯೋಜನೆ:**

ಕಂಪನಿಯ ನಿರೂಪಿತ ವಂತಿಗೆ ಯೋಜನೆಗಳು–ನೌಕರರ ಭವಿಷ್ಯನಿಧಿ (ನೌಕರರ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಕಾಯ್ದೆ, 1952ರ ವ್ಯವಸ್ಥೆಯ ಅನ್ವಯ) ಮತ್ತು ಇಎಸ್ಐ (ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1948ರ ಉಪಬಂಧಗಳ ಅನ್ವಯ) ಆಗಿರುತ್ತವೆ. ಇವುಗಳಿಗೆ ಕಂಪನಿಯ ವಂತಿಗೆಗಳನ್ನು ನೀಡುವುದರ ಹೊರತಾಗಿ ಕಂಪನಿಯು ಯಾವುದೇ ಹೆಚ್ಚಿನ ಹೊಣೆಗಾರಿಕೆಗಳನ್ನು ಹೊಂದಿರುವುದಿಲ್ಲ. ಭವಿಷ್ಯನಿಧಿ ಮತ್ತು ಇಎಸ್ಐಗೆ ಕಂಪನಿಯ ವಂತಿಗೆಯನ್ನು ನಿಗದಿಪಡಿಸಿದ ದರಗಳಲ್ಲಿ ವಂತಿಗೆಯನ್ನು ನಿಗದಿಪಡಿಸಿದ ದರಗಳಲ್ಲಿ ಪಾವತಿ ಮಾಡಿದೆ ಮತ್ತು ಅದನ್ನು ಲಾಭ ಮತ್ತು ನಷ್ಟದ ವಿವರಗಳಲ್ಲಿ ತಿಳಿಸಿದೆ.

## ಜೆ. ಸರ್ಕಾರದ ಅನುದಾನಗಳು :

## ಸರ್ಕಾರದ ಅನುದಾನಗಳ ಲೆಕ್ಕ ನಿರ್ವಹಣೆ ಮತ್ತು ಪ್ರಕಟಣೆ :

### ಎ) ಬಂಡವಾಳ ಅನುದಾನ:

ಸರ್ಕಾರದ ಅನುದಾನಗಳ ಸಂಬಂಧದ ಸವಕಳಿಯಾಗುವ ಆಸ್ತಿಗಳ ವಿಚಾರದಲ್ಲಿ, ಇದು ಹಣ ನೀಡಿಕೆ ಸಾಧನವನ್ನು ಮಾತ್ರ ಹೊಂದಿದ್ದು ಮರು ಪಾವತಿ ವ್ಯವಸ್ಥೆ ಹೊಂದಿರದ ಪ್ರಯುಕ್ತ ಕಂಪನಿಯು ಬಂಡವಾಳ ಮಾರ್ಗವನ್ನು ಅನುಸರಿಸಿದೆ. ಅನುದಾನವನ್ನು ಲಾಭ ಮತ್ತು ನಷ್ಟದ ಹೊರಗೆ ಗುರುತಿಸಲಾಗಿದೆ. ಪಡೆದ/ಪಡೆಯಬಹುದಾಗಿರುವ ಅನುದಾನದ ಮೊತ್ತವನ್ನು ಗಣನೆ ಮಾಡಿದ್ದು, ಇದು ಸ್ಥಿತಿ ವಿವರಣಾ ಪಟ್ಟಿಯ ಪಿಪಿಇ ಆಸ್ತಿ ಭಾಗದ ಅಂಗವಾಗಿರುವುದು. ಇದರ ಸಮನಾದ ಅನುದಾನದ ಮೊತ್ತವನ್ನು ಸ್ಥಿತಿ ವಿವರಣಾ ಪಟ್ಟಿಯ ಹೊಣೆಗಾರಿಕೆ ಭಾಗದಲ್ಲಿ ಮುಂದೂಡಿದ ಅನುದಾನದ ಮೀಸಲು ಎಂಬುದಾಗಿ ಗುರುತಿಸಲಾಗಿದೆ ಮತ್ತು ಲೆಕ್ಕ ನಿರ್ವಹಣೆ ನೀತಿಯ ಕಲಂ ನಂ.ಜಿ ರಲ್ಲಿ ತಿಳಿಸಿರುವಂತೆ ಆಸ್ತಿಗಳ ಉಪಯುಕ್ತತೆ ಅವಧಿಯಲ್ಲಿ ಅಮಾರ್ಟೈಸ್ ಮಾಡಿದೆ. ಈ ವಿಧಾನವು ಐಎನ್‌ಡಿ ಎಎಸ್ 20 ರ ಅನ್ವಯ ಇರುವುದು.

### ಬಿ) ರೆವಿನ್ಯೂ ಅನುದಾನ:

ಆದಾಯಕ್ಕೆ ಸಂಬಂಧಪಟ್ಟ ಅನುದಾನವನ್ನು, ಅದು ಹಣಕಾಸಿನ ಅಥವಾ ಹಣಕಾಸಿನದಲ್ಲದ ರೂಪದ ಅನುದಾನ ಆಗಿದ್ದರೂ ಅದನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಇತರೆ ಆದಾಯವಾಗಿ ಗುರುತಿಸಲಾಗಿದೆ ಮತ್ತು ಇದಕ್ಕೆ ಸಮನಾದ ಮೊತ್ತವನ್ನು ಖರ್ಚು ಎಂಬುದಾಗಿ ಪರಿಗಣಿಸಲಾಗಿದೆ. ಇಂತಹ ಅನುದಾನಕ್ಕೆ ಸಂಬಂಧಿಸಿದಂತೆ ನಗದಾದ ಮೊತ್ತವನ್ನು ತಾಳೆ ಮಾಡುವುದಕ್ಕಾಗಿ ಅದನ್ನು ಆದಾಯವೆಂದು ಲೆಕ್ಕ ಮಾಡಿದೆ ಮತ್ತು ಐಎನ್‌ಡಿ ಎಎಸ್20 ರಲ್ಲಿ ತಿಳಿಸಿರುವಂತೆ ಈಕ್ವಿಟಿಗೆ ನೇರವಾಗಿ ಜಮೆ ಮಾಡಿರುವುದಿಲ್ಲ.

## ಕೆ. ಆದಾಯದ ಮೇಲಿನ ತೆರಿಗೆಗಳು :

ಚಾಲ್ತಿ ತೆರಿಗೆಗಳ ವ್ಯವಸ್ಥೆಯನ್ನು ಆದಾಯ ತೆರಿಗೆ ಕಾಯ್ದೆ, 1961ರ ಉಪಬಂಧಗಳ ಅನುಸಾರ ಮಾಡಿದೆ. ಮುಂದೂಡಿದ ತೆರಿಗೆ ಖರ್ಚು ಅಥವಾ ಲಾಭವನ್ನು ಒಂದು ಅವಧಿಯಲ್ಲಿ ಗೋಚರವಾದ ಮತ್ತು ಮುಂದಿನ ಒಂದು ಅಥವಾ ಹೆಚ್ಚು ಅವಧಿಯಲ್ಲಿ ವ್ಯತಿರಿಕ್ತವಾಗಬಹುದಾದ ತೆರಿಗೆ ವಿಧಿಸಬಹುದಾದ ಆದಾಯ ಮತ್ತು ಲೆಕ್ಕ ಮಾಡಿದ ಆದಾಯದ ನಡುವಿನ ವ್ಯತ್ಯಾಸವನ್ನಾಗಿ ಸಮಯದ ವ್ಯತ್ಯಾಸದಲ್ಲಿ ಮಾನ್ಯ ಮಾಡಿದೆ. ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ರೂಪಿಸಲಾಗಿರುವ ಅಥವಾ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ತದನಂತರ ರೂಪಿಸಿದ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಉಪಯೋಗಿಸಿ ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಮಾಪನ ಮಾಡಲಾಗಿದೆ.

ಮುಂದೂಡಿದ ತೆರಿಗೆ ಆಸ್ತಿಗಳ ವಾಹಕ ಮೊತ್ತವನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ಪುನರ್ ಪರಿಶೀಲನೆ ಮಾಡಲಾಗಿದೆ. ಕಂಪನಿಯು ಮುಂದೂಡಿದ ತೆರಿಗೆ ಆಸ್ತಿಯ ವಾಹಕ ಮೊತ್ತವನ್ನು ಅದು ಸಕಾರಣವಾಗಿ ಅಥವಾ ಸಾಧಾರಣವಾಗಿ ಖಚಿತವಾಗದಿರುವ ಮಟ್ಟಕ್ಕೆ ಅದನ್ನು ದಾಖಲಿಸುತ್ತದೆ. ಮುಂದೂಡಿದ ತೆರಿಗೆ ಆಸ್ತಿಯ ಸಂಬಂಧ ಸಾಕಷ್ಟು ಪ್ರಮಾಣದ ಮುಂದಿನ ತೆರಿಗೆ ವಿಧಿಸಬಹುದಾದ ಆದಾಯ ಲಭ್ಯವಾಗುವವರೆಗೆ ಮತ್ತು ಮುಂದೂಡಿದ ತೆರಿಗೆ ಪಾವತಿಸಲು ಸಾಧ್ಯವಾಗುವವರೆಗೆ ಹಾಗೆಯೇ ಮುಂದುವರಿಸಲಾಗಿದೆ. ಮುಂದೆ ತೆರಿಗೆ ವಿಧಿಸಬಹುದಾದ ಆದಾಯ ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಕ್ಕೆ ಒಳಪಟ್ಟು ಅಂತಹ ಯಾವುದೇ ದಾಖಲಿಸಿರುವಿಕೆಯನ್ನು ಅದು ಸಕಾರಣವಾಗಿ ಖಂಡಿತವಾಗಿರುವಿಕೆ ಅಥವಾ ವಾಸ್ತವಿಕ ಖಂಡಿತವಾಗಿರುವ ಪ್ರಮಾಣದವರೆಗೆ ಪರಿವರ್ತಿಸಲಾಗಿದೆ.

## ಎಲ್. ಷೇರು ಒಂದರ ಗಳಿಕೆಗಳು:

ಷೇರು ಒಂದರ ಮೂಲ ಗಳಿಕೆಗಳನ್ನು, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಗೆ (ಪ್ರಿಫರೆನ್ಸ್ ಲಾಭಾಂಶಗಳನ್ನು ಮತ್ತು ಯಾವುದೇ ಅನ್ವಯಿಸಬಹುದಾದ ತೆರಿಗೆಗಳನ್ನು ಮುರಿದುಕೊಂಡ ನಂತರ) ನಿವ್ವಳ ಲಾಭ ಅಥವಾ ನಷ್ಟವನ್ನು, ಆ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಭಾಗಿಸಿ ಲೆಕ್ಕಾಚಾರ ಮಾಡಲಾಗಿದೆ. ಭಾಗಶಃ ಪಾವತಿ ಮಾಡಿದ ಈಕ್ವಿಟಿ ಷೇರುಗಳನ್ನು (ಯಾವುದೇ ಇದ್ದಲ್ಲಿ) ವರದಿಗಾರಿಕೆಯ ಅವಧಿಯಲ್ಲಿ ಪೂರ್ಣ ಪಾವತಿ ಮಾಡಿದ ಈಕ್ವಿಟಿ ಷೇರಿಗೆ ಸಂಬಂಧಿಸಿದ ಲಾಭಾಂಶದಲ್ಲಿ ಭಾಗವಹಿಸಲು ಅರ್ಹವಾಗಿರುವ ಪ್ರಮಾಣದವರೆಗೆ ಈಕ್ವಿಟಿ ಷೇರು ಒಂದರ ಭಾಗವೆಂಬುದಾಗಿ ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಬೋನಸ್ ನೀಡಿಕೆಗೆ; ಹಾಲಿಯಿರುವ ಷೇರುದಾರರುಗಳಿಗೆ ಹಕ್ಕುಗಳ ನೀಡಿಕೆಯಲ್ಲಿನ ಬೋನಸ್ ಅಂಶಕ್ಕೆ; ಷೇರು ವಿಭಜನೆಗೆ; ಮತ್ತು ಯಾವುದೇ ಇದ್ದಲ್ಲಿ ಆ ಷೇರುಗಳ ಸಂಯೋಜನೆಗೆ ಹೊಂದಾಣಿಕೆ ಮಾಡಲಾಗಿದೆ.

ಷೇರು ಒಂದರ ಕ್ಷೀಣಿಸಿದ ಗಳಿಕೆಗಳನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಯ ನಿವ್ವಳ ಲಾಭ ಅಥವಾ ನಷ್ಟವನ್ನು ಮತ್ತು ಈ ಅವಧಿಯಲ್ಲಿ ಬಾಕಿಯಿರುವ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಎಲ್ಲಾ ಕ್ಷೀಣಿಸುವ ಈಕ್ವಿಟಿ ಷೇರುಗಳಿಗೆ ಹೊಂದಾಣಿಕೆ ಮಾಡಿದೆ.

## ಎಂ. ಆಸ್ತಿಗಳ ಕುಗ್ಗುವಿಕೆ :

ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಆಸ್ತಿಗಳ ವಾಹಕ ಮೊತ್ತವನ್ನು, ಆಸ್ತಿಗಳ ಮೌಲ್ಯದಲ್ಲಿನ ಸಾಮರ್ಥ್ಯ ಕುಗ್ಗುವಿಕೆ ನಷ್ಟದ ಯಾವುದೇ ಸೂಚನೆ ಇರುವುದೇ ಎಂಬುದನ್ನು ತಿಳಿಯಲು ಆಸ್ತಿಗಳ ವಾಹಕ ಮೊತ್ತವನ್ನು ನಿರ್ಧರಣೆ ಮಾಡಲಾಗಿದೆ. ಆಸ್ತಿಗಳ ವಾಹಕ

ಮೊತ್ತವು ಅದರ ವಸೂಲಾಗುವ ಮೊತ್ತಕ್ಕಿಂತ ಹೆಚ್ಚಿದ್ದಾಗ ಕುಗ್ಗಿಕೆ ನಷ್ಟವನ್ನು ಗುರುತಿಸಿದೆ. ಕುಗ್ಗುವಿಕೆ ನಷ್ಟದ ಹಿಂದಿರುಗಿಸುವಿಕೆಯನ್ನು ಲಾಭ ಮತ್ತು ನಷ್ಟದ ವಿವರದಲ್ಲಿ ಆದಾಯ ಎಂಬುದಾಗಿ ತಕ್ಷಣ ಗುರುತಿಸಲಾಗಿದೆ. ಕುಗ್ಗುವಿಕೆ ಗುರುತಿಸಿದ ನಂತರ ಆ ಆಸ್ತಿಯ ಉಪಯುಕ್ತತೆಯ ಉಳಿಕೆ ಅವಧಿಯಲ್ಲಿ ಪರಿಷ್ಕೃತ ವಾಹಕ ಮೊತ್ತದಲ್ಲಿ ಸವಕಳಿ ತಿಳಿಸಿದೆ.

**ಎನ್.ಮುನ್ನೇರ್ಪಾಡುಗಳು/ಸಂಭಾವ್ಯತೆಗಳು :**

ಹಿಂದಿನ ಘಟನಾವಳಿಗಳ ಕಾರಣದಿಂದ ಉಂಟಾಗಿರುವ ಪ್ರಸಕ್ತದ ಹೊಣೆಗಾರಿಕೆಯನ್ನು ಸಂಸ್ಥೆಯೊಂದು ಹೊಂದಿದ್ದಲ್ಲಿ ಆಗ ಮುನ್ನೇರ್ಪಾಡುಗಳನ್ನು ಮಾನ್ಯ ಮಾಡಿದೆ. ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ಹೊರಹರಿಯುವಿಕೆ ಅಗತ್ಯವಾಗಿರುತ್ತದೆ. ಈ ಸಂಬಂಧದಲ್ಲಿ ವಿಶ್ವಾಸನೀಯ ಅಂದಾಜು ಮಾಡಬಹುದು. ಎಎಸ್ 29ರ ಅನ್ವಯ ಮಾಡಿರುವ ಮುನ್ನೇರ್ಪಾಡುಗಳನ್ನು ಅದರ ಪ್ರಸಕ್ತ ಮೌಲ್ಯಕ್ಕೆ ಕಡಿಮೆ ಮಾಡಿರುವುದಿಲ್ಲ ಮತ್ತು ಸ್ಥಿತಿ ವಿವರಣಾ ಪಟ್ಟಿ ದಿನಾಂಕದಂದು ಇದ್ದ ಹೊಣೆಗಾರಿಕೆ ಇತ್ಯರ್ಥಪಡಿಸಲು ಅಗತ್ಯವಾದ ಉತ್ತಮ ಅಂದಾಜಿನ ಮೇಲೆ ಮುನ್ನೇರ್ಪಾಡುಗಳನ್ನು ನಿರ್ಧಾರಣೆ ಮಾಡಲಾಗಿದೆ. ಇವುಗಳನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ಮರು ಪರಿಶೀಲನೆ ಮಾಡಿದೆ ಮತ್ತು ಚಾಲ್ತಿ ಅತ್ಯುತ್ತಮ ಅಂದಾಜುಗಳನ್ನು ಪಡೆಯಲು ಹೊಂದಾಣಿಕೆ ಮಾಡಲಾಗಿದೆ.

ಸಂಪನ್ಮೂಲಗಳ ಹೊರಹರಿವಿನ ಸಾಧ್ಯತೆಯಿರುವ, ಆದರೆ ಹಾಗೆ ಆಗದಿರುವ ಸಾಧ್ಯತೆಯ ಹೊಣೆಗಾರಿಕೆ ಅಥವಾ ಪ್ರಸಕ್ತದ ಹೊಣೆಗಾರಿಕೆ ಇದ್ದ ಪಕ್ಷದಲ್ಲಿ, ಅವುಗಳ ಬಗ್ಗೆ ಸಂಭಾವ್ಯ ಹೊಣೆಗಾರಿಕೆ ರೂಪದಲ್ಲಿ ಮಾಹಿತಿ ನೀಡಲಾಗಿದೆ. ಸಂಭಾವ್ಯ ಸ್ವತ್ತುಗಳನ್ನು ಹಣಕಾಸಿನ ಹೇಳಿಕೆಯಲ್ಲಿ ಮಾನ್ಯ ಮಾಡಿರುವುದಿಲ್ಲ.

**ಒ. ಐಎನ್‌ಡಿ-ಎಎಸ್‌ಗೆ ಬದಲಾವಣೆ**

**ಐಎನ್‌ಡಿ-ಎಎಸ್‌ನ ಮೊದಲ ಬಾರಿಯ ಅಳವಡಿಕೆ :**

ಕಂಪನಿಯ ಈ ಹಣಕಾಸಿನ ವಿವರಗಳನ್ನು ಐಎನ್‌ಡಿ ಎಎಸ್ ಅನುಸಾರ ಸಿದ್ಧಪಡಿಸಲಾಗಿದೆ. ಐಎನ್‌ಡಿ ಎಎಸ್‌ಗೆ ಬದಲಾವಣೆಯಾಗುವ ಉದ್ದೇಶಕ್ಕಾಗಿ, ಕಂಪನಿಯು ಐಎನ್‌ಡಿ–ಎಎಸ್ 101–ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಮೊದಲಬಾರಿಯ ಅಳವಡಿಕೆಯಲ್ಲಿ ನಿಗದಿಪಡಿಸಿರುವ ಮಾರ್ಗದರ್ಶನವನ್ನು ಕಂಪನಿ ಅನುಸರಿಸಿದೆ. 1ನೇ ಏಪ್ರಿಲ್ 2015 ಬದಲಾವಣೆ ದಿನಾಂಕವಾಗಿದೆ.

## ಟಿಪ್ಪಣಿ-2

## ಸ್ವತ್ತು, ಸ್ಥಾವರ ಮತ್ತು ಉಪಕರಣ ಹಾಗೂ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| **ಕೆಳಕಂಡವುಗಳ ವಾಹಕ ಮೊತ್ತಗಳು:** | | | |
| ಮುಕ್ತ ಹಿಡುವಳಿ ಜಮೀನು | 7,248,812 | 7,248,812 | 7,248,812 |
| ಗುತ್ತಿಗೆ ಹಿಡುವಳಿ ಜಮೀನು | 12,249,058 | 12,249,058 | 10,534,547 |
| ಕಟ್ಟಡ-ಮುಕ್ತ ಹಿಡುವಳಿ | 171,988,941 | 175,504,787 | 178,257,253 |
| ಕಟ್ಟಡ-ಗುತ್ತಿಗೆ ಹಿಡುವಳಿ | 262,927,736 | 3,604,352 | 3,753,220 |
| ನಿರ್ವಹಣೆ ಉಪಕರಣ | 25,633 | 31,638 | 108,333 |
| ವಿದ್ಯುತ್ ಉಪಕರಣ | 100,402,358 | 18,391,525 | 17,786,763 |
| ಕಂಪ್ಯೂಟರ್‌ಗಳು | 4,640,617 | 4,227,164 | 3,156,314 |
| ಪೀಠೋಪಕರಣ ಮತ್ತು ಅಳವಡಿಕೆಗಳು | 79,029,199 | 12,730,050 | 17,980,769 |
| ವಾಹನಗಳು | 14,959,750 | 5,544,622 | 3,043,524 |
| ಗುತ್ತಿಗೆಗೆ ನೀಡಿದ ಆಸ್ತಿಗಳು | 92 | 92 | 92 |
| ಕಚೇರಿ ಉಪಕರಣಗಳು | 39,563,272 | 39,059,249 | 3,438,167 |
| ಅನುದಾನದ ಆಸ್ತಿಗಳು | 196 | 197 | 197 |
| ಅಗೋಚರಿತ ಐಟಂಗಳು | 2,435,956 | 3,668,740 | 4,144,625 |
| **ಒಟ್ಟು** | **695,471,620** | **282,260,286** | **249,452,616** |
| ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | 2,011,291 | 340,240,465 | 313,172,589 |
| | **697,482,911** | **622,500,751** | **562,625,205** |

## ಕ್ರೋಢೀಕೃತ

| ವಿವರಗಳು | ಮುಕ್ತ ಹಿಡುವಳಿ ಜಮೀನು | ಗುತ್ತಿಗೆ ಹಿಡುವಳಿ ಜಮೀನು | ಕಟ್ಟಡ- ಮುಕ್ತ ಹಿಡುವಳಿ | ಕಟ್ಟಡ- ಗುತ್ತಿಗೆ ಹಿಡುವಳಿ | ನಿರ್ವಹಣೆ ಉಪ ಕರಣಗಳು | ವಿದ್ಯುತ್ ಉಪಕರಣ | ಕಂಪ್ಯೂಟರ್ ಗಳು | ಪೀಠೋಪಕರಣ ಮತ್ತು ಅಳವಡಿಕೆಗಳು | ವಾಹನಗಳು | ಗುತ್ತಿಗೆ ಆಸ್ತಿಗಳು | ಕಚೇರಿ ಉಪ ಕರಣಗಳು | ಅನುದಾನದ ಆಸ್ತಿಗಳು | ಅಗೋಚರಿತ ಐಟಂಗಳು | ಒಟ್ಟು |
|---|---|---|---|---|---|---|---|---|---|---|---|---|---|---|
| **ವೆಚ್ಚ ಅಥವಾ ಪರಿಭಾವಿತ ವೆಚ್ಚ** | | | | | | | | | | | | | | |
| 1ನೇ ಏಪ್ರಿಲ್ 2016ರಲ್ಲಿದ್ದಂತೆ ಶಿಲ್ಕು | 7,248,812 | 10,534,547 | 207,143,494 | 5,291,255 | 1,174,098 | 43,157,828 | 18,194,071 | 101,824,209 | 6,433,050 | 244,499,975 | 19,605,250 | 197 | 7,379,513 | 672,486,299 |
| ಸೇರ್ಪಡೆಗಳು | - | 1,714,511 | 709,161 | - | - | 3,209,250 | 3,125,479 | 2,477,726 | 3,289,444 | - | 46.386.951 | - | 727,033 | 61,639,555 |
| ವಿಲೇವಾರಿಗಳು | - | - | - | - | - | 107,034 | 11,420 | 147,148 | - | - | 240,028 | - | - | 505,630 |
| **31ನೇ ಮಾರ್ಚ್ 2017ರಲ್ಲಿದ್ದಂತೆ ಶಿಲ್ಕು** | **7,248,812** | **12,249,058** | **207,852,655** | **5,291,255** | **1,174,098** | **46,260,044** | **21,308,130** | **104,154,787** | **9,722,494** | **244,499,975** | **65,752,173** | **197** | **8,106,546** | **733,620,224** |
| ಸೇರ್ಪಡೆಗಳು | - | - | - | 259,495,927 | - | 85,884,493, | 3,154,434 | 76,767,950 | 11,297,803 | - | 10,922,696 | - | 38,940 | 447,562,243 |
| ವಿಲೇವಾರಿಗಳು | - | - | - | - | - | 492,701 | 46,357 | 332,504 | 165,456 | - | 120,524 | 1 | - | 1,157,543 |
| **31ನೇ ಮಾರ್ಚ್ 2018ರಲ್ಲಿದ್ದಂತೆ ಶಿಲ್ಕು** | **7,248,812** | **12,249,058** | **207,852,655** | **264,787,182** | **1,174,098** | **131,651,837** | **24,416,207** | **180,590,234** | **20,854,841** | **244,499,975** | **76,554,345** | **196** | **8,145,486** | **1,180,024,928** |
| ವಿವರಗಳು | ಮುಕ್ತ ಹಿಡುವಳಿ ಜಮೀನು | ಗುತ್ತಿಗೆ ಹಿಡುವಳಿ ಜಮೀನು | ಕಟ್ಟಡ- ಮುಕ್ತ ಹಿಡುವಳಿ | ಕಟ್ಟಡ- ಗುತ್ತಿಗೆ ಹಿಡುವಳಿ | ನಿರ್ವಹಣೆ ಉಪ ಕರಣಗಳು | ವಿದ್ಯುತ್ ಉಪಕರಣ | ಕಂಪ್ಯೂಟರ್ ಗಳು | ಪೀಠೋಪಕರಣ ಮತ್ತು ಅಳವಡಿಕೆಗಳು | ವಾಹನಗಳು | ಗುತ್ತಿಗೆ ಆಸ್ತಿಗಳು | ಕಚೇರಿ ಉಪ ಕರಣಗಳು | ಅನುದಾನದ ಆಸ್ತಿಗಳು | ಅಗೋಚರಿತ ಐಟಂಗಳು | ಒಟ್ಟು |
| **ಸಂಚಯನಗೊಂಡ ಸವಕಳಿ ಮತ್ತು ಕುಗ್ಗುವಿಕೆ** | | | | | | | | | | | | | | |
| 01ನೇ ಏಪ್ರಿಲ್ 2016ರಲ್ಲಿದ್ದಂತೆ ಶಿಲ್ಕು | - | - | 28,886,241 | 1,538,035 | 1,065,765 | 25,371,065 | 15,037,757 | 83,843,440 | 3,389,526 | 244,499,883 | 16,167,083 | - | 3,234,888 | 423,033,683 |
| ವಿಲೇವಾರಿಗಳು | - | - | - | - | - | 37,081 | 10,986, | 147,146 | - | - | - | - | - | 195,213 |
| ಸವಕಳಿ ಖರ್ಚುಗಳು | - | - | 3,461,627 | 148,868 | 76,695 | 2,534,535 | 2,054,196 | 7,728,444 | 788,344 | - | 10,525,841 | - | 1,202,918 | 28,521,468 |
| **31ನೇ ಮಾರ್ಚ್ 2017ರಲ್ಲಿದ್ದಂತೆ ಶಿಲ್ಕು** | - | - | **32,347,868** | **1,686,903** | **1,142,460** | **27,868,519** | **17,080,967** | **91,424,738** | **4,177,872** | **244,499,883** | **26,692,924** | - | **4,437,806** | **451,359,939** |
| ವಿಲೇವಾರಿಗಳು | - | - | - | - | - | 324,167 | 46,355 | 388,205 | 165,455 | - | 117,645 | - | - | 991,827 |
| ಸವಕಳಿ ಖರ್ಚುಗಳು | - | - | 3,515,846 | 172,543 | 6,005 | 3,705,127 | 2,740,979 | 10,474,502 | 1,882,674 | - | 10,415,794 | - | 1,271,724 | 34,185,194 |
| **31ನೇ ಮಾರ್ಚ್ 2018ರಲ್ಲಿದ್ದಂತೆ ಶಿಲ್ಕು** | - | - | **35,863,714** | **1,859,446** | **1,148,465** | **31,249,479** | **19,775,591** | **101,561,035** | **5,895,091** | **244,499,883** | **36,991,073** | - | **5,709,530** | **484,553,306** |
| **01ನೇ ಏಪ್ರಿಲ್ 2016ರಲ್ಲಿದ್ದಂತೆ ವಾಹನ ಮೊತ್ತ** | **7,248,812** | **10,534,547** | **178,257,253** | **3,753,220** | **108,333** | **17,786,763** | **3,156,314** | **17,980,769** | **3,043,524** | **92** | **3,438,167** | **197** | **4,144,625** | **241,869,535** |
| **31ನೇ ಮಾರ್ಚ್ 2017ರಲ್ಲಿದ್ದಂತೆ ವಾಹಕ ಮೊತ್ತ** | **7,248,812** | **12,249,058** | **175,504,787** | **3,604,352** | **31,638** | **18,391,525** | **4,227,163** | **12,730,049** | **5,544,622** | **92** | **39,059,249** | **197** | **3,668,740** | **282,260,285** |
| **31ನೇ ಮಾರ್ಚ್ 2018ರಲ್ಲಿದ್ದಂತೆ ವಾಹಕ ಮೊತ್ತ** | **7,248,812** | **12,249,058** | **171,988,941** | **262,927,736** | **25,633** | **100,402,358** | **4,640,616** | **79,029,199** | **14,959,750** | **92** | **39,563,272** | **196** | **2,435,956** | **695,471,622** |

## ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು

### ಟಿಪ್ಪಣಿ-3
### ಹೂಡಿಕೆ ಸ್ವತ್ತು

| ವಿವರಗಳು | 31ನೇ ಮಾರ್ಚ್ 2018ರಲ್ಲಿದ್ದಂತೆ | 31ನೇ ಮಾರ್ಚ್ 2017ರಲ್ಲಿದ್ದಂತೆ | 1ನೇ ಏಪ್ರಿಲ್ 2016ರಲ್ಲಿದ್ದಂತೆ |
|---|---|---|---|
| ಕೆಳಕಂಡವುಗಳ ವಾಹಕ ಮೊತ್ತಗಳು: | | | |
| ಹೂಡಿಕೆ ಸ್ವತ್ತು | – | – | – |
| ಒಟ್ಟು | – | – | – |

### ಟಿಪ್ಪಣಿ-4
### ಇತರೆ ಅಗೋಚರ ಆಸ್ತಿಗಳು

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| ಕೆಳಕಂಡವುಗಳ ವಾಹಕ ಮೊತ್ತಗಳು: | | | |
| ಸಾಫ್ಟ್‌ವೇರ್ ಮತ್ತು ಲೈಸೆನ್ಸ್‌ಗಳು | – | – | – |
| ಒಟ್ಟು | – | – | – |

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ |
|---|---|---|
| ವೆಚ್ಚ ಅಥವಾ ಪರಿಭಾವಿತ ವೆಚ್ಚ | – | – |
| ವರ್ಷದ ಆರಂಭದಲ್ಲಿದ್ದ ಶಿಲ್ಕು | – | – |
| ಸೇರ್ಪಡೆಗಳು | – | – |
| ವರ್ಷಾಂತ್ಯದಲ್ಲಿದ್ದ ಶಿಲ್ಕು | – | – |

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ |
|---|---|---|
| ಸಂಚಯನವಾದ ಸವಕಳಿ ಮತ್ತು ಕುಗ್ಗುವಿಕೆ | – | – |
| ವರ್ಷದ ಆರಂಭದಲ್ಲಿದ್ದ ಶಿಲ್ಕು | – | – |
| ಸವಕಳಿ ಖರ್ಚುಗಳು | – | – |
| ವರ್ಷಾಂತ್ಯದಲ್ಲಿದ್ದ ಶಿಲ್ಕು | – | – |
| ವರ್ಷದ ಅಂತ್ಯದಲ್ಲಿದ್ದಂತೆ ವಾಹಕ ಮೊತ್ತ | – | – |

## ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು
## ಟಿಪ್ಪಣಿ-5
## ಸಹವರ್ತಿ ಮತ್ತು ಸಹಾಯಕ ಕಂಪನಿಗಳಲ್ಲಿ ಹೂಡಿಕೆಗಳು

| ವಿವರಗಳು | 31ನೇ ಮಾರ್ಚ್ 2018ರಲ್ಲಿದ್ದಂತೆ | 31ನೇ ಮಾರ್ಚ್ 2017ರಲ್ಲಿದ್ದಂತೆ | 1ನೇ ಏಪ್ರಿಲ್ 2016ರಲ್ಲಿದ್ದಂತೆ |
|---|---|---|---|
| **I. ನಮೂದಿತ ಹೂಡಿಕೆಗಳು** | | | |
| ಎ) ಈಕ್ವಿಟಿ ಸಾಧನಗಳಲ್ಲಿ ಮುಖ ಬೆಲೆಗೆ ಹೂಡಿಕೆಗಳು | | | |
| ಮೆ॥ ಜೆ.ಕೆ. ಟೈರ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಈಕ್ವಿಟಿ ಷೇರುಗಳಲ್ಲಿ ಹೂಡಿಕೆ.<br>ತಲಾ ರೂ.2 ರ ಪೂರ್ಣ ಪಾವತಿಯಾದ 329,060<br>ಈಕ್ವಿಟಿ ಷೇರುಗಳು (ಷೇರು ಒಂದಕ್ಕೆ ರೂ.10ರಂತೆ 62,812) | 2,861,005 | 2,861,005 | 2,861,005 |
| ಮೆ॥ ಬೆಂಗಾಲ್ ಅಂಡ್ ಅಸ್ಸಾಂ ಕಂ. ಲಿಮಿಟೆಡ್‌ನ ಈಕ್ವಿಟಿ ಷೇರುಗಳಲ್ಲಿ ಹೂಡಿಕೆ.<br>ತಲಾ ರೂ.10 ರ ಪೂರ್ಣ ಪಾವತಿಯಾದ 3,831ಈಕ್ವಿಟಿ ಷೇರುಗಳು (ಷೇರು ಒಂದಕ್ಕೆ ರೂ.10ರಂತೆ 3,831) | 487,426 | 487,426 | 487,426 |
| ಒಟ್ಟು ಒಗ್ಗೂಡಿದ ನಮೂದಿಸಿದ ಹೂಡಿಕೆಗಳು | **3,348,431** | **3,348,431** | **3,348,431** |
| ನಮೂದಿಸಿದ ಹೂಡಿಕೆಗಳ ಒಗ್ಗೂಡಿಸಿದ ಪುಸ್ತಕದ ಮೌಲ್ಯ | 3,348,431 | 3,348,431 | 3,348,431 |
| ನಮೂದಿತ ಹೂಡಿಕೆಗಳ ಒಗ್ಗೂಡಿಸಿದ ಮಾರುಕಟ್ಟೆ ಮೌಲ್ಯ | 58,075,933 | 49,791,410 | 7,361,478 |
| **II. ನಮೂದಿಸಿರದ ಹೂಡಿಕೆಗಳು** | | | |
| ಎ) ಮೆ॥ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ (ಸಂಪೂರ್ಣ ಒಡೆತನದ ಸಹಾಯಕ ಕಂಪನಿ)<br>ಈಕ್ವಿಟಿ ಷೇರುಗಳಲ್ಲಿ ಮುಖಬೆಲೆಯ ಈಕ್ವಿಟಿ ಸಾಧನಗಳಲ್ಲಿನ ಹೂಡಿಕೆಗಳು<br>ಪೂರ್ಣ ಪಾವತಿಯಾದ ಈಕ್ವಿಟಿ ಷೇರುಗಳು (ಷೇರು ಒಂದಕ್ಕೆ ರೂ.100 ರಂತೆ ರೂ.357,252/-) | -<br>59,738,400 | -<br>59,738,400 | -<br>59,738,400 |
| ಮೆ॥ ಹಾಸನ್ ಮಂಗಳೂರು ರೈಲ್ ಡೆವಲಪ್‌ಮೆಂಟ್ ಕಂಪನಿ ಲಿಮಿಟೆಡ್‌ನ ಈಕ್ವಿಟಿ ಷೇರುಗಳಲ್ಲಿ ಹೂಡಿಕೆ :<br>ಪೂರ್ಣ ಪಾವತಿಯಾದ ಈಕ್ವಿಟಿ ಷೇರುಗಳು (ಷೇರು ಒಂದಕ್ಕೆ ರೂ.10ರಂತೆ 7,000,000) | 70,000,000 | 70,000,000 | 70,000,000 |
| ಮೆ॥ ಫುಡ್ ಕರ್ನಾಟಕ ಲಿಮಿಟೆಡ್‌ನ ಈಕ್ವಿಟಿ ಷೇರುಗಳಲ್ಲಿ ಹೂಡಿಕೆ<br>ಪೂರ್ಣ ಪಾವತಿಯಾದ ಈಕ್ವಿಟಿ ಷೇರುಗಳು (ಷೇರು ಒಂದಕ್ಕೆ ರೂ.10 ರಂತೆ 50,000/-) | 500,000 | 500,000 | 500,000 |
| ಮೆ॥ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ (ಸಹಾಯಕ ಕಂಪನಿ) ಈಕ್ವಿಟಿ ಷೇರುಗಳಲ್ಲಿ ಹೂಡಿಕೆ<br>ಪೂರ್ಣ ಪಾವತಿಯಾದ ಈಕ್ವಿಟಿ ಷೇರುಗಳು (ಷೇರು ಒಂದಕ್ಕೆ ರೂ.10 ರಂತೆ 720,875/-)(ಸರ್ಕಾರದ ಆದೇಶದಂತೆ ರೂ.5,000ರ ಸಾಧಾರಣ ದರದಲ್ಲಿ ನೀಡಿರುವುದು) | 5,000 | 5,000 | 5,000 |
| ಮೆ॥ ಕೆ.ಟಿ. ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್‌ನ ಈಕ್ವಿಟಿ ಷೇರುಗಳಲ್ಲಿ ಹೂಡಿಕೆಗಳು :<br>ಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳು<br>(ಷೇರು ಒಂದಕ್ಕೆ ರೂ.100ರಂತೆ 35) | 3,500 | 3,500 | 3,500 |

| | | | |
|---|---|---|---|
| ಮೆ॥ ಕೆ.ಟಿ. ಮ್ಯಾನ್‌ಷನ್ಸ್ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್‌ನ ಈಕ್ವಿಟಿ ಷೇರುಗಳಲ್ಲಿ ಹೂಡಿಕೆಗಳು ಪೂರ್ಣ ಪಾವತಿಯಾದ ಈಕ್ವಿಟಿ ಷೇರುಗಳು (ಷೇರು ಒಂದಕ್ಕೆ ರೂ.100ರಂತೆ 25) | 2,500 | 2,500 | 2,500 |
| ದಿ ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಹಣ ಹೂಡಿಕೆ-ಒಂದು -ಸಿ-ದರ್ಜೆ ಸಾಮಾನ್ಯ ಷೇರು ತಲಾ ರೂ.1,000,000/- ರ ಪೂರ್ಣ ಪಾವತಿಯಾದ ಈಕ್ವಿಟಿ ಷೇರುಗಳು (ಇ-ದರ್ಜೆ ರೂ.50,000) | 1,000,000 | 1,000,000 | 50,000 |
| | **131,249,400** | **131,249,400** | **130,299,400** |
| ಕಳೆಯಿರಿ: ಹೂಡಿಕೆಗಳ ಮೌಲ್ಯದಲ್ಲಿನ ಇಳಿಕೆ | **131,249,400** | **131,249,400** | **130,299,400** |
| ಎ) ಸರ್ಕಾರದ ಸೆಕ್ಯುರಿಟಿಗಳಲ್ಲಿ ಮುಖ ಬೆಲೆಗೆ ಹೂಡಿಕೆಗಳು ರಾಷ್ಟ್ರೀಯ ಉಳಿತಾಯ ಪತ್ರ★★ | | 3,000 | 3,000 |
| ನಮೂದಿಸಿರದ ಹೂಡಿಕೆಗಳ ಒಟ್ಟು ಒಗ್ಗೂಡಿಕೆ. | 131,249,400 | 131,252,400 | 130,302,400 |
| ಒಟ್ಟು ಚಾಲ್ತಿಯೇತರ ಹೂಡಿಕೆಗಳು | 134,597,831 | 134,600,831 | 133,650,831 |

5.1 ವಾಸ್ತವಿಕ ಸಹಾಯಕ ಕಂಪನಿಗಳ ವಿವರಗಳನ್ನು ಟಿಪ್ಪಣಿ 42-ಸಂಬಂಧಿಸಿದ ವ್ಯಕ್ತಿ ಪ್ರಕಟಣೆಯಲ್ಲಿ ತಿಳಿಸಿದೆ.

## ಟಿಪ್ಪಣಿ-6
## ಇತರೆ ಆರ್ಥಿಕ ಆಸ್ತಿಗಳು

| | ಚಾಲ್ತಿಯೇತರ | | | ಚಾಲ್ತಿ | | |
|---|---|---|---|---|---|---|
| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ |
| **ಅಮಾರ್ಟೈಸ್ ಮಾಡಿದ ಬೆಲೆಯಲ್ಲಿ** | | | | | | |
| ಎ) ಭದ್ರತಾ ಠೇವಣಿ | - | - | - | - | - | - |
| ಬಿ) ಬರಬೇಕಾಗಿರುವ ಬಡ್ಡಿ | - | - | - | - | - | - |
| ಸಿ) ಸಹವರ್ತಿ/ಸಹಾಯಕ ಕಂಪನಿಗಳಿಂದ ಬಂದ ಲಾಭಾಂಶ | - | - | - | - | - | - |
| ಡಿ) ನಗದಾಗಿ ಪಡೆಯಬಹುದಾದ ಮುಂಗಡ | - | - | - | - | - | - |
| (i) ಭದ್ರತೆಯಿಲ್ಲದ ಮತ್ತು ಉತ್ತಮ ಎಂದು ಪರಿಗಣಿಸಿರುವುದು. | - | - | - | - | - | - |
| (ii) ಸಂದೇಹಾಸ್ಪದವೆಂದು ಪರಿಗಣಿಸಿರುವುದು. | - | - | - | - | - | - |
| ಕಳೆಯಿರಿ: ಸಂದೇಹಾಸ್ಪದ ಮುಂಗಡಗಳಿಗೆ ವ್ಯವಸ್ಥೆಗಳು | - | - | - | - | - | - |
| ಇ) ಇತರೆ ಸ್ವೀಕಾರವಾಗಬೇಕಾಗಿರುವವು | - | - | - | - | - | - |
| ಒಟ್ಟು | - | - | - | - | - | - |

## ಟಿಪ್ಪಣಿ-7
## ಮುಂದೂಡಿದ ತೆರಿಗೆ ಬಾಕಿಗಳು

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಏಪ್ರಿಲ್ 2016ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|---|
| ಮುಂದೂಡಿದ ತೆರಿಗೆ ಆಸ್ತಿಗಳು | 109524915 | 101870057 | 103046488 |
| ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು | 12411605 | 4234961 | 1663730 |
| **ಒಟ್ಟು** | **97113310** | **97635096** | **101382758** |

| 2017-18 | ಆರಂಭಿಕ ಶಿಲ್ಕು | ಲಾಭ ಅಥವಾ ನಷ್ಟದ ಖಾತೆಯಲ್ಲಿ ಮಾನ್ಯ ಮಾಡಿರುವುದು | ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿರುವುದು | ಅಖೈರು ಶಿಲ್ಕು |
|---|---|---|---|---|
| **ಕೆಳಕಾಣಿಸಿರುವವುಗಳ ಸಂಬಂಧ ಮುಂದೂಡಿದ ತೆರಿಗೆ (ಹೊಣೆಗಾರಿಕೆಗಳು)/ ಆಸ್ತಿ** | | | | |
| ಸ್ವತ್ತು, ಸ್ಥಾವರ ಮತ್ತು ಉಪಕರಣ | -12,411,605 | -12,411,605 | - | - |
| ಪರಿಹಾರಿತ ಗೈರು ಹಾಜರಿಗಳು ಮತ್ತು ಇತರೆ ವ್ಯವಸ್ಥೆ | 108,536,959 | 108,536,959 | - | - |
| ನಿರೂಪಿತ ಸೌಲಭ್ಯ ಹೊಣೆಗಳು | 987,956 | 987,956 | - | - |
| **ಒಟ್ಟು** | **97,113,310** | **97,113,310** | **-** | **-** |
| ತೆರಿಗೆ ನಷ್ಟಗಳು | - | - | - | - |
| **ನಿವ್ವಳ ಮುಂದೂಡಿದ ತೆರಿಗೆ ಆಸ್ತಿಗಳು/(ಹೊಣೆಗಾರಿಕೆ)** | **97,113,310** | **97,113,310** | **-** | **-** |
| ಮ್ಯಾಟ್ ಕ್ರೆಡಿಟ್ ಅರ್ಹತೆ | | | | |
| **ಒಟ್ಟು** | **97,113,310** | **97,113,310** | **-** | **-** |

| 2016-17 | ಆರಂಭಿಕ ಶಿಲ್ಕು | ಲಾಭ ಅಥವಾ ನಷ್ಟದ ಖಾತೆಯಲ್ಲಿ ಮಾನ್ಯ ಮಾಡಿರುವುದು | ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿರುವುದು | ಆಖೈರು ಶಿಲ್ಕು |
|---|---|---|---|---|
| **ಕೆಳಕಾಣಿಸಿರುವವುಗಳ ಸಂಬಂಧ ಮುಂದೂಡಿದ ತೆರಿಗೆ (ಹೊಣೆಗಾರಿಕೆಗಳು)/ ಆಸ್ತಿ** | | | | |
| ಸ್ವತ್ತು, ಸ್ಥಾವರ ಮತ್ತು ಉಪಕರಣ | -4,234,961 | 8,176,644 | - | -12,411,605 |
| ಪರಿಹಾರಿತ ಗೈರು ಹಾಜರಿ ಮತ್ತು ಇತರೆ ವ್ಯವಸ್ಥೆ | 100,882,102 | -7,654,857 | - | 108,536,959 |
| ನಿರೂಪಿತ ಸೌಲಭ್ಯ ಹೊಣೆಗಳು | 987,959 | - | - | 987,959 |
| **ಒಟ್ಟು** | **97,635,100** | **521,787** | **-** | **97,113,310** |
| ತೆರಿಗೆ ನಷ್ಟಗಳು | - | - | - | - |
| **ನಿವ್ವಳ ಮುಂದೂಡಿದ ತೆರಿಗೆ ಆಸ್ತಿಗಳು/(ಹೊಣೆಗಾರಿಕೆ)** | **97,635,100** | **521,787** | **-** | **97,113,310** |
| ಮ್ಯಾಟ್ ಕ್ರೆಡಿಟ್ ಅರ್ಹತೆ | | | | |
| **ಒಟ್ಟು** | **97,635,100** | **521,787** | **-** | **97,113,310** |

## ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು
## ಟಿಪ್ಪಣಿ-8
## ಇತರೆ ಆಸ್ತಿಗಳು

| ವಿವರಗಳು | ಚಾಲ್ತಿಯೇತರ | | | ಚಾಲ್ತಿ | | |
|---|---|---|---|---|---|---|
| | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ |
| ಅಮರ್ಟೈಸ್ಡ್ ಬೆಲೆಯಲ್ಲಿ | | | | | | |
| ಎ) ಭದ್ರತಾ ಠೇವಣಿ | - | - | - | - | - | - |
| ಬಿ) ಮುಂಗಡಗಳು | - | - | - | 1,035,211,411 | 983,035,322 | 1,162,167,263 |
| ಸಿ) ಠೇವಣಿಗಳ ಮೇಲಿನ ಬಡ್ಡಿ | - | - | - | 137,290,861 | 127,890,163 | 134,632,922 |
| ಡಿ) ಸೀಮಾಸುಂಕ ಮತ್ತು ಕೇಂದ್ರ ಅಬಕಾರಿ/ ಜಿಎಸ್‌ಟಿ ಪ್ರಾಧಿಕಾರಿಗಳಲ್ಲಿರುವ ಬಾಕಿ | - | - | - | 33,206,694 | 2,450,829 | 227,046 |
| ಇ) ವಸ್ತು ರೂಪದಲ್ಲಿ ವಸೂಲಿ ಮಾಡಬಹುದಾಗಿರುವ ಮುಂಗಡ ಅಥವಾ ಬರಬೇಕಾಗಿರುವ ಮೌಲ್ಯ | - | - | - | - | - | - |
| (i) ಭದ್ರತೆಯಿಲ್ಲದ ಮತ್ತು ಉತ್ತಮ ಎಂದು ಪರಿಗಣಿಸಿರುವುದು. | 1,022,129,175 | 889,733,910 | 954,431,376 | 6,664,502 | 5,883,544 | 12,488,406 |
| (ii) ಸಂದೇಹಾಸ್ಪದವೆಂದು ಪರಿಗಣಿಸಿರುವುದು. | - | - | - | - | - | - |
| ಎಫ್) ಪೂರ್ವ ಪಾವತಿ ಖರ್ಚುಗಳು | - | - | - | 82,458,201 | 47,831,377 | 35,133,337 |
| ಜಿ) ಆರಂಭಿಕ ಖರ್ಚುಗಳು | - | - | - | - | - | - |
| ಎಚ್) ನೌಕರರಿಗೆ ಸಾಲ ಮತ್ತು ಮುಂಗಡಗಳು | 254,502 | 221,176 | 631,597 | - | - | - |
| ಐ) ಮುಂಗಡ ಆದಾಯ ತೆರಿಗೆ ಮತ್ತು ಟಿಡಿಎಸ್ | - | - | - | 212,848,250 | 196,236,550 | 208,458,971 |
| ಕಳೆಯಿರಿ: ನಿರೀಕ್ಷಿತ ಕ್ರೆಡಿಟ್ ನಷ್ಟ | -109,546,806 | -109,546,806 | -109,546,806 | -10,333,770 | -10,333,770 | -10,333,770 |
| **ಒಟ್ಟು** | **912,836,871** | **780,408,280** | **845,516,167** | **1,497,346,149** | **1,352,994,015** | **1,542,774,175** |

## ಟಿಪ್ಪಣಿ-9
## ತಪಶೀಲುಗಳು

| ವಿವರಗಳು | 31ನೇ ಮಾರ್ಚ್ 2018ರಲ್ಲಿದ್ದಂತೆ | 31ನೇ ಮಾರ್ಚ್ 2017ರಲ್ಲಿದ್ದಂತೆ | 1ನೇ ಏಪ್ರಿಲ್ 2016ರಲ್ಲಿದ್ದಂತೆ |
|---|---|---|---|
| ಎ) ಕಚ್ಚಾ ಸಾಮಗ್ರಿಗಳು | | | |
| ಕಾಗದ ಮತ್ತು ಸ್ಟ್ರಾಬೋರ್ಡ್ | 9,666,849 | 17,681,338 | 24,206,906 |
| ಕನ್ವರ್ಟರ್‌ಗಳು | 1,404,715 | 2,062,231 | 28,359,766 |
| ಬಿ) ಸಿದ್ಧಪಡಿಸಿದ ಸರಕುಗಳು | 142,965,839 | 128,624,181 | 180,809,076 |
| ಸಿ) ವ್ಯಾಪಾರದ ದಾಸ್ತಾನು (ವ್ಯಾಪಾರಕ್ಕೆ ಪಡೆದಿರುವುದು) | 1,083,423,122 | 794,172,688 | 553,052,376 |
| ಕಳೆಯಿರಿ: ನಿರೀಕ್ಷಿತ ಕ್ರೆಡಿಟ್ ನಷ್ಟ | – 41,259,575 | –41,259,575 | –41,259,575 |
| **ಒಟ್ಟು** | **1,196,200,950** | **901,280,863** | **745,168,549** |

ಆಮದಾದ ನೈಸರ್ಗಿಕ ನದಿ ಮರಳಿನ ಖರೀದಿಯ ಒಪ್ಪಂದದ ಅನುಸಾರ ಟೆಂಡರ್ ಮಾಡಿರುವ ದರಗಳು ಬೆಂಗಳೂರಿನಲ್ಲಿನ ಸಿಐಎಫ್ ದರದಲ್ಲಿರುವುವು. 102937.77 ಎಂ.ಟಿ.ಗಳ ದಾಸ್ತಾನು ಬಂದರಿನಲ್ಲಿ ಇರುವುದರಿಂದ ಮರಳಿನ ಆಖೈರು ದಾಸ್ತಾನಿನ ಮೌಲ್ಯವನ್ನು ಬಂದರಿನಲ್ಲಿ ಇಳಿಸಿರುವ ದರದಲ್ಲಿ ನಿರ್ಣಯಿಸಿದೆ. ಸಿಐಎಫ್ ಮೌಲ್ಯದಲ್ಲಿ ಅಲ್ಲ.

## ಟಿಪ್ಪಣಿ-10
## ಇತರೆ ಹೂಡಿಕೆಗಳು:

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| ವ್ಯಾಪಾರದ ಸಂಬಂಧ ಪಾವತಿಸಬೇಕಾಗಿರುವುದು | | | |
| ನೌಕರರಿಗೆ ಸಂಬಂಧಿಸಿದುದು. | | | |
| **ಒಟ್ಟು** | - | - | - |

## ಟಿಪ್ಪಣಿ-11
## ವ್ಯಾಪಾರದ ಸಂಬಂಧ ಬರಬೇಕಾಗಿರುವುದು

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| ವ್ಯಾಪಾರದ ಸಂಬಂಧ ಬರಬೇಕಾಗಿರುವುದು | | | |
| ಭದ್ರತೆಯುಳ್ಳ, ಉತ್ತಮವೆಂದು ಪರಿಗಣಿಸಿರುವುದು | 856,730.00 | 441,411.00 | 1,457,000.00 |
| ಭದ್ರತೆಯಿಲ್ಲದ, ಉತ್ತಮವೆಂದು ಪರಿಗಣಿಸಿರುವುದು | 269,255,175.00 | 194,663,812.00 | 86,032,194.00 |
| ಸಂದೇಹಾಸ್ಪದವಾದುದು | – | – | – |
| ನಿರೀಕ್ಷಿತ ಕ್ರೆಡಿಟ್ ನಷ್ಟ | –53,484,380 | –53,484,380 | –53,484,380 |
| | **216,627,525** | **141,620,843** | **34,004,814** |
| **ಚಾಲ್ತಿ** | **216,627,525** | **141,620,843** | **34,004,814** |
| **ಚಾಲ್ತಿಯೇತರ** | **-** | **-** | **-** |

ಸರಕುಗಳ ಮಾರಾಟದ ಮೇಲಿನ ಜಮೆ ಅವಧಿ 0 ರಿಂದ 120 ದಿನಗಳವರೆಗಿನ ಪ್ರಮಾಣದಲ್ಲಿರುವುದು. ವ್ಯಾಪಾರದಿಂದ ಬರಬೇಕಾಗಿರುವ ಬಾಕಿಗೆ ಬಡ್ಡಿ ವಿಧಿಸಿರುವುದಿಲ್ಲ. ಯಾವುದೇ ಗ್ರಾಹಕರನ್ನು ಅಂಗೀಕರಿಸುವ ಮುನ್ನ ಕಂಪನಿಯು ಸಾರ್ವಜನಿಕ ಸಂಸ್ಥೆಯಲ್ಲಿ ಲಭ್ಯವಿರುವ ಮಾಹಿತಿಯನ್ನು ಮತ್ತು ತನ್ನ ಸ್ವಂತ ಆಂತರಿಕ ನಿರ್ಧರಣೆ ಮತ್ತು ವ್ಯಾಪಾರದ ದಾಖಲೆಗಳನ್ನು ಪರಿಗಣಿಸುವುದು.

## ಟಿಪ್ಪಣಿ-12
## ನಗದು ಮತ್ತು ನಗದು ಸಮಾನಗಳು

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| **ವ್ಯಾಪಾರದಿಂದ ಬರಬೇಕಾಗಿರುವುದು** | | | |
| ಬಿ) ಬ್ಯಾಂಕುಗಳಲ್ಲಿನ ಶಿಲ್ಕುಗಳು | | | |
| (i) ಚಾಲ್ತಿ ಖಾತೆಯಲ್ಲಿ | 622,182,319 | 280,455,782 | 109,027,309 |
| (ii) ಠೇವಣಿ ಖಾತೆಯಲ್ಲಿ | 643,527,731 | 1,037,392,159 | 815,636,651 |
| (iii) ಇಇಎಫ್‌ಸಿ ಖಾತೆಯಲ್ಲಿ | – | – | – |
| ಬಿ) ಕೈಯಲ್ಲಿರುವ ನಗದು | 50,267,886 | 43,215,121 | 40,269,449 |
| ಸಿ) ಕೈಯಲ್ಲಿರುವ ಚೆಕ್‌ಗಳು, ಡ್ರಾಫ್ಟ್‌ಗಳು | – | – | 6,537,844 |
| ಡಿ) ರವಾನೆಯಲ್ಲಿರುವ ಸಂದಾಯಗಳು | 276,691 | 212,345 | 117,668 |
| **ಒಟ್ಟು** | **1,316,254,627** | **1,361,275,407** | **971,588,921** |

## ಟಿಪ್ಪಣಿ-13
## ಇತರೆ ಬ್ಯಾಂಕ್ ಶಿಲ್ಕುಗಳು

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| **ವ್ಯಾಪಾರದಿಂದ ಬರಬೇಕಾಗಿರುವುದು** | | | |
| ಎ) ಬ್ಯಾಂಕುಗಳಲ್ಲಿ ಗುರುತು ಮಾಡಿರುವ ಖಾತೆಗಳಲ್ಲಿರುವ ಶಿಲ್ಕುಗಳು | | | |
| (i) ಷೆಡ್ಯೂಲ್ ಬ್ಯಾಂಕುಗಳಲ್ಲಿ 12 ತಿಂಗಳುಗಳಿಗಿಂತ ಹೆಚ್ಚಿನ ಅವಧಿಗಿರುವ ಠೇವಣಿಗಳು | 104,674,263 | 108,528,749 | |
| (ii) ಬ್ಯಾಂಕ್ ಗ್ಯಾರಂಟಿ ನೀಡಿದಕ್ಕೆ ಮಾರ್ಜಿನ್ ಹಣದ ಖಾತೆಗಳಲ್ಲಿರುವುದು. | 669,075,965 | 639,585,965 | 659,015,606 |
| **ಒಟ್ಟು** | **773,750,228** | **748,114,714** | **659,015,606** |

## ಟಿಪ್ಪಣಿ-14
## ಚಾಲ್ತಿ ತೆರಿಗೆ ಆಸ್ತಿ ಮತ್ತು ಹೊಣೆಗಾರಿಕೆಗಳು

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| ಬರಬೇಕಾಗಿರುವ ತೆರಿಗೆ ಮರು ಪಾವತಿ (ನಿವ್ವಳ) | - | - | - |
| **ಒಟ್ಟು** | **-** | **-** | **-** |

## ಟಿಪ್ಪಣಿ-15
## ಈಕ್ವಿಟಿ ಷೇರು ಬಂಡವಾಳ

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| **ಅಧಿಕೃತ** ಈಕ್ವಿಟಿ ಷೇರುಗಳು : | | | |
| ತಲಾ ರೂ.100ರ 75,00,000 ಈಕ್ವಿಟಿ ಷೇರುಗಳು (2017-7,500,000; 2016-7,500,000) | 750,000,000 | 750,000,000 | 750,000,000 |
| **ನೀಡಿಕೆಯಾದುದು, ಚಂದಾದಾರಿಕೆಯಾದುದು ಮತ್ತು ಪೂರ್ಣ ಪಾವತಿಯಾದುದು** | | | |
| (2017-2,017,660; 2016-2,017,660) | 4,273,477 | 201,766,000 | 201,766,000 |
| ತಲಾ ರೂ.100ರ ಈಕ್ವಿಟಿ ಷೇರುಗಳು | | | |
| **ಒಟ್ಟು** | **4,273,477** | **201,766,000** | **201,766,000** |

## 15.1 ವರದಿಗಾರಿಕೆಯ ಅವಧಿಯ ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ ಬಾಕಿ ಉಳಿದಿರುವ ಷೇರುಗಳ ಸಂಖ್ಯೆ ಮತ್ತು ಮೊತ್ತದ ಸಮನ್ವಯ

| ಸಮನ್ವಯ | 2017-18 ಷೇರುಗಳ ಸಂಖ್ಯೆ | ಮೊತ್ತ ರೂ.ಗಳಲ್ಲಿ | 2016-17 ಷೇರುಗಳ ಸಂಖ್ಯೆ | ಮೊತ್ತ ರೂ.ಗಳಲ್ಲಿ | 2015-16 ಷೇರುಗಳ ಸಂಖ್ಯೆ | ಮೊತ್ತ ರೂ.ಗಳಲ್ಲಿ |
|---|---|---|---|---|---|---|
| ಎ) ಪೂರ್ಣ ಪಾವತಿಯಾದ ತಲಾ ರೂ.100ರ ಈಕ್ವಿಟಿ ಷೇರುಗಳು | | | | | | |
| ಅವಧಿಯ ಪ್ರಾರಂಭದಲ್ಲಿ | 20,17,660 | 20,17,66,000 | 20,17,660 | 20,17,66,000 | 20,17,660 | 20,17,66,000 |
| ಅವಧಿಯಲ್ಲಿ ನೀಡಿದ್ದು | 22,55,817 | 22,55,81,700 | - | - | - | - |
| ಅವಧಿಯ ಅಂತ್ಯದಲ್ಲಿ | 42,73,477 | 42,73,47,700 | 20,17,660 | 20,17,66,000 | 20,17,660 | 20,17,66,000 |

## 15.2 ಕಂಪನಿಯಲ್ಲಿನ ಶೇಕಡ 5ಕ್ಕಿಂತ ಹೆಚ್ಚು ಈಕ್ವಿಟಿ ಷೇರುಗಳನ್ನು ಹೊಂದಿರುವ ಪ್ರತಿ ಷೇರುದಾರರುಗಳ ಷೇರುಗಳ ವಿವರ :

| ಸಮನ್ವಯ | ಕೆಳಕಂಡ ಅವಧಿಯಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ | | | | | |
|---|---|---|---|---|---|---|
| | 31ನೇ ಮಾರ್ಚ್ 2018 | | 31ನೇ ಮಾರ್ಚ್ 2017 | | 1ನೇ ಏಪ್ರಿಲ್ 2016 | |
| | ಸಂಖ್ಯೆಗಳು | % | ಸಂಖ್ಯೆಗಳು | % | ಸಂಖ್ಯೆಗಳು | % |
| ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಲಭ್ಯ ಮತ್ತು ಅಭಿವೃದ್ಧಿ ನಿಗಮ ನಿಯಮಿತದ ತಲಾ ರೂ.100ರ (20,17,660) | 2,017,660 | 47.21% | 2,017,660 | 100% | 2,017,660 | 100% |
| ಕರ್ನಾಟಕ ಸರ್ಕಾರದ ತಲಾ ರೂ.100ರ (22,55,817) | 2,255,817 | 52.79% | - | 0% | - | 0% |

15.3 ಈಕ್ವಿಟಿ ಷೇರುಗಳಿಗೆ ಅನ್ವಯವಾಗಿರುವ ನಿಯಮ

ಕಂಪನಿಯು ಷೇರು ಒಂದರ ರೂ.100/-ರ ಮುಖ ಬೆಲೆ ಹೊಂದಿರುವ ಒಂದು ದರ್ಜೆಯ ಈಕ್ವಿಟಿ ಷೇರನ್ನು ಹೊಂದಿದೆ. ಈಕ್ವಿಟಿ ಷೇರು ಹೊಂದಿರುವ ಪ್ರತಿ ಷೇರುದಾರನು ಷೇರು ಒಂದಕ್ಕೆ ಒಂದು ಮತ ಹಾಕಲು ಅರ್ಹರಾಗಿರುವರು. ನಿರ್ದೇಶಕರ ಮಂಡಳಿ ಕೊಡಲು ಉದ್ದೇಶಿಸಿದ ಲಾಭಾಂಶವು ಮುಂಬರುವ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರುಗಳ ಅನುಮೋದನೆಗೆ ಒಳಪಟ್ಟಿರುವುದು. ಪರಿಸಮಾಪ್ತಿ ಮೇಲಿನ ಬಂಡವಾಳ ಮರುಪಾವತಿಯು ಹೊಂದಿರುವ ಈಕ್ವಿಟಿ ಷೇರುಗಳ ಅನುಪಾತದಲ್ಲಿರುವುದು.

## ಟಿಪ್ಪಣಿ-16
## ಇತರೆ ಈಕ್ವಿಟಿ :

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| ಹಂಚಿಕೆಗೆ ಉಳಿದುಕೊಂಡಿರುವ ಷೇರು ಅರ್ಜಿ ಹಣ | 79 | 225,581,779 | 225,581,779 |
| ಸಾಮಾನ್ಯ ಮೀಸಲು | 1,720,590,509 | 1,671,435,765 | 1,628,048,780 |
| ಎಫ್‌ವಿಟಿಪಿಎಲ್ ಮೂಲಕ ಈಕ್ವಿಟಿ/ಎಂಎಫ್‌ನಲ್ಲಿ ಮಾಡಿರುವ ಹೂಡಿಕೆಗಳು | – | – | – |
| ಬಡ್ಡಿರಹಿತ ಬಾಡಿಗೆ ಠೇವಣಿಯಿಂದ ಬಂದಿರುವ ಆದಾಯ | – | – | – |
| ಅನ್ವಯವಾಗುವ ಬಡ್ಡಿದರ | – | – | – |
| ಮುಂದೂಡಿದ ತೆರಿಗೆ ಹೊಂದಾಣಿಕೆ | – | – | – |
| ಇತರೆ ಸಮಗ್ರ ಆದಾಯದ ಮೂಲಕ ಈಕ್ವಿಟಿ ಇನ್‌ಸ್ಟ್ರುಮೆಂಟ್ಸ್‌ಗೆ ಮೀಸಲು | – | – | – |
| ಇತರೆ ಸಮಗ್ರ ಆದಾಯದ ಮೂಲಕ ವಿಮಾಗಣನ ಚಲನೆ (ತೆರಿಗೆ ನಿವ್ವಳ) | – | – | – |
| ಉಳಿಸಿಕೊಂಡಿರುವ ಗಳಿಕೆಗಳು (ಲಾಭ ಅಥವಾ ನಷ್ಟದ ಖಾತೆಯಲ್ಲಿನ ಹೆಚ್ಚುವರಿ ಮೊತ್ತ) | 1,127,109,195 | 1,034,614,108 | 735,148,582 |
| **ಒಟ್ಟು** | **2,847,699,783** | **2,931,631,652** | **2,588,779,141** |

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| **ಎ) ಬಂಡವಾಳ ಮೀಸಲು** | | | |
| ಆರಂಭಿಕ ಶಿಲ್ಕು | | | |
| ಸೇರಿಸಿ: ಲಾಭ ಮತ್ತು ನಷ್ಟದ ಲೆಕ್ಕದಿಂದ ತೆಗೆದುಕೊಂಡಿರುವುದು | – | – | – |
| **ಅಖೈರು ಶಿಲ್ಕು** | | | |
| ಪ್ರಿಫರೆನ್ಸ್ ಷೇರುಗಳ ವಿಮೋಚನೆ ಸಂದರ್ಭದಲ್ಲಿ ಅಂತಹ ಮೀಸಲು ನಿಧಿ ಸೃಷ್ಟಿಸಲು ಶಾಸನಬದ್ಧ ಅಗತ್ಯತೆಯ ಅನ್ವಯ ಬಂಡವಾಳ ವಿಮೋಚನೆ ಮೀಸಲು ನಿಧಿ ಸೃಷ್ಟಿಸಿದೆ. ಇವುಗಳು ಲಾಭಾಂಶ ವಿತರಣೆಗೆ ದೊರೆಯುವುದಿಲ್ಲ ಮತ್ತು ಲಾಭ ಅಥವಾ ನಷ್ಟಕ್ಕೆ ತದನಂತರ ಪುನರ್ ವರ್ಗೀಕರಿಸಿರುವುದಿಲ್ಲ. | – | – | – |
| **ಬಿ) ಭದ್ರತಾ ಪ್ರೀಮಿಯಂ ಲೆಕ್ಕದ ಖಾತೆ** | | | |
| ಆರಂಭಿಕ ಶಿಲ್ಕು | – | – | – |
| ಸೇರಿಸಿ: ಲಾಭ ಮತ್ತು ನಷ್ಟದ ಲೆಕ್ಕದಿಂದ ತೆಗೆದುಕೊಂಡಿರುವುದು | – | – | – |
| **ಅಖೈರು ಶಿಲ್ಕು** | – | – | – |
| **ಸಿ) ಸಾಮಾನ್ಯ ಮೀಸಲು** | | | |
| ಪ್ರಾರಂಭಿಕ ಶಿಲ್ಕು | 1,671,435,765 | 1,628,048,780 | 1,592,233,216 |
| ಸೇರಿಸಿ: ಸಾಮಾನ್ಯ ಮೀಸಲಿನಿಂದ ವರ್ಗಾವಣೆ | 49,154,744 | 43,386,985.0 | 35,815,564 |
| ಕಳೆಯಿರಿ: ಐಎನ್‌ಡಿ ಎಎಸ್ ಹೊಂದಾಣಿಕೆ | – | – | – |
| **ಅಖೈರು ಶಿಲ್ಕು** | **1,720,590,509** | **1,671,435,765** | **1,628,048,780** |

ಸ್ವಾಧೀನತೆ ಉದ್ದೇಶಗಳಿಗಾಗಿ ಉಳಿಸಿಕೊಂಡಿರುವ ಗಳಿಕೆಗಳಿಂದ ಲಾಭಗಳನ್ನು ವರ್ಗಾಯಿಸಲು ಸಾಮಾನ್ಯ ಮೀಸಲುಗಳನ್ನು ಕಾಲಕಾಲಕ್ಕೆ ಬಳಸಲಾಗಿದೆ. ಈಕ್ವಿಟಿಯ ಒಂದು ಘಟಕದಿಂದ ಮತ್ತೊಂದಕ್ಕೆ ವರ್ಗಾವಣೆ ಮಾಡುವ ಮೂಲಕ ಸಾಮಾನ್ಯ ಮೀಸಲನ್ನು ಸೃಷ್ಟಿಸಲಾಗಿದೆ. ಇದು ಇತರೆ ಸಮಗ್ರ ಆದಾಯದ ಬಾಬ್ತು ಆಗಿರುವುದಿಲ್ಲ; ಸಾಮಾನ್ಯ ಮೀಸಲಿನಲ್ಲಿ ಸೇರ್ಪಡೆಯಾಗಿರುವ ಬಾಬ್ತುಗಳನ್ನು ಕಂಪನಿಗಳ ಕಾಯ್ದೆ, 2013 ಮತ್ತು ಇದರಡಿಯಲ್ಲಿ ರೂಪಿಸಿರುವ ನಿಯಮಗಳ ಅನ್ವಯ ಅನುಮತಿಸಿರುವ ಪ್ರಮಾಣದ ಹೊರತಾಗಿ ಲಾಭ ಅಥವಾ ನಷ್ಟಕ್ಕೆ ತದನಂತರ ಪುನರ್ ವರ್ಗೀಕರಿಸಲಾಗದು.

| | | | |
|---|---|---|---|
| **ಡಿ) ಇತರೆ ಸಮಗ್ರ ಆದಾಯದ ಮೂಲಕ ವಿಮಾಗಣನೆ ಬದಲಾವಣೆ** | | | |
| ಆರಂಭಿಕ ಶಿಲ್ಕು | | 0 | 0 |
| ಸೇರ್ಪಡೆಗಳು/(ತೆಗೆದುಹಾಕುವುದು) | – | – | – |
| ಅಖೈರು ಶಿಲ್ಕು | – | – | – |
| **ಇ) ಉಳಿಸಿಕೊಂಡಿರುವ ಗಳಿಕೆಗಳು** | – | – | – |
| ಆರಂಭಿಕ ಶಿಲ್ಕು | 1,034,614,108 | 735,148,582 | 661,916,028 |
| ಕಳೆಯಿರಿ: ಬಂಡವಾಳ ಮರುಗಳಿಕೆ ಮೀಸಲಿಗೆ ವರ್ಗಾವಣೆ | | – | – |
| ಕಳೆಯಿರಿ: ಸ್ಥಿರಾಸ್ತಿಗಳ ಮೂಲ ಬೆಲೆ ಕಳೆದಿರದ ವಾಹಕ ಮೌಲ್ಯ | – | – | −12,698,504 |
| ಕಳೆಯಿರಿ: ಈಕ್ವಿಟಿ ಷೇರುಗಳ ಮೇಲಿನ ಲಾಭಾಂಶ | – | −20,176,600 | −20,176,600 |
| ಕಳೆಯಿರಿ: ಈಕ್ವಿಟಿ ಷೇರುಗಳ ಲಾಭಾಂಶದ ಮೇಲಿನ ತೆರಿಗೆ | 11 | −3,541,173 | −4,034,110 |
| ಕಳೆಯಿರಿ: ಮೀಸಲು ನಿಧಿಗೆ ವರ್ಗಾಯಿಸಿರುವುದು | – 49,154,744 | −43,386,985 | −35,815,564 |
| ವರ್ಷದ ಲಾಭ/(ನಷ್ಟ) | 141,649,817 | 366,570,284 | 360,581,863 |
| ಕಳೆಯಿರಿ: ಐಎನ್‌ಡಿ ಎಎಸ್ ಹೊಂದಾಣಿಕೆ | | | −214,624,531 |
| **ಅಖೈರು ಶಿಲ್ಕು** | **1,127,109,193** | **1,034,614,108** | **735,148,582** |

ಕಂಪನಿಯು ತನ್ನ ಈಕ್ವಿಟಿ ಷೇರುದಾರರುಗಳಿಗೆ ಲಾಭಾಂಶವಾಗಿ ವಿತರಿಸಬೇಕಾದ ಮೊತ್ತವನ್ನು ಕಂಪನಿಯ ಪ್ರತ್ಯೇಕ ಹಣಕಾಸಿನ ಹೇಳಿಕೆಗಳ ಆಧಾರದ ಮೇಲೆ ಹಾಗೂ ಕಂಪನಿಗಳ ಕಾಯ್ದೆ, 2013ರ ಅಗತ್ಯತೆಗಳನ್ನು ಪರಿಗಣಿಸಿ ನಿರ್ಧರಣೆ ಮಾಡಿದೆ. ಹಾಗಾಗಿ ಮೇಲೆ ತಿಳಿಸಿರುವ ಮೊತ್ತಗಳು ಸಂಪೂರ್ಣವಾಗಿ ವಿತರಣೆ ಮಾಡತಕ್ಕವಾಗಿರುವುದಿಲ್ಲ.

| | | | |
|---|---|---|---|
| **ಒಟ್ಟು ಇತರೆ ಈಕ್ವಿಟಿ** | **2,847,699,702** | **2,706,049,873** | **2,363,197,362** |

## ಟಿಪ್ಪಣಿ-17
## ಚಾಲ್ತಿಯೇತರ ಸಾಲಗಳು

| | ಚಾಲ್ತಿಯೇತರ ಭಾಗ | | | ಚಾಲ್ತಿ ಪಕ್ವತೆಗಳು | | |
|---|---|---|---|---|---|---|
| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ |
| ಭದ್ರತೆಯಿಲ್ಲದ್ದು- ಅಮಾರ್ಟೈಸ್ಡ್ ಬೆಲೆಯಲ್ಲಿ<br>- ಕರ್ನಾಟಕ ಸರ್ಕಾರದಿಂದ ಪಡೆದ ಸಾಲ | 302,300 | 302,300 | 302,300 | - | - | - |
| ಮೇಲಿನ ಭದ್ರತೆರಹಿತ ಸಾಲಗಳ ಮೇಲೆ ಸಂಚಯವಾದ ಮತ್ತು ಪಾವತಿ ಮಾಡಬೇಕಾಗಿರುವ ಬಡ್ಡಿ | 961,763 | 961,763 | 961,763 | - | - | - |
| -ಕರ್ನಾಟಕ ಕೈಗಾರಿಕಾ ಮೂಲಸೌಲಭ್ಯ ಮತ್ತು ಅಭಿವೃದ್ಧಿ ನಿಗಮ ನಿಯಮಿತದಿಂದ ಪಡೆದ ಸಾಲ | 2,856,250 | 2,856,250 | 2,856,250 | - | - | - |
| -ಕರ್ನಾಟಕ ಸರ್ಕಾರದಿಂದ ಪಡೆದ ಸಾಲ | 900,000 | 900,000 | 900,000 | - | - | - |
| - ಮೇಲಿನ ಸಾಲಗಳ ಮೇಲೆ ಸಂಚಯನವಾಗಿರುವ ಮತ್ತು ಪಾವತಿ ಮಾಡಬೇಕಿರುವ ಬಡ್ಡಿ | 12,435,219 | 12,435,219 | 12,435,219 | - | - | - |
| - ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ | 72,133,041 | 72,133,041 | 72,133,041 | - | - | - |
| - ವಿಶೇಷ ಘಟಕ ಯೋಜನೆ | 1,000,000 | 1,000,000 | 1,000,000 | - | - | - |
| | | | | | | |
| ಉಪ ಒಟ್ಟು | **90,588,573** | **90,588,573** | **90,588,573** | - | - | - |
| ಅಂತಿಮ ಒಟ್ಟು | **90,588,573** | **90,588,573** | **90,588,573** | - | - | - |

## ಟಿಪ್ಪಣಿ-18
## ಇತರೆ ಹಣಕಾಸಿನ ಹೊಣೆಗಾರಿಕೆಗಳು

| ವಿವರಗಳು | ಚಾಲ್ತಿ | | | ಚಾಲ್ತಿಯೇತರ | | |
|---|---|---|---|---|---|---|
| | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ |
| ಅಮಾರ್ಟೈಸ್ಡ್ ಬೆಲೆಯಲ್ಲಿ | - | - | - | - | - | - |
| ಎ) ದೀರ್ಘಾವಧಿ ಸಾಲದ ಚಾಲ್ತಿ ಪಕ್ವತೆ | - | - | - | - | - | - |
| ಬಿ) ಸಾಲಗಳ ಮೇಲೆ ಸಂಚಯನವಾಗಿರುವ ಆದರೆ ಪಾವತಿ ಮಾಡಬೇಕಿರದ ಬಡ್ಡಿ | - | - | - | - | - | - |
| ಸಿ) ಕೇಳದೆ ಇರುವ ಲಾಭಾಂಶಗಳು (ಟಿಪ್ಪಣಿ 20.1 ಮತ್ತು 20.2 ನೋಡಿ) | - | - | - | - | - | - |
| ಡಿ) ಬಿಡಿಸಿಕೊಳ್ಳಬಹುದಾದ ಪ್ರಿಫರೆನ್ಸ್ ಷೇರುಗಳು | - | - | - | - | - | - |
| ಇ) ಇತರೆ ಹೊಣೆಗಾರಿಕೆಗಳು | - | - | - | - | - | - |
| -ನಗದಾಗಿ ಮರು ಪಾವತಿ ಮಾಡಬಹುದಾದ ಮುಂಗಡಗಳು ಮತ್ತು ಠೇವಣಿಗಳು | - | - | - | - | - | - |
| -ಇತರೆ ವಿವಿಧ ಹೊಣೆಗಾರಿಕೆಗಳು | - | - | - | - | - | - |
| **ಒಟ್ಟು** | **-** | **-** | **-** | **-** | **-** | **-** |

20.1 ಈ ಮೊತ್ತಗಳು ಷೇರುದಾರರುಗಳಿಗೆ ನೀಡಿದ ವಾರೆಂಟ್‌ಗಳನ್ನು ಪ್ರತಿನಿಧಿಸುವವು. ಇವು 31ನೇ ಮಾರ್ಚ್ 2018ರಂದು ಇದ್ದಂತೆ ನಿರೂಪಣೆಯಾಗದೆ ಉಳಿದುಕೊಂಡಿದೆ.

20.2 ವರ್ಷದ ಅವಧಿಯಲ್ಲಿ ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ವರ್ಗಾವಣೆ ಆಗಬೇಕಾಗಿರುವ ಯಾವುದೇ ಮೊತ್ತ ಇರುವುದಿಲ್ಲ.

## ಟಿಪ್ಪಣಿ-19
## ವ್ಯವಸ್ಥೆಗಳು

| ವಿವರಗಳು | ಚಾಲ್ತಿಯೇತರ | | | ಚಾಲ್ತಿ | | |
|---|---|---|---|---|---|---|
| | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ |
| ಎ) ಪರಿಹಾರವುಳ್ಳ ಗೈರುಹಾಜರಿಗಳು (ಗಳಿಕೆ ರಜೆ) | 62,803,972 | 73,286,851 | 70,035,692 | 44,176,501 | 6,580,245 | 6,363,321 |
| ಬಿ) ಗ್ರ್ಯಾಚ್ಯುಟಿ | - | - | - | 5,948,098 | (1,510,168) | 421,508 |
| ಸಿ) ಆದಾಯ ತೆರಿಗೆಗೆ ವ್ಯವಸ್ಥೆ (ಟಿಡಿಎಸ್ ಮತ್ತು ಮುಂಗಡ ತೆರಿಗೆ ನಿವ್ವಳ) | - | - | - | 93,976,982 | 197,880,370 | 192,322,439 |
| ಡಿ) ಖರ್ಚುಗಳಿಗೆ ಸಂಬಂಧಿಸಿದ್ದು | 31,259,962 | 29,976,807 | 28,693,653 | - | - | - |
| ಇ) ಪಾವತಿಸಬೇಕಿರುವ ಟಿಸಿಎಸ್ | - | - | - | 364,274,788 | 364,274,788 | 364,274,788 |
| ಎಫ್) ಪಾವತಿಸಬೇಕಾಗಿರುವ ಲಾಭಾಂಶ | - | - | - | - | 23,738,621 | 24,305,613 |
| **ಒಟ್ಟು** | **94,063,934** | **103,263,658** | **98,729,345** | **508,376,369** | **590,963,856** | **587,687,669** |

## ಟಿಪ್ಪಣಿ-20
## ಇತರೆ ಹೊಣೆಗಾರಿಕೆಗಳು

| ವಿವರಗಳು | ಚಾಲ್ತಿಯೇತರ | | | ಚಾಲ್ತಿ | | |
|---|---|---|---|---|---|---|
| | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 01ನೇ ಏಪ್ರಿಲ್ 2016ರಂದು ಇದ್ದಂತೆ |
| ಎ) ರವಾನೆಯಾಗಿರದ ದಾಸ್ತಾನಿನ ಮೇಲಿನ ಅಬಕಾರಿ ಸುಂಕ | - | - | - | - | - | - |
| ಬಿ) ಶಾಸನಬದ್ಧ ಪಾವತಿಗಳು (ಪಿಎಫ್, ಇಎಸ್‌ಐಸಿ, ಟಿಡಿಎಸ್, ಜಿಎಸ್‌ಟಿ, ವ್ಯಾಟ್, ಸೇವಾತೆರಿಗೆ ಇತ್ಯಾದಿಗೆ ವಂತಿಗೆ) | - | - | - | 24,705,144 | 24,705,144 | 24,705,144 |
| ಸಿ) ಗ್ರಾಹಕರು/ಇತರರಿಂದ ಬಂದ ಮುಂಗಡಗಳು ಮತ್ತು ಠೇವಣಿಗಳು | 785,725,827 | 791,878,247 | 763,366,306 | 70,502,123 | 12,259,800 | 34,491,344 |
| ಡಿ) ಬಡ್ಡಿ ರಹಿತ ಠೇವಣಿಗಳಿಂದ ಬಂದ ಮುಂದೂಡಿದ ಆದಾಯ | - | - | - | - | - | - |
| ಇ) ಸಂಚಯನವಾದ ಬಡ್ಡಿ | 5,387,534 | 5,387,534 | 5,387,534 | - | - | - |
| ಎಫ್) ಇತರೆ | 9,780,310 | 8,317,531 | 11,089,309 | 251,853,977 | 356,296,472 | 164,738,345 |
| **ಒಟ್ಟು** | **800,893,671** | **805,583,312** | **779,843,149** | **347,061,244** | **393,261,416** | **223,934,833** |

## ಟಿಪ್ಪಣಿ-21
## ಅಲ್ಪಾವಧಿ ಸಾಲಗಳು

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| ಭದ್ರತೆಯುಳ್ಳದ್ದು- ಅಮಾರ್ಟೈಸ್ಡ್ ಬೆಲೆಯಲ್ಲಿ | - | - | - |
| ತಗಾದೆ ಮೇಲೆ ಸಾಲ ಮರುಪಾವತಿ ಮಾಡಬೇಕಿರುವುದು (ಕೆಳಗಿನ ಟಿಪ್ಪಣಿ ನೋಡಿ) | - | - | - |

ಎ) ಭಾರತೀಯ ಸ್ಟೇಟ್ ಬ್ಯಾಂಕ್‌ನಿಂದ ಆರಂಭಿಕ ನಗದು ಜಮೆ ರೂಪದಲ್ಲಿನ ದುಡಿಮೆ ಬಂಡವಾಳ ಸೌಲಭ್ಯಗಳು ದುಡಿಮೆ ಬಂಡವಾಳದಿಂದ ಭದ್ರತೆ ಹೊಂದಿವೆ.

## ಟಿಪ್ಪಣಿ-22
## ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು | 1,816,767,702 | 1,113,960,906 | 1,114,986,890 |
| ನೌಕರರಿಗೆ ಸಂಬಂಧಿಸಿದ್ದು | | | |
| **ಒಟ್ಟು** | **1,816,767,702** | **1,113,960,906** | **1,114,986,890** |

ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವುದು ಬಡ್ಡಿ ರಹಿತವಾದವುಗಳಾಗಿದ್ದು, ಇವುಗಳನ್ನು ಸಾಧಾರಣವಾಗಿ 30-60 ದಿನಗಳ ನಡುವೆ ಇತ್ಯರ್ಥಪಡಿಸಲಾಗುವುದು.
ತಾವು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿ ಕಾಯ್ದೆ 2006ರ ಅನ್ವಯ ಒಳಪಟ್ಟಿರುವಿರೇ ಎಂಬುದನ್ನು ದೃಢಪಡಿಸುವಂತೆ ತನ್ನ ಸರಬರಾಜುದಾರರನ್ನು ಕಂಪನಿ ಕೋರಿತ್ತು. ಸರಬರಾಜುದಾರರಿಂದ ದೃಢೀಕರಣ ಬಾರದಿರುವ ಕಾರಣ, ವರ್ಷಾಂತ್ಯದಲ್ಲಿದ್ದಂತೆ ಪಾವತಿ ಮಾಡದಿರುವ ಮೊತ್ತ ಜೊತೆಗೆ ಪಾವತಿ ಮಾಡಿರುವ/ಪಾವತಿ ಮಾಡಬೇಕಿರುವ ವಿಚಾರಕ್ಕೆ ಸಂಬಂಧಿಸಿದಂತೆ ಕಾಯ್ದೆ ಅನ್ವಯ ಅಗತ್ಯವಾದಂತೆ ಯಾವುದೇ ಘೋಷಣೆಗಳನ್ನು ತಿಳಿಸಿರುವುದಿಲ್ಲ.

## ಟಿಪ್ಪಣಿ-23
## ಕಾರ್ಯಾಚರಣೆಗಳಿಂದ ಬಂದ ಆದಾಯ

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಎ) ಉತ್ಪನ್ನಗಳ ಮಾರಾಟ (ಅಬಕಾರಿ ಸುಂಕ ಸೇರಿ) | | |
| ಮಾರಾಟಗಳು | | |
| ಮದ್ಯ | 14,091,432,931 | 13,304,301,833 |
| ನೋಟ್ ಪುಸ್ತಕಗಳು ಮತ್ತು ಲೇಖನ ಸಾಮಗ್ರಿ | 1,267,181,720 | 407,475,507 |
| ಫಾರ್ಮಸ್ಯೂಟಿಕಲ್ | 15,743,571 | 1,209,000 |
| ಇತರೆ | 158,370,212 | 38,004,089 |
| **ಚಿಟ್‌ಫಂಡ್ ವ್ಯವಹಾರದಿಂದ ಬಂದ ಆದಾಯ** | | |
| ಫೋರ್‌ಮ್ಯಾನ್ಸ್ ಕಮಿಷನ್ | 112,568,284 | 113,413,700 |
| ಲಾಭಾಂಶ | 14,545,304 | 15,039,038 |
| ಸುಸ್ತಿ ಬಡ್ಡಿ | 14,188,678 | 12,579,646 |
| ಕಮಿಷನ್ ಮತ್ತು ಸೇವಾ ಶುಲ್ಕಗಳು | 1,085,622 | 823,456 |
| ಬಿ) ಇತರೆ ಕಾರ್ಯಾಚರಣೆ ಆದಾಯಗಳು | – | – |
| **ಒಟ್ಟು** | **15,675,116,322** | **13,892,846,269** |

## ಟಿಪ್ಪಣಿ-24
## ಇತರೆ ಆದಾಯ

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಎ) ಬಡ್ಡಿ ಆದಾಯ<br>ಬ್ಯಾಂಕ್ ಠೇವಣಿಗಳ ಮೇಲೆ | 115,309,207 | 132,275,772 |
| ಬಿ) ಲಾಭಾಂಶದ ಆದಾಯ<br>ಈಕ್ವಿಟಿ ಹೂಡಿಕೆಗಳ ನಿರ್ದೇಶಿತವಾದವುಗಳಿಂದ | - | - |
| ಸಿ) ಇತರೆ ಲಾಭಗಳು ಅಥವಾ ನಷ್ಟಗಳು<br>ವಿದೇಶಿ ಕರೆನ್ಸಿ ವ್ಯವಹಾರಗಳಿಂದ ಬಂದ ನಿವ್ವಳ ಲಾಭ | 315,631 | - |
| ಡಿ) ಇತರೆ ಕಾರ್ಯಾಚರಣೆ ರಹಿತ ಆದಾಯ<br>ಮರಳಿಸಬೇಕಿಲ್ಲದ ಹೊಣೆಗಾರಿಕೆ | 11,989,552 | 4,783,712 |
| ಜೆವಿಯಿಂದ ಬಂದ ಆದಾಯ | 27,276 | 31,751 |
| ಲಾಭಾಂಶ | 4,442,894 | 3,504,295 |
| ಬಾಡಿಗೆ | 33,355,812 | 28,925,050 |
| ಪಡೆದಿರುವ ರಿಯಾಯಿತಿ | 100,921 | 2,214,130 |
| ಆಸ್ತಿಗಳ ಮಾರಾಟದಿಂದ ಬಂದ ಲಾಭ | 259,447 | - |
| ಇತರೆ ವಿವಿಧ ಆದಾಯ | 21,192,960 | 13,780,919 |
| | **186,993,700** | **185,515,629** |

## ಟಿಪ್ಪಣಿ-25
## ಬಳಸಿದ ಸಾಮಗ್ರಿಯ ಬೆಲೆ

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಕಚ್ಚಾ ಸಾಮಗ್ರಿ | 74,548,319 | 104,530,364 |
| ಒಟ್ಟು | **74,548,319** | **104,530,364** |

## ಟಿಪ್ಪಣಿ-26
## ಸಿದ್ಧಪಡಿಸಿದ ಸರಕುಗಳು, ಪ್ರಗತಿಯಲ್ಲಿರುವ ಕಾಮಗಾರಿ ಮತ್ತು ವ್ಯಾಪಾರದ ಸರಕಿನ ತಪಶೀಲುಗಳಲ್ಲಿನ ಬದಲಾವಣೆಗಳು

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| **ಆರಂಭಿಕ ದಾಸ್ತಾನು :** | | |
| ವ್ಯಾಪಾರ ಮಾಡಿದ ಸರಕುಗಳು | 794,172,688 | 553,052,376 |
| ಸಿದ್ಧಪಡಿಸಿದ ಸರಕುಗಳು | 128,624,181 | 180,809,076 |
| | **922,796,869** | **733,861,452** |
| **ಅಖೈರು ದಾಸ್ತಾನು :** | | |
| ವ್ಯಾಪಾರ ಮಾಡಿದ ಸರಕುಗಳು | 999,042,584 | 794,172,688 |
| ಸಿದ್ಧಪಡಿಸಿದ ಸರಕುಗಳು | 142,965,839 | 128,624,181 |
| | **1,142,008,423** | **922,796,869** |
| ದಾಸ್ತಾನಿನಲ್ಲಿ ಇಳಿಕೆ/(ಹೆಚ್ಚಳ) | -219,211,554 | - 188,935,417 |
| ಸಿದ್ಧಪಡಿಸಿದ ಸರಕುಗಳ ತಪಶೀಲಿನ ಸಾಗಾಣಿಕೆಗಾಗಿ ಅಬಕಾರಿ ಸುಂಕದ ಹೊಂದಾಣಿಕೆ | - | - |
| **ನಿವ್ವಳ ಬದಲಾವಣೆ (ಹೆಚ್ಚಳ)/ಇಳಿಕೆ** | **-219,211,554** | **- 188,935,417** |

## ಟಿಪ್ಪಣಿ-27
## ನೌಕರರ ಸೌಲಭ್ಯದ ಖರ್ಚುಗಳು

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| (ಎ) ಸಂಬಳಗಳು, ವೇತನಗಳು ಮತ್ತು ಬೋನಸ್ | 177,626,048 | 176,002,655 |
| (ಬಿ) ಭವಿಷ್ಯನಿಧಿ ಮತ್ತು ಇತರೆ ನಿಧಿಗಳಿಗೆ ವಂತಿಗೆ | 25,675,489 | 13,433,229 |
| (ಸಿ) ಪರಿಹಾರಿತ ಗೈರು ಹಾಜರಿಗಳು | 33,840,001 | 12,899,398 |
| (ಡಿ) ಗ್ರ್ಯಾಚ್ಯುಟಿ | 18,469,973 | 530,824 |
| (ಇ) ಕಾರ್ಮಿಕರು ಮತ್ತು ಸಿಬ್ಬಂದಿ ಕಲ್ಯಾಣ ಖರ್ಚುಗಳು | 27,629,066 | 27,978,930 |
| **ಒಟ್ಟು** | **283,240,578** | **230,845,036** |

## ಟಿಪ್ಪಣಿ-28
## ಹಣಕಾಸಿನ ವೆಚ್ಚ

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| (i) ಬಡ್ಡಿ ವೆಚ್ಚಗಳು | | |
| (ಎ) ಬ್ಯಾಂಕ್ ಸಾಲಗಳು ಮತ್ತು ಇತರೆ | 89,781 | 243,864 |
| (ಬಿ) ಸರ್ಕಾರದ ಸಾಲಗಳು | – | – |
| (ii) ಇತರೆ ಸಾಲದ ವೆಚ್ಚಗಳು | 10,352,894 | 5,087,007 |
| **ಒಟ್ಟು** | **10,442,675** | **5,330,871** |

## ಟಿಪ್ಪಣಿ-29
## ಸವಕಳಿ ಮತ್ತು ಅಮಾರ್ಟೈಜೇಷನ್ ಖರ್ಚುಗಳು

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಕೆಳಕಂಡವುಗಳ ಬಗ್ಗೆ ಸವಕಳಿ/ಅಮಾರ್ಟೈಜೇಷನ್ | | |
| (ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ | 34,185,195 | 28,521,468 |
| (ಬಿ) ಹೂಡಿಕೆ ಸ್ವತ್ತು | | |
| (ಸಿ) ಅಗೋಚರಿತ ಆಸ್ತಿಗಳು | | |
| **ಒಟ್ಟು** | **34,185,195** | **28,521,468** |

## ಟಿಪ್ಪಣಿ-30
## ಇತರೆ ಖರ್ಚುಗಳು

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ | |
|---|---|---|---|---|
| ಪರಿವರ್ತನೆ ಶುಲ್ಕಗಳು–ನೋಟ್ ಪುಸ್ತಕಗಳು | | 10,955,747 | | 14,018,664 |
| ಪ್ಯಾಕಿಂಗ್ ಸಾಮಗ್ರಿ ಮತ್ತು ದ್ವಿತೀಯ ಹಂತದ ಸಾಗಾಣಿಕೆ | | 65,946,000 | | 67,905,227 |
| ಹೊರಗುತ್ತಿಗೆ ಖರ್ಚುಗಳು | | 326,804,356 | | 242,345,257 |
| ಬಾಡಿಗೆ | | 101,231,734 | | 70,075,422 |
| **ದುರಸ್ತಿ ಮತ್ತು ನಿರ್ವಹಣೆ:** | | | | |
| – ಕಟ್ಟಡ | 17,612,939 | | 10,206,488 | |
| –ವಾಹನ | 1,709,738 | | 800,029 | |
| –ಇತರೆ | 18,739,584 | 38,062,261 | 9,354,897 | 20,361,414 |
| ವಿಮೆ | | 8,091,249 | | 7,724,119 |
| ದರಗಳು ಮತ್ತು ತೆರಿಗೆಗಳು | | 395,332,983 | | 222,227,524 |
| ವಿವಿಧ ಖರ್ಚುಗಳು | | 28,108,030 | | 13,391,013 |
| ಜಾಹೀರಾತು | | 44,537,591 | | 29,630,590 |
| **ಲೆಕ್ಕ ಪರಿಶೋಧಕರಿಗೆ ಪಾವತಿ:** | | | | |
| –ಲೆಕ್ಕ ಪರಿಶೋಧನೆಗೆ | | 1,136,576 | | 402,500 |
| –ತೆರಿಗೆ ಪರಿಶೋಧನೆಗೆ | | 90,860 | | 80,500 |
| ಅಂಚೆ, ಟೆಲೆಕ್ಸ್ ಮತ್ತು ದೂರವಾಣಿಗಳು | | 9,744,817 | | 8,644,997 |
| ಮುದ್ರಣ ಮತ್ತು ಲೇಖನ ಸಾಮಗ್ರಿ | | 10,356,522 | | 9,220,959 |
| ಕಾನೂನು ಮತ್ತು ವೃತ್ತಿ ಶುಲ್ಕಗಳು | | 32,221,097 | | 33,475,903 |
| ಪ್ರಯಾಣ | | 24,577,193 | | 19,411,074 |
| ವಿದ್ಯುತ್ ಮತ್ತು ನೀರು | | 11,377,668 | | 10,547,856 |
| ಭದ್ರತಾ ಸೇವೆಗಳು | | 4,180,788 | | 5,063,217 |

| | | | | |
|---|---|---|---|---|
| ಕಮಿಷನ್ | | 50,751,030 | | 17,062,172 |
| ಮುಖ್ಯಮಂತ್ರಿಯವರ ಪರಿಹಾರ ನಿಧಿ (ಸಿಎಸ್‌ಆರ್) | | 54,079,716 | | 20,000,000 |
| ದೇಣಿಗೆಗಳು | | | | |
| ಪ್ರಕರಣ 80 ಜಿ ಅನ್ವಯ | – | | 225,000 | |
| ಪ್ರಕರಣ 80 ಜಿ ಹೊರತಾಗಿ | – | | 1,500,000 | |
| ನಿರ್ದೇಶಕರ ಹಾಜರಾತಿ ಶುಲ್ಕ | 152,160 | | 53,000 | |
| ವಸೂಲಾಗದ ಮತ್ತು ಸಂದೇಹಾಸ್ಪದ ಸಾಲಗಳು | 7,175,104 | | – | |
| ವಿದೇಶಿ ವಿನಿಮಯ ಏರಿಳಿತ | | – | | – |
| ಆಸ್ತಿಗಳ ಮಾರಾಟದಲ್ಲಿ ಆದ ನಷ್ಟ | | 97,485 | | 20,590 |
| ಸಂದೇಹಾಸ್ಪದ ಸಾಲಗಳು/ಮುಂಗಡಗಳಿಗೆ ವ್ಯವಸ್ಥೆ | | 13,278,607 | | 5,060,379 |
| **ಒಟ್ಟು** | | **1,238,289,574** | | **818,447,377** |

## ಟಿಪ್ಪಣಿ-31
## ಅಸಾಧಾರಣ ಬಾಬ್ತುಗಳು

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಅಸಾಧಾರಣ ಬಾಬ್ತುಗಳು (ಖರ್ಚು) | 1,283,154 | 1,285,202 |
| ಹಿಂದಿನ ಅವಧಿಯ ಖರ್ಚುಗಳು | | 1,788,661 |
| ಅಸಾಧಾರಣ ಬಾಬ್ತುಗಳು (ಜಮೆ) | | |
| ಅಸಾಧಾರಣ ಬಾಬ್ತುಗಳು (ನಿವ್ವಳ) | **1,283,154** | **3,073,863** |

## ಟಿಪ್ಪಣಿ-32
## ಮುಂದುವರಿಯುತ್ತಿರುವ ಷೇರು ಒಂದರ ಗಳಿಕೆ ಆದಾಯ ತೆರಿಗೆಗಳು

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಮುಂದುವರಿಯುತ್ತಿರುವ ಕಾರ್ಯಾಚರಣೆಗಳಿಂದ ಷೇರು ಒಂದರ ಮೂಲ ಗಳಿಕೆ | 68.01 | 181.58 |
| ಮುಂದುವರಿಯುತ್ತಿರುವ ಕಾರ್ಯಾಚರಣೆಗಳಿಂದ ಷೇರು ಒಂದರ ದ್ರವೀಕೃತ ಗಳಿಕೆ | 68.01 | 181.58 |
| ಸ್ಥಗಿತಗೊಂಡ ಕಾರ್ಯಾಚರಣೆಗಳ ಷೇರು ಒಂದರ ಮೂಲ ಗಳಿಕೆಗಳು | (0.50) | 0.10 |
| ಸ್ಥಗಿತಗೊಂಡ ಕಾರ್ಯಾಚರಣೆಗಳ ಷೇರು ಒಂದ ದ್ರವೀಕೃತ ಗಳಿಕೆಗಳು | 0.50 | 0.10 |

39.1 ಷೇರು ಒಂದರ ಮೂಲ ಗಳಿಕೆ

ಷೇರು ಒಂದರ ಮೂಲ ಗಳಿಕೆಯ ಲೆಕ್ಕಾಚಾರಕ್ಕೆ ಗಣನೆ ಮಾಡಿರುವ ಗಳಿಕೆಗಳು ಮತ್ತು ನಿರ್ಧರಿತ ಒಟ್ಟಾರೆ ಸಂಖ್ಯೆಯ ಈಕ್ವಿಟಿ ಷೇರುಗಳು ಈ ಕೆಳಕಂಡಂತಿರುವುದು.

| | | |
|---|---|---|
| ಮುಂದುವರೆಯುತ್ತಿರುವ ಕಾರ್ಯಾಚರಣೆಗಳಿಂದ ಬಂದ, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಲಾಭ | 14,26,93,704 | 36,63,68,425 |
| ಸ್ಥಗಿತವಾದ ಕಾರ್ಯಾಚರಣೆಗಳಿಂದ ಬಂದ, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಲಾಭ | 10,43,887 | 201,859 |
| ವರ್ಷಾರಂಭದಲ್ಲಿ ಬಾಕಿಯಿರುವ ತಲಾ ರೂ.100ರ ಈಕ್ವಿಟಿ ಷೇರುಗಳ ಸಂಖ್ಯೆ | 20,17,660 | 20,17,660 |
| ವರ್ಷಾಂತ್ಯದಲ್ಲಿ ಬಾಕಿಯಿರುವ ತಲಾ ರೂ.100ರ ಈಕ್ವಿಟಿ ಷೇರುಗಳ ಸಂಖ್ಯೆ | 42,73,477 | 20,17,660 |
| ಈಕ್ವಿಟಿ ಷೇರುಗಳ ನಿರ್ಧರಿತ ಒಟ್ಟಾರೆ ಸಂಖ್ಯೆ | 20,98,004 | 20,17,660 |

ಷೇರು ಒಂದರ ಮೂಲ ಗಳಿಕೆಗಳನ್ನು ಲೆಕ್ಕಾಚಾರ ಮಾಡಲು ಬಳಸಿರುವ ಈಕ್ವಿಟಿ ಷೇರುಗಳ ಗಳಿಕೆ ನಿರ್ಧರಿತ ಒಟ್ಟು ಸಂಖ್ಯೆಗೆ ಷೇರು ಒಂದರ ದ್ರವೀಕೃತ ಗಳಿಕೆಯನ್ನು ಸಮಂಜಸತೆ ಮಾಡುವ ಉದ್ದೇಶಕ್ಕಾಗಿ ಈಕ್ವಿಟಿ ಷೇರುಗಳ ನಿರ್ಧರಿತ ಸರಾಸರಿ ಸಂಖ್ಯೆ ಕೆಳಕಂಡಂತಿರುವುದು:

| | | |
|---|---|---|
| ಷೇರು ಒಂದರ ಮೂಲ ಗಳಿಕೆಗಳನ್ನು ಲೆಕ್ಕಾಚಾರ ಮಾಡಲು ತೆಗೆದುಕೊಂಡಿರುವ ಈಕ್ವಿಟಿ ಷೇರುಗಳ ನಿರ್ಧರಿತ ಸರಾಸರಿ ಸಂಖ್ಯೆ | 20,98,004 | 20,17,600 |
| ಪರಿಗಣನೆಗಾಗಿ ನೀಡಿದ್ದೆಂದು ಭಾವಿಸಲಾದ ಷೇರುಗಳು | – | – |
| ಷೇರು ಒಂದರ ದ್ರವೀಕೃತ ಗಳಿಕೆಗಳನ್ನು ಲೆಕ್ಕಾಚಾರ ಮಾಡಲು ತೆಗೆದುಕೊಂಡಿರುವ ಈಕ್ವಿಟಿ ಷೇರುಗಳ ನಿರ್ಧರಿತ ಸರಾಸರಿ ಸಂಖ್ಯೆ | 20,98,004 | 20,17,660 |

## ಟಿಪ್ಪಣಿ–33
## ಲೆಕ್ಕಪರಿಶೋಧಕರಿಗೆ ಪಾವತಿ

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಎ) ಲೆಕ್ಕ ಪರಿಶೋಧನೆ ಶುಲ್ಕಗಳು | 1,136,576 | 402,500 |
| ಬಿ) ಇತರೆ ಸೇವೆಗಳಿಗೆ ಶುಲ್ಕಗಳು | 90,860 | 80,500 |
| ಒಟ್ಟು | **1,227,436** | **483.000** |

## ಟಿಪ್ಪಣಿ–34
## ಹೂಡಿಕೆ ಸ್ವತ್ತಿನಿಂದ ಉಂಟಾದ ನೇರ ಕಾರ್ಯಾಚರಣೆ ಖರ್ಚುಗಳು

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಈ ಅವಧಿಯಲ್ಲಿ ಬಾಡಿಗೆ ಆದಾಯಗಳಿಸಿದ ಸ್ವತ್ತು | – | – |
| ಈ ಅವಧಿಯಲ್ಲಿ ಬಾಡಿಗೆ ಆದಾಯಗಳಿಸಿರದ ಸ್ವತ್ತು | – | – |
| ಒಟ್ಟು | | |

## ಟಿಪ್ಪಣಿ-35
## ನಿರ್ದೇಶಕರ ಸಂಭಾವನೆ

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಎ) ಸಂಭಾವನೆ | 3,185,273 | 1,622,939 |
| ಬಿ) ಹಾಜರಿ ಶುಲ್ಕ | 152,160 | 53,000 |
| ಸಿ) ವೈದ್ಯಕೀಯ | 794,642 | 385,633 |
| ಒಟ್ಟು | **4,132,075** | **2,061,572** |

## ಟಿಪ್ಪಣಿ-36
## ಕಾರ್ಯಾಚರಣೆ ಗುತ್ತಿಗೆ ವ್ಯವಸ್ಥೆಗಳು (ಕಂಪನಿ ಗುತ್ತಿಗೆ ನೀಡಿಕೆದಾರನಾಗಿ)

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಬಾಡಿಗೆ ಆದಾಯ | – | – |
| ಒಟ್ಟು | – | – |

## ಟಿಪ್ಪಣಿ-37
## ಮುಂದುವರೆಯುತ್ತಿರುವ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಆದಾಯ ತೆರಿಗೆಗಳು:

| ವಿವರಗಳು | 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಚಾಲ್ತಿ ತೆರಿಗೆ | | |
| ಚಾಲ್ತಿ ವರ್ಷಕ್ಕೆ | 9,39,76,982 | 19,77,73,538 |
| ಹಿಂದಿನ ವರ್ಷಗಳಿಗೆ | – | – |
| ಮುಂದೂಡಿದ ತೆರಿಗೆ | | |
| ಚಾಲ್ತಿ ವರ್ಷಕ್ಕೆ | 5,21,787 | 37,47,661 |
| **ಒಟ್ಟು** | **9,44,98,769** | **20,15,21,199** |

**ಟಿಪ್ಪಣಿ-(1) ವ್ಯವಹಾರದ ಹೊಂದಾಣಿಕೆಗಳು**

## ಟಿಪ್ಪಣಿ-38
## ವ್ಯವಹಾರದ ಹೊಂದಾಣಿಕೆಗಳು

| ವಿವರಗಳು | ಕೆಳಕಂಡಂತೆ ಕೊನೆಗೊಂಡ ಅವಧಿಯಲ್ಲಿ | | |
|---|---|---|---|
| | 31ನೇ ಮಾರ್ಚ್ 2016 | 31ನೇ ಮಾರ್ಚ್ 2017 | 31ನೇ ಮಾರ್ಚ್ 2018 |
| ಯೋಜನೆ ಹೊಣೆಗಾರಿಕೆಗಳಿಂದ (ಗಳಿಕೆ)/ನಷ್ಟ | - | -8,06,765 | 6,70,315 |
| ಆರಂಭಿಕ ಯೋಜನಾ ಹೊಣೆಗಾರಿಕೆಗಳ % | 0.00% | -7.48% | 7.67% |
| ಯೋಜನಾ ಆಸ್ತಿಗಳಿಂದ ಗಳಿಕೆ/(ನಷ್ಟ) | - | - | -53.892 |
| ಆರಂಭಿಕ ಯೋಜನಾ ಆಸ್ತಿಗಳ % | 0.00% | 0.00% | -0.69% |

## ಟಿಪ್ಪಣಿ-39

(ಎ) ವ್ಯವಹಾರದ ಹೊಂದಾಣಿಕೆಯನ್ನು ಲಭ್ಯವಿರುವ ವಿವರಗಳ ಪ್ರಮಾಣಕ್ಕೆ ಮಾತ್ರ ಮಾಡಲಾಗಿದೆ.

(ಬಿ) ಹಣದುಬ್ಬರ, ಜ್ಯೇಷ್ಠತೆ, ಬಡ್ತಿ ಮತ್ತು ಇತರೆ ಸಂಬಂಧಪಟ್ಟ ಅಂಶಗಳನ್ನು ಗಣನೆಗೆ ತೆಗೆದುಕೊಂಡಿರುವ ಮೇರೆಗೆ ಮುಂದಿನ ಸಂಬಳ ಹೆಚ್ಚಳದ ಅಂದಾಜು ಮಾಡಿದೆ.

(ಸಿ) ರಿಯಾಯಿತಿ ದರವು ಹೊಣೆಗಾರಿಕೆಯ ಅಂದಾಜು ಮಾಡಿದ ಅವಧಿಯ ಸ್ಥಿತಿ ವಿವರಣಪಟ್ಟಿ ದಿನಾಂಕದಂದು ಭಾರತ ಸರ್ಕಾರದ ಬಾಂಡ್‌ಗಳ ಜಾರಿಯಲ್ಲಿರುವ ಮಾರುಕಟ್ಟೆ ಗಳಿಕೆಗಳ ಆಧಾರದ ಮೇಲಿರುವುದು.

(ಡಿ) ಕಂಪನಿಯ ಗ್ರ್ಯಾಚ್ಯುಟಿ ನಿಧಿಗಳನ್ನು ಮೆ॥ ಜೀವ ವಿಮಾ ನಿಗಮ ನಿರ್ವಹಿಸುತ್ತಿರುವುದು ಮತ್ತು ಇದರಿಂದಾಗಿ ನಿಧಿಯ ಆಸ್ತಿಗಳ ಸಂಯೋಜನೆ ಪ್ರಸಕ್ತದಲ್ಲಿ ತಿಳಿದುಬರುವುದಿಲ್ಲ.

(ಇ) ಮುಂದಿನ ವರ್ಷದ ಅವಧಿಯಲ್ಲಿ ಯೋಜನೆಗೆ ಪಾವತಿ ಮಾಡಬೇಕಾಗಿರುವ ವಂತಿಗೆ ರೂ.2,338,369 ಎಂದು ಕಂಪನಿ ಉತ್ತಮ ಅಂದಾಜು ಮಾಡಿದೆ.

## ಟಿಪ್ಪಣಿ (ii) ಸೂಕ್ಷ್ಮತೆಯ ವಿಶ್ಲೇಷಣೆ

ನಿರೂಪಿತ ಸೌಲಭ್ಯ ಹೊಣೆಗಾರಿಕೆಯ ನಿರ್ಧರಣೆಗೆ ಮಾಡಿರುವ ಮಹತ್ವವಾದ ವಿಮಾಗಣನ ಊಹೆಗಳು-ರಿಯಾಯಿತಿ ದರ, ನಿರೀಕ್ಷಿತ ಸಂಬಳ ಹೆಚ್ಚಳ ಮತ್ತು ಸವಕಳಿ ದರಗಳಾಗಿರುವುವು. ಈ ಕೆಳಗೆ ತಿಳಿಸಿರುವ ಸೂಕ್ಷ್ಮತೆ ವಿಶ್ಲೇಷಣೆಯನ್ನು ವರದಿಗಾರಿಕೆ ಅವಧಿ ಕೊನೆಯಲ್ಲಿ ಉಂಟಾಗುವ ಊಹೆಗಳ ಸೂಕ್ತವಾದ ಬದಲಾವಣೆ ಸಾಧ್ಯತೆ ಮೇಲೆ ಮಾಡಲಾಗಿದೆ. ಇತರೆ ಎಲ್ಲಾ ಊಹೆಗಳು ಸ್ಥಿರವಾಗಿರುವವು. ಸೂಕ್ಷ್ಮತೆ ವಿಶ್ಲೇಷಣೆಯ ಫಲಿತಾಂಶಗಳನ್ನು ಈ ಕೆಳಗೆ ನೀಡಿದೆ;

| ವಿವರಗಳು | 31ನೇ ಮಾರ್ಚ್ 2018 | 31ನೇ ಮಾರ್ಚ್ 2017 | 01ನೇ ಏಪ್ರಿಲ್ 2016 |
|---|---|---|---|
| **ರಿಯಾಯಿತಿ ದರ** | - | - | - |
| -0.50% ಹೆಚ್ಚಳ | - | - | - |
| -0.50% ಇಳಿಕೆ | - | - | - |
| **ಸಂಬಳ ಹೆಚ್ಚಳ ದರ** | - | - | - |
| -0.50% ಹೆಚ್ಚಳ | - | - | - |
| -0.50% ಇಳಿಕೆ | - | - | - |
| **ಸವಕಳಿ ದರ** | - | - | - |
| -0.50% ಹೆಚ್ಚಳ | - | - | - |
| -0.50% ಇಳಿಕೆ | - | - | - |

## ಟಿಪ್ಪಣಿ-40

### 40.1 ಬಂಡವಾಳ ನಿರ್ವಹಣೆ:

ಖರ್ಚು ಮತ್ತು ಈಕ್ವಿಟಿ ಬಾಕಿಗಳನ್ನು ಸಮನ್ವಯಗೊಳಿಸುವ ಮೂಲಕ ಕಂಪನಿಯ ದೀರ್ಘಾವಧಿ ಮತ್ತು ಅಲ್ಪಾವಧಿ ಉದ್ದೇಶಗಳನ್ನು ಈಡೇರಿಸಲು ಷೇರುದಾರರುಗಳಿಗೆ ನೀಡುವ ಲಾಭವನ್ನು ಗರಿಷ್ಠಗೊಳಿಸಲು ಕಂಪನಿ ಬಂಡವಾಳ ನಿರ್ವಹಣೆಯ ಉದ್ದೇಶವಾಗಿದೆ.

ಕಂಪನಿಯು ವಾರ್ಷಿಕ ಮತ್ತು ದೀರ್ಘಾವಧಿ ಕಾರ್ಯಾಚರಣೆ ಯೋಜನೆಗಳು ಮತ್ತು ಯುಕ್ತವಾದ ಹೂಡಿಕೆ ಯೋಜನೆಗಳ ಆಧಾರದ ಮೇಲೆ ಅಗತ್ಯವಾದ ಬಂಡವಾಳದ ಮೊತ್ತವನ್ನು ನಿರ್ಧರಿಸುವುದು. ಅಗತ್ಯವಿರುವ ಹಣ ನೀಡಿಕೆಯನ್ನು ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲಗಳ ಮೂಲಕ ಮಾಡಲಾಗುವುದು. ಕಂಪನಿಯು ಈಕ್ವಿಟಿ ಅನುಪಾತದ ಋಣ ಮತ್ತು ಕಂಪನಿಯ ಒಟ್ಟಾರೆ ಋಣದ ಪಕ್ವತೆ ಆಧಾರದ ಮೇಲೆ ಬಂಡವಾಳ ಸ್ವರೂಪವನ್ನು ನಿಭಾಯಿಸುವುದು.

ಈ ಕೆಳಕಂಡ ತಃಖ್ತೆಯು ಕಂಪನಿಯ ಬಂಡವಾಳದ ಸಾರಾಂಶವನ್ನು ತಿಳಿಸುವುದು.

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| ಈಕ್ವಿಟಿ | 3,275,047,483 | 3,13,33,97,652 | 2,79,05,45,141 |
| ಋಣ | | | |
| ನಗದು ಮತ್ತು ನಗದು ಸಮಾನಗಳು | 1,31,62,54,627 | 1,36,12,75,407 | 97,15,88,921 |
| ನಿವ್ವಳ ಋಣ | 1,31,62,54,627 | 1,36,12,75,407 | 97,15,88,921 |
| ಒಟ್ಟು ಬಂಡವಾಳ (ಈಕ್ವಿಟಿ+ನಿವ್ವಳ ಋಣ) | 4,591,302,110 | 4,49,46,73,059 | 3,76,21,34,062 |
| ಬಂಡವಾಳ ಅನುಪಾತಕ್ಕೆ ನಿವ್ವಳ ಋಣ | 0.29 | 0.30 | 0.26 |

## 40.2 ಹಣಕಾಸಿನ ಸಾಧನಗಳ ಪ್ರವರ್ಗಗಳು

| ವಿವರಗಳು | 31ನೇ ಮಾರ್ಚ್ 2018ರಂದು ಇದ್ದಂತೆ | 31ನೇ ಮಾರ್ಚ್ 2017ರಂದು ಇದ್ದಂತೆ | 1ನೇ ಏಪ್ರಿಲ್ 2016ರಂದು ಇದ್ದಂತೆ |
|---|---|---|---|
| **ಹಣಕಾಸಿನ ಆಸ್ತಿಗಳು** | | | |
| **ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದ ಮಾಪನ** | | | |
| ಎ) ಕಡ್ಡಾಯವಾಗಿ ಮಾಡಿದ ಮಾಪನ: | | | |
| i) ಈಕ್ವಿಟಿ ಹೂಡಿಕೆಗಳು | - | - | - |
| **ಕುಗ್ಗಿದ ಬೆಲೆಯಲ್ಲಿ ಮಾಪನ ಮಾಡಿರುವುದು** | | | |
| i) ನಗದು ಮತ್ತು ಬ್ಯಾಂಕ್ ಶಿಲ್ಕುಗಳು | 1,31,62,54,627.00 | 1,36,12,75,407.00 | 97,15,88,921.00 |
| ii) ಕುಗ್ಗಿದ ಬೆಲೆಯಲ್ಲಿ ಇತರೆ ಹಣಕಾಸಿನ ಆಸ್ತಿಗಳು | - | - | - |
| **ಈ ಕೆಳಕಂಡಂತೆ ಮಾಪನ ಮಾಡಿರುವುದು** | | | |
| i) ಪ್ರಾರಂಭಿಕ ಮಾನ್ಯತೆ ಮೇಲೆ ನಿರ್ಧರಿಸಲ್ಪಟ್ಟ ಈಕ್ವಿಟಿ ಸಾಧನಗಳಲ್ಲಿ ಹೂಡಿಕೆ ಮಾಡಿರುವುದು | - | - | - |
| **ಇರುವ ಬೆಲೆಯಂತೆ ಮಾಪನ ಮಾಡಿರುವುದು** ಸಹಾಯಕ/ಸಹವರ್ತಿ ಸಂಸ್ಥೆಗಳಲ್ಲಿನ ಈಕ್ವಿಟಿ ಸಾಧನಗಳಲ್ಲಿ ಮಾಡಿರುವ ಹೂಡಿಕೆಗಳು | 134,597,831.00 | 134,597,831.00 | 133,647,831.00 |
| **ಹಣಕಾಸಿನ ಹೊಣೆಗಾರಿಕೆಗಳು** | | | |
| ಕುಗ್ಗಿದ ಬೆಲೆಯಲ್ಲಿ ಮಾಪನ ಮಾಡಿರುವುದು ಮಾಪನ ಮಾಡಿರುವುದು. | - | - | - |

## 40.3 ಸಾಲದ ಅಪಾಯ ನಿರ್ವಹಣೆ:

ಎದುರು ಪಕ್ಷದವರು ಒಪ್ಪಂದವಾದ ಹೊಣೆಗಾರಿಕೆಗಳನ್ನು ನಿರ್ವಹಿಸುವಲ್ಲಿ ವಿಫಲವಾದ ಪ್ರಯುಕ್ತ ಕಂಪನಿಗಳ ಹಣಕಾಸಿನ ನಷ್ಟ ಸಂಭವಿಸಿದ ಅಪಾಯಕ್ಕೆ ಸಾಲದ ಅಪಾಯ ಒಳಪಡುವುದು. ಬ್ಯಾಂಕುಗಳಲ್ಲಿನ ಮತ್ತು ಹಣಕಾಸು ಸಂಸ್ಥೆಗಳಲ್ಲಿನ ಠೇವಣಿಗಳು, ವಿದೇಶಿ ವಿನಿಮಯ ವ್ಯವಹಾರಗಳು ಮತ್ತು ಇನ್ನಿತರೆ ಹಣಕಾಸಿನ ಸಾಧನಗಳು ಒಳಗೊಂಡಂತೆ ಕಂಪನಿಯು ಅದರ ಕಾರ್ಯಾಚರಣೆ ಚಟುವಟಿಕೆಗಳು (ಪ್ರಮುಖವಾಗಿ ವ್ಯಾಪಾರದ ಸಂಬಂಧ ಬರಬೇಕಾಗಿರುವುದು) ಮತ್ತು ಅದರ ಹಣಕಾಸು ನೀಡಿಕೆ ಚಟುವಟಿಕೆಗಳ ಸಂಬಂಧ ಕಂಪನಿ ಸಾಲದ ಅಪಾಯಕ್ಕೆ ಒಳಗಾಗಿದೆ.

ಗ್ರಾಹಕರ ಸಾಲದ ಅಪಾಯ ನಿರ್ವಹಣೆಗೆ ಸಂಬಂಧಿಸಿದಂತೆ ಕಂಪನಿಯ ರೂಪಿತ ನೀತಿ, ಕ್ರಮಾವಳಿಗಳು ಮತ್ತು ನಿಯಂತ್ರಣಕ್ಕೆ ಒಳಪಟ್ಟಂತೆ, ಪ್ರತಿ ವ್ಯವಹಾರ ಘಟಕವು ಗ್ರಾಹಕರ ಸಾಲದ ಅಪಾಯವನ್ನು ನಿರ್ವಹಣೆ ಮಾಡುವುದು. ಕಂಪನಿಯು ತನ್ನ ಬಹುಪಾಲು ಗ್ರಾಹಕರುಗಳ ಸಾಲದ ಗುಣಮಟ್ಟ ಮೌಲ್ಯಮಾಪನ ಮಾಡಲು ಹಣಕಾಸಿನ ಮಾಹಿತಿ ಮತ್ತು ಹಿಂದಿನ ಅನುಭವವನ್ನು ಕಂಪನಿ ಪರಿಗಣಿಸುವುದು. ಪ್ರತಿಯೊಂದು ಸಾಲದ ಮಿತಿಗಳನ್ನು ಸದರಿ ನಿರ್ಧರಣೆ ಅನುಸಾರ ನಿರೂಪಿಸಿದೆ.

ಹಿಂದಿನ ಅನುಭವದ ಆಧಾರದ ಮೇಲೆ ನೋಡಿದರೆ ನಿರೀಕ್ಷಿತ ವಾಸ್ತವಿಕ ಸಾಲದ ನಷ್ಟ ಇರುವುದಿಲ್ಲ. ಆದರೂ, ಕಂಪನಿಯು ಪ್ರತಿಯೊಂದು ಬಾಬ್ತುಗಳ ಸಂಬಂಧ ವ್ಯಾಪಾರದಿಂದ ಬರಬೇಕಾಗಿರುವುದರಲ್ಲಿ ಆಗುವ ಸವಕಳಿಯನ್ನು ನಿರ್ಧರಣೆ ಮಾಡುವುದು ಮತ್ತು ಅದರನುಸಾರ ನಷ್ಟದ ಅಂಗೀಕಾರ ಮಾಡಿದೆ.

ನಗದು ಮತ್ತು ಬ್ಯಾಂಕ್ ಶಿಲ್ಕುಗಳ ಜಮೆ ಅಪಾಯ ಸೀಮಿತವಾಗಿರುವುದು. ಏಕೆಂದರೆ ಎದುರು ಪಕ್ಷಕಾರರು ಬ್ಯಾಂಕುಗಳಾಗಿರುವುವು. ಇವು ಮಾನ್ಯತೆ ನೀಡಿದ ರೇಟಿಂಗ್ ಏಜೆನ್ಸಿಗಳಿಂದ ಅತ್ಯುನ್ನತ ಕ್ರೆಡಿಟ್ ರೇಟಿಂಗ್ ಪಡೆದಿರುತ್ತವೆ.

ಈ ಕೆಳಗಿನ ತಃಖ್ತೆಯು 31ನೇ ಮಾರ್ಚ್ 2018ರಲ್ಲಿದ್ದಂತೆ ಹಣಕಾಸಿನ ಆಸ್ತಿಗಳ ವಿವರಗಳನ್ನು ನೀಡುವುದು:

| ವಿವರಗಳು | ವಾಹಕ ಮೊತ್ತ |
|---|---|
| ವ್ಯಾಪಾರದಿಂದ ಬರಬೇಕಾಗಿರುವುದು | 21,66,27,525 |
| ಇತರೆ ಹಣಕಾಸಿನ ಆಸ್ತಿಗಳು | - |

**40.4 ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರದ (ಆದರೆ ನ್ಯಾಯೋಚಿತ ಮೌಲ್ಯ ಪ್ರಕಟಣೆ ಅಗತ್ಯವಾಗಿರುವುದು) ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ನ್ಯಾಯೋಚಿತ ಮೌಲ್ಯ**

| ವಿವರಗಳು | ನ್ಯಾಯೋಚಿತ ಮೌಲ್ಯ ಶ್ರೇಣಿ | 31ನೇ ಮಾರ್ಚ್ 2018 ರಲ್ಲಿದ್ದಂತೆ | | 31ನೇ ಮಾರ್ಚ್ 2017 ರಲ್ಲಿದ್ದಂತೆ | | 01ನೇ ಏಪ್ರಿಲ್ 2016 ರಲ್ಲಿದ್ದಂತೆ | |
|---|---|---|---|---|---|---|---|
| | | ವಾಹಕ ಮೊತ್ತ | ನ್ಯಾಯೋಚಿತ ಮೌಲ್ಯ | ವಾಹಕ ಮೊತ್ತ | ನ್ಯಾಯೋಚಿತ ಮೌಲ್ಯ | ವಾಹಕ ಮೊತ್ತ | ನ್ಯಾಯೋಚಿತ ಮೌಲ್ಯ |
| ಹಣಕಾಸಿನ ಆಸ್ತಿಗಳು | | | | | | | |
| ಅಮಾರ್ಟೈಸ್ಡ್ ಬೆಲೆಯಲ್ಲಿನ ಹಣಕಾಸಿನ ಆಸ್ತಿಗಳು: | | | | | | | |
| ವ್ಯಾಪಾರದಿಂದ ಬರಬೇಕಾಗಿರುವುದು | ಮಟ್ಟ 2 | 21,66,27,525 | 21,66,27,525 | 14,16,20,843 | 14,16,20,843 | 3,40,04,814 | 3,40,04,814 |
| ನಗದು ಮತ್ತು ನಗದು ಸಮಾನಗಳು | ಮಟ್ಟ 2 | 1,31,62,54,627 | 1,31,62,54,627 | 1,36,12,75,407 | 1,36,12,75,407 | 97,15,88,921 | 97,15,88,921 |
| ನಗದು ಮತ್ತು ನಗದು ಸಮಾನಗಳು ಹೊರತಾಗಿ ಬ್ಯಾಂಕ್ ಶಿಲ್ಕುಗಳು | ಮಟ್ಟ2 | 77,37,50,228 | 77,37,50,228 | 74,81,14,714 | 74,81,14,714 | 65,90,15,606 | 65,90,15,606 |
| ಇತರೆ ಹಣಕಾಸಿನ ಆಸ್ತಿಗಳು | ಮಟ್ಟ2 | - | - | - | - | - | - |

| ವಿವರಗಳು | ನ್ಯಾಯೋಚಿತ ಮೌಲ್ಯ ಶ್ರೇಣಿ | 31ನೇ ಮಾರ್ಚ್ 2018 ರಲ್ಲಿದ್ದಂತೆ | | 31ನೇ ಮಾರ್ಚ್ 2017 ರಲ್ಲಿದ್ದಂತೆ | | 01ನೇ ಏಪ್ರಿಲ್ 2016 ರಲ್ಲಿದ್ದಂತೆ | |
|---|---|---|---|---|---|---|---|
| | | ವಾಹಕ ಮೊತ್ತ | ನ್ಯಾಯೋಚಿತ ಮೌಲ್ಯ | ವಾಹಕ ಮೊತ್ತ | ನ್ಯಾಯೋಚಿತ ಮೌಲ್ಯ | ವಾಹಕ ಮೊತ್ತ | ನ್ಯಾಯೋಚಿತ ಮೌಲ್ಯ |
| ಹಣಕಾಸಿನ ಹೊಣೆಗಾರಿಕೆಗಳು | | | | | | | |
| ಅಮೋರ್ಟೈಸ್ಡ್ ಬೆಲೆಯಲ್ಲಿನ ಹಣಕಾಸಿನ ಹೊಣೆಗಾರಿಕೆಗಳು | | | | | | | |
| ಸಾಲಗಳು | ಮಟ್ಟ2 | - | - | - | - | - | - |
| ವ್ಯಾಪಾರದ ಸಂಬಂಧ ಪಾವತಿಸಬೇಕಾಗಿರುವುದು | ಮಟ್ಟ2 | 1,81,67,67,702 | 1,81,67,67,702 | 1,11,39,60,906 | 1,11,39,60,906 | 1,11,49,86,890 | 1,11,49,86,890 |
| ಇನ್ನಿತರೆ ಹಣಕಾಸಿನ ಹೊಣೆಗಾರಿಕೆಗಳು | ಮಟ್ಟ2 | - | - | - | - | - | - |

1. ವ್ಯಾಪಾರದಿಂದ ಬರಬೇಕಾಗಿರುವುದು, ನಗದು ಮತ್ತು ನಗದು ಸಮಾನಗಳು, ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು, ಅಲ್ಪಾವಧಿ ಸಾಲಗಳು, ಮತ್ತು ಇತರೆ ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ನಿರ್ಧರಣೆ ಮಾಡಲಾಗಿದೆ.
2. ಮೇಲಿನವುಗಳು ಸೇರಿದಂತೆ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳನ್ನು ರಿಯಾಯಿತಿ ಆಧಾರದ ಮೇಲೆ, ಸಾಮಾನ್ಯವಾಗಿ ಅಂಗೀಕರಿಸಿರುವ ಬೆಲೆ ನಿರ್ಣಯ ಮಾದರಿಯ ಅನುಸಾರ ನಿರ್ಧರಣೆ ಮಾಡಲಾಗಿದೆ.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು

**41.** ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್ (ಬಿಎಸಿಸಿ) ಸಮೀಪ ಹಂಚಿಕೆಯಾಗಿರುವ ಜಮೀನಿನ ಸಂಬಂಧ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಜೊತೆ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರ ಬರೆದುಕೊಡುವುದು. ಹಾಗೆಯೇ ಉಳಿದಿದ್ದು, ಕೆಐಎಡಿಬಿ ನೀಡಿದ ಸ್ವಾಧೀನ ಪ್ರಮಾಣಪತ್ರದ ಆಧಾರದ ಮೇಲೆ ರೂ.52,11,063/- (ರೂ.52,11,063/-)ರ ಮೊತ್ತದ ಗುತ್ತಿಗೆ ಹಿಡುವಳಿ ಜಮೀನಿನ ಬಗ್ಗೆ ಮಾಡಿರುವ ಪಾವತಿಗಳನ್ನು ಕಂಪನಿ ಬಂಡವಾಳೀಕರಿಸಿದೆ.

**42.** ನವಿ ಮುಂಬಯಿಯಲ್ಲಿರುವ 2520 ಚದರ ಮೀಟರುಗಳ ವಿಸ್ತೀರ್ಣದ ಜಮೀನಿನ ನಿವೇಶನದ ಸಂಬಂಧದಲ್ಲಿ ಪರವಾನಗಿದಾರರು (ಜಿಒಕೆ) ರಾಜ್ಯ ಅತಿಥಿ ಗೃಹ ನಿರ್ಮಾಣ ಮಾಡಬೇಕು ಎಂಬ ನಿಬಂಧನೆ ಮೇಲೆ ಸದರಿ ಜಮೀನಿಗೆ ಪ್ರವೇಶಿಸಲು ಮತ್ತು ಅದನ್ನು ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಸರ್ಕಾರದ (ಜಿಒಕೆ) ಜೊತೆ ಸಿಟಿ ಅಂಡ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಆಫ್ ಮಹಾರಾಷ್ಟ್ರ (ಸಿಐಡಿಸಿಒ) ಇವರು 'ಗುತ್ತಿಗೆ ಕರಾರು ಪತ್ರವನ್ನು' ಮಾಡಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಒಪ್ಪಂದ ಪತ್ರದಲ್ಲಿ ನಿಗದಿಪಡಿಸಿರುವ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಕಟ್ಟಡ ಪೂರ್ಣಗೊಂಡ ದಿನಾಂಕದಿಂದ 30 ವರ್ಷಗಳ ಅವಧಿಗೆ (ಪರಸ್ಪರ ಒಪ್ಪಿಗೆ ಮೇರೆಗೆ ವಿಸ್ತರಿಸಬಹುದಾಗಿದೆ) ನಿರ್ಮಾಣ ಮಾಲೀಕತ್ವ, ಕಾರ್ಯಾಚರಣೆ ವರ್ಗಾವಣೆ (ಬೂಟ್) ಆಧಾರದ ಮೇಲೆ ಕರ್ನಾಟಕ ಭವನ ನಿರ್ಮಾಣಕ್ಕೆ ಎಂಎಸ್‌ಐಎಲ್ ಜೊತೆ 01.10.2008ರಂದು ಒಪ್ಪಂದ ಮಾಡಿಕೊಂಡಿದೆ.

ದಿನಾಂಕ:31ನೇ ಮಾರ್ಚ್ 2018ರಿಂದ ಅನ್ವಯವಾಗುವಂತೆ ಕೆಲಸ ಪೂರ್ಣಗೊಳಿಸಿರುವಿಕೆ ಪ್ರಮಾಣ ಪತ್ರವನ್ನು ಮೆ॥ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವೀಸ್ ಇವರಿಂದ ಪಡೆದಿರುವುದರ ಆಧಾರದ ಮೇಲೆ ನವಿ ಮುಂಬಾಯಿಯಲ್ಲಿ ಕರ್ನಾಟಕ ಭವನ ನಿರ್ಮಾಣಕ್ಕೆ ಮಾಡಿರುವ ರೂ.34,10,24,920/- ರ ವೆಚ್ಚದ ಮೊತ್ತವನ್ನು ಬಂಡವಾಳೀಕರಿಸಲಾಗಿದೆ.

**43.** ಸ್ಥಿರಾಸ್ತಿಗಳಲ್ಲಿ ಕ್ಲೆನ್ ಅಂಡ್ ಮಾರ್ಷಲ್ ಮ್ಯಾನುಫ್ಯಾಕ್ಚರರ್ಸ್ ಅಂಡ್ ಎಕ್ಸ್‌ಪೋರ್ಟರ್ಸ್ ಲಿಮಿಟೆಡ್‌ರವರಿಗೆ ಗುತ್ತಿಗೆ ನೀಡಲಾಗಿರುವ 86 ಕೆಪಾಸಿಟರ್ ಬ್ಯಾಂಕುಗಳು ಸೇರಿದ್ದು, ಇವುಗಳ ಮೌಲ್ಯ ಈ ಅವಧಿಯಲ್ಲಿ ಸವಕಳಿಯಾಗಿದ್ದು, ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಲಿಖಿತ ಮೌಲ್ಯ ರೂ.86/- (ರೂ.86/-) ಆಗಿದೆ. ಗುತ್ತಿಗೆದಾರರು ನಿಗದಿಪಡಿಸಿದ ಗುತ್ತಿಗೆ ಬಾಡಿಗೆಯನ್ನು ಪಾವತಿ ಮಾಡಿಲ್ಲ ಮತ್ತು ಸಂಸ್ಥೆಯು ಈ ವಿಷಯವನ್ನು ಆರ್ಬಿಟ್ರೇಷನ್‌ಗೆ ವಹಿಸಿ ರೂ.8,09,63,895/- ಬಾಕಿ ಇರುವ ಗುತ್ತಿಗೆ ಬಾಡಿಗೆ ಮತ್ತು ಅದರ ಮೇಲೆ ತಗಲುವ ಬಡ್ಡಿಗೆ ಕೋರಿಕೆ ಮಂಡಿಸಿದೆ. ಏಕಮಾತ್ರ ಆರ್ಬಿಟ್ರೇಟರ್ 2009ರ ಅಕ್ಟೋಬರ್ 2ರಂದು ಸಂಸ್ಥೆಯ ಕೋರಿಕೆಯನ್ನು ಅಂಗೀಕರಿಸಿ ಏಕಪಕ್ಷೀಯ ತೀರ್ಪು ನೀಡಿ, ರೂ.35,05,60,211/- ಅನ್ನು ಗುತ್ತಿಗೆ ಬಾಡಿಗೆ ಮತ್ತು ಅದರ ಮೇಲಿನ ಬಡ್ಡಿಯ ಮೊತ್ತ ಬಾಕಿ ಪಾವತಿಸುವಂತೆ ಮಾಡಿದ ಕೋರಿಕೆ ಪರವಾಗಿ ತೀರ್ಪು ನೀಡಿರುತ್ತಾರೆ.

ಗುತ್ತಿಗೆದಾರರಾದ ಕ್ಲೆನ್ ಅಂಡ್ ಮಾರ್ಷಲ್ ಕಂಪನಿಯು, ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದಲ್ಲಿ ಕಣ್ಮರೆಯಾದ ಸಂಸ್ಥೆಗಳ ಪಟ್ಟಿಯಲ್ಲಿದ್ದು ಹಾಗೂ ಸದರಿ ಗುತ್ತಿಗೆದಾರರು ಬೇರೆ ಹಣಕಾಸಿನ ಸಂಸ್ಥೆಗಳಿಂದ ವಿವಿಧ ರೀತಿಯ ಸಾಲ ಪಡೆದಿರುವುದು ತಿಳಿದು ಬಂದಿದೆ. ಸಂಸ್ಥೆಯ ಅಭಿಪ್ರಾಯದ ಮೇರೆಗೆ, ಈ ಮೊತ್ತದ ವಸೂಲಿ ಸಾಧ್ಯತೆ ಇಲ್ಲದಿರುವುದರಿಂದ 2005-06ರಿಂದ ಈ ಗುತ್ತಿಗೆ ವಿಷಯದಲ್ಲಿ ಗುತ್ತಿಗೆ ಬಾಡಿಗೆಯನ್ನು ಪರಿಗಣಿಸಿರುವುದಿಲ್ಲ ಮತ್ತು 2004-05ರವರೆಗಿನ ರೂ.8,09,63,895/- (ರೂ.8,09,63,895/-) ಬಾಕಿಯಿರುವ ಗುತ್ತಿಗೆ ಬಾಡಿಗೆಯನ್ನು ಪುಸ್ತಕದಲ್ಲಿ ಸಂಪೂರ್ಣವಾಗಿ ರದ್ದು ಮಾಡಲಾಗಿದೆ. ಸಂಸ್ಥೆಯು ತೀರ್ಪು ನೀಡಿದ ಮೊತ್ತದ ಖಚಿತವಿಲ್ಲದೆ ಇರುವುದರಿಂದ ಇದನ್ನು ಪರಿಗಣಿಸಿಲ್ಲ. ಆದಾಗ್ಯೂ ಸಂಸ್ಥೆಯು ಸಂಬಂಧಪಟ್ಟ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ನಿವೃತ್ತ ಅಧಿಕಾರಿಗಳು/ನೌಕರರ ವಿರುದ್ಧ ಕ್ರಿಮಿನಲ್ ದೂರು ಸಲ್ಲಿಸಿದೆ ಮತ್ತು ಕರ್ನಾಟಕ ವಿಧಾನಸಭೆಯ ಸಾರ್ವಜನಿಕ ಉದ್ಯಮಗಳ ಸಮಿತಿಯ ಆದೇಶದಂತೆ ಈ ವಿಷಯವನ್ನು ಸಿಒಡಿಗೆ ಒಪ್ಪಿಸಲಾಗಿದೆ. ಎಲ್ಲಾ ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಿದ್ಧಪಡಿಸಲಾಗಿದೆ. ಇದಕ್ಕೆ ತಮ್ಮ ಮೇಲಾಧಿಕಾರಿಗಳು ಅನುಮೋದನೆ ನೀಡಿದ್ದಾರೆ ಎಂದು ಮತ್ತು ಈ ಆರೋಪ ಪಟ್ಟಿಯನ್ನು ಸಕ್ಷಮ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ಸಿಐಡಿ ನಮಗೆ ತಿಳಿಸಿದೆ. ಸಿಐಡಿ ಆರೋಪಪಟ್ಟಿ ಸಲ್ಲಿಸಿದ ನಂತರ ಮುಂದಿನ ಸ್ಥಿತಿಗತಿ ತಿಳಿಸಲಾಗುವುದು.

**44. ಜಂಟಿ ಕಾರ್ಯಾಚರಣೆ ಒಪ್ಪಂದಗಳು :**

ಎಚ್‌ಎಎಲ್ ಮತ್ತು ಕಾನ್‌ಕಾರ್ಡ್ ಕಂಪನಿಗಳೊಂದಿಗೆ ಏರ್ ಕಾರ್ಗೋ ವ್ಯವಹಾರದ ಬಗ್ಗೆ ಕಂಪನಿಯು ಜಂಟಿ ಕಾರ್ಯಾಚರಣೆ ಒಪ್ಪಂದಗಳನ್ನು ಮಾಡಿ ಕೊಂಡಿತ್ತು. ಎಂಎಸ್‌ಐಎಲ್ ಮತ್ತು ಕಾನ್‌ಕಾರ್ಡ್ ಕಂಪನಿಗಳು ಜೆ ಡಬ್ಲ್ಯೂ ಎ ಯಿಂದ ಅನುಕ್ರಮವಾಗಿ ದಿನಾಂಕ : 31.03.2014 ಮತ್ತು 15.01.2011ರ ಅವಧಿಯಿಂದ ಈ ಒಪ್ಪಂದವನ್ನು ಹಿಂಪಡೆಯಲಾಗಿದೆ.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

ಗೃಹಬಳಕೆಯೇತರ ವಲಯಕ್ಕೆ ಸೋಲಾರ್ ವಾಟರ್ ಹೀಟರ್ ಭೋಗ್ಯಕ್ಕೆ ನೀಡಲು ಇಎಸ್‌ಎಸ್‌ಪಿಎಲ್ ಕಂಪನಿಯ ಜೊತೆ ಜಂಟಿ ಸಹಯೋಗ ಒಪ್ಪಂದ ಮಾಡಿಕೊಂಡಿದೆ.

ಮೇಲೆ ತಿಳಿಸಿರುವ ಜಂಟಿ ಕಾರ್ಯಾಚರಣೆ/ಜಂಟಿ ಸಹಭಾಗಿತ್ವದ ಒಪ್ಪಂದದ ಅನ್ವಯ ತನ್ನ ವ್ಯವಹಾರ ಚಟುವಟಿಕೆ ನಡೆಸಲು ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾಗಿದೆ ಮತ್ತು ಆಸ್ತಿಯ ಮಾಲೀಕತ್ವವು ಸಂಬಂಧಪಟ್ಟ ವ್ಯಕ್ತಿಗಳಿಗೆ ಸೇರಿರುವುದು.

ಜಂಟಿ ಕಾರ್ಯಾಚರಣೆ ಒಪ್ಪಂದದಿಂದ ಪ್ರಸಕ್ತ ಸಾಲಿನಲ್ಲಿನ ಆದಾಯ/(-)ನಷ್ಟಗಳ ಬಾಬ್ತು ಪಾಲು ಹೀಗಿದೆ :

| ವಿವರಗಳು | 2017-2018 | 2016-2017 |
|---|---|---|
| ಇಎಸ್‌ಎಸ್‌ಪಿಎಲ್ | ರೂ.27,276/- | ರೂ.31,751/- |

**45.** ಐಎನ್‌ಡಿ ಅಕೌಂಟಿಂಗ್ ಸ್ಟ್ಯಾಂಡರ್ಡ್ 19-"ನೌಕರರ ಸವಲತ್ತುಗಳು": ಐಎನ್‌ಡಿ ಅಕೌಂಟಿಂಗ್ ಸ್ಟ್ಯಾಂಡರ್ಡ್‌ನಲ್ಲಿ ವಿವರಿಸಲಾದ ನೌಕರರ ಸೌಲಭ್ಯಗಳು ಕೆಳಕಂಡಂತಿವೆ :

**(ಎ) ಗ್ರ್ಯಾಚ್ಯುಯಿಟಿ**

ಸಂಸ್ಥೆಯಲ್ಲಿ ನಿರೂಪಿತ ಸೌಲಭ್ಯ ಗ್ರ್ಯಾಚ್ಯುಯಿಟಿ ಯೋಜನೆ ಜಾರಿಯಲ್ಲಿದೆ. ಯೋಜನೆಗೆ ಸಂಸ್ಥೆಯು ಹಣಕಾಸು ಒದಗಿಸುತ್ತಿದ್ದು, ಪ್ರತ್ಯೇಕ ಟ್ರಸ್ಟ್ ನಿರ್ವಹಿಸುತ್ತಿದೆ. ಇದರ ಹೊಣೆಗಾರಿಕೆಯನ್ನು ವಿಮಾಗಣನ ಮೌಲ್ಯಗಳ ಆಧಾರದ ಮೇಲೆ ಗುರುತಿಸಲಾಗಿದೆ. ಕಂಪನಿಯು ಗ್ರ್ಯಾಚ್ಯುಟಿ ಸೌಲಭ್ಯವನ್ನು ಜೀವ ವಿಮಾ ನಿಗಮ ನಿರ್ವಹಿಸುತ್ತಿರುವ ನಿಧಿಗೆ ವಾರ್ಷಿಕ ವಂತಿಗೆ ನೀಡುವ ಮೂಲಕ ಒದಗಿಸಿದೆ. ಈ ಕೆಳಕಂಡ ತಃಖ್ತೆಯು ಕಂಪನಿಯ ಗ್ರ್ಯಾಚ್ಯುಟಿ ಯೋಜನೆಯ ಸ್ಥಿತಿಗತಿಯನ್ನು ತಿಳಿಸುತ್ತದೆ ಮತ್ತು ಮೊತ್ತವನ್ನು ಸ್ಥಿತಿ ವಿವರಣಾ ಪಟ್ಟಿ ಮತ್ತು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

(ಮೊತ್ತ ರೂ.ಗಳಲ್ಲಿ)

| | 2017-2018 | 2016-2017 |
|---|---|---|
| **ಎ) ಲಾಭ ಮತ್ತು ನಷ್ಟ ವಿವರದಲ್ಲಿ ಗುರುತಿಸಿದ ಖರ್ಚುಗಳು :** | | |
| i) ಚಾಲ್ತಿ ಸೇವಾ ವೆಚ್ಚ | 22,86,303/- | 25,82,955/- |
| ii) ಬಡ್ಡಿ ವೆಚ್ಚ | 1,04,73,439/- | 1,03,02,847/- |
| iii) ನಿರೀಕ್ಷಿತ ಗಳಿಕೆ ಯೋಜನೆ ಆಸ್ತಿಗಳು | (94,42,902/-) | (1,03,48,615/-) |
| iv) ವರ್ಷದಲ್ಲಿ ಗುರುತಿಸಲಾದ ವಿಮಾಗಣನ (ಲಾಭ)/ನಷ್ಟ | 1,77,69,604/- | 2,72,716/- |
| **ಒಟ್ಟು (i ರಿಂದ iv)** | **2,10,86,444/-** | **28,09,903/-** |
| **ಬಿ) ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಲಾದ ಮೊತ್ತ:** | | |
| ವರ್ಷಾಂತ್ಯದಲ್ಲಿನ ಹೊಣೆಗಾರಿಕೆಗಳ ಇಂದಿನ ಮೌಲ್ಯ (i) | 13,94,22,538/- | 13,09,17,987/- |
| ವರ್ಷಾಂತ್ಯದಲ್ಲಿನ ಯೋಜನಾ ಆಸ್ತಿಯ ಸೂಕ್ತ ಮೌಲ್ಯ (ii) | 13,34,74,440/- | 13,24,28,155/- |
| ನಿಧಿಯ ಸ್ಥಿತಿ (i) – (ii) | (59,48,098/-) | 15,10,168/- |
| ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಿದ ನಿವ್ವಳ ಆಸ್ತಿ/(ಹೊಣೆಗಾರಿಕೆ) | (59,48,098/-) | 15,10,168/- |
| **ಸಿ) ವಿವರಿಸಲಾದ ಸೌಲಭ್ಯ ಬಾಧ್ಯತೆಗಳ ಪ್ರಸಕ್ತ ಮೌಲ್ಯಗಳಲ್ಲಿನ ಬದಲಾವಣೆಗಳು:** | | |
| 01.04.2017ರಲ್ಲಿದ್ದಂತೆ ಬಾಧ್ಯತೆಗಳ ಇಂದಿನ ಮೌಲ್ಯ | 13,09,17,987/- | 12,87,85,591/- |
| ಚಾಲ್ತಿ ಸೇವಾ ವೆಚ್ಚ | 22,86,303/- | 25,82,955/- |
| ಬಡ್ಡಿ ವೆಚ್ಚ | 1,04,73,439/- | 1,03,02,847/- |
| ಪಾವತಿಸಿದ ಸೌಲಭ್ಯಗಳು | (2,20,24,795/-) | (1,10,26,122/-) |
| ಬಾಧ್ಯತೆಗಳ ವಿಮಾಗಣನ ಲೆಕ್ಕಾಚಾರಗಳು (ಲಾಭ)/ನಷ್ಟ | 1,77,69,604/- | 2,72,716/- |
| 31.3.2018ರಲ್ಲಿದ್ದಂತೆ ಬಾಧ್ಯತೆಯ ಪ್ರಸಕ್ತ ಮೌಲ್ಯ | 13,94,22,538/- | 13,09,17,987/- |

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

| ಡಿ) **ಯೋಜನಾ ಆಸ್ತಿಗಳ ಸೂಕ್ತ ಮೌಲ್ಯದಲ್ಲಿನ ಬದಲಾವಣೆ:** | | |
|---|---|---|
| 01.04.2018ರಲ್ಲಿದ್ದಂತೆ ಯೋಜನಾ ಆಸ್ತಿಯ ಸೂಕ್ತ ಮೌಲ್ಯ | 13,24,28,155/- | 12,83,64,083/- |
| ಯೋಜಿತ ಆಸ್ತಿಗಳ ನಿರೀಕ್ಷಿತ ಆದಾಯ | 94,42,902/- | 1,03,48,615/- |
| ಕೊಡುಗೆಗಳು | 1,36,28,178/- | 47,41,579/- |
| ನೀಡಿದ ಸೌಲಭ್ಯ | (2,20,24,795) | (1,10,26,122/-) |
| ಯೋಜನಾ ಆಸ್ತಿಗಳ ಮೇಲಿನ ವಿಮಾಗಣನ ಲೆಕ್ಕಾಚಾರಗಳ ಲಾಭ/ನಷ್ಟ | ಇಲ್ಲ | ಇಲ್ಲ |
| 31.03.2018ರಲ್ಲಿದ್ದಂತೆ ಯೋಜನಾ ಆಸ್ತಿಗಳ ಸೂಕ್ತ ಮೌಲ್ಯ | 13,34,74,440/- | 13,24,28,155/- |

ಇ) **ವಿಮಾಗಣನ ಊಹೆಗಳು:**

| ವಿಮಾಗಣನ ಮೌಲ್ಯಮಾಪನಗಳಿಗೆ ಬಳಸಿದ ಪ್ರಮುಖ ಊಹೆಗಳು : | | |
|---|---|---|
| i) ಮರಣ ಪ್ರಮಾಣ | ಎಲ್ಐಸಿ (94-96) | ಅಂತಿಮ ಮರಣ ಸೂಚಿ ತಃಖ್ತೆ |
| ii) ರಿಯಾಯ್ತಿ ದರ | 7.50% | 8% |
| iii) ವೇತನ ಏರಿಳಿತ | 7% | 7% |

(ಬಿ) **ಪರಿಹಾರಿತ ಗೈರುಹಾಜರಿಯ ನಗದೀಕರಣ:**

ಗೈರುಹಾಜರಿ ಪರಿಹಾರ ನಗದೀಕರಣದ ವಿಮಾಗಣನ ಮೌಲ್ಯಮಾಪನದ ಆಧಾರ: ಹೊಣೆಗಾರಿಕೆ 31.03.2018ರಲ್ಲಿದ್ದಂತೆ

| | | |
|---|---|---|
| ನಿವೃತ್ತಿ ವಯಸ್ಸು | 60 | 60 |
| ಜೀವಿತಾವಧಿ | ಭಾರತೀಯರ ಖಚಿತ ಜೀವಿತಾವಧಿ (2006-08) | ಅಂತಿಮ ಮರಣಸೂಚಿ ತಃಖ್ತೆ |
| ಬಡ್ಡಿ ದರ | ವಾರ್ಷಿಕ 7.31% | ವಾರ್ಷಿಕ 7.31% |
| ವೇತನ ಹೆಚ್ಚಳ | ವಾರ್ಷಿಕ 7% | ವಾರ್ಷಿಕ 7% |
| ತ್ಯಜಿಸುವ ದರ | ವಾರ್ಷಿಕ 1% | ವಾರ್ಷಿಕ 1% |
| ಪಾವತಿಸಬೇಕಾದ ಸೌಲಭ್ಯಗಳು | ಕಂಪನಿ ನಿಯಮದಂತೆ | |

(ಸಿ) **ಮರಣ ಪರಿಹಾರ ನಿಧಿ:**

ಗೈರು ಹಾಜರಿಯ ನಗದೀಕರಣದ ಪರಿಹಾರಕ್ಕೆ ವಿಮಾಗಣನ ಮೌಲ್ಯದ ಆಧಾರ : 31.03.2018ರಂತೆ ಹೊಣೆಗಾರಿಕೆ.

| ವಿವರಗಳು | 2017-18 |
|---|---|
| ಬಡ್ಡಿ ದರ | 7.31% |
| ಆಟ್ರೀಷನ್ ದರ | 1% |
| ನಿವೃತ್ತಿ ವಯಸ್ಸು | 60 ವರ್ಷಗಳು |
| ಕೊಡಬೇಕಾದ ಸೌಲಭ್ಯಗಳು | ಕಂಪನಿ ನೀತಿಯನುಸಾರ |

**46.** ಗ್ರಾಹಕ ವಸ್ತುಗಳು ಮತ್ತು ವಾಹನಗಳ ಸರಬರಾಜಿಗೆ ಕಂಪನಿಯು ''ಕಂತು-ಖರೀದಿ'' ಒಪ್ಪಂದವನ್ನು ಸರ್ಕಾರಿ ನೌಕರರ (ಗ್ರಾಹಕರ) ಜತೆ ಮಾಡಿಕೊಂಡಿತ್ತು. ಗ್ರಾಹಕರಿಂದ ಪಾವತಿಯಾಗದ ಬಡ್ಡಿಯು ಸೇರಿದಂತೆ ಬಾಕಿಯಿರುವ ಕಂತಿನ ಮೊತ್ತವನ್ನು ''ಗ್ರಾಹಕರ ಬಳಿಯ ದಾಸ್ತಾನು'' ಎಂದು ತೋರಿಸಲಾಗಿದೆ. ಜುಲೈ 2008ರಿಂದ ಈ 'ಕಂತು-ಖರೀದಿ' ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ.

**47.** ಬರಬೇಕಾಗಿರುವ ಮತ್ತು ಪಾವತಿ ಮಾಡಬೇಕಾಗಿರುವ ಎಲ್ಲಾ ಲೆಕ್ಕಗಳನ್ನು ಸ್ಥಿರೀಕರಣ ಪತ್ರಗಳನ್ನು ಕಂಪನಿ ಕಳುಹಿಸಿದೆ. ವ್ಯಕ್ತಿಗಳಿಂದ ಬಂದಿರುವ ಸ್ಥಿರೀಕರಣೆಗಳನ್ನು ಪುಸ್ತಕದಲ್ಲಿನ ಬಾಕಿಯ ಜೊತೆ ಪರಿಶೀಲನೆ ಮಾಡಿದೆ ಮತ್ತು ಕಂಡು ಬಂದಿರುವ ವ್ಯತ್ಯಾಸಗಳನ್ನು ಕ್ರಮವಾಗಿ ಸಮನ್ವಯ ಮಾಡಲಾಗಿದೆ. ತಿಳಿಸಿರುವ ದಿನಾಂಕದ ಒಳಗೆ ಲಿಖಿತ ರೂಪದಲ್ಲಿ ಸ್ಥಿರೀಕರಣ ಮಾಡಿರದ ವ್ಯಕ್ತಿಗಳಿಗೆ ಸಂಬಂಧಿಸಿದ ಬಾಕಿಗಳನ್ನು ಆ ಬಗ್ಗೆ ಸ್ಥಿರೀಕರಿಸಲ್ಪಟ್ಟಿದೆ ಎಂದು ಪರಿಗಣಿಸಲಾಗಿದೆ.

**48.** ಮೂಲದಲ್ಲಿ ತೆರಿಗೆ ಕಡಿತ ಮಾಡದೆ ಇರುವ ರೂ.30,23,31,283/- (ರೂ.30,23,31,283/-) ಮತ್ತು ಅದರ ಮೇಲೆ ಬಡ್ಡಿ ರೂ.30,67,65,640/- (ರೂ.30,67,65,640/-)ಗೆ ಕಂಪನಿಗೆ ಆದಾಯ ತೆರಿಗೆ ಇಲಾಖೆ ಡಿಮಾಂಡ್ ಸೂಚನೆಗಳನ್ನು ಈ ಹಿಂದೆ ನೀಡಿದೆ. ಕಂಪನಿಯು ರೂ.24,05,81,902/- (ರೂ.24,05,81,902/-) ಅನ್ನು ಪಾವತಿಸಿ ಜೊತೆಗೆ ರೂ.36,17,49,381/- (ರೂ.36,17,49,381/-) ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ನೀಡಿದೆ. ಹಣಕಾಸು ವರ್ಷ 2006-07ರಲ್ಲಿ ಬಾಕಿಯಿದ್ದ ರೂ.42,40,233/-ಗಳನ್ನು ಆದಾಯ ತೆರಿಗೆ ಮರು ಪಾವತಿಗೆ ಹೊಂದಿಸಿದೆ. ಈ ವಿಷಯವು ಸದ್ಯ ಸರ್ವೋಚ್ಚ ನ್ಯಾಯಾಲಯದಲ್ಲಿದೆ.

49. ಟಿಪ್ಪಣಿ 17ರಲ್ಲಿನ ಅಲ್ಪಾವಧಿ ಸಾಲ ಮತ್ತು ಮುಂಗಡಗಳಲ್ಲಿ ಕೆಳಕಂಡವು ಸೇರಿವೆ :

ಸೇವಾ ತೆರಿಗೆ ಇಲಾಖೆಯಿಂದ ವಾಪಸ್ ಬರಬೇಕಾದ ಸೇವಾ ತೆರಿಗೆ ಮೊತ್ತ ರೂ.77,23,849/- (ರೂ.77,23,849/-). 16.08.2002ರಿಂದ 30.06.2008ರ ಅವಧಿಗೆ ಬ್ಯಾಗೇಜ್ ಮತ್ತು ರಫ್ತು ಸರಕಿನ ಮೇಲೆ ಆಮದು ಮತ್ತು ರಫ್ತು ಸರಕು, ಗಮ್ಯ ತಲುಪುವ ವೆಚ್ಚ ಮತ್ತು ಸರಕು ಹಸ್ತಾಂತರ ವೆಚ್ಚಗಳನ್ನು ಪಡೆದ ಕಂಪನಿಯಿಂದ ಇಲಾಖೆಯು ರೂ.1,47,99,829/- (ರೂ.1,47,99,829/-)ಅನ್ನು ಪಾವತಿಸಲು ಕೇಳಿತು. ಮೇಲ್ಕಾಣಿಸಿದ ಕ್ಲೇಮಿನ ವಿರುದ್ಧ ಕಂಪನಿಯು ಕಮಿಷನರ್ (ಮೇಲ್ಮನವಿ) ಕೇಂದ್ರ ಅಬಕಾರಿ, ಬೆಂಗಳೂರು ಅವರ ಮುಂದೆ, ಮನವಿ ಸಲ್ಲಿಸಿದ್ದು, ಅವರು ರೂ.6,18,363/-ರಷ್ಟು ಪರಿಹಾರವನ್ನು ನೀಡಿದ್ದಾರೆ. ಕಂಪನಿಯು ರೂ.77,23,849/- ಮೊತ್ತವನ್ನು ಪಾವತಿಸಿದೆ. ಇಲಾಖೆ ಸಹಿತ ಅಬಕಾರಿ ಸುಂಕ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ (ಸಿಇಎಸ್‌ಟಿಎಟಿ)ರವರ ಮುಂದೆ ಕಮಿಷನರ್ (ಮೇಲ್ಮನವಿ) ಅವರ ರೂ.6,18,363/- ಪರಿಹಾರದ ವಿರುದ್ಧ ಮನವಿ ದಾಖಲಿಸಿದ್ದು, ಸಿಇಎಸ್‌ಟಿಎಟಿಯು ಕಮಿಷನರ್ (ಮೇಲ್ಮನವಿ)ಯವರು ತಿರಸ್ಕರಿಸಿದ ಮೂರು ಕೇಸ್‌ಗಳನ್ನು ಇಲಾಖೆಗೆ ವಾಪಸ್ ಕಳುಹಿಸಿದೆ. ಜುಲೈ 2012ರಲ್ಲಿ ಎಂ.ಎಸ್.ಐ.ಎಲ್., ಸಿ.ಇ.ಎಸ್.ಟಿ.ಎ.ಟಿ. ಮುಂದೆ ಮತ್ತೆ ಮನವಿಗಳನ್ನು ದಾಖಲಿಸಿದೆ. ಹೊಸ ಆದೇಶ ಹಾಗೂ ತಗಾದೆಗಾಗಿ ಕಾಯಲಾಗುತ್ತಿದೆ. ಸಿ.ಇ.ಎಸ್.ಟಿ.ಎ.ಟಿ. ಮುಂದೆ ಸಲ್ಲಿಸಿರುವ 2005-06ರಿಂದ 2008-09 ಅವಧಿಯ ಮನವಿಗಳು ಇನ್ನೂ ಬಾಕಿ ಇವೆ. ಬಡ್ಡಿ, ದಂಡ ಇತ್ಯಾದಿಗಳಿಲ್ಲದ ಒಟ್ಟು ಬೇಡಿಕೆಯ ಮೊತ್ತ 31.3.2009ರ ವೇಳೆಗೆ ರೂ.1,47,99,829/- (ರೂ.1,47,99,829/-) ಅನ್ನು ಪುಸ್ತಕಗಳಲ್ಲಿ ಒದಗಿಸಿಲ್ಲ.

50. ಶೇ.52 ಎಫ್‌ಇ ಅಂಶಗಳಿರುವ 50,000 ಎಂ.ಟಿ.ಯಷ್ಟು ಕಬ್ಬಿಣದ ಅದಿರನ್ನು ಸಂಗ್ರಹಿಸಲು ಒಂದು ಎಂ.ಟಿಗೆ ರೂ.1000/-ರಂತೆ ಚೀನಾಗೆ ರಫ್ತು ಮಾಡಲು ಮೆ॥ ಮಲ್ಲಪ್ಪ ಮಿನರಲ್ಸ್ ಇಂಡಸ್ಟ್ರಿ (MMI) ನೊಂದಿಗೆ ನವೆಂಬರ್ 13, 2009ರಂದು ಕಂಪನಿ ಒಂದು ಒಡಂಬಂಡಿಕೆ ಮಾಡಿಕೊಂಡಿತ್ತು. ಜೊತೆಗೆ ವಿದೇಶಿ ಖರೀದಿದಾರರಾದ ಫ್ರೇಮರಿ ಹೋಲ್ಡಿಂಗ್ಸ್ ಲಿಮಿಟೆಡ್ ಕಂಪನಿಯೊಂದಿಗೆ ಎಫ್.ಓ.ಬಿ. (F.O.B) ಗೋವಾ ಅನ್ನು ಪ್ರತಿ ಎಂ.ಟಿಗೆ US$ 28 (ರೂ.1,288/-) ಲೆಕ್ಕದಲ್ಲಿ ಸರಬರಾಜು ಮಾಡುವ ಒಪ್ಪಂದವನ್ನು ಮಾಡಿಕೊಂಡಿತ್ತು. ನೀಡಬಹುದಾದ ದರ ಪ್ರತಿ ಎಂ.ಟಿ.ಗೆ ರೂ.200/- ಸೇವಾ ಶುಲ್ಕ ಕಡಿತಗೊಳಿಸಿದ ನಂತರ ಕಂಪನಿಯು ಪ್ರತಿ ಎಂ.ಟಿ.ಗೆ. ರೂ.88/-ರಷ್ಟು ಲಾಭ ತೋರಿಸಿದೆ.

ಶೇ.52ರಷ್ಟು ಕಬ್ಬಿಣಾಂಶವಿರುವ ಅದಿರನ್ನು ಡಿಸೆಂಬರ್ 15, 2009ರ ಒಳಗೆ ರಫ್ತು ಮಾಡುವ ಮತ್ತು ನವೆಂಬರ್ 25-30ರ ನಡುವೆ ಲೇ-ಕ್ಯಾನ್ ಅವಧಿಯಲ್ಲಿ ಒಡಂಬಡಿಕೆ ಕಾರ್ಯಗತವಾಗುವುದನ್ನು ವಿದೇಶಿ ಖರೀದಿದಾರರ ಜೊತೆಗಿನ ಒಪ್ಪಂದ ಅನುವು ಮಾಡಿಕೊಟ್ಟಿತು. ಒಡಂಬಡಿಕೆಯಲ್ಲಿ ಯಾವುದೇ ತಗಾದೆಗಳಿದ್ದರೆ ಅದನ್ನು ಹಾಂಗ್-ಕಾಂಗ್‌ನಲ್ಲಿಯೇ ಪರಿಹರಿಸಿಕೊಳ್ಳಬೇಕೆಂಬುದು ನಿರ್ಬಂಧನೆಗಳಲ್ಲಿ ಒಂದಾಗಿತ್ತು.

ಎಂ.ಎಂ.ಐ. ಪರವಾಗಿ ರೂ.5 ಕೋಟಿಗೆ ಹಿಂಪಡೆಯಲಾಗದ ಸಾಲಪತ್ರವನ್ನು ಊರ್ಜಿತಗೊಳಿಸಲಾಗಿದೆ. ಅದಿರನ್ನು ಪಡೆಯಲು ಬೇಕಾದ ಮೊತ್ತವನ್ನು ಕ್ರೋಡೀಕರಿಸಲು 'ಸರಬರಾಜುದಾರರು' ವಿಫಲರಾದ್ದರಿಂದ ಎಂ.ಎಸ್.ಐ.ಎಲ್.ನಿಂದ ಮುಂಗಡಕ್ಕೆ ಬೇಡಿಕೆ ಇರಿಸಿದ್ದರು. ಸರಕಿನ ಹಡಗು ಬಂದರಿಗೆ ಡಿಸೆಂಬರ್ 10, 2009ರಂದು ಬಂದು ನಿಂತುಬಿಟ್ಟಿದ್ದರಿಂದ 'ಡೆಮರೇಜ್' ಸುಸ್ತಿ ಸುಂಕವನ್ನು ತಪ್ಪಿಸಲು ಕಂಪನಿಯು ರೂ.2.15 ಕೋಟಿಯ ಮುಂಗಡವನ್ನು ಮುಂಚಿತವಾಗಿ ದಿನಾಂಕ ಬರೆದ ಚೆಕ್‌ಗಳ ಸ್ವೀಕರಣೆ ಮೇಲೆ ನೀಡಿತು ಮತ್ತು ಸ್ವತ್ತುಗಳ ಮೇಲೆ ಸಮದರ್ಶಿಯಾದ ಆಧಾರ ಒದಗಿಸುವ ಬದ್ಧತೆಯನ್ನು ಸಂಸ್ಥೆಯು ಪೂರ್ಣಗೊಳಿಸಲಾಗಲಿಲ್ಲ. ಅದಿರನ್ನು ಸರಬರಾಜು ಮಾಡಲು ಸತತವಾಗಿ ವಿಫಲವಾದ ಕಾರಣದಿಂದ ಕಂಪನಿಯು ಚೆಕ್‌ಗಳನ್ನು ಬ್ಯಾಂಕ್‌ನಲ್ಲಿ ನಗದೀಕರಣಕ್ಕೆ ನೀಡಿತು. ಆದರೆ ಅವು ಬ್ಯಾಂಕ್‌ನಿಂದ ತಿರಸ್ಕರಿಸಲಾಯಿತು. ಹೀಗಾಗಿ ನೆಗೋಷಿಯೆಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ 1881ರಡಿ 25.02.2010ರಂದು ಕ್ರಿಮಿನಲ್ ಮೊಕದ್ದಮೆ ಹೂಡಿತು ಮತ್ತು ಈಗ ದಾವೆಯು ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಲಯದಲ್ಲಿ ಉಳಿದಿದ್ದು, 'ಪುರಾವೆ' ಹಂತದಲ್ಲಿದೆ.

ಎಂ.ಎಂ.ಐ.ನವರಿಂದ ಅದಿರು ಸರಬರಾಜು ವಿಫಲವಾದ್ದರಿಂದ ಕಂಪನಿ ಇನ್ನೊಂದು ಸರಬರಾಜುದಾರರಾದ ಸರಮ್ ಎಕ್ಸ್‌ಪೋರ್ಟ್ಸ್ ಜೊತೆ ಅದಿರು ಸರಬರಾಜಿಗೆ ಅದೇ ನೀತಿ ನಿಯಮಗಳಿಗೆ ಅನ್ವಯವಾಗುವಂತಹ ಒಪ್ಪಂದ ಮಾಡಿಕೊಂಡಿತು. ಎಂ.ಎಸ್.ಐ.ಎಲ್. ನೂತನ ಸರಬರಾಜುದಾರರಿಗೆ ರೂ.4.5 ಕೋಟಿ ಮುಂಗಡ ನೀಡಿತು. 29 ದಿನಗಳ ವಿಳಂಬದ ನಂತರ 46,846.48 ಎಂ.ಟಿ.ಯಷ್ಟು ಅದಿರು ಹೊತ್ತ ಹಡಗು ಜನವರಿ 14, 2010ರಂದು ಪ್ರಯಾಣ ಬೆಳೆಸಿತು. ಭಾರತ ಸರ್ಕಾರ ಸುಂಕದ ದರ ಹೆಚ್ಚಿಸಿದ್ದರಿಂದ ಎಂ.ಎಸ್.ಐ.ಎಲ್. ಸೀಮಾ ಸುಂಕಕ್ಕೆ ರೂ.32,22,680/- ಅನ್ನು ಹೆಚ್ಚುವರಿಯಾಗಿ ತೆರಬೇಕಾಯಿತು. ಪರೀಕ್ಷಾ ವರದಿಗೆ ಕಾಯದೆ ಸಮಯಾವಧಿ ಮುಗಿದಿದ್ದರಿಂದ ಸರಮ್ ಎಕ್ಸ್‌ಪೋರ್ಟ್ಸ್‌ನ ಸರಬರಾಜನ್ನು ತುರ್ತಾಗಿ ಹಡಗಿಗೆ ತುಂಬಿಸಿ ಕಳುಹಿಸಲಾಯಿತು. ಆದರೆ ನಂತರ ಬಂದ ಪರೀಕ್ಷಾ ವರದಿಯಲ್ಲಿ ಕಬ್ಬಿಣಾಂಶ ಶೇ.49.37ರಷ್ಟು ಮಾತ್ರವಿದೆ ಎಂದು ಹೇಳಿತು.

''ಖರೀದಿದಾರರ'' ಹೆಸರಿನಲ್ಲಿ ಕಂಪನಿಯು ಇನ್‌ವಾಯ್ಸ್ ಅನ್ನು ತಯಾರಿಸಿ, ಎಲ್‌ಸಿ ಮೂಲಕ ಪತ್ರವ್ಯವಹಾರ ಕುದುರಿಸಲು ಪ್ರಯತ್ನಿಸಲಾಯಿತು. ಆದರೆ ಅವಧಿ ಮುಗಿದಿದ್ದರಿಂದ ಅದು ಸಾಧ್ಯವಾಗಲಿಲ್ಲ. ಹಾಂಗ್‌ಕಾಂಗ್ ಬಂದರನ್ನು ತಲುಪಿದ ಸರಕನ್ನು ಚೈನಾ ಗುಣಮಟ್ಟ ತನಿಖಾ ವರದಿಯಲ್ಲಿ 'ಖರೀದಿದಾರ' ಸರಕಿನಲ್ಲಿ 45.9% ಕಬ್ಬಿಣಾಂಶ ಇದೆ ಎಂಬ ಕಾರಣದಿಂದ ಕಳಪೆ ಎಂದು ತಿರಸ್ಕರಿಸಿದರು. ಆನಂತರ 'ಖರೀದಿದಾರ'ರಿಗೆ ಆ ಸರಕನ್ನು ಮಾರಿ ಬರುವ ಆದಾಯವನ್ನು ಪಡೆದುಕೊಳ್ಳಲು ಅಧಿಕಾರ ನೀಡಲಾಯಿತು. ಸಿಎಫ್‌ಆರ್ ಆಧಾರದ ಮೇಲೆ ಪ್ರತಿ ಎಂ.ಟಿ.ಗೆ ಅಮೆರಿಕ ಡಾಲರ್ 35ರಂತೆ ಅದಿರನ್ನು 23 ಮಾರ್ಚ್ 2010ರ ಇನ್‌ವಾಯ್ಸ್ ರೀತ್ಯ ಅಮೆರಿಕಾ ಡಾಲರ್ 16,39,626.80 ಪಡೆಯಲಾಯಿತು. ಈ ಹಣವನ್ನು ತನಗೆ ಭರ್ತಿ ಮಾಡಬೇಕೆಂದು ಎಂ.ಎಸ್.ಐ.ಎಲ್. ವಿದೇಶಿ ಖರೀದಿದಾರಲ್ಲಿ ಮನವಿ ಮಾಡಿತು. ಆದರೆ ಆ 'ಖರೀದಿದಾರ' 24,25,051.88 ಅಮೆರಿಕಾ ಡಾಲರ್ ಹಣವನ್ನು ತನ್ನ ಪಾಲೆಂಬ ಹಕ್ಕನ್ನು ಸಾಧಿಸಿತು. ಕಂಪನಿ ಅದನ್ನು ತಿರಸ್ಕರಿಸಿತು.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

ಮೇಲ್ಕಾಣಿಸಿದ ಅಂಶಗಳನ್ನು ಪರಿಗಣಿಸಿ ವಿನಿಮಯ ದರ ಅಮೇರಿಕಾ ಡಾಲರ್ ಒಂದಕ್ಕೆ ರೂ.46 ದರದಂತೆ ಅಳವಡಿಸಿಕೊಂಡಿದೆ ಮತ್ತು ಗೋವಾದಿಂದ ಚೀನಾಗೆ ಸಾಗಾಣೆ ಶುಲ್ಕ ಅಮೇರಿಕಾ ಡಾಲರ್ 24ರಂತೆ ಕಂಪನಿ ನಿಷ್ಕರ್ಷಿಸಿ ಅದರಂತೆ ಮಾರಾಟ, ಮಾರಾಟದ ವೆಚ್ಚ, ಒಡಂಬಡಿಕೆಯ ಹಕ್ಕು ಮತ್ತು ಮಾರ್ಚ್ 31, 2010ರ ಅಂತ್ಯಕ್ಕೆ ಪುಸ್ತಕದಲ್ಲಿ ಮುನ್ನೇರ್ಪಾಡನ್ನು ಮಾಡಿತು. ಈ ಹಂತದಲ್ಲಿ 'ಖರೀದಿದಾರರಿಗೆ' ಚೀನಾದಲ್ಲಾದ ವೆಚ್ಚ ಮತ್ತು FEMA ಅಡಿ ಹೊಣೆಗಾರಿಕೆ ವೆಚ್ಚವನ್ನು ಪರಿಗಣಿಸಿಲ್ಲ. ಕಬ್ಬಿಣದ ಅದಿರು ಮಾರಾಟದ ಮೂಲಕ ಯುಎಸ್ ಡಾಲರ್ 5,02,071ರಷ್ಟನ್ನು ಸರಿಹೊಂದಿಸಿದ ನಂತರ ಫ್ರೇಮರಿ ಹೋಲ್ಡಿಂಗ್ಸ್ ನಿಯಮಿತವು ಅಮೇರಿಕ ಡಾಲರ್ ರೂಪದಲ್ಲಿ 19,74,545ರಷ್ಟು ಮೊತ್ತವನ್ನು ಕ್ಲೇಮು ಮಾಡಿದೆ (ರೂ.59.76 ಯುಎಸ್ ಡಾಲರ್ ವಿನಿಮಯ ದರದಲ್ಲಿ ರೂ.11,79,98,809/- ಪರಿಗಣಿಸುತ್ತಿದೆ. ಆರ್ಬಿಟ್ರೇಷನ್ ಅವಾರ್ಡ್‌ನಂತೆ ಎಂಎಸ್‌ಐಎಲ್ ಫ್ರೆಮರಿ ಹೋಲ್ಡಿಂಗ್ಸ್ ಲಿಮಿಟೆಡ್ 18,80,851 ಡಾಲರ್ (ರೂ.12,46,72,209/-) ಮತ್ತು ರೂ.2,77,72,466/-ಕ್ಕೆ ಬಡ್ಡಿ ಮೊತ್ತವನ್ನು ಪಾವತಿಸಲು ಬದ್ಧವಾಗಿದೆ.

ಕಂಪನಿಯು ಮಾರಾಟ ಮೊತ್ತ ಯುಎಸ್ ಡಾಲರ್ 17,07,100ರಿಂದ ಯುಎಸ್ ಡಾಲರ್ 16,39,627ಗೆ ಕಡಿತಗೊಳಿಸಿದ ನಂತರ ಯುಎಸ್ ಡಾಲರ್ 67,473 (ರೂ.44,72,429/-) ಹೊಣೆಗಾರಿಕೆಯನ್ನು ಅಂಗೀಕರಿಸಿದೆ (ಡಮೆರ್ರೇಜ್ ಮತ್ತು ಫ್ರೈಟ್‌ಗೆ ಸಂಬಂಧಿಸಿದ ಮೊತ್ತ ರೂ.10,68,47,359/-). ಯುಎಸ್ ಡಾಲರ್ 18,13,378ರ (ರೂ.66,285 ಯುಎಸ್ ಡಾಲರ್ ವಿನಿಮಯ ದರದಲ್ಲಿ ರೂ.12,01,99,779/-ಗಳನ್ನು ಪರಿಗಣಿಸಲಾಯಿತು). ಬಾಕಿ ಮೊತ್ತವು ಕಂಪನಿಯಿಂದ ವಿವಾದಿತವಾಗಿದ್ದು, ಸಾದಿಲ್ವಾರು ಹೊಣೆಗಾರಿಕೆಯಡಿ ತಿಳಿಸಿದೆ. ಕಂಪನಿಯು ಆರ್ಬಿಟ್ರೇಷನ್ ತೀರ್ಪನ್ನು ರದ್ದುಪಡಿಸುವಂತೆ ಇಂಡಿಯನ್ ಆರ್ಬಿಟ್ರೇಷನ್ ಆಕ್ಟ್‌ನ ಸೆಕ್ಷನ್ 34ರನ್ವಯ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಅದು ವಿಚಾರಣೆ ಹಂತದಲ್ಲಿದೆ. ಮೇಲ್ಕಂಡ ವ್ಯವಹರಣೆಗಳ ಸಂಬಂಧ ಕರ್ನಾಟಕ ವಿಧಾನಸಭೆಯ ಸಾರ್ವಜನಿಕ ಉದ್ಯಮಗಳ ಮೇಲಿನ ಸಮಿತಿಯು ಅವ್ಯವಹಾರಗಳ ಬಗ್ಗೆ ವರದಿ ಸಲ್ಲಿಸಿದೆ. ಕಂಪನಿಯು ವ್ಯಾಪ್ತಿಯ ಪೊಲೀಸ್ ಠಾಣೆಗೆ ಕ್ರಿಮಿನಲ್ ಮೊಕದ್ದಮೆ ಸಲ್ಲಿಸಿದೆ ಮತ್ತು ಪೊಲೀಸರು ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಈ ಕ್ರಿಮಿನಲ್ ದೂರಿನ ಸಂಬಂಧ ಪೊಲೀಸರು ಆರೋಪ ಪಟ್ಟಿ ಸಿದ್ಧಪಡಿಸಿದ್ದು, ಎಸಿಎಂಎಂ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ.

ಕಬ್ಬನ್‌ಪಾರ್ಕ್ ಪೊಲೀಸರು ಶ್ರೀ ಅಶೋಕ್ ಉಡುಪಿ (ಎ1), ಶ್ರೀ ದೀಪಕ್ ಅಗರ್‌ವಾಲ್ (ಎ2), ಮೆ॥ ಫ್ರೆಮರಿ ಹೋಲ್ಡಿಂಗ್ಸ್ ಲಿಮಿಟೆಡ್ ಹಾಂಗ್‌ಕಾಂಗ್ (ಎ3) ಎಂಎಸ್‌ಐಎಲ್ ಅಧಿಕಾರಿಗಳಾದ ಶ್ರೀ ರಮಾಕಾಂತ್ ಹೆಬ್ಬಳ್ಳಿ (ಎ4) ಮತ್ತು ಶ್ರೀ ಪುರುಷೋತ್ತಮ್ ಸಿಂಹ (ಎ5), ಇವರುಗಳ ವಿರುದ್ಧ ಐಪಿಸಿ 420 ರಡಿ ಸಕ್ಷಮ ನ್ಯಾಯಾಲಯದಲ್ಲಿ ಕ್ರಿಮಿನಲ್ ದಾವೆ ಹೂಡಿದ್ದಾರೆ. ಸದರಿ ವಿಚಾರವು ಎಸಿಎಂಎಂ ನ್ಯಾಯಾಲಯದಲ್ಲಿ ಅನೇಕ ಸಮಯದಲ್ಲಿ ಪಟ್ಟಿ ಮಾಡಲಾಗಿದ್ದು, ಅದೇ ವೇಳೆಯಲ್ಲಿ ಮುಂದೂಡಲಾಗಿದೆ. ಈ ಮಧ್ಯೆ ಎ4 ಮತ್ತು ಎ5 ರವರು ನ್ಯಾಯಾಲಯದಿಂದ ಜಾಮೀನು ಪಡೆದಿದ್ದಾರೆ. ಎ1 ರವರ ಸಂಬಂಧದಲ್ಲಿ ಅವರು ಮರಣ ಹೊಂದಿರುವುದರಿಂದ, ಎ2 ರಿಂದ ಎ5ರವರೆಗಿನವರ ವಿರುದ್ಧ ಈಗ ವಿಚಾರಣೆ ನಡೆಸಲಾಗುವುದು.

ಮೆ॥ ಮಲ್ಲಪ್ಪ ಮಿನರಲ್ ಇಂಡಸ್ಟ್ರೀಸ್‌ನ ಶ್ರೀ ಮಾಲ್ತೇಶ್‌ರವರಿಂದ ರೂ.9 ಕೋಟಿ ವಸೂಲಿಗಾಗಿ, ಇವರ ವಿರುದ್ಧ ಅಪರ ಮ್ಯಾಜಿಸ್ಟ್ರೇಟ್‌ರವರ ನ್ಯಾಯಾಲಯದಲ್ಲಿ ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಆ್ಯಕ್ಟ್‌ನ ಸೆಕ್ಷನ್ 138ರ ಅನ್ವಯ ಚೆಕ್‌ಬೌನ್ಸ್ ಪ್ರಕರಣ ಹೂಡಲಾಗಿದೆ. ಕಂಪನಿ ಸಾಕ್ಷಿಯ ಪಾಟಿಸವಾಲು ಬಹುಪಾಲು ಪೂರ್ಣಗೊಂಡಿದೆ. ಆದರೆ, ಶ್ರೀ ಮಾಲ್ತೇಶ್ ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಮುಂದಿನ ನಡಾವಳಿಗೆ ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆ ತೆರವಾದರೆ ಮುಂದಿನ ವಿಚಾರಣೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಮುಂದುವರಿಯಲಿದೆ.

**51.** ಕಂಪನಿಯು 1997-98ರಲ್ಲಿ ಕರ್ನಾಟಕ ಸರ್ಕಾರದಿಂದ ರೂ.5,00,00,000/- (ರೂ.5,00,00,000/-) ಮೊತ್ತದ ಸಾಲ ಪಡೆದಿತ್ತು. ಅದಕ್ಕೆ ಕಂಪನಿಯು 31.03.2004ರವರೆಗೆ ರೂ.5,27,42,466/- ಮೊತ್ತದ ಬಡ್ಡಿ ಪಾವತಿಸಿದೆ.

ಮೇಲ್ಕಾಣಿಸಿದ ಮೊತ್ತ ರೂ.15,09,48,779/-ಅನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಬೇಕೆಂದು ಕಂಪನಿ 2004-05ರ ಹಣಕಾಸು ವರ್ಷದಲ್ಲೇ ಕರ್ನಾಟಕ ಸರ್ಕಾರಕ್ಕೆ ಕೇಳಿಕೊಂಡಿತ್ತು. 17.09.2004ರಲ್ಲಿ ಸರ್ಕಾರದ ಹಣಕಾಸು ಇಲಾಖೆ ಈ ಪ್ರಸ್ತಾವನೆಗೆ ಹಸಿರು ನಿಶಾನೆ ನೀಡಿತ್ತು. ಪಿಂಚಣಿ, ಸಣ್ಣ ಉಳಿತಾಯ ಸ್ವತ್ತುಗಳ ನಿರ್ವಹಣೆ ನಿರ್ದೇಶನಾಲಯ ಇಲಾಖೆ ದಿನಾಂಕ: 20.07.2012ರ ತನ್ನ ಪತ್ರದಲ್ಲಿ ಕಂಪನಿಯ ಪ್ರಸ್ತಾವನೆಯನ್ನು ಅನುಮೋದಿಸಿತ್ತು. ಈ ಮೊತ್ತವನ್ನು ಹಣಕಾಸಿನ ವರ್ಷ 2017-18ರ ಅವಧಿಯಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ರೂ.22,55,81,700/-ರ (ಷೇರು ಒಂದಕ್ಕೆ ರೂ.100/-ರ 2255817 ಸಂಖ್ಯೆ ಷೇರುಗಳು) ಮೌಲ್ಯದ ಷೇರು ಬಂಡವಾಳಕ್ಕೆ ಷೇರು ಅರ್ಜಿ ಹಣದಿಂದ ವರ್ಗಾಯಿಸಲಾಗಿದೆ.

**52.** ಇತರೆ ಹೊಣೆಗಾರಿಕೆಯಲ್ಲಿ ಸರ್ಕಾರದ ಹಲವು ಇಲಾಖೆಗಳಿಗೆ ಆಮದಾದ ಸಿಮೆಂಟ್ ಸರಬರಾಜು ಗುತ್ತಿಗೆ ಸಂಬಂಧ ಸ್ವೀಕರಿಸಿರುವ ಮುಂಗಡದ ಮೊತ್ತ ರೂ.2,10,46,347/- (ರೂ.2,10,46,347/-) ಸೇರಿದೆ.

**53ಎ.** ಐದು ಮದ್ಯ ತಯಾರಕರು ಮಾಡುವ ಮದ್ಯ ಮಾರಾಟದಲ್ಲಿ ಕಮಿಷನ್‌ಗೆ ಎಂಎಸ್‌ಐಎಲ್ ಅರ್ಹ ಎಂದು 13.02.2003ರಂದು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದೆ. ಕರ್ನಾಟಕದ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಅಂತಿಮಗೊಳಿಸುವ ಅಧಿಕಾರಿಯನ್ನು ನೇಮಕ ಮಾಡಿದೆ ಮತ್ತು ಇದನ್ನು ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿದೆ. ಅವರು ಸ್ಕೋಲ್ ಬ್ರೆವರೀಸ್ ನಿಯಮಿತ (ಹಿಂದಿನ ಮೈಸೂರು ಬ್ರೆವರೀಸ್ ನಿಯಮಿತ) ಅವರಿಂದ ರೂ.25.18 ಕೋಟಿ ಬಾಕಿ ಕಮಿಷನ್ ಪಡೆಯಲು ಅರ್ಹವಾಗಿದ್ದು, ಟಿಪ್ಪಣಿ 2-ಡಿ (ii) (ಬಿ) ರಲ್ಲಿನ ನಮೂದಿಸಿರುವ ಲೆಕ್ಕಪತ್ರದ ನೀತಿ ಅನುಸಾರ ಹಣ ಒದಗುವುದರ ಬಗ್ಗೆ ಖಚಿತವಿಲ್ಲದೆ ಇರುವುದರಿಂದ ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 13ನೇ ಫೆಬ್ರವರಿ 2003ರ ಆದೇಶದ ಅನ್ವಯ, ಒಂದು ವೇಳೆ ಮೇಲ್ಮನವಿದಾರರು ಕಮಿಷನ್ ಪಡೆದುಕೊಂಡಿದ್ದರೆ ಮತ್ತು ಈ ರೀತಿ ಪಡೆದುಕೊಂಡಿರುವ ಕಮಿಷನ್ ಅನ್ನು ಎಂಎಸ್‌ಐಎಲ್‌ಗೆ ಪಾವತಿ ಮಾಡಿರದಿದ್ದರೆ, ಮೇಲ್ಮನವಿದಾರರ ಲೆಕ್ಕದ

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

ಪುಸ್ತಕಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆ ರೀತಿ ಪಡೆದುಕೊಂಡಿರುವ ಕಮಿಷನ್ ಹಣವನ್ನು ಮೇಲ್ಮನವಿದಾರರಾದ ಮೆ॥ ಮೈಸೂರ್ ಬ್ರಿವರೀಸ್ ಲಿ.ನಿಂದ ವಸೂಲಿ ಮಾಡಿಕೊಳ್ಳತಕ್ಕದೆಂದು ನಿರ್ದೇಶಿಸಿತ್ತು. ಮುಂದುವರಿದು, ಎರಡೂ ಪಕ್ಷಗಳ ನಡುವೆ ಇರುವ ವಿವಾದ ಪರಿಹಾರವಾಗದಿದ್ದ ಪಕ್ಷದಲ್ಲಿ, ವಿವಾದವನ್ನು ಪರಿಹರಿಸಲು ಅಧಿಕಾರಿಗೆ ಅಧಿಕಾರ ನೀಡಿರುವುದರಿಂದ, ಪ್ರಧಾನ ಕಾರ್ಯದರ್ಶಿಯವರಿಗಿಂತ ಕೆಳಗಿನ ದರ್ಜೆಯಲ್ಲಿರದ, ಕರ್ನಾಟಕ ಸರ್ಕಾರ ನೇಮಕ ಮಾಡಲ್ಪಡುವ ಅಧಿಕೃತ ಅಧಿಕಾರಿಯವರಿಗೆ ಈ ವಿಚಾರವನ್ನು ತಿಳಿಸತಕ್ಕದೆಂದು ಸಹ ನ್ಯಾಯಾಲಯ ಆದೇಶ ಮಾಡಿತ್ತು.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನಗಳ ಅನ್ವಯ ಸಾಕಷ್ಟು ಅವಕಾಶ ನೀಡಲು ಕಾರ್ಯಕಲಾಪಗಳನ್ನು ನಡೆಸಿದ್ದ ಎಂಎಸ್‌ಐಎಲ್‌ನ ಅಧಿಕೃತ ಅಧಿಕಾರಿಯವರು, ಮೆ॥ ಸ್ಕೋಲ್ ಬ್ರಿವರೀಸ್ ರೂ.25.18 ಕೋಟಿಗಳ ಕಮಿಷನ್ ಅನ್ನು ಎಂಎಸ್‌ಐಎಲ್‌ಗೆ ಪಾವತಿ ಮಾಡಬೇಕೆಂದು ಮಾಡಿದ ತೀರ್ಪಿನ ಬಗ್ಗೆ ಮೆ॥ ಸ್ಕೂಲ್ ಬ್ರಿವರೀಸ್ (ಹಿಂದಿನ ಮೆ॥ ಮೈಸೂರ್ ಬ್ರಿವರೀಸ್ ಲಿ) ವಿವಾದ ಎತ್ತಿತು. ಅಧಿಕೃತ ಅಧಿಕಾರಿಯವರು ಮಾಡಿದ ಆದೇಶದ ಬಗ್ಗೆ ಸ್ಕೋಲ್ ಬ್ರಿವರೀಸ್ ವಿವಾದ ಎತ್ತಿದ ಕಾರಣ, ಸದರಿ ಕಮಿಷನ್ ಹಣ ವಸೂಲಿಗಾಗಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ಅರ್ಜಿ ಸಲ್ಲಿಸಲಾಗಿತ್ತು. ಕಂಪನಿ ಪರವಾಗಿ ಪಿಡಬ್ಲ್ಯೂಡಿ ಪಾಟಿ ಸವಾಲು ಪೂರ್ಣಗೊಂಡಿದೆ ಮತ್ತು ದಿನಾಂಕ 15ನೇ ನವೆಂಬರ್ 2018 ಅನ್ನು ಮುಂದಿನ ವಿಚಾರಣೆ ದಿನವನ್ನಾಗಿ ನಿಗದಿಪಡಿಸಿತ್ತು. ಈ ದಿನದಂದು ಎಂಎಸ್‌ಐಎಲ್ ನ ಪರವಾಗಿರುವ ಪಿಡಬ್ಲ್ಯೂ2ರನ್ನು ಸ್ಕೋಲ್ ಬ್ರಿವರೀಸ್ ಪಾಟಿ ಸವಾಲು ಮಾಡುವುದಿತ್ತು.

ಬಿ) ಹಿಂದಿನ ವರ್ಷದಲ್ಲಿ ಮೆ॥ ವೆಸ್ಕೇರ್ (ಇಂಡಿಯಾ) ಲಿಮಿಟೆಡ್ ಮಾಡಿದ ಹಕ್ಕು ಕೇಳಿಕೆಯನ್ನು ರೂ.1,19,23,000/-ರ ಮೊತ್ತದ ಸಂಭಾವ್ಯ ಹೊಣೆಗಾರಿಕೆ ಅನ್ವಯ ಕಂಪನಿ ಪ್ರಕಟಿಸಿದೆ. ಕಂಪನಿಯು 2015-16ರ ಅವಧಿಯಲ್ಲಿ ವೆಸ್ಕೇರ್ ವಿರುದ್ಧ ಮಧ್ಯಸ್ಥಿಕೆ ತೀರ್ಪಿಗಾಗಿ ದಾವೆ ಹೂಡಿತ್ತು. ಮಧ್ಯಸ್ಥಿಕೆದಾರರು 27.04.2016ರಂದು ಮಧ್ಯಸ್ಥಿಕೆ ತೀರ್ಪನ್ನು ವಿಲೇವಾರಿ ಮಾಡಿರುವರು. ಮಧ್ಯಸ್ಥಿಕೆದಾರರು 31.03.2009ರವರೆಗೆ ರೂ.155.59 ಲಕ್ಷಗಳ ಮೊತ್ತದ ಬಡ್ಡಿ ಜೊತೆಗೆ ಗುತ್ತಿಗೆ ಬಾಡಿಗೆಯ ಬಗ್ಗೆ ಕಂಪನಿ ಮಾಡಿರುವ ಕಂಪನಿಯ ಹಕ್ಕು ಕೇಳಿಕೆಯನ್ನು ಅಂಗೀಕರಿಸಿದೆ ಮತ್ತು ರೂ.239.37ಲಕ್ಷಗಳ ಉಳಿಕೆ ಹಕ್ಕನ್ನು ತಿರಸ್ಕರಿಸಿದೆ. (ಸಂಭಾವ್ಯ ಹೊಣೆಗಾರಿಕೆಯಲ್ಲಿನ ಟಿಪ್ಪಣಿ ನಂ.52 ಕ್ರ.ಸಂ.10 ನೋಡಿ)

ತೀರ್ಪು ನೀಡುವಾಗ ಮಧ್ಯಸ್ಥಿಕೆದಾರರು ವಿಂಡ್‌ಮಿಲ್ ಟರ್ಬೈನ್ಸ್‌ನ ವಿಲೇವಾರಿಯನ್ನು ಪರಿಗಣಿಸದಿದ್ದರೂ ಗುತ್ತಿಗೆಯ ಒಪ್ಪಂದದ ಅನುಸಾರ ಇಲ್ಲದ ಭದ್ರತಾ ಠೇವಣಿಯಿಂದ ಎಂಎಸ್‌ಐಎಲ್‌ನ ಹಾಗೂ ಮೆ॥ ವಾತಾ ಸ್ಮಾರ್ಟ್ ಲಿಮಿಟೆಡ್‌ನ ಬಾಕಿಗಳಿಗೆ ಹೊಂದಾಣಿಕೆ ಮಾಡುವಂತೆ ತೀರ್ಪು ನೀಡಿದೆ. ಇದು ಗುತ್ತಿಗೆ ಒಪ್ಪಂದದ ಅನುಸಾರ ಇರುವುದಿಲ್ಲ.

ಕಂಪನಿ ವಕೀಲರ ಅಭಿಪ್ರಾಯದ ಮೇರೆಗೆ, ಮಧ್ಯಸ್ಥಿಕೆದಾರರ ತೀರ್ಪನ್ನು ಪ್ರಶ್ನಿಸಿ ಕಂಪನಿಯು ಮದ್ರಾಸ್ ಹೈಕೋರ್ಟ್‌ನಲ್ಲಿ ದಿನಾಂಕ:27.04.2016ರಂದು ಮೂಲ ಮೊಕದ್ದಮೆ ಅರ್ಜಿ ಸಲ್ಲಿಸಿತ್ತು. ಸದರಿ ವಿಚಾರವು ಮದ್ರಾಸ್ ಹೈಕೋರ್ಟ್‌ನಲ್ಲಿ ವಿಚಾರಣೆಯಲ್ಲಿದೆ. ಕಳಚಿ ಹಾಕಿರುವ ವಿಂಡ್‌ಮಿಲ್ ಟರ್ಬೈನ್ಸ್‌ನ ತಪಶೀಲು ಪಡೆಯಲು ಏಕಪಕ್ಷೀಯವಾಗಿ ವೆಸ್ಕೇರ್‌ಗೆ ಹೈಕೋರ್ಟ್ ಅನುಮತಿ ಕೊಟ್ಟಿರುವ ಮತ್ತೊಂದು ಸಂಬಂಧಪಟ್ಟ ವಿಚಾರದಲ್ಲಿ ಕೋರ್ಟ್ ಹೊರಡಿಸಿರುವ ಆದೇಶಗಳನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿದೆ. ವಿಚಾರಣೆಯ ಮುಂದಿನ ದಿನಾಂಕವನ್ನು ಇನ್ನೂ ತಿಳಿಸಿರುವುದಿಲ್ಲ. ಮದ್ರಾಸ್ ಹೈಕೋರ್ಟ್‌ನಲ್ಲಿ ಹೂಡಿರುವ ಮೊಕದ್ದಮೆಯ ತೀರ್ಪಿನ ಖಚಿತತೆಯಿಲ್ಲದ್ದರಿಂದ ಕಂಪನಿಯು ಹಕ್ಕುಗಳನ್ನು ಪುಸ್ತಕಗಳಲ್ಲಿ ದಾಖಲಿಸಿರುವುದಿಲ್ಲ. ಈ ವಿಚಾರದ ಬಗ್ಗೆ ಮಾನ್ಯ ಮದ್ರಾಸ್ ಉಚ್ಚ ನ್ಯಾಯಾಲಯ ಕೆಲವು ಸಂದರ್ಭಗಳಲ್ಲಿ ವಿಚಾರಣೆ ನಡೆಸಿತ್ತು ಮತ್ತು ಈ ವಿಚಾರದ ಬಗ್ಗೆ ಮುಂದಿನ ವಿಚಾರಣೆಯನ್ನು ಡಿಸೆಂಬರ್ 2018ರಲ್ಲಿ ನಡೆಸಲು ನಿಗದಿ ಮಾಡಿದೆ.

**54.** ಟಿಪ್ಪಣಿ 11ರಲ್ಲಿಯ ಹೂಡಿಕೆಯಲ್ಲಿ ಫುಡ್ ಕರ್ನಾಟಕ ಲಿಮಿಟೆಡ್ ಹೊಂದಿರುವ ರೂ.10ರ ಬೆಲೆಯ 50,000 ಷೇರುಗಳು ಸೇರಿವೆ. ಕರ್ನಾಟಕ ಸರ್ಕಾರ ದಿನಾಂಕ : 05.03.2011ರಂದು ನೀಡಿದ ತನ್ನ ಆದೇಶ ನಂ. AHD 172 AFT 2010 ರೀತ್ಯ ಷೇರುಗಳನ್ನು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣಾ ಮತ್ತು ರಫ್ತು ನಿಗಮಕ್ಕೆ ವರ್ಗಾಯಿಸಲು ಆದೇಶಿಸಿದೆ. ಇದನ್ನು ಕಂಪನಿಯ 30.06.2011ರ ಮಂಡಳಿ ಸಭೆಯಲ್ಲೂ ಅನುಮೋದಿಸಲಾಗಿದೆ. ವರ್ಗಾವಣೆ ದರದ ನಿಷ್ಕರ್ಷೆಯಾಗಿರದ ಕಾರಣ ವರ್ಗಾವಣೆ ತಡೆಯಾಗಿದೆ.

**55.** ಇತರೆ ಚಾಲ್ತಿ ಹೊಣೆಗಾರಿಕೆಯಲ್ಲಿ ಎಂಎಸ್‌ಐಎಲ್ ಮತ್ತು ನೌಕರರಿಂದ ಮರಣ ಪರಿಹಾರ ನಿಧಿಗೆ ಅನುಕ್ರಮವಾಗಿ ನೀಡಿರುವ ರೂ.63,88,736/- (ರೂ.76,40,692/-) ಮತ್ತು (ರೂ.31,47,810/-) (ರೂ.27,51,855/-) ಸೇರಿದೆ. ಈ ಯೋಜನೆಯಂತೆ ನೌಕರನು ತನ್ನ ಸೇವಾ ಕಾಲದಲ್ಲಿ ಮೃತನಾದರೆ ಮೃತನ ವಾರಸುದಾರರು ರೂ.3,00,000/-ಪಡೆಯಲು ಅರ್ಹರಾಗಿರುತ್ತಾರೆ. ಅದೇ ರೀತಿ ನೌಕರನು ನಿವೃತ್ತನಾದಲ್ಲಿ ಅಥವಾ ರಾಜೀನಾಮೆ ನೀಡಿ ಕಂಪನಿಯನ್ನು ತ್ಯಜಿಸಿದಲ್ಲಿ ಆತನು ತಾನು ನೀಡಿರುವ ಪಾಲನ್ನು ಮಾತ್ರವಲ್ಲದೆ ಈ ಯೋಜನೆಯ ಕಂಪನಿಯ ಪಾಲನ್ನು ಪಡೆಯಲು ಅರ್ಹನಾಗಿರುತ್ತಾನೆ.

**56.** ಹಣಕಾಸು ವರ್ಷದ ಕೊನೆಯ ದಿನದಲ್ಲಿದ್ದಂತೆ ರೂ.1,96,008/- (ರೂ.45,307/-) ಮೌಲ್ಯದ ರವಾನೆದಾರರಿಗೆ ರವಾನೆಯಾಗಬೇಕಾದ ಸರಕನ್ನು ಕಂಪನಿ ಹೊಂದಿದೆ.

**57.** ನಿರೂಪಿತ ವಂತಿಗೆ ಯೋಜನೆಗಳು

ಕಂಪನಿಯು ಅರ್ಹತೆಯುಳ್ಳ ನೌಕರರಿಗಾಗಿ ನಿರೂಪಿತ ವಂತಿಗೆ ಯೋಜನೆಗೆ ಹಣವನ್ನು ಒದಗಿಸುವುದು. ಈ ಯೋಜನೆ ಅನ್ವಯ ಕಂಪನಿಯು ಹಣದ ಸೌಲಭ್ಯಗಳಿಗಾಗಿ ಪೇರೋಲ್ ಬೆಲೆಯ ನಿಗದಿತ ಶೇಕಡ ಪ್ರಮಾಣವನ್ನು ನೀಡಬೇಕಾಗಿರುತ್ತದೆ. ಕಂಪನಿಯು ಕೆಳಗೆ ತಿಳಿಸಿರುವ ಲಾಭ ಮತ್ತು ನಷ್ಟದ ವಿವರಗಳನ್ನು ಮಾನ್ಯ ಮಾಡಿದೆ. ಸದರಿ ಯೋಜನೆಗಳಿಗೆ ಕಂಪನಿ ಪಾವತಿ ಮಾಡಬೇಕಾಗಿರುವ ವಂತಿಗೆಯು ಯೋಜನೆಯ ನಿಯಮಗಳಲ್ಲಿ ತಿಳಿಸಿರುವ ದರದಲ್ಲಿರುವುದು:

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

i) ಮರಣ ಪರಿಹಾರ ನಿಧಿ ರೂ.7,22,610/- (ರೂ.3,19,618/-)

ii) ಗ್ರ್ಯಾಚ್ಯುಯಿಟಿ ರೂ.1,84,69,973/- (ರೂ.5,30,824/-)

iii) ವಯೋ ನಿವೃತ್ತಿ ರೂ.1,02,95,411/- (ರೂ.28,46,730/-)

iv) ಭವಿಷ್ಯನಿಧಿಗೆ ಕಂಪನಿಯ ವಂತಿಗೆ ರೂ.1,49,86,178/- (ರೂ.1,05,48,540/-)

**58.** 2ನೇ ಅಕ್ಟೋಬರ್ 2006ರಲ್ಲಿ ಜಾರಿಗೆ ಬಂದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆ ಅಭಿವೃದ್ಧಿ (ಎಂಎಸ್ಎಂಇಡಿ) ಕಾಯ್ದೆ 2006ರ ಅನ್ವಯ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಬಗ್ಗೆ ಕೆಲವೊಂದು ಪ್ರಕಟಣೆಗಳನ್ನು ಮಾಡಬೇಕಿತ್ತು. 2017-18ನೇ ಹಣಕಾಸು ವರ್ಷದಲ್ಲಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆ ಅಭಿವೃದ್ಧಿ ಕಾಯ್ದೆ 2006ರ ಪ್ರಕರಣ 22ರಂತೆ ಕಂಪನಿಯು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಗುರುತಿಸಿದೆ.

| ವಿವರಗಳು | 31.03.2018 ರಲ್ಲಿದ್ದಂತೆ | 31.03.2017 ರಲ್ಲಿದ್ದಂತೆ |
|---|---|---|
| ವರ್ಷಾಂತ್ಯದಲ್ಲಿದ್ದಂತೆ ಯಾವುದೇ ಸರಬರಾಜುದಾರರಿಗೆ ಪಾವತಿಯಾಗದೆ ಉಳಿದಿರುವ ಅಸಲು ಮೊತ್ತ ಮತ್ತು ಬಡ್ಡಿ,<br>★ ಅಸಲು ಮೊತ್ತ<br>★ ಎಂಎಸ್ಎಂಇಡಿ ಕಾಯಿದೆ, 2006ರಡಿ ಪಾವತಿಸಬೇಕಾದ ಬಡ್ಡಿ<br>★ ಒಟ್ಟು | -<br>ರೂ.<br>ರೂ.12,066/-<br>ರೂ.12,066/- | -<br>ರೂ.<br>ರೂ.15,920/-<br>ರೂ.15,920/- |
| 2018ರ ಮಾರ್ಚ್ 31ಕ್ಕೆ ಕೊನೆಗೊಂಡ ಲೆಕ್ಕಪತ್ರದ ವರ್ಷದಲ್ಲಿ ಯಾವುದೇ ಸರಬರಾಜುದಾರರಿಗೆ ನಿಗದಿತ ದಿನದ ನಂತರ ಮಾಡಿದ ಪಾವತಿ ಮೊತ್ತದೊಂದಿಗೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯಿದೆ, 2006ರ ಸೆಕ್ಷನ್ 16ರ ನಿಯಮಗಳನ್ವಯ ಕಂಪನಿಯು ಪಾವತಿಸಿರುವ ಬಡ್ಡಿ ಮೊತ್ತ | ಇಲ್ಲ | ಇಲ್ಲ |
| ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯಿದೆ 2006ರಡಿ ಸೂಚಿಸಲ್ಪಟ್ಟ ಬಡ್ಡಿ ಸೇರಿಸದೇ ಪಾವತಿ ಮಾಡುವಲ್ಲಿ ವಿಳಂಬ ಆದ ಅವಧಿಗೆ ಪಾವತಿಸಬೇಕಾದ ಬಡ್ಡಿ ಮೊತ್ತ (ವರ್ಷದಲ್ಲಿ ನೇಮಕವಾದ ದಿನದ ನಂತರ ಪಾವತಿಸಲ್ಪಟ್ಟಿದ್ದರೆ) * | ರೂ.12,066/- | ರೂ.15,920/- |
| ಲೆಕ್ಕಪತ್ರ ವರ್ಷ - ಮಾರ್ಚ್ 2018ರ ಅಂತ್ಯಕ್ಕೆ ಸಂಚಯನಗೊಂಡ ಬಡ್ಡಿ ಮತ್ತು ಪಾವತಿಸದೆ ಬಾಕಿಯಿರುವ ಮೊತ್ತ * | ರೂ.12,066/- | ರೂ.15,920/- |
| ಇನ್ನೂ ಪಾವತಿಗೆ ಬಾಕಿಯಿರುವ ಮತ್ತು ಮುಂದಿನ ವರ್ಷಗಳಲ್ಲಿ ಮೇಲಿನಂತೆ ಪಾವತಿ ಮಾಡಬೇಕಿರುವ ದಿನಾಂಕದವರೆಗೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ 2006*ರ ಪ್ರಕರಣ 23ರ ಅನ್ವಯ ಕಳೆದುಕೊಳ್ಳಬೇಕಾದ ಖರ್ಚು ಆಗಿ ಅಂಗೀಕರಿಸದ ಉದ್ದೇಶಕ್ಕಾಗಿ ಸಣ್ಣ ಉದ್ಯಮಕ್ಕೆ ವಾಸ್ತವವಾಗಿ ಪಾವತಿಸಿದ ಮೊತ್ತ* | ರೂ.12,066/- | ರೂ.15,920/- |

* ಮೇಲಿನ ಮಾಹಿತಿಯನ್ನು ಕಂಪನಿಯು ಎಂಎಸ್ಎಂಇ ಎಂದು ಗುರುತಿಸಿರುವ ವ್ಯಕ್ತಿಗಳಿಗೆ ಆ ಪ್ರಮಾಣದವರೆಗೆ ಸಲ್ಲಿಸಿದೆ. ಇದು ವ್ಯವಹಾರ ಕ್ರಮದ ಭಾಗವಾಗಿ ನಿವ್ವಳ ರಿಯಾಯಿತಿ/ಮನ್ನಾ ಆಗಿರುವುದು. ಅದನ್ನು ಲೆಕ್ಕಪರಿಶೋಧಕರು ಪರಿಗಣಿಸಿರುವರು.

**59.** ರೂ.20,11,291/- (ರೂ.34,02,40,465/-) ರ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಲ್ಲಿ ಈ ಕೆಳಕಂಡವು ಒಳಗೊಂಡಿರುವವು:

i) ನವಿ ಮುಂಬೈನಲ್ಲಿ ಬಿಲ್ಡ್ ಓನ್ ಆಪರೇಟ್ ಟ್ರಾನ್ಸ್‌ಫರ್ (BOOT) ಅಡಿ ರೂ.ಇಲ್ಲ. (ರೂ.33,82,29,174/- )

ii) ಕಲಬುರಗಿಯಲ್ಲಿ ಉಗ್ರಾಣ ನಿರ್ಮಾಣ ರೂ.13,39,496/- (ರೂ.13,39,496/-,)

iii) ಧಾರವಾಡದಲ್ಲಿ ಉಗ್ರಾಣ ನಿರ್ಮಾಣ ರೂ.4,65,672/- (ರೂ.4,65,672/-)

iv) ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿ ಕಚೇರಿ ನಿರ್ಮಾಣ ರೂ.2,06,123/- (ರೂ.2,06,123/-)

**60.** ಮೌಲ್ಯ ನಿಖರಗೊಳಿಸದ 16 ಸಂಖ್ಯೆಯ (16 ಸಂಖ್ಯೆಯ) ವರ್ಣ ಚಿತ್ರಗಳನ್ನು ಕಂಪನಿ ಹೊಂದಿದೆ.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

**61.** ಈ ಕೆಳಕಂಡವುಗಳನ್ನು ಒಳಗೊಂಡ ಸಂಭಾವ್ಯ ಹೊಣೆಗಾರಿಕೆಗಳು: **(ಮೊತ್ತ ರೂ.ಗಳಲ್ಲಿ)**

| ಕ್ರ.ಸಂ. | ಸಂಭಾವ್ಯ ಹೊಣೆಗಾರಿಕೆಗಳು | 2017-2018 | 2016-2017 |
|---|---|---|---|
| 1 | ಕೆಐಎಡಿಬಿ ದಂಡ | 1,20,000 | 1,20,000 |
| 2 | ಲೆಕ್ಕಪತ್ರದ ವರ್ಷ 2001-02ರಿಂದ 2003-04ರವರೆಗೆ ಟಿಸಿಎಸ್ ಬಡ್ಡಿ | 17,86,95,401 | 16,27,00,399 |
| 3 | ಕಂಪನಿಯಿಂದ ಬ್ಯಾಂಕ್‌ಗಳಿಗೆ ನೀಡಿದ ಗ್ಯಾರಂಟಿಗಳು/ಪ್ರತಿ ಗ್ಯಾರಂಟಿಗಳು | 38,55,44,381 | 36,49,68,381 |
| 4 | ಅಗ್ನಿ ಅನಾಹುತ ಪಾಲಿಸಿಯ ವಿಮಾ ಹಕ್ಕು - ಬಾಕಿ ಇರುವ ಕೇಸ್‌ಗಳು-ಕೆಳಗಿನ ಟಿಪ್ಪಣಿ (i) | 2,07,73,297 | 2,07,73,297 |
| 5 | ಅಗ್ನಿ ಅನಾಹುತ ಪಾಲಿಸಿಯ ವಿಮಾ ಹಕ್ಕು - ತೀರ್ಪು ನೀಡಿರುವ ಕೇಸ್‌ಗಳು-ಕೆಳಗಿನ ಟಿಪ್ಪಣಿ (i) | 4,88,70,362 | 4,88,70,362 |
| 6 | ವಿಮಾ ಹಕ್ಕುಗಳ ಮೇಲೆ ಬಡ್ಡಿ -ಕೆಳಗಿನ ಟಿಪ್ಪಣಿ (i) | 4,87,58,984 | 4,49,09,522 |
| 7 | ಬಿಎಸಿಸಿ ಬಳಿಯ ಕೆಐಎಡಿಬಿ ಭೂಮಿಯ ಮೇಲಿನ ಹಕ್ಕು - ಭೂ ಬಳಕೆದಾರರಿಂದ | 30,19,863 | 30,19,863 |
| 8 | ಕಬ್ಬಿಣದ ಅದಿರು ರಫ್ತು ವ್ಯವಹಾರದಲ್ಲಿ ವ್ಯಕ್ತಿಯಿಂದ ಹಕ್ಕು ಕೇಳಿಕೆ (ಬಡ್ಡಿ ಸೇರಿದಂತೆ) | 14,78,53,074 | 14,63,83,432 |
| 9 | ಪಿಂಚಣಿ, ಸಣ್ಣ ಉಳಿತಾಯಗಳು ಆಸ್ತಿ ಮೇಲ್ವಿಚಾರಣೆ ನಿರ್ದೇಶನಾಲಯ ಮಾಡಿರುವ ಕ್ಲೇಮು | 46,09,86,366 | 46,09,86,366 |
| 10 | ವೆಸ್ಟೇರ್ (ಇಂಡಿಯಾ) ಲಿಮಿಟೆಡ್‌ನಿಂದ ಗಾಳಿಯಂತ್ರದ ಗುತ್ತಿಗೆ ಹಕ್ಕು | 1,19,23,000 | 1,19,23,000 |

i) 2000-01ರಲ್ಲಿ ಬೆಂಗಳೂರಿನ ಕಂಪನಿ ಸ್ವತ್ತಾದ ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್‌ನಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ನಷ್ಟವಾದ ಗ್ರಾಹಕರ ಕ್ಲೇಮುಗಳನ್ನು ಸಂಬಂಧಿಸಿದ ಕೆಲವು ವಿಮಾ ಕಂಪನಿಗಳು ಇತ್ಯರ್ಥಗೊಳಿಸಿದ್ದರೂ, ಅವರು ಕಂಪನಿ ವಿರುದ್ಧ PRINCIPLES OF SUBROGATION ನಡಿ ಅವರ ಕ್ಲೇಮುಗಳ ವಸೂಲಿಗೆ ಅನೇಕ ದಾವೆ ಸಲ್ಲಿಸಿದ್ದಾರೆ. ನಗರ ಸಿವಿಲ್ ಕೋರ್ಟ್‌ನಲ್ಲಿ ಕಂಪನಿಯು ಈ ಕ್ಲೇಮುಗಳ ವಿರುದ್ಧ ತನ್ನ ತಗಾದೆ ಸಲ್ಲಿಸಿದೆ. ಸಿವಿಲ್ ಕೋರ್ಟ್‌ಗಳ ತೀರ್ಪಿನಿಂದ ಅಸಮಾಧಾನಗೊಂಡ ಕಂಪನಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಿದೆ. ಗೌರವಾನ್ವಿತ ಹೈಕೋರ್ಟ್ 09.03.2009ರ ತನ್ನ ಆದೇಶದಲ್ಲಿ ಎಂಎಸ್‌ಐಎಲ್ ಮತ್ತು ಸೀಮಾ ಸುಂಕ ಇಲಾಖೆಯವರು ಜಂಟಿಯಾಗಿ ಹೊಣೆಯಾಗಿದ್ದು, ಹಕ್ಕುದಾರರಿಗೆ ಈ ಹಣವನ್ನು ಪಾವತಿ ಮಾಡಬೇಕೆಂದು ತಿಳಿಸಿದೆ. ಉಚ್ಚ ನ್ಯಾಯಾಲಯದ ಆದೇಶದಿಂದ ಅಸಮಧಾನಗೊಂಡ ಕಂಪನಿ, ಸೀಮಾ ಸುಂಕ ಇಲಾಖೆಯ ಜೊತೆಗೂಡಿ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು 06.11.2009ರ ತನ್ನ ಆರ್ಡರ್‌ನಲ್ಲಿ ಎರಡೂ ಕಡೆಯ ವಾದವನ್ನು ಆಲಿಸಿ, ಸಂಬಂಧಿಸಿದ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳಾಗಿದ್ದು ಪರಸ್ಪರರು ಮಾತನಾಡಿ ವ್ಯಾಜ್ಯವನ್ನು ಸೂಕ್ತವಾಗಿ ಪರಿಹರಿಸಿಕೊಳ್ಳಬೇಕೆಂದು ತಿಳಿಸಿದೆ. ಇದೇ ರೀತಿಯ ವಿಚಾರದ ಕೆಲವು ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯಗಳು ಉಚ್ಚ ನ್ಯಾಯಾಲಯದ ಇದೇ ತಾರ್ಕಿಕ ಆಧಾರಗಳನ್ನು ಅನ್ವಯಿಸಿವೆ ಮತ್ತು ಎಂಎಸ್‌ಐಎಲ್ ಮತ್ತು ಸೀಮಾ ಸುಂಕ ಇಲಾಖೆ ಜಂಟಿಯಾಗಿ ವಿಮಾ ಹಕ್ಕನ್ನು ಇತ್ಯರ್ಥಪಡಿಸಲು ಹೊಣೆಯಾಗಿರುವರು ಎಂದು ತೀರ್ಪು ನೀಡಿದೆ. ಪುಸ್ತಕಗಳಲ್ಲಿನ ಶೇ.6ರಷ್ಟು ಬಡ್ಡಿ ಬಂಡವಾಳ ಸೇರಿ ರೂ.3,25,43,115/-ರ (3,12,59,962/-) ಹೊಣೆಗಾರಿಕೆಯ ನಾಲ್ಕನೇ ಒಂದು ಭಾಗವನ್ನು ಕಂಪನಿಯು ಒದಗಿಸಿದೆ ಮತ್ತು ರೂ.9,76,29,346/- (ರೂ.9,37,79,884/-) ಗಳ ಬಾಕಿ ಮೊತ್ತವನ್ನು ಸಂಭಾವ್ಯ ಹೊಣೆಗಾರಿಕೆಯಲ್ಲಿ ತೋರಿಸಲಾಗಿದೆ. ಕಂಪನಿಯ ವಿಮಾದಾರರು ಮತ್ತು ಸೀಮಾ ಸುಂಕ ಇಲಾಖೆಯಿಂದ ವಸೂಲಾತಿಗೆ ಯಾವುದೇ ಕ್ಲೇಮುಗಳು ನಿರ್ಧಾರಣೆಯಾಗಿಲ್ಲ. ಬಿಎಸಿಸಿ ಉಗ್ರಾಣದಲ್ಲಿ ಇರಿಸಲಾಗಿರುವ ಸರಕುಗಳಿಗೆ ಕಂಪನಿಯು ತನ್ನ ವಿಮಾ ಕಂಪನಿಯ ಮೂಲಕ ಸೀಮಾ ಸುಂಕ ನಿಯಮಾವಳಿಯ ವ್ಯಾಪಾರಿ ಸುತ್ತೋಲೆಯಂತೆ ಕೆ.ಜಿ.ಯೊಂದಕ್ಕೆ 20 ಡಾಲರ್‌ನಂತೆ ವಿಮೆ ಮಾಡಿಸಿದೆ.

ii) ಕಂಪನಿಯು ನಿರ್ಧರಣೆ ವರ್ಷ 2010-11 ಮತ್ತು 2012-13, 2014-15 ಮತ್ತು 2015-16 ಆದಾಯ ತೆರಿಗೆ ಮರು ಪಾವತಿ ಕೇಳಿದೆ. ಆದಾಯ ತೆರಿಗೆ ಇಲಾಖೆ ಆದೇಶದಂತೆ ತೆರಿಗೆ ಬೇಡಿಕೆಗಳು ಕೆಳಕಂಡಂತಿವೆ :

| ವರ್ಷ | ಮೊತ್ತ (ರೂ.ಗಳಲ್ಲಿ) |
|---|---|
| 2010-11 | 3,42,45,480/- |
| 2012-13 | 26,18,238/- |
| 2014-15 | 1,08,45,920/- |
| 2015-16 | 18,65,460/- |

ಈ ಮೇಲಿನ ಬೇಡಿಕೆಗಾಗಿ ಕಂಪನಿಯು ಮೇಲ್ಮನವಿ ಸಲ್ಲಿಸಿರುವುದರಿಂದ ಅದನ್ನು ಪುಸ್ತಕಗಳಲ್ಲಿ ಪರಿಗಣಿಸಲಾಗಿಲ್ಲ. ಆ ಕಾರಣದಿಂದಾಗಿ ನಿರ್ಧರಣೆ ಆದೇಶದ ದಿನಾಂಕದಿಂದ ಮಾರ್ಚ್ 31, 2018ರವರೆಗೂ ಮೇಲಿನ ಅಂಕಿ ಅಂಶಗಳಲ್ಲಿ ಬಡ್ಡಿ ಸೇರಿರುವುದಿಲ್ಲ.

62 ಐಎನ್‌ಡಿ ಎಎಸ್-17''ಗುತ್ತಿಗೆಯ ಲೆಕ್ಕ''ದ ಅನ್ವಯ ಮಾಡಬೇಕಾದ ಪ್ರಕಟಣೆ ಈ ಕೆಳಗಿನ ರೀತಿ ಇದೆ :

ಎಂವಿ ಸೋಲಾರ್ ಸಿಸ್ಟಂ ಪ್ರೈವೇಟ್ ಲಿಮಿಟೆಡ್ ಜೊತೆ ಜಂಟಿ ಸಹಯೋಗದಲ್ಲಿ ಸೋಲಾರ್ ವಾಟರ್ ಹೀಟರ್‌ನ್ನು ಗೃಹೇತರ ಗ್ರಾಹಕರಿಗೆ ಗುತ್ತಿಗೆ ನೀಡಲು ಕಂಪನಿ ಕಾರ್ಯಾಚರಣೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿದೆ.

| ಒಟ್ಟಾರೆ ಗುತ್ತಿಗೆ ಪಾವತಿ | 31.3.2018ರಲ್ಲಿದ್ದಂತೆ | 31.3.2017ರಲ್ಲಿದ್ದಂತೆ |
|---|---|---|
| 1. ಒಂದು ವರ್ಷಕ್ಕೆ ಮೀರದಂತೆ | ಇಲ್ಲ | ಇಲ್ಲ |
| 2. ಒಂದು ವರ್ಷ ಮೀರಿ 5 ವರ್ಷದೊಳಗೆ | ರೂ.43,770/- | ರೂ.43,770/- |
| 3. ಐದು ವರ್ಷ ಮೀರಿ | ಇಲ್ಲ | ಇಲ್ಲ |

63. ಐಎನ್‌ಡಿ ಎಎಸ್-24 ರೀತ್ಯ ಸಂಬಂಧಪಟ್ಟ ವ್ಯಕ್ತಿಯ ಪ್ರಕಟಣೆ ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಅಂದರೆ ಈ ಕೆಳಕಂಡಂತೆ ತಿಳಿಸಿರುವ ನಿರ್ದೇಶಕರ ಕುರಿತಂತೆ ಪ್ರಕಟಣೆ :

ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ಸಂಭಾವನೆ

| ವಿವರ | 2017-18 | 2016-17 |
|---|---|---|
| ವೇತನ ಮತ್ತು ಭತ್ಯೆಗಳು | ರೂ.31,85,273/- | ರೂ.16,22,939/- |
| ವೈದ್ಯಕೀಯ ವೆಚ್ಚಗಳು | ರೂ.7,94,642/- | ರೂ.3,85,633/- |

ಹಣಕಾಸಿನ ವರ್ಷ 2017-18ರಲ್ಲಿ ಸಂಬಂಧಪಟ್ಟ ವ್ಯಕ್ತಿಗಳ ಪ್ರಕಟಣೆ ವಿವರ:

| ವಿವರ | ಹೂಡಿಕೆ ಮೊತ್ತ | ಸೇವೆಗಳು/ಮಾರಾಟ ವ್ಯವಹಾರ-2017-18 | | ಪಡೆದಿರುವ ಲಾಭಾಂಶ | 31.03.2018ರಲ್ಲಿದ್ದಂತೆ ಶಿಲ್ಕು | |
|---|---|---|---|---|---|---|
| | | ಆದಾಯ | ಖರ್ಚು | | ಬರಬೇಕಾಗಿರುವುದು | ಪಾವತಿಸಬೇಕಾಗಿರುವುದು |
| ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಆಡ್ವರ್ಟೈಸಿಂಗ್ ಲಿಮಿಟೆಡ್ | 59738400 | 458060 | 12347414 | 3572520 | - | 4265805 |
| ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿ. | 5000 | - | - | - | - | - |
| ಫುಡ್ ಕರ್ನಾಟಕ ಲಿ. | 500000 | - | - | - | - | - |
| ಕರ್ನಾಟಕ ಸರ್ಕಾರ | 427347700 | | | | | |

**64.** 31.03.2018ಕ್ಕೆ ಕೊನೆಗೊಂಡ ವರ್ಷಕ್ಕೆ ವಿಭಾಗದ ಮಾಹಿತಿ ಬಗ್ಗೆ ಐಎನ್‌ಡಿ ಎಎಸ್-108ರ ಅನುಸಾರ ಘೋಷಣೆಗಳನ್ನು ಸೇರಿಸಿದೆ.

ವಿಭಾಗಗಳಿಗೆ ನೇರವಾಗಿ ಅನ್ವಯಿಸತಕ್ಕ ಆದಾಯ ಮತ್ತು ಖರ್ಚುಗಳನ್ನು ಪ್ರತಿಯೊಂದು ವರದಿ ಮಾಡಬಹುದಾದ ವಿಭಾಗದ ಅಡಿಯಲ್ಲಿ ತಿಳಿಸಿದೆ. ಪ್ರತಿಯೊಂದು ವರದಿ ಮಾಡುವ ವಿಭಾಗಕ್ಕೆ ನೇರವಾಗಿ ಅನ್ವಯಿಸಲಾಗದ ಖರ್ಚುಗಳನ್ನು ವಿಭಾಗದ ಒಳಪಟ್ಟ ಆದಾಯಗಳು ಮತ್ತು ಮಾನವ ಶಕ್ತಿ ಪರಿಶ್ರಮದ ಆಧಾರದ ಮೇಲೆ ಹಂಚಿಕೆ ಮಾಡಿದೆ. ವಿಭಾಗಗಳಿಗೆ ಅನ್ವಯಿಸಲಾಗದ ಅಥವಾ ಹಂಚಿಕೆ ಮಾಡಲಾಗದ ಇತರೆ ಎಲ್ಲಾ ಖರ್ಚುಗಳನ್ನು 'ಇತರೆ' ಶೀರ್ಷಿಕೆ ಅಡಿ ತಿಳಿಸಲಾಗಿದೆ.

ವಿಭಾಗಗಳಿಗೆ ನೇರವಾಗಿ ಅನ್ವಯಿಸಬಹುದಾದ ಅಥವಾ ಹಂಚಿಕೆ ಮಾಡಬಹುದಾದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಪ್ರತಿಯೊಂದು ತಿಳಿಸಲ್ಪಡುವ ವಿಭಾಗದ ಅಡಿಯಲ್ಲಿ ವಿವರಿಸಿದೆ.ಇನ್ನುಳಿದ ಎಲ್ಲಾ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು 'ಇತರೆ' ಶೀರ್ಷಿಕೆ ಅಡಿ ತಿಳಿಸಲಾಗಿದೆ.

**65. ತೆರಿಗೆ ಖರ್ಚು**

ಐಎನ್‌ಡಿ ಎಎಸ್ 12 ರ ಅನ್ವಯ ಅಗತ್ಯವಾದಂತೆ ತೆರಿಗೆ ಖರ್ಚುಗಳ ಸಮನ್ವಯತೆಯನ್ನು ಕೆಳಕಂಡ ತಃಖ್ತೆಯಲ್ಲಿ ಒದಗಿಸಿದೆ:

| ವಿವರಗಳು | 31ನೇ ಮಾರ್ಚ್ 2018 | 31ನೇ ಮಾರ್ಚ್ 2017 |
|---|---|---|
| ವರ್ಷದ ತೆರಿಗೆ ವ್ಯವಸ್ಥೆ ಮುನ್ನ ಲೆಕ್ಕಾಚಾರ ಮಾಡಿದ ಲಾಭ | - | - |
| ಲೆಕ್ಕಾಚಾರ ಮಾಡಿದ ಲಾಭದ ಮೇಲಿನ ತೆರಿಗೆ | 235559393 | 568091483 |
| 34.608% ದರದಲ್ಲಿ (31ನೇ ಮಾರ್ಚ್ 2017: 34.608%) | 93773075 | 197773538 |
| ತೆರಿಗೆ ವಿನಾಯಿತಿ ಪಡೆದ ಆದಾಯ: ಲಾಭಾಂಶ ಆದಾಯ | 4442894 | 3504295 |
| ಬಂಡವಾಳ ಗಳಿಕೆಗಳ ಮೇಲೆ ಕಡಿಮೆ ತೆರಿಗೆ ವಿಧಿಸುವಿಕೆ | 0 | 0 |
| **ತೆರಿಗೆ ಉದ್ದೇಶಗಳಿಗಾಗಿ ಮುರಿದುಕೊಳ್ಳಲಾಗದ ಖರ್ಚುಗಳು** | | |
| ನೌಕರರ ಆನುಷಂಗಿಕ ಸೌಲಭ್ಯಗಳ ಮೇಲಿನ ಆದಾಯ ತೆರಿಗೆ | 0 | 0 |
| ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ | 54079716 | 20000000 |
| **ತಾತ್ಕಾಲಿಕ ವ್ಯತ್ಯಾಸಗಳು** | | |
| ಸವಕಳಿ | 23457212 | 5945962 |
| ಹೂಡಿಕೆಗಳ ನ್ಯಾಯೋಚಿತ ಮೌಲ್ಯದಲ್ಲಿ ಬದಲಾವಣೆ | 0 | 0 |
| ಮುಂದುವರಿಯುತ್ತಿರುವ ಗುತ್ತಿಗೆಗಳ ನ್ಯಾಯೋಚಿತ ಮೌಲ್ಯದಲ್ಲಿ ಬದಲಾವಣೆ | 0 | 0 |
| ಗ್ರ್ಯಾಚ್ಯುಟಿ ಖರ್ಚು | 0 | 0 |
| ರಜೆ ನಗದೀಕರಣ | 23763049 | 7676473 |
| ಇತರೆ | 0 | 0 |
| ತೆರಿಗೆ ಉದ್ದೇಶಗಳಿಗಾಗಿ ಲೆಕ್ಕಾಚಾರ ಮಾಡಿರುವ ಲಾಭದ ಮೇಲಿನ ತೆರಿಗೆ (ನಿರ್ಧರಿಸಿರುವುದು) | 270957800 | 571467690 |
| ಅನ್ವಯವಾದ ಆದಾಯ ತೆರಿಗೆ ದರ (%ರಲ್ಲಿ) | 34.608 | 34.608 |
| ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸಿರುವ ಆದಾಯ ತೆರಿಗೆ ಖರ್ಚು | 93773075 | 197773538 |

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

| ಸಹಿ/- | ಸಹಿ/- | ಸಹಿ/- | ಸಹಿ/- | ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ |
|---|---|---|---|---|
| **ಕೆ.ಜೆ.ಜಾರ್ಜ್** | **ಡಾ. ಜಿ.ಸಿ. ಪ್ರಕಾಶ್** | **ಶ್ರೀದೇವಿ ಬಿ.ಎಸ್.** | **ಸುಬ್ರಮಣ್ಯ** | **ಪಿ. ಚಂದ್ರಶೇಖರ್ ಎಲ್‌ಎಲ್‌ಪಿ** |
| ಅಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು | ಕಂಪನಿ ಕಾರ್ಯದರ್ಶಿ | ಮುಖ್ಯ ಹಣಕಾಸು ಅಧಿಕಾರಿ | ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ |

ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
**ಡಿ. ಮಣಿಕುಮಾರ್**
ಪಾಲುದಾರರು
ಸದಸ್ಯತ್ವ ಸಂಖ್ಯೆ:212544

ದಿನಾಂಕ : 16.11.2018
ಸ್ಥಳ : ಬೆಂಗಳೂರು

**ಫಾರಂ ಸಂಖ್ಯೆ ಎಂ ಜಿ ಟಿ- 11**
**ಪ್ರಾಕ್ಸಿ ಫಾರಂ**

(ಕಂಪನಿಗಳ ಕಾಯ್ದೆ, 2013ರ ಪ್ರಕರಣ 105 (6) ಮತ್ತು ಕಂಪನಿಗಳ (ಆಡಳಿತ ಮಂಡಳಿ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 19(3)ರ ಅನುಸಾರ)

ಸಿಐಎನ್: U85110KA1966SGC001612
ಕಂಪನಿಯ ಹೆಸರು : ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ನೋಂದಾಯಿತ ಕಚೇರಿ: 'ಎಂಎಸ್ಐಎಲ್ ಹೌಸ್' ನಂ.36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560 052

| |
|---|
| ಸದಸ್ಯನ (ರ) ಹೆಸರು : |
| ನೋಂದಾಯಿತ ವಿಳಾಸ: |
| ಇ–ಮೇಲ್ ಐಡಿ : |
| ಫೋಲಿಯೋ ಸಂ/ಕ್ಲೈಂಟ್ ಐಡಿ: |
| ಡಿಪಿ ಐಡಿ : |

ನಾನು/ನಾವು.................................ನ ಸದಸ್ಯರಾಗಿದ್ದು...........................ಷೇರುಗಳನ್ನು ಹೊಂದಿದ್ದು, ಈ ಕೆಳಕಂಡವರನ್ನು

1. ಹೆಸರು: .......................................................
   ವಿಳಾಸ: .......................................................
   ಇ–ಮೇಲ್ ಐಡಿ: .......................................................
   ಸಹಿ : .......................................................

   ಅಥವಾ ಇವರಿಲ್ಲದಿದ್ದರೆ

2. ಹೆಸರು: .......................................................
   ವಿಳಾಸ: .......................................................
   ಇ–ಮೇಲ್ ಐಡಿ: .......................................................
   ಸಹಿ : .......................................................

ದಿನಾಂಕ 14ನೇ ಡಿಸೆಂಬರ್ 2018ರ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ಕೆಎಸ್ಐಐಡಿಸಿ ಮಂಡಳಿ ಸಭಾ ಕೊಠಡಿ, ಖನಿಜ ಭವನ, 4ನೇ ಮಹಡಿ, ಈಸ್ಟ್ ವಿಂಗ್, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001 ಇಲ್ಲಿ ನಡೆಯಲಿರುವ ಮತ್ತು ಕೆಳಗೆ ತಿಳಿಸಿರುವಂತೆ ಅಂತಹ ನಿರ್ಣಯಗಳ ಸಂಬಂಧ ಯಾವುದೇ ಮುಂದೂಡಿದ ದಿನಾಂಕದಂದು ನಡೆಯುವ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ 52ನೇ ವಾರ್ಷಿಕ ಮಹಾಸಭೆಗೆ ನನ್ನ / ನಮ್ಮ ಪರವಾಗಿ ಹಾಜರಾಗಲು ಮತ್ತು ನನಗೆ/ನಮಗೆ ಮತ ಹಾಕಲು (ಚುನಾವಣೆಯಲ್ಲಿ) ನನ್ನ / ನಮ್ಮ ಪ್ರಾಕ್ಸಿಯನ್ನಾಗಿ ನೇಮಕ ಮಾಡಿದ್ದೇನೆ/ಮಾಡಿದ್ದೇವೆ.

ನಿರ್ಣಯ ಸಂಖ್ಯೆ : 1 ರಿಂದ 2
..................2019ರಂದು ಸಹಿ ಮಾಡಿದೆ
ಷೇರುದಾರರ ಸಹಿ

| |
|---|
| ರೆವಿನ್ಯೂ ಸ್ಟಾಂಪ್ ಲಗತ್ತಿಸಿ |

ಪ್ರಾಕ್ಸಿದಾರನ (ರ) ಸಹಿ

ಸೂಚನೆ: ಸದರಿ ಪ್ರಾಕ್ಸಿ ಫಾರಂ ಅನ್ನು ಅದು ಜಾರಿಗೆ ಬರುವಂತೆ ನೋಡಿಕೊಳ್ಳಲು ಕ್ರಮವಾಗಿ ಭರ್ತಿ ಮಾಡಿ ಎಜಿಎಂ ಪ್ರಾರಂಭವಾಗುವುದಕ್ಕೆ 48 ಗಂಟೆಗಳಿಗೆ ಮುಂಚೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸಬೇಕು.

MSIL

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

**ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ,**
**ಬೆಂಗಳೂರು – 560 052.**

## ಹಾಜರಾತಿ ಚೀಟಿ

(ದಿನಾಂಕ 14ನೇ ಡಿಸೆಂಬರ್ 2018ರ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ನಡೆಯಲಿರುವ ಕಂಪನಿಯ 52ನೇ ಮಹಾ ಸಭೆ)

ಷೇರುದಾರರ ಹೆಸರು: ........................................................

ನೋಂದಣಿ ಫೋಲಿಯೋ ಸಂಖ್ಯೆ : ........................................................

ಹೊಂದಿರುವ ಷೇರುಗಳ ಸಂಖ್ಯೆ : ........................................................

ಸೂಚನೆ : ಷೇರುದಾರರು/ ಪ್ರಾಕ್ಸಿಯು ಕ್ರಮವಾಗಿ ಸಹಿ ಮಾಡಿದ ಹಾಜರಾತಿ ಪಟ್ಟಿಯನ್ನು ಸ್ಥಳದಲ್ಲಿ ನೀಡಬೇಕು.

ಷೇರುದಾರ / ಪ್ರಾಕ್ಸಿದಾರನ ಸಹಿ

ಕೆಎಸ್‌ಐಐಡಿಸಿ ಮಂಡಳಿ ಸಭಾ ಕೊಠಡಿ, ಖನಿಜ ಭವನ, 4ನೇ ಮಹಡಿ, ಈಸ್ಟ್ ವಿಂಗ್, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001 ಇಲ್ಲಿ ದಿನಾಂಕ 14ನೇ ಡಿಸೆಂಬರ್ 2018ರ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ನಡೆಯಲಿರುವ ಕಂಪನಿಯ 52ನೇ ಮಹಾ ಸಭೆಯ ಸ್ಥಳದ ಮಾರ್ಗ ನಕ್ಷೆ




ಮಂಡಳಿಯ ಆದೇಶದ ಮೇರೆಗೆ
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ
ಸಹಿ/–
**ಶ್ರೀದೇವಿ ಬಿ.ಎಸ್.**
ಕಂಪನಿ ಕಾರ್ಯದರ್ಶಿ


MSIL




MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

**(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)**

ಎಂಎಸ್‌ಐಎಲ್ ಹೌಸ್, # 36 ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560 052

ದೂರವಾಣಿ : 080-2226 4021 / 25 ಫ್ಯಾಕ್ಸ್ : 080-2225 3311

ಇ-ಮೇಲ್ : msilho@msilonline.com ವೆಬ್‌ಸೈಟ್ : www.msilonline.com